ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಿಥಾಲಿ 'ಚಿತ್ರ'

ಕೋಲ್ಕತ್ತದಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ಶಾಬಾಶ್ ಮಿಥು' ಚಿತ್ರದ ಪ್ರಚಾರ ಕಾರ್ಯಕ್ರಮದಲ್ಲಿ ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕಿ ಮಿಥಾಲಿ ರಾಜ್ ಪಾಲ್ಗೊಂಡಿದ್ದರು. ಈ ಚಿತ್ರ ಅವರ ಜೀವನ ಕಥೆಯನ್ನಾಧರಿಸಿದೆ

Sri Siddhartha Medical College & Research Center

A Constituent College of
Sri Siddhartha Academy of Higher Education (SSAHE)
(Deemed to be University, NAAC with 'A' Grade)

Siddhartha Advanced Heart Center in association with Kardiac Frontida

Dr. G. Parameshwara PhD
Chancellor SSAHE
Ex. Deputy Chief Minister of Karnataka



100 HEART SURGERIES & SUCCESS STORIES

Celebrating the successful achievement of
100 Open Heart Surgeries in *namma* Tumkur.
A remarkable accomplishment by best-in-class Team of Cardiac Experts.

Mrs. Kannika Parmeshwari
Chief Patron, CHAYA - Support Group
A patient support group for children requiring complex pediatric cardiac surgeries from economically disadvantaged background.

UNPARALLED CARE FOR YOUR HEART
WE LISTEN TO EVERY HEART BEAT

CARDIAC SURGERY
- Adult Cardiac Surgery
- Pediatric Cardiac Surgery
- Complex Congenital Cardiac Surgery
- Minimally Invasive Cardiac Surgery (Key hole)
- Aortic Surgery
- Heart Failure Surgery
- ECMO-Extra Corporeal Membrane Oxygenation

CARDIOLOGY
- Angiogram
- Angioplasty
- Pacemaker Implantation
- Balloon Valvotomy
- Rotablation
- Device Closures
- Coiling

Dr. Tameem Ahmed
Medical Director & Head – SAHC & KF
MBBS, MS (PGI Chandigarh), MCh (CTVS) (AIIMS New Delhi)
"A renowned Cardiac Surgeon in India who has performed complex and rare surgeries.

Now expanding the existing facility to a dedicated Centre of Excellence in Cardiac Sciences.

Siddhartha Advanced Heart Center in association with Kardiac Frontida

Agalakote, B.H. Road
Tumkur - 572 107. Karnataka

Heart to heart
We're here to heal

We are here at your doorstep to care for your heart

24/7 Emergency Available

89045 99296
89045 99297

ನಗರದ ಅವಿನ್ಯೂ ರಸ್ತೆಯಲ್ಲಿ ಮಳೆಯಲ್ಲಿಯೇ ಜನರು ಖರೀದಿಯಲ್ಲಿ ತೊಡಗಿದ್ದರು (ಎಡಚಿತ್ರ). ಮೈಸೂರು ರಸ್ತೆಯ ಮೈಲಸಂದ್ರ ಬಳಿ ಶನಿವಾರ ಸುರಿದ ಧಾರಾಕಾರ ಮಳೆಯಲ್ಲೇ ಸಾಗಿದ ವಾಹನಗಳು —ಪ್ರಜಾವಾಣಿ ಚಿತ್ರಗಳು

ಜೋರು ಮಳೆ: ವಾತಾವರಣ ತಂಪು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಶನಿವಾರ ಮಧ್ಯಾಹ್ನದ ಬಳಿಕ ಮುಂಗಾರು ಚುರುಕು ಪಡೆದಿದ್ದು, ವಿವಿಧೆಡೆ ಜೋರು ಮಳೆಯಾಗಿದೆ.

ಕಳೆದೆರಡು ದಿನಗಳಿಂದ ನಿರಂತರವಾಗಿ ಜಿಟಿಜಿಟಿ ಮಳೆ ಸುರಿಯುತ್ತಿತ್ತು. ಶನಿವಾರ ಬೆಳಿಗ್ಗೆ ಸಾಧಾರಣ ಮಳೆಯಾಗಿದ್ದರೆ, ಮಧ್ಯಾಹ್ನದ ನಂತರ ಜೋರು ಮಳೆಯಿಂದ ವಾತಾವರಣ ಮತ್ತಷ್ಟು ತಂಪಾಯಿತು.

ವಾರಾಂತ್ಯದ ಸಂಭ್ರಮಕ್ಕೆ ಮನೆಯಿಂದ ಹೊರ ಹೋಗಲು ನಿರ್ಧರಿಸಿದ್ದ ಬಹುತೇಕರು, ಮನೆಯಲ್ಲೇ ಕಾಲಕಳೆದರು. ಮಳೆ ಲೆಕ್ಕಿಸದೇ ಮನೆಯಿಂದ ಹೊರ ಬಂದಿದ್ದವರು ಮಳೆಯನ್ನು ಸಂಭ್ರಮಿಸುತ್ತಲೇ ಖರೀದಿಯಲ್ಲಿ ತೊಡಗಿದ್ದ ದೃಶ್ಯ ಕಂಡುಬಂತು. ಮಳೆಯಿಂದ ರಕ್ಷಣೆ ಪಡೆಯಲು ನಾಗರಿಕರು ಕೊಡೆಯ ಮೊರೆ ಹೋಗಿದ್ದರು.

ಮಾಗಡಿ ರಸ್ತೆ, ಕೆಂಗೇರಿ, ರಾಜರಾಜೇಶ್ವರಿ ನಗರ, ಕೆಂಗೇರಿ ಉಪನಗರ, ಅತ್ತಿಗುಪ್ಪೆ, ಅರಮನೆ ಮೈದಾನ, ಜಾಲಹಳ್ಳಿ, ರಾಜಾಜಿನಗರ, ನಾಗಸಂದ್ರ, ಯಲಹಂಕ, ಪೀಣ್ಯ, ದಾಸರಹಳ್ಳಿ, ಕಮ್ಮಗೊಂಡನಹಳ್ಳಿ, ಮಲ್ಲೇಶ್ವರ, ಹೆಬ್ಬಾಳ, ವಿಜಯನಗರ, ಮತ್ತಿಕೆರೆ, ಆರ್‌.ಟಿ.ನಗರ, ಶಿವಾಜಿನಗರ, ಲಾಲ್‌ಬಾಗ್, ಕೆ.ಆರ್.ಮಾರುಕಟ್ಟೆ, ಬಸವನಗುಡಿ ಹಾಗೂ ಜಯನಗರದ ಭಾಗದಲ್ಲೂ ಮಳೆ ಸುರಿಯಿತು.

ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್‌ ಸ್ಟ್ರೀಟ್‌ಗೆ ವಾರಾಂತ್ಯದ ಖರೀದಿಗೆ ಬಂದಿದ್ದವರು ಮಳೆಯಲ್ಲಿ ನೆನೆಯುತ್ತಲೇ ಸಾಮಗ್ರಿ ಖರೀದಿಸಿದರು.

ಮಳೆಯಿಂದ ಬಸವನಗುಡಿಯ ನ್ಯಾಷನಲ್ ಕಾಲೇಜು ಆಟದ ಮೈದಾನದ ಪಕ್ಕದಲ್ಲಿ ಶುಕ್ರವಾರ ರಾತ್ರಿ ಬೃಹತ್ ಮರ ಕಾರುಗಳ ಮೇಲೆ ಬಿದ್ದು ಮಾಲೀಕರಿಗೆ ನಷ್ಟವಾಗಿದೆ.

ಬಸವನಗುಡಿಯ ನ್ಯಾಷನಲ್ ಕಾಲೇಜು ಆಟದ ಮೈದಾನದ ಪಕ್ಕದಲ್ಲಿ ಬೃಹತ್ ಮರವೊಂದು ಕಾರುಗಳ ಮೇಲೆ ಬಿದ್ದಿತ್ತು

ಸುದ್ದಿ 2 ನಿಮಿಷ

ಮೋದಿ, ಶಾ ಮೌನವೇಕೆ? ಕಾಂಗ್ರೆಸ್ ಪ್ರಶ್ನೆ

ಬೆಂಗಳೂರು: 'ರಾಷ್ಟ್ರೀಯತೆ ಪಾಠ ಮಾಡುವ ಬಿಜೆಪಿ, ಭಯೋತ್ಪಾದಕರ ಜತೆಗೆ ನಿಕಟ ಸಂಪರ್ಕ ಹೊಂದಿರುವುದು ಹಲವು ಬಾರಿ ಸಾಬೀತಾಗಿದೆ. ಆದರೆ, ಈ ವಿಚಾರದಲ್ಲಿ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ತುಟಿ ಬಿಚ್ಚಿಲ್ಲ ಯಾಕೆ' ಎಂದು ಕಾಂಗ್ರೆಸ್ ವಾಗ್ದಾಳಿ ನಡೆಸಿದೆ.

ಕೆಪಿಸಿಸಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಕಾಂಗ್ರೆಸ್ ಸಂಸದ ಉತ್ತಮ್ ಕುಮಾರ್ ರೆಡ್ಡಿ, 'ಭಯೋತ್ಪಾದನೆಯಂಥ ರಾಷ್ಟ್ರ-ಮಟ್ಟದ ಗಂಭೀರ ವಿಚಾರದಲ್ಲಿ ರಾಜಕೀಯ ಮಾಡಲು ಕಾಂಗ್ರೆಸ್ ಇಚ್ಛಿಸುವುದಿಲ್ಲ. ಆದರೆ, ಬಿಜೆಪಿ ಹಾಗೂ ಭಯೋತ್ಪಾದಕರ ನಡುವೆ ಸಂಪರ್ಕವಿದೆ ಎಂಬುದಕ್ಕೆ ಹಲವು ಘಟನೆಗಳು ಸಾಕ್ಷಿಯಾಗಿವೆ' ಎಂದರು.

'ಉದಯಪುರದಲ್ಲಿ ಕನ್ಹಯ್ಯ ಲಾಲ್ ಹತ್ಯೆ, ಜಮ್ಮು ಕಾಶ್ಮೀರದಲ್ಲಿ ಸ್ಥಳೀಯರಿಂದ ಸೆರೆ ಹಿಡಿಯಲ್ಪಟ್ಟ ಲಷ್ಕರ್ ಎ ತೊಯಬಾ ಸಂಘಟನೆಯ ಉಗ್ರ, ಅಮರಾವತಿಯ ಉಮೇಶ್ ಹತ್ಯೆ ಪ್ರಕರಣದ ಆರೋಪಿಗಳಿಗೂ ಬಿಜೆಪಿಗೂ ನಿಕಟ ಸಂಬಂಧವಿರುವುದು ಬಹಿರಂಗವಾಗಿದೆ' ಎಂದರು.

'ರಾಷ್ಟ್ರೀಯತೆ ಬಗ್ಗೆ ಪದೇ ಪದೇ ಮಾತನಾಡುವ, ಭಯೋತ್ಪಾದನೆ ವಿಚಾರದಲ್ಲಿ ಸುಳ್ಳಿನ ಮೂಲಕ ವಿರೋಧ ಪಕ್ಷಗಳ ವಿರುದ್ಧ ಪ್ರಚಾರ ಮಾಡುವ ಬಿಜೆಪಿ ವಿರುದ್ಧ ಸಾಕಷ್ಟು ಸಾಕ್ಷ್ಯಗಳು ಸಿಕ್ಕಿವೆ. ಆದರೆ, ಪ್ರಧಾನಿ ಮತ್ತು ಗೃಹ ಸಚಿವರು ಯಾವುದೇ ರೀತಿಯ ಹೇಳಿಕೆ ನೀಡದಿರುವುದು ಆಘಾತ ತಂದಿದೆ' ಎಂದರು.

ನೇತ್ರದಾನಕ್ಕೆ ಮುಂದಾದ ಐಟಿ ಉದ್ಯೋಗಿಗಳು

ಕೆ.ಆರ್.ಪುರ: ಸೇಪಿಯನ್ಸ್ ಇಂಟರ್‌ನ್ಯಾಷನಲ್ ಕಾರ್ಪೊರೇಷನ್‌ನ ಉದ್ಯೋಗಿಗಳು ನೇತ್ರದಾನ ಮಾಡಲು ಮುಂದಾಗಿದ್ದಾರೆ.

ನೇತ್ರದಾನ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಸಂಸ್ಥೆಯ ಮುಖ್ಯಸ್ಥ ಅಭೀರ್ ಮುಸ್ತಾಫಿ, 'ಪುನೀತ್ ರಾಜ್‌ಕುಮಾರ್ ಅವರ ಪ್ರೇರಣೆಯಿಂದ ನಮ್ಮ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುವ ಎರಡು ಸಾವಿರಕ್ಕೂ ಹೆಚ್ಚಿನ ಉದ್ಯೋಗಿಗಳು ನೇತ್ರದಾನ ಮಾಡಲು ಮುಂದಾಗಿದ್ದೇವೆ. ಅಭಿಯಾನದ ಮೊದಲ ದಿನವಾಗಿ 200 ಉದ್ಯೋಗಿಗಳು ನೋಂದಣಿ ಮಾಡಿಸಿಕೊಂಡಿದ್ದಾರೆ' ಎಂದು ಹೇಳಿದರು.

ಕೊರೊನಾದಿಂದಾಗಿ ಮನೆಯಿಂದಲೇ ಕೆಲಸ ಮಾಡುತ್ತಿರುವ ಅನ್ಯ ರಾಜ್ಯದ ಉದ್ಯೋಗಿಗಳಿಗೂ ಇ-ಮೇಲ್ ಮೂಲಕ ಅಭಿಯಾನಕ್ಕೆ ಕೈಜೋಡಿಸುವಂತೆ ಕೋರಿಕೆ ಸಲ್ಲಿಸಲಾಗಿತ್ತು. ಅವರು ಅಭಿಯಾನದ ಭಾಗವಾಗಿ ನೋಂದಣಿ ಮಾಡಿಸಿಕೊಳ್ಳುತ್ತಿದ್ದಾರೆ ಎಂದು ಹೇಳಿದರು.

ಸಹಾಯಕ ಪ್ರಾಧ್ಯಾಪಕರ ಹುದ್ದೆ: ಅಂಕಪಟ್ಟಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಪದವಿ ಕಾಲೇಜು ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಪರೀಕ್ಷೆ ಬರೆದಿದ್ದ ಅಭ್ಯರ್ಥಿಗಳು ಪಡೆದ ಅಂಕಗಳ ತಾತ್ಕಾಲಿಕ ಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪ್ರಕಟಿಸಿದೆ.

ರಾಜ್ಯದ ವಿವಿಧ ಪದವಿ ಕಾಲೇಜುಗಳಲ್ಲಿ ಖಾಲಿ ಇರುವ 1,242 ಹುದ್ದೆಗೆ ಪ್ರಸಕ್ತ ವರ್ಷದ ಮಾರ್ಚ್‌ನಲ್ಲಿ ಪರೀಕ್ಷೆ ನಡೆಸಲಾಗಿತ್ತು. 33,379 ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದರು. ಅಭ್ಯರ್ಥಿಗಳು ಪಡೆದ ಅಂಕಗಳ ತಾತ್ಕಾಲಿಕ ಪಟ್ಟಿ ಪ್ರಕಟಿಸಲಾಗಿದ್ದು, ಪಟ್ಟಿಯ ಆಧಾರದಲ್ಲಿ ಅಭ್ಯರ್ಥಿಗಳ ದಾಖಲೆಗಳ ಪರಿಶೀಲನೆ ನಡೆಯಲಿದೆ. ಸಂದರ್ಶನ ಇಲ್ಲದೇ ಅಂಕಗಳ ಆಧಾರದಲ್ಲೇ ನೇಮಕ ನಡೆಯುವ ಕಾರಣ ತಾತ್ಕಾಲಿಕ ಪಟ್ಟಿ ಅಭ್ಯರ್ಥಿಗಳಿಗೆ ಮಹತ್ವದ್ದಾಗಿದೆ.

ಸಾಹಿತಿ ಹಂಪನಾ ಅಧ್ಯಯನದ ಫಲ: ವಿಮರ್ಶಕ ಸಿ.ಎನ್.ರಾಮಚಂದ್ರನ್

6ನೇ ಶತಮಾನ ಕನ್ನಡ ಸಾಹಿತ್ಯದ ಆರಂಭಿಕ ಕಾಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಚರಿತ್ರೆಯ ಆರಂಭದ ಕಾಲಘಟ್ಟವನ್ನು ಮೂರು ಶತಮಾನಗಳು ಹಿಂದಕ್ಕೆ ಗುರುತಿಸಿದ ಕೀರ್ತಿ ಸಾಹಿತಿ ಹಂಪ ನಾಗರಾಜಯ್ಯ ಅವರಿಗೆ ಸಲ್ಲುತ್ತದೆ ಎಂದು ವಿಮರ್ಶಕ ಸಿ.ಎನ್.ರಾಮಚಂದ್ರನ್ ಮೆಚ್ಚುಗೆ ವ್ಯಕ್ತಪಡಿಸಿದರು.

ಗಾಂಧಿ ಭವನದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಹಂಪನಾ ಅವರ 'ಸ್ಪೆಕ್ಟ್ರಮ್ ಆಫ್ ಕ್ಲಾಸಿಕಲ್ ಲಿಟರೇಜರ್ ಇನ್ ಕರ್ನಾಟಕ' ಇಂಗ್ಲಿಷ್ ಕೃತಿಯ ಪ್ರಥಮ ಸಂಪುಟ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಇದುವರೆಗೂ 9ನೇ ಶತಮಾನವನ್ನು ಕನ್ನಡ ಸಾಹಿತ್ಯ ಚರಿತ್ರೆಯ ಆರಂಭ ಎಂದು ಗುರುತಿಸಲಾಗಿತ್ತು. ಕವಿರಾಜ ಮಾರ್ಗವೇ ಕನ್ನಡದ ಮೊದಲ ಕೃತಿ ಎಂದು ನಂಬಿದ್ದೆವು. ಹಂಪನಾ ಅವರು ಆಳ ಅಧ್ಯಯನ, ಅನುವಾದದ ಮೂಲಕ ಕನ್ನಡ ಸಾಹಿತ್ಯ ಚರಿತ್ರೆ ಆರಂಭವನ್ನು 6ನೇ ಶತಮಾನವೆಂದು ಖಚಿತಪಡಿಸಿದ್ದಾರೆ ಎಂದು ಕೃತಿಯ ಅಧ್ಯಯಗಳನ್ನು ಪ್ರಸ್ತುತಪಡಿಸಿದರು.

ಅವರು ಗುರುತಿಸಿದ ಕಾಲ ಘಟ್ಟವನ್ನು ವಿಶಿಷ್ಟವಾದ ವ್ಯಾಖ್ಯಾನಗಳ ಟೀಕಾಕಾರರ ಕಾಲವೆಂದು ತೀರ್ಮಾನಕ್ಕೆ ಬಂದಿದ್ದಾರೆ. ಕನ್ನಡದ ಮೊದಲ ಗದ್ಯಕೃತಿ ವಡ್ಡಾರಾಧನೆಯನ್ನು ಆರಾಧನಾ ಕರ್ನಾಟಕಾ ಟೀಕಾ ಎಂದು, ಅದರ ಕರ್ತೃ ಶಿವಾಕೋಟ್ಯಾಚಾರ್ಯರಲ್ಲ, ಬ್ರಾಜಿಷ್ಣು ಎಂದು ವಿಶ್ಲೇಷಿಸಿದ್ದಾರೆ. ಇಂತಹ ಅಧ್ಯಯನದ ಕೃತಿಗಳಲ್ಲಿ ಕಥನ ಪ್ರಭೇದ, ಆರಾಧನಾ ಕಥನ ಕೋಶ ಸೇರಿದಂತೆ ಹಲವು ಬಂದು ಹೋಗಿವೆ ಎಂದು ವಿಶ್ಲೇಷಿಸಿದರು.

ವಿಮರ್ಶಕ ರಾಜೇಂದ್ರ ಚೆನ್ನಿ, 'ಸ್ಪೆಕ್ಟ್ರಮ್ ಆಫ್ ಕ್ಲಾಸಿಕಲ್ ಲಿಟರೇಜರ್ ಇನ್ ಕರ್ನಾಟಕ' ಸಂಪುಟಗಳು ಕನ್ನಡ ಅಷ್ಟೇ ಅಲ್ಲ, ಯೂರೋಪ್ ಸೇರಿದಂತೆ ಇತರೆ ಸಾಹಿತ್ಯ ಕ್ಷೇತ್ರದ ವಿದ್ವತ್ ಪರಂಪರೆಗೂ ಮಹತ್ವದ್ದಾಗಿವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಬಹುಭಾಷಿಕ ತಿಳಿವಳಿಕೆ ಬಳಸಿಕೊಂಡು ಕೃತಿ ರಚನೆ ಮಾಡಲಾಗಿದೆ. ಕನ್ನಡ ಸಾಹಿತ್ಯಕ್ಕೆ ಜೈನ ಪರಂಪರೆ ಕೊಡುಗೆ, ಪ್ರಭುತ್ವದ ಮುಂದಾಳತ್ವ ವಹಿಸಿದ್ದ ದೊರೆಯ ಒಳಗೊಳ್ಳುವಿಕೆ. ಆದರ್ಶ ಪ್ರಭುತ್ವ, ಧರ್ಮದ ಮಹತ್ವಗಳನ್ನು ಅರ್ಥೈಸಿದ್ದಾರೆ. ಸಂಸ್ಕೃತ ಆಚೆಗೆ ಬಿಟ್ಟು ಕನ್ನಡ, ಪ್ರಾಕೃತದ ಕಡೆ ಹೋಗುವುದು ಸುಲಭವಾಗಿರಲಿಲ್ಲ. ಅಂದು ದೈವ ತತ್ವ, ಪಥ್ಯಗಳೂ ಚಲಿಸುತ್ತಿದ್ದವು ಎನ್ನುವ ವಾಸ್ತವದ ಮೇಲೆ ಚರಿತ್ರೆಯ ಸತ್ಯಗಳು ತುಂಬಾ ಸರಳವಲ್ಲ ಎಂಬುದನ್ನು ನಿರೂಪಿಸಿದ್ದಾರೆ. ದಕ್ಷಿಣ ಏಷ್ಯಾದ ಸಾಹಿತ್ಯ ಚರ್ಚೆಯಲ್ಲಿ ಕನ್ನಡ ಬರಿ ಅಡಿ ಟಿಪ್ಪಣಿಯಾಗಿ ಉಳಿಯಬಾರದು ಎನ್ನುವ ಅಭಿಲಾಷೆಯನ್ನು ಕೃತಿಯ ಮೂಲಕ ಸಾಕಾರಗೊಳಿಸುವ ಪ್ರಯತ್ನ ಮಾಡಲಾಗಿದೆ ಎಂದರು.

ಸಂಪುಟ ಮೂರು ಕುರಿತು ಮಾತನಾಡಿದ ವಿಮರ್ಶಕ ಓ.ಎಲ್. ನಾಗಭೂಷಣಸ್ವಾಮಿ, ಕನ್ನಡದ ಮುಂದಿನ ಪೀಳಿಗೆ ಇಂಗ್ಲಿಷ್ ಮೂಲಕ ಕನ್ನಡ ಸಾಹಿತ್ಯ ಚರಿತ್ರೆ ತಿಳಿದುಕೊಳ್ಳಲು ಈ ಕೃತಿಗಳು ಸಹಕಾರಿಯಾಗಿವೆ ಎಂದು ಹೇಳಿದರು.

ಸಂಪುಟ ನಾಲ್ಕು ಕುರಿತು ಎಚ್.ವಿ.ನಾಗರಾಜ ರಾವ್, ಸಂಪುಟ ಐದರ ಕುರಿತು ಎಂ.ಜಿ.ಮಂಜುನಾಥ್ ಮಾತನಾಡಿದರು. ಸಾಹಿತಿ ಎಚ್.ಎಸ್. ಶಿವಪ್ರಕಾಶ್ ಅಧ್ಯಕ್ಷತೆ ವಹಿಸಿದ್ದರು. ಲೇಖಕ ಹಂಪ ನಾಗರಾಜಯ್ಯ, ಸ್ವಪ್ನ ಬುಕ್ ಹೌಸ್‌ನ ದೀಪಕ್ ಶಾ ಉಪಸ್ಥಿತರಿದ್ದರು.

ಬೆಂಗಳೂರಿನ ಗಾಂಧಿಭವನದಲ್ಲಿ ಶನಿವಾರ ಸಪ್ನ ಬುಕ್ ಹೌಸ್ ಯೋಜಿಸಿದ ಕಾರ್ಯಕ್ರಮದಲ್ಲಿ ಹಂಪ ನಾಗರಾಜಯ್ಯ ಅವರ 'ಸ್ಪೆಕ್ಟ್ರಮ್ ಆಫ್ ಕ್ಲಾಸಿಕಲ್ ಲಿಟರೇಚರ್ ಇನ್ ಕರ್ನಾಟಕ' ಕೃತಿಯ ಐದು ಸಂಪುಟಗಳನ್ನು ಬಿಡುಗಡೆ ಮಾಡಲಾಯಿತು. ದೀಪಕ್ ಶಾ, ಎಚ್‌.ವಿ. ನಾಗರಾಜ ರಾವ್, ರಾಜೇಂದ್ರ ಚೆನ್ನಿ, ಓ.ಎಲ್. ನಾಗಭೂಷಣಸ್ವಾಮಿ, ಎಚ್‌.ಎಸ್. ಶಿವಪ್ರಕಾಶ, ಹಂಪ ನಾಗರಾಜಯ್ಯ, ಸಿ.ಎನ್. ರಾಮಚಂದ್ರನ್, ಎಂ.ಜಿ. ಮಂಜುನಾಥ್ ಇದ್ದಾರೆ.

ಶಿವಾಜಿ ನಗರ ಕ್ಷೇತ್ರ: 16ಕ್ಕೆ ಜನಸ್ಪಂದನ

ಪ್ರಜಾವಾಣಿ ವಾರ್ತೆ

ಜನಸ್ಪಂದನ
ಸಿಟಿಜನ್ಸ್ ಫಾರ್ ಚೇಂಜ್

ಬೆಂಗಳೂರು: ನೀವು ಶಿವಾಜಿ ನಗರ ವಿಧಾನಸಭಾ ಕ್ಷೇತ್ರದ ನಿವಾಸಿಯೇ? ನಿಮ್ಮ ಮನೆಗೆ ಕುಡಿಯುವ ನೀರು-ಸಮರ್ಪಕವಾಗಿ ಪೂರೈಕೆ ಆಗುತ್ತಿಲ್ಲವೇ? ರಸ್ತೆಗಳಲ್ಲಿ ಗುಂಡಿಗಳು ಬಿದ್ದಿವೆಯೇ? ಉದ್ಯಾನದ ನಿರ್ವಹಣೆ ಸಮರ್ಪಕವಾಗಿ ಆಗುತ್ತಿಲ್ಲವೇ. ನಿಮ್ಮ ಕ್ಷೇತ್ರದ ಇಂತಹ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕೆ? ಹಾಗಾದರೆ, ಜುಲೈ 16ರಂದು ವಸಂತ ನಗರದ ತಿಮ್ಮಯ್ಯ ರಸ್ತೆಯ ಕಾವೇರಪ್ಪ ಬಡಾವಣೆಯ ಬಂಜಾರ ಭವನಕ್ಕೆ ಬನ್ನಿ.

ಅಂದು ಶಿವಾಜಿ ನಗರ ವಿಧಾನಸಭಾ ಕ್ಷೇತ್ರದ ಜನರ ಅಹವಾಲು ಆಲಿಸುವ ಸಲುವಾಗಿ 'ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್' ಪತ್ರಿಕಾ ಸಮೂಹ 'ಜನಸ್ಪಂದನ' ಕಾರ್ಯಕ್ರಮ ಏರ್ಪಡಿಸಿದೆ. ಶಾಸಕ ರಿಜ್ವಾನ್ ಅರ್ಷದ್ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಸಾರ್ವಜನಿಕರ ಅಹವಾಲು ಆಲಿಸಲಿದ್ದಾರೆ. ಆಸಕ್ತರು ಬೆಳಿಗ್ಗೆ 9ರಿಂದ ಸ್ಥಳದಲ್ಲೇ ಹೆಸರು ನೋಂದಾಯಿಸಬಹುದು. ಮೊದಲು ನೋಂದಣಿ ಮಾಡಿಸಿದವರಿಗೆ ಆದ್ಯತೆ.



ರಿಜ್ವಾನ್ ಅರ್ಷದ್



ಬಿಎಂಎಸ್ ವಾಣಿಜ್ಯ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜಿನಲ್ಲಿ 'ಸಂಸ್ಕೃತಿ–2022 ಅಂತರ ಕಾಲೇಜು ಸಾಂಸ್ಕೃತಿಕ ಹಾಗೂ ಮ್ಯಾನೇಜ್‌ಮೆಂಟ್' ಸ್ಪರ್ಧೆಗಳ ಕಾರ್ಯಕ್ರಮಗಳ ಉದ್ಘಾಟನೆಯನ್ನು ಇತ್ತೀಚೆಗೆ ಮಾಡಲಾಯಿತು

ಭಾರತೀಯ ವಿದ್ಯಾ ಭವನ ಮತ್ತು ಇನ್ಫೊಸಿಸ್ ಫೌಂಡೇಷನ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶ್ರೀವೀಣಾ ಮಣಿ ಅವರು ಕೂಚುಪುಡಿ ನೃತ್ಯ ಪ್ರದರ್ಶಿಸಿದರು.

'ಪುರುಷರಿಗೇ ಪ್ರತ್ಯೇಕ ವೈದ್ಯಕೀಯ ಸೇವೆ'

ಬೆಂಗಳೂರು: ಹಲವು ಬಗೆಯ ಸಂಕೀರ್ಣ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವ ಪುರುಷರಿಗೆ ಪ್ರತ್ಯೇಕ ವೈದ್ಯಕೀಯ ಸೇವೆ, ಪರೀಕ್ಷೆಗಳನ್ನು ನಡೆಸುವ ಸೌಲಭ್ಯಗಳು ಮಲ್ಲೇಶ್ವರ ಪ್ರಾಥಮಿಕ ಆರೋಗ್ಯ ಕೇಂದ್ರ, ರಾಮನಗರ ಜಿಲ್ಲಾ ಆಸ್ಪತ್ರೆಯಲ್ಲಿ ಶೀಘ್ರ ಆರಂಭಿಸಲಾಗುವುದು ಎಂದು ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಮಾಹಿತಿ ನೀಡಿದರು.

ಪುರುಷರಿಗೆ ಪ್ರತ್ಯೇಕವಾದ ವೈದ್ಯಕೀಯ ಪರೀಕ್ಷಾ ಸೇವಾ ಸೌಲಭ್ಯ ಆರಂಭಿಸುವ ಕುರಿತು ಅಂಕುರ ಹೆಲ್ತ್ ಕೇರ್‌ನ ಡಾ.ವಾಸನ್ ಅವರ ಜತೆ ಚರ್ಚಿಸಿದ ನಂತರ ಅವರು ಸುದ್ದಿಗಾರರ ಜತೆ ಮಾತನಾಡಿದರು.

ಕೆಲವು ಆರೋಗ್ಯ ಸಮಸ್ಯೆಗಳನ್ನು ಎದುರಿಸುವ ಹಲವು ಪುರುಷರು ಆಸ್ಪತ್ರೆಗೆ ಬರುವುದಿಲ್ಲ. ಅದಕ್ಕಾಗಿ ಖಾಸಗಿ ಮತ್ತು ಸರ್ಕಾರಿ ಸಹಭಾಗಿತ್ವದಲ್ಲಿ ಈ ಯೋಜನೆ ಪ್ರಾಯೋಗಿಕವಾಗಿ ಆರಂಭಿಸಲಾಗುತ್ತಿದೆ. ಇದಕ್ಕೆ ಸಿಗುವ ಸ್ಪಂದನೆ ಆಧರಿಸಿ ಎಲ್ಲೆಡೆ ವಿಸ್ತರಿಸಲಾಗುವುದು. ಈ ಯೋಜನೆಯಡಿ ಅಂಕುರ ಹೆಲ್ತ್‌ಕೇರ್‌ನ ಡಾ.ವಾಸನ್ ಅವರು ವೈದ್ಯಕೀಯ ಪರೀಕ್ಷೆಗಳ ಸೌಲಭ್ಯ ಕಲ್ಪಿಸುತ್ತಾರೆ ಎಂದು ಮಾಹಿತಿ ನೀಡಿದರು. ಮಧುಮೇಹ, ಕ್ಯಾನ್ಸರ್, ನರರೋಗ ಕಾಯಿಲೆಗಳು ಮತ್ತಿತರ ಸಮಸ್ಯೆಗಳು ಪುರುಷರನ್ನು ಹೆಚ್ಚಾಗಿ ಕಾಡುತ್ತಿವೆ ಎಂದು ಹೇಳಿದರು.

ಆ.17ರಿಂದ ಪದವಿ ತರಗತಿ ಆರಂಭ

ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಏಕ ರೂಪದ ವೇಳಾಪಟ್ಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಎಲ್ಲ ಪದವಿ, ಸ್ನಾತಕೋತ್ತರ ಪದವಿ ಕಾಲೇಜುಗಳಿಗೆ ಏಕರೂಪದ ವೇಳಾಪಟ್ಟಿ ಸಿದ್ಧಪಡಿಸಲಾಗಿದೆ. ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು, ಕಾಲೇಜುಗಳು ಕಡ್ಡಾಯವಾಗಿ ಪಾಲಿಸಲಿವೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ ಎನ್ ಅಶ್ವತ್ಥನಾರಾಯಣ ಅವರು ಹೇಳಿದರು.

ನಗರದಲ್ಲಿ ಶನಿವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಏಕರೂಪದ ವೇಳಾಪಟ್ಟಿಯಂತೆ ಪದವಿ ತರಗತಿಗಳಿಗೆ ಜುಲೈ 11ರಿಂದ ಪ್ರವೇಶ ಪ್ರಕ್ರಿಯೆಗಳು ಆರಂಭವಾಗಲಿದೆ. ಆ.17ರಿಂದ 22ರ ಮಧ್ಯೆ ತರಗತಿಗಳನ್ನು ಆರಂಭಿಸಲು ಸೂಚಿಸಲಾಗಿದೆ. ಸ್ನಾತಕೋತ್ತರ ಪದವಿ ಕೋರ್ಸ್‌ಗಳಿಗೆ ಅ.15ರಿಂದ ಪ್ರವೇಶ ಪ್ರಕ್ರಿಯೆ ಆರಂಭವಾಗಲಿವೆ. ನ.2ರಿಂದ 14ರ ಮಧ್ಯೆ ತರಗತಿಗಳಿಗೆ ಚಾಲನೆ ಸಿಗಲಿದೆ ಎಂದು ಹೇಳಿದರು.

ಇದುವರೆಗೂ ರಾಜ್ಯದಲ್ಲಿ ವಿಶ್ವವಿದ್ಯಾಲಯಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ಪ್ರತ್ಯೇಕ ಶೈಕ್ಷಣಿಕ ವೇಳಾಪಟ್ಟಿ ರೂಪಿಸಿಕೊಳ್ಳುತ್ತಿದ್ದವು. ಇದರಿಂದ ವಿದ್ಯಾರ್ಥಿಗಳಿಗೆ ಗೊಂದಲ, ಅನನುಕೂಲ ಆಗುತ್ತಿತ್ತು. ಇದನ್ನು ಗಮನಿಸಿ ಏಕರೂಪದ ವೇಳಾಪಟ್ಟಿ ತರಲಾಗಿದೆ ಎಂದು ಸಚಿವರು ವಿವರ ನೀಡಿದರು.

ಈ ವೇಳಾಪಟ್ಟಿಯಲ್ಲಿ ಪ್ರತಿ ಸೆಮಿಸ್ಟರ್‌ಗಳ ಆರಂಭ, ದಂಡ ರಹಿತ ಮತ್ತು ದಂಡ ಸಹಿತ ಪ್ರವೇಶದ ಅವಧಿ, ಪ್ರತಿ ಸೆಮಿಸ್ಟರ್‌ಗಳಿಗೆ ಬೋಧನಾ ತರಗತಿಗಳು ಆರಂಭವಾಗುವ ಮತ್ತು ಮುಗಿಯುವ ದಿನ, ಪರೀಕ್ಷೆ ಆರಂಭವಾಗುವ ದಿನ, ಮೌಲ್ಯಮಾಪನ ಆರಂಭ ಮತ್ತು ಫಲಿತಾಂಶ ಪ್ರಕಟಣೆಯ ದಿನ, ರಜೆ ಆರಂಭದ ದಿನಗಳನ್ನು ಸ್ಪಷ್ಟವಾಗಿ ನಿಗದಿಪಡಿಸಲಾಗಿದೆ ಎಂದು ಹೇಳಿದರು.

ಬಕ್ರೀದ್: ಕುರಿ ಬಲು ದುಬಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಕ್ರೀದ್ ಹಬ್ಬದ ಹಿಂದಿನ ದಿನ ಚಾಮರಾಜಪೇಟೆ ಮತ್ತು ಜಯಮಹಲ್ ರಸ್ತೆಯಲ್ಲಿ ಮೇಕೆ ಮತ್ತು ಕುರಿಗಳ ವ್ಯಾಪಾರ ಬಲು ಜೋರಾಗಿ ನಡೆಯಿತು. ಹೈಬ್ರೀಡ್ ತಳಿಯ ಮೇಕೆಗಳು ₹60 ಸಾವಿರ ತನಕ ಮಾರಾಟವಾದವು.

ಚಾಮರಾಜಪೇಟೆ ಈದ್ಗಾ ಮೈದಾನದ ಸುತ್ತಮುತ್ತಲ ರಸ್ತೆಗಳಲ್ಲಿ ಕುರಿಗಳ ಸಂತೆ ಬೀಡು ಬಿಟ್ಟಿತ್ತು. ಈದ್ಗಾ ಮೈದಾನದಲ್ಲೇ ಇದ್ದ ಸಂತೆಯನ್ನು ಭಾನುವಾರ ಸಾಮೂಹಿಕ ಪ್ರಾರ್ಥನೆಗೆ ಸ್ವಚ್ಛಗೊಳಿಸಲು ಸಂತೆಯನ್ನು ಹೊರಕ್ಕೆ ಹಾಕಲಾಗಿತ್ತು.

ಐದು–ಹತ್ತು ಕುರಿಗಳನ್ನು ಹಿಡಿದು ನಿಂತಿದ್ದ ವ್ಯಾಪಾರಿಗಳು ಮತ್ತು ರೈತರಿಗೆ ಬಾರಿ ಬೇಡಿಕೆ ಸೃಷ್ಟಿಯಾಗಿತ್ತು. ರೈತರಿಂದ ಬೆಳಿಗ್ಗೆಯೇ ಕುರಿಗಳನ್ನು ಖರೀದಿಸಿ ಹೆಚ್ಚಿನ ಮೊತ್ತಕ್ಕೆ ಮಾರಾಟ ಮಾಡುವ ವ್ಯಾಪಾರಿಗಳೂ ಹೆಚ್ಚಿನ ಸಂಖ್ಯೆಯಲ್ಲಿ ಇದ್ದರು.

ಬಂಡೂರು ಕುರಿ, ಅಮೀನಗಡದ ಟಗರುಗಳಿಗೆ ಹೆಚ್ಚಿನ ಬೇಡಿಕೆ ಇತ್ತು. ಅದೇ ರೀತಿ ಕುರಿಗಳ ದರವೂ ದುಬಾರಿಯಾಗಿತ್ತು. ಸಣ್ಣ ಸಣ್ಣ ಟಗರುಗಳಿಗೂ ₹15 ಸಾವಿರಕ್ಕೂ ಹೆಚ್ಚಿನ ದರ ನಿಗದಿ ಮಾಡಿಕೊಂಡು ವ್ಯಾಪಾರಿಗಳು ಕುಳಿತಿದ್ದರು.

ವ್ಯಾಪಾರಿಗಳ ಜತೆಗೆ ದಲ್ಲಾಳಿಗಳೂ ಸಂತೆಯಲ್ಲಿ ಬೀಡು ಬಿಟ್ಟಿದ್ದರು. ಕುರಿ ಖರೀದಿಗೆ ಬರುವ ಜನರನ್ನು ಹಿಡಿದು ಕಡಿಮೆ ಬೆಲೆಗೆ ಕೊಡಿಸುವುದಾಗಿ ಹೇಳಿ ಮಧ್ಯಸ್ಥಿಕೆ ವಹಿಸಿ ಚಾಲಾಕಿತನದಿಂದ ವ್ಯಾಪಾರ ಕುದುರಿಸುತ್ತಿದ್ದರು. ಬಂಡವಾಳ ಹಾಕದೆ ಮಾತಿನಲ್ಲೇ ಜನರನ್ನು ಮರುಳು ಮಾಡಿ ವ್ಯಾಪಾರ ಮುಗಿಸಿ ಒಂದು ಕುರಿಗೆ ಇಂತಿಷ್ಟು ಕಮಿಷನ್ ಪಡೆದುಕೊಂಡು ಮತ್ತೊಬ್ಬ ಗಿರಾಕಿಯತ್ತ ಮುಖ ಮಾಡುವುದು ಸಾಮಾನ್ಯವಾಗಿತ್ತು.

ಜಯಮಹಲ್ ರಸ್ತೆಯಲ್ಲೂ ಕುರಿ ಮತ್ತು ಮೇಕೆಗಳ ವ್ಯಾಪಾರ ಭರಾಟೆಯಿಂದ ಸಾಗಿತ್ತು. ರಸ್ತೆಯ ಉದ್ದಕ್ಕೂ ವ್ಯಾಪಾರ ವಹಿವಾಟು ನಡೆಯಿತು. ಸಣ್ಣ ಕುರಿಗಳಿಗೂ ಕನಿಷ್ಠ ₹12 ಸಾವಿರ ದರ ಇತ್ತು. ಹಬ್ಬದ ಹಿಂದಿನ ದಿನ ಆಗಿರುವುದರಿಂದ ಬೇರೆ ಮಾರ್ಗವಿಲ್ಲದೆ ಜನ ಕುರಿಗಳನ್ನು ಖರೀದಿ ಮಾಡಿದರು.

ಚಾಮರಾಜಪೇಟೆ ಈದ್ಗಾ ಮೈದಾನದ ಹೊರಭಾಗದ ರಸ್ತೆಗಳಲ್ಲಿ ಕುರಿ ವ್ಯಾಪಾರ ನಡೆಯಿತು —ಪ್ರಜಾವಾಣಿ ಚಿತ್ರ

ಬಿಬಿಎಂಪಿ ಮೈದಾನಕ್ಕೆ ಜಯಚಾಮರಾಜೇಂದ್ರ ಒಡೆಯರ್ ಹೆಸರಿಟ್ಟರೆ ಬಂದ್ ವಾಪಸ್

ಈದ್ಗಾ ಮೈದಾನ: 12ರಂದು ಬಂದ್ ನಿಶ್ಚಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಾಮರಾಜಪೇಟೆ ಈದ್ಗಾ ಮೈದಾನವನ್ನು ಬಿಬಿಎಂಪಿ ಆಟದ ಮೈದಾನ ಎಂದು ಘೋಷಣೆ ಮಾಡದಿದ್ದರೆ ಜುಲೈ 12ರಂದು ಬಂದ್ ನಡೆಯುವುದು ನಿಶ್ಚಿತ' ಎಂದು ಚಾಮರಾಜಪೇಟೆ ನಾಗರಿಕರ ಒಕ್ಕೂಟ ವೇದಿಕೆ ತಿಳಿಸಿದೆ.

ಶನಿವಾರ ಸುದ್ದಿಗೋಷ್ಠಿ ನಡೆಸಿದ ವೇದಿಕೆಯ ಸದಸ್ಯ ರಾಮೇಗೌಡ ಮತ್ತು ಕಾರ್ಯದರ್ಶಿ ರುಕ್ಮಾಂಗದ, 'ಆಟದ ಮೈದಾನ ಎಂದು ಘೋಷಿಸಿ ಜಯಚಾಮರಾಜೇಂದ್ರ ಒಡೆಯರ್ ಹೆಸರಿಡಬೇಕು. ಜುಲೈ 12ರೊಳಗೆ ಈ ಕೆಲಸವನ್ನು ಬಿಬಿಎಂಪಿ ಮಾಡಿದರೆ ಬಂದ್ ಕೈಬಿಡಲಾಗುವುದು. ಶಾಸಕ ಜಮೀರ್ ಅಹಮದ್ ಅವರನ್ನು ಕರೆಸಿ ನಾವೇ ಸನ್ಮಾನ ಮಾಡುತ್ತೇವೆ' ಎಂದು ಹೇಳಿದರು.

'ಇಲ್ಲದಿದ್ದರೆ, ಬಂದ್ ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ವೇದಿಕೆಯ ಕಾರ್ಯಕರ್ತರನ್ನು ಗೃಹ ಬಂಧನದಲ್ಲಿಟ್ಟರೂ ಚಾಮರಾಜಪೇಟೆ ವಿಧಾನಸಭೆ ಕ್ಷೇತ್ರದ ವರ್ತಕರು ಸ್ವಯಂಪ್ರೇರಿತರಾಗಿ ಅಂಗಡಿಗಳನ್ನು ಮುಚ್ಚಿ ಬಂದ್‌ಗೆ ಬೆಂಬಲ ನೀಡಲಿದ್ದಾರೆ. ಬೆಳಿಗ್ಗೆ 8ರಿಂದ ಸಂಜೆ 5 ಗಂಟೆ ತನಕ ಬಂದ್ ಆಚರಿಸಲು ನಾಗರಿಕರಲ್ಲಿ ಮನವಿ ಮಾಡಿದ್ದೇವೆ' ಎಂದರು.

'ಜಮೀರ್ ಅಹಮದ್ ಅವರು ಶುಕ್ರವಾರ ನಡೆಸಿರುವ ಸಭೆಗೆ ಆಹ್ವಾನ ಇಲ್ಲದಿದ್ದರಿಂದ ನಾವು ಭಾಗವಹಿಸಿಲ್ಲ. ಆಟದ ಮೈದಾನಕ್ಕಾಗಿ ಹೋರಾಟ ನಡೆಸುತ್ತಿರುವವರು ಚಾಮರಾಜಪೇಟೆ ಕ್ಷೇತ್ರದವರಲ್ಲ ಎಂದು ಅವರು ಹೇಳಿದ್ದಾರೆ. ನಾವೆಲ್ಲರೂ ಇದೇ ಕ್ಷೇತ್ರದ ನಾಗರಿಕರು ಎಂಬುದಕ್ಕೆ ಆಧಾರ್ ಕಾರ್ಡ್‌ಗಳನ್ನು ಒದಗಿಸುತ್ತೇವೆ. ಆದರೆ, ಜಮೀರ್ ಅವರೇ ಈ ಕ್ಷೇತ್ರದವರಲ್ಲ. ಅವರು ಈ ಕ್ಷೇತ್ರಕ್ಕೆ ಬಂದ ಬಳಿಕ ಸಮಸ್ಯೆಗಳು ಹೆಚ್ಚಾಗಿವೆ. ಜನರ ನೆಮ್ಮದಿಯೂ ಹಾಳಾಗಿದೆ' ಎಂದು ತಿರುಗೇಟು ನೀಡಿದರು.

'ಸ್ವಾತಂತ್ರ್ಯೋತ್ಸವ ಮತ್ತು ಕನ್ನಡ ರಾಜ್ಯೋತ್ಸವದಂದು ಬಾವುಟ ಹಾರಿಸುವುದಾಗಿ ಜಮೀರ್ ಹೇಳಿದ್ದಾರೆ. ಅನುಮತಿ ನೀಡಿದರೆ ಅವರಿಗಿಂತ ಚೆನ್ನಾಗಿ ನಾವೂ ಕಾರ್ಯಕ್ರಮ ನಡೆಸುತ್ತೇವೆ. ಯಾರೇ ಆದರೂ ಅನುಮತಿ ಪಡೆದೇ ಕಾರ್ಯಕ್ರಮ ಮಾಡಬೇಕು. ಶಾಸಕ ಎಂಬ ಕಾರಣಕ್ಕೆ ಅನುಮತಿ ಪಡೆಯದೆ ಕಾರ್ಯಕ್ರಮ ನಡೆಸಲು ಅವಕಾಶ ನೀಡಬಾರದು' ಎಂದರು.

'ಬಂದ್ ಬಳಿಕವೂ ಬಿಬಿಎಂಪಿ ತಲೆಕೆಡಿಸಿಕೊಳ್ಳದಿದ್ದರೆ, ಬೈಕ್ ರ‍್ಯಾಲಿಗಳನ್ನು ನಡೆಸುತ್ತೇವೆ. ಆಟದ ಮೈದಾನ ಎಂಬುದಕ್ಕೆ ಇರುವ ದಾಖಲೆಗಳನ್ನು ಮತ್ತೊಮ್ಮೆ ಬಿಬಿಎಂಪಿಗೆ ಸಲ್ಲಿಸುತ್ತೇವೆ' ಎಂದು ಹೇಳಿದರು.

'ಕಾನೂನು ಹೋರಾಟಕ್ಕೂ ಪ್ರತ್ಯೇಕ ಸಮಿತಿ ರಚಿಸಲಾಗುವುದು. ಪ್ರಮಿಳಾ ನೇಸರ್ಗಿ, ವಕೀಲರ ಸಂಘದ ಅಧ್ಯಕ್ಷ ವಿವೇಕ್‌ರೆಡ್ಡಿ, ವಕೀಲ ಎಸ್.ಹನುಮಂತರಾಯ, ಎನ್.ಎಂ.ನಂಜುಂಡೇಗೌಡ, ಕೆ.ರಾಮಶೆಟ್ಟಿ, ಸಂದರ್ಶಿನಿ, ಎನ್.ಆರ್.ರಮೇಶ್ ಅವರನ್ನು ಒಳಗೊಂಡ ಸಮಿತಿ ರಚಿಸಲಾಗುವುದು' ಎಂದು ವಿವರಿಸಿದರು.

ಮುಸ್ಲಿಂ ಸಮುದಾಯದವರು ಭಾನುವಾರ ಸಾಮೂಹಿಕ ಪ್ರಾರ್ಥನೆ ಸಲ್ಲಿಸಲು ಶನಿವಾರ ಸಿದ್ಧತೆ ನಡೆಸಲಾಯಿತು —ಪ್ರಜಾವಾಣಿ ಚಿತ್ರ

ಸಾಮೂಹಿಕ ಪ್ರಾರ್ಥನೆಗೆ ಸಿದ್ಧತೆ

ಬಕ್ರೀದ್ ಹಬ್ಬದ ಹಿನ್ನೆಲೆಯಲ್ಲಿ ಮುಸ್ಲಿಂ ಸಮುದಾಯದವರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಲು ಮೈದಾನ ಸಿದ್ಧವಾಗಿದೆ.

ಮೈದಾನದಲ್ಲಿ ನಡೆಯುತ್ತಿದ್ದ ಕುರಿ ಮತ್ತು ಮೇಕೆಗಳ ವ್ಯಾಪಾರಕ್ಕೆ ಶುಕ್ರವಾರವೇ ಬೇರೆಡೆ ವ್ಯವಸ್ಥೆ ಮಾಡಿ, ಸ್ವಚ್ಛತೆ ಕೆಲಸ ಆರಂಭಿಸಲಾಗಿತ್ತು. ಮಳೆ ಸುರಿಯುತ್ತಿರುವುದರಿಂದ ಮೈದಾನ ಕೆಸರು ಗದ್ದೆಯಾಗಿ ಮಾರ್ಪಟ್ಟಿದ್ದು, ಅದರ ನಡುವೆಯೂ ಶನಿವಾರ ಅಂತಿಮ ಹಂತದ ತಯಾರಿ ನಡೆಯಿತು. ಮುನ್ನೆಚ್ಚರಿಕೆ ಕ್ರಮವಾಗಿ ಪೊಲೀಸರು ಹೆಚ್ಚಿನ ಸಂಖ್ಯೆಯಲ್ಲಿ ಭದ್ರತೆ ಒದಗಿಸಿದ್ದಾರೆ.

ಭಾನುವಾರ, ಜುಲೈ 10, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 190 | ಪುಟ 18

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ರಾಜ್ಯದ ಆಗಸ ಎಷ್ಟೊಂದು ಬ್ಯುಸಿಯಾಗಲಿದೆ ಗೊತ್ತೇ?

ವಿಶೇಷ ಲೇಖನ 5
ಬಕ್ರೀದ್ ಹಬ್ಬದ ಶುಭಾಶಯಗಳು

16 ಮೃತದೇಹ ಪತ್ತೆ; 15 ಸಾವಿರ ಯಾತ್ರಾರ್ಥಿಗಳ ಸ್ಥಳಾಂತರ
ಅಮರನಾಥ: 40 ಜನರ ಸುಳಿವಿಲ್ಲ 6

ರೈತರ ಮುಗ್ಧತೆಯನ್ನೇ ನಗದಾಗಿಸಿಕೊಳ್ಳುವ ಮಧ್ಯವರ್ತಿಗಳ ಜಾಲ

ಬೆಳೆ ವಿಮೆಗೆ ಮಧ್ಯವರ್ತಿಗಳ ಕನ್ನ

• ಕೆ.ಎಂ.ಸತೀಶ್ ಬೆಳ್ಳಕ್ಕಿ

ಗದಗ: ರೈತರ ಮುಗ್ಧತೆಯನ್ನೇ ಬಂಡವಾಳ ಮಾಡಿಕೊಂಡಿರುವ ಮಧ್ಯವರ್ತಿಗಳು ಬೆಳೆ ವಿಮೆ ಪರಿಹಾರಕ್ಕೆ ಕನ್ನ ಹಾಕುತ್ತಿದ್ದಾರೆ. ಪಾರದರ್ಶಕ ವ್ಯವಸ್ಥೆ ಇದ್ದರೂ ಕೆಲವು ಚಾಲಾಕಿಗಳು ಸರ್ಕಾರ ನೀಡಿದ್ದ ಮುಕ್ತ ಅವಕಾಶವನ್ನೇ ಮೋಸದ ಅಸ್ತ್ರವನ್ನಾಗಿಸಿಕೊಂಡು ದೊಡ್ಡ ಮಟ್ಟದಲ್ಲಿ ವಂಚನೆ ಎಸಗುತ್ತಿದ್ದಾರೆ.

ಅಕ್ರಮ ತಡೆಯಲು ಕೃಷಿ ಇಲಾಖೆ ಅಧಿಕಾರಿಗಳು ಹಿಡಿಯುವ ಜರಡಿಯ ಸೂಕ್ಷ್ಮ ರಂಧ್ರಗಳಿಂದಲೂ ನುಸುಳುವ ಮಧ್ಯವರ್ತಿಗಳು, ಪರಿಹಾರದ ಹಣವನ್ನು ಲಪಟಾಯಿಸುತ್ತಿದ್ದಾರೆ. ಯಾರದ್ದೋ ಜಮೀನಿನ ಬೆಳೆಗೆ ವಿಮೆ ತುಂಬಿ, ತಮ್ಮ ಬ್ಯಾಂಕ್ ಖಾತೆಗೆ ಹಣ ಇಳಿಸಿಕೊಳ್ಳುತ್ತಿದ್ದಾರೆ. ಮತ್ತೊಂದೆಡೆ, ಏನನ್ನೂ ಬೆಳೆಯದ ಹೊಲದಲ್ಲಿ ಬೆಳೆ ಬೆಳೆದಿರುವುದಾಗಿ ದಾಖಲೆ ಸೃಷ್ಟಿಸಿ ವಿಮೆ ಪಡೆದ ಪ್ರಕರಣಗಳೂ ನಡೆದಿವೆ.

2020–21ನೇ ಸಾಲಿನಲ್ಲಿ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯ ಹಿಂಗಾರು ಹಂಗಾಮಿನ ಬೆಳೆ ವಿಮೆ ಯೋಜನೆಯಡಿ, ಮುಂಡರಗಿ ತಾಲ್ಲೂಕಿನ (ಗದಗ ಜಿಲ್ಲೆ) ಡೋಣಿ ಗ್ರಾಮದ ಬಸವೇಶ್ವರ ನಂದಿವೇರಿ ಮಠದ ಮಾಲೀಕತ್ವದಲ್ಲಿರುವ ಸರ್ವೆ ನಂಬರ್ 150/ಎ/2ನ 14.51 ಹೆಕ್ಟೇರ್ ಜಮೀನಿಗೆ ನಿಜಲಿಂಗಪ್ಪ ಕೆ.ಆಲೂರ ಎಂಬುವರು ಬೆಳೆ ವಿಮೆ ಮಾಡಿಸಿದ್ದರು. ಪರಿಹಾರ ರೂಪದಲ್ಲಿ ತನ್ನ ಬ್ಯಾಂಕ್ ಖಾತೆಗೆ ₹5,42,115 ಜಮಾ ಮಾಡಿಸಿಕೊಂಡಿರುವ ಆರೋಪದಡಿ ಇವರ ಮೇಲೆ ಪ್ರಕರಣ ದಾಖಲಾಗಿದೆ. ಇಲ್ಲಿ ನಿಜಲಿಂಗಪ್ಪ ಜಮೀನಿನ ಮಾಲೀಕನಲ್ಲ. ಆದರೂ, 20 ನವೆಂಬರ್ 2020ರಂದು ಸಿಎಸ್‌ಸಿ ಸೆಂಟರ್‌ನಲ್ಲಿ ನಂದಿವೇರಿ ಮಠದ ಜಮೀನಿನ ಉತಾರ (ಪಹಣಿ) ಹಾಗೂ ತನ್ನ ಹೆಸರಿನಲ್ಲಿರುವ ಬ್ಯಾಂಕ್ ಖಾತೆ ಪುಸ್ತಕ ಹಾಗೂ ಆಧಾರ್ ಕಾರ್ಡ್ ನೀಡಿ ಬೆಳೆ ವಿಮೆ ನೋಂದಾಯಿಸಿ ಕೊಂಡು, ಹಣ ಪಡೆದುಕೊಂಡಿದ್ದರು.

'ಜಮೀನಿನ ಮಾಲೀಕ, ಸರ್ಕಾರ ಹಾಗೂ ವಿಮಾ ಕಂಪನಿಗೆ ಮೋಸ ಮಾಡಿದ ಆರೋಪದಡಿ ಡೋಣಿ ಗ್ರಾಮದ ನಿಜಲಿಂಗಪ್ಪ ಕೆ.ಆಲೂರ ಎಂಬುವರ ಮೇಲೆ ಮುಂಡರಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೋಸ ನಡೆದಿರಬಹುದಾದ ಇಂತಹ 211 ಪ್ರಕರಣಗಳು ಜಿಲ್ಲೆಯಲ್ಲಿ ಇದ್ದು, ಜಿಲ್ಲಾಧಿಕಾರಿ ಅವರೆಲ್ಲರ ಪರಿಹಾರ ಹಣ ತಡೆಹಿಡಿದಿದ್ದಾರೆ' ಎಂದು ಗದಗ ಜಿಲ್ಲೆ ಕೃಷಿ ಇಲಾಖೆ ಜಂಟಿ ನಿರ್ದೇಶಕ ಜಿಯಾವುಲ್ಲಾ ಕೆ. ವಿವರ ನೀಡುತ್ತಾರೆ.

ಯಲ್ಲಾಪುರ ತಾಲ್ಲೂಕಿನ ಕಳಚೆಯಲ್ಲಿ ಭೂಕುಸಿತದಿಂದ ಅಡಿಕೆ ಮತ್ತು ತೆಂಗಿನ ಮರಗಳು ಬುಡಮೇಲಾಗಿ ಬಿದ್ದು ಮುರಿದಿರುವುದು – ಸಂಗ್ರಹ ಚಿತ್ರಗಳು

ಒಳನೋಟ

ಅರ್ಹರಿಗೆ ತಲುಪಲಿ ಬೆಳೆ ವಿಮೆ

ಪ್ರತಿಕ್ರಿಯಿಸಿ: 9606038256

feedback@prajavani.co.in

4ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 4

ಬೆಳೆ ವಿಮೆಯಲ್ಲಿ ಅಕ್ರಮ: ಕ್ರಿಮಿನಲ್ ಪ್ರಕರಣ ದಾಖಲು

ಗದಗ ಜಿಲ್ಲೆಯಲ್ಲಿ ನಡೆದ ಅಕ್ರಮ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ. ಯಾರದೋ ಜಮೀನಿನ ಉತಾರವನ್ನು ಬಳಸಿಕೊಂಡು, ಆ ಜಮೀನಿಗೆ ಮತ್ತ್ಯಾರೋ ಬೆಳೆ ವಿಮೆ ತುಂಬಿ ಪರಿಹಾರ ಲಪಟಾಯಿಸುವುದು ಅಪರೂಪದ ಪ್ರಕರಣ. ಬೆಳೆ ವಿಮೆ ಪ್ರಕ್ರಿಯೆಯಲ್ಲಿ ವಿಳಂಬ ಧೋರಣೆ ಮತ್ತು ಅಕ್ರಮ ನಡೆಯದಂತೆ ಹಾಗೂ ಅನ್ನದಾತರಿಗೆ ಸಕಾಲದಲ್ಲಿ ಪರಿಹಾರ ನೀಡಲು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

'ಫಸಲ್ ಬಿಮಾ' ಯೋಜನೆ ಬಗ್ಗೆ ಪ್ರತಿ ತಾಲ್ಲೂಕಿನಲ್ಲಿ ವಾಹನದ ಮೂಲಕ ಪ್ರಚಾರ ಮಾಡಲಾಗುತ್ತಿದೆ. ಜೂನ್ ತಿಂಗಳೊಂದರಲ್ಲೇ ₹404 ಕೋಟಿ ವಿಮೆ ಹಣ ಬಿಡುಗಡೆ ಮಾಡಿಸಿದ್ದೇನೆ. ಕೆಲವೊಮ್ಮೆ ಬೆಳೆ ವಿಮೆಯಲ್ಲಿ 'ಮಿಸ್ ಮ್ಯಾಚ್' ಆಗುತ್ತಿತ್ತು. ಅದನ್ನು ತಪ್ಪಿಸಲು ರೈತರೇ ಆ್ಯಪ್ ಮೂಲಕ ತಮ್ಮ ಹೊಲದ ಬೆಳೆ ಸಮೀಕ್ಷೆ ಮಾಡಲು ಕಾರ್ಯಕ್ರಮ ರೂಪಿಸಿದ್ದೇವೆ.



ಬಿ.ಸಿ.ಪಾಟೀಲ, ಕೃಷಿ ಸಚಿವ



ಹಾವೇರಿ ಜಿಲ್ಲೆಯ ಹಳ್ಳಿಯೊಂದರಲ್ಲಿ ಹೊಲ ಜಲಾವೃತವಾಗಿರುವುದು

ಹೆಗ್ಗಾರು ಗುಡ್ಡ ಕುಸಿದು ಅಡಿಕೆ ತೋಟ ನಾಶ

56,825 ಚ.ಕಿ.ಮೀ ಪರಿಸರ ಸೂಕ್ಷ್ಮ ಪ್ರದೇಶ

ಪಶ್ಚಿಮ ಘಟ್ಟ: ಮತ್ತೆ ಕರಡು ಅಧಿಸೂಚನೆ ಹೊರಡಿಸಿದ ಕೇಂದ್ರ

ಪಶ್ಚಿಮ ಘಟ್ಟ ಪ್ರದೇಶದಲ್ಲಿನ ರಾಜ್ಯವಾರು ಪರಿಸರ ಸೂಕ್ಷ್ಮ ಪ್ರದೇಶ (ಚದರ ಕಿ.ಮೀಗಳಲ್ಲಿ)



• ಯತೀಶ್ ಕುಮಾರ್ ಜಿ.ಡಿ.

ಪ್ರಜಾವಾಣಿ ವಿಶೇಷ

ಬೆಂಗಳೂರು: ಗುಜರಾತ್, ಮಹಾರಾಷ್ಟ್ರ, ಗೋವಾ, ಕರ್ನಾಟಕ, ಕೇರಳ, ತಮಿಳುನಾಡು ರಾಜ್ಯಗಳಲ್ಲಿ ವ್ಯಾಪಿಸಿರುವ ಪಶ್ಚಿಮ ಘಟ್ಟ ಪ್ರದೇಶದ 56,825 ಚದರ ಕಿ.ಮೀ ವಿಸ್ತೀರ್ಣವನ್ನು ಪರಿಸರ ಸೂಕ್ಷ್ಮ ಪ್ರದೇಶವೆಂದು ಗುರುತಿಸಿ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಮತ್ತೊಮ್ಮೆ ಕರಡು ಅಧಿಸೂಚನೆ ಹೊರಡಿಸಿದೆ. ಈ ಹಿಂದೆ ಮೂರು ಬಾರಿ ಕರಡು ಅಧಿಸೂಚನೆ ಹೊರಡಿಸಲಾಗಿತ್ತು.

ಅಳಿವಿನ ಅಂಚಿನಲ್ಲಿರುವ ಅಪರೂಪದ ಸಸ್ಯ ಮತ್ತು ಪ್ರಾಣಿ ಸಂಕುಲ, ನದಿ ಮೂಲಗಳನ್ನು ಹೊಂದಿರುವ ಪಶ್ಚಿಮ ಘಟ್ಟದ ಕೆಲ ಪ್ರದೇಶವನ್ನು ಪರಿಸರ ಸೂಕ್ಷ್ಮ ಪ್ರದೇಶವೆಂದು ಘೋಷಿಸಿದ ಬಳಿಕವಷ್ಟೇ ಈ ಪ್ರದೇಶಕ್ಕೆ ಯುನೆಸ್ಕೊ ವಿಶ್ವಪಾರಂಪರಿಕ ತಾಣಗಳ ಮಾನ್ಯತೆ ದೊರಕುತ್ತದೆ. ಈ ನಿಟ್ಟಿನಲ್ಲಿ ಕೇಂದ್ರದ ಪ್ರಯತ್ನ ಸಾಗಿದೆ. ಆದರೆ ಕೇಂದ್ರದ ಈ ಪ್ರಯತ್ನಕ್ಕೆ ಪಶ್ಚಿಮ ಘಟ್ಟ ವ್ಯಾಪ್ತಿಯ ರಾಜ್ಯಗಳು ನಿರಂತರವಾಗಿ ವಿರೋಧ ವ್ಯಕ್ತಪಡಿಸುತ್ತಲೇ ಇವೆ. ಇದರ ಬೆನ್ನಲ್ಲೇ ಕೇಂದ್ರ ಸರ್ಕಾರ ಜುಲೈ 6ರಂದು ಹೊಸದಾಗಿ ಕರಡು ಅಧಿಸೂಚನೆ ಹೊರಡಿಸಿದೆ. 1986ರ ಪರಿಸರ ಸಂರಕ್ಷಣಾ ಕಾಯ್ದೆಯಡಿ ಈ ಅಧಿಸೂಚನೆ ಹೊರಡಿಸಿದ್ದು, ಆಕ್ಷೇಪಣೆ ಸಲ್ಲಿಸಲು 60 ದಿನಗಳ ಕಾಲಾವಕಾಶ ನೀಡಲಾಗಿದೆ.

ಪಶ್ಚಿಮ ಘಟ್ಟದ ಜೀವ ವೈವಿಧ್ಯ ಉಳಿಸಲು ಘಟ್ಟದ 59,940 ಚ.ಕಿ.ಮೀ ವಿಸ್ತೀರ್ಣವನ್ನು ಪರಿಸರ ಸೂಕ್ಷ್ಮ ಪ್ರದೇಶವೆಂದು ಗುರುತಿಸಿ ಸಂರಕ್ಷಿಸಬೇಕು ಎಂದು ಕೇಂದ್ರ ಸರ್ಕಾರ ರಚಿಸಿದ್ದ ಉನ್ನತ ಮಟ್ಟದ ಸಮಿತಿಯು 2013ರಲ್ಲಿ ವರದಿ ಸಲ್ಲಿಸಿತ್ತು.

ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಕೆಲ ಬಗೆಯ ಚಟುವಟಿಕೆಗಳನ್ನು ನಿಷೇಧಿಸಲಾಗಿದೆ.

5ನೇ ಪುಟ ನೋಡಿ

ಶ್ರೀಲಂಕಾ: ಅಧ್ಯಕ್ಷರ ಮನೆಗೆ ನುಗ್ಗಿದ ಪ್ರತಿಭಟನಕಾರರು

ಗೊಟಬಯ ಪಲಾಯನ

ಕೊಲಂಬೊ (ಎಎಫ್‌ಪಿ/ಪಿಟಿಐ): ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ಶ್ರೀಲಂಕಾದಲ್ಲಿ ಜನರ ಆಕ್ರೋಶದ ಕಟ್ಟೆ ಒಡೆದಿದೆ. ಅಧ್ಯಕ್ಷ ಗೊಟಬಯ ರಾಜಪಕ್ಸ ರಾಜೀನಾಮೆ ನೀಡುವಂತೆ ಒತ್ತಾಯಿಸಿ, ಅವರ ಗೃಹಕಚೇರಿಗೆ ಪ್ರತಿಭಟನಕಾರರು ಶನಿವಾರ ನುಗ್ಗಿದ್ದಾರೆ. ಜನರ ಆಕ್ರೋಶಕ್ಕೆ ಗುರಿಯಾಗಿರುವ ಗೊಟಬಯ ಪಲಾಯನ ಮಾಡಿದ್ದಾರೆ.

'ಪ್ರತಿಭಟನೆ ನಿಯಂತ್ರಿಸುವುದು ಕಷ್ಟವಾಗಲಿದೆ' ಎಂದು ಗುಪ್ತಚರ ಸಂಸ್ಥೆಗಳು ಮಾಹಿತಿ ನೀಡಿದ್ದವು. ಹೀಗಾಗಿ, ಗೊಟಬಯ ಶುಕ್ರವಾರವೇ ಮನೆಯಿಂದ ಪಲಾಯನ ಮಾಡಿದ್ದಾರೆ' ಎಂದು ಅವರ ಆಪ್ತಮೂಲಗಳು ಹೇಳಿವೆ. ಈ ಬೆಳವಣಿಗೆಗಳ ಬೆನ್ನಲ್ಲೇ ಮಾಧ್ಯಮದವರ ಜೊತೆ ಮಾತನಾಡಿದ ಸ್ಪೀಕರ್ ಮಹಿಂದಾ ಯಪಾ ಅಬೆವರ್ಧನ, 'ಇದೇ 13ರಂದು ಗೊಟಬಯ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲಿದ್ದಾರೆ' ಎಂದು ಹೇಳಿದ್ದಾರೆ.

6ನೇ ಪುಟ ನೋಡಿ

ಗೊಟಬಯ ಅವರ ಗೃಹ ಕಚೇರಿಗೆ ನುಗ್ಗಿದ ಪ್ರತಿಭಟನಕಾರರು –ಎಎಫ್‌ಪಿ ಚಿತ್ರ

ರಾನಿಲ್ ರಾಜೀನಾಮೆ, ನಿವಾಸಕ್ಕೆ ಬೆಂಕಿ

ಕೊಲಂಬೊ: ನಾಗರಿಕರ ಸುರಕ್ಷತೆ ಮತ್ತು ಸರ್ವ ಪಕ್ಷಗಳ ಸರ್ಕಾರಕ್ಕೆ ದಾರಿ ಮಾಡಿಕೊಡುವ ಉದ್ದೇಶದಿಂದ ಪಕ್ಷದ ನಾಯಕರ ಅತ್ಯುತ್ತಮ ಶಿಫಾರಸನ್ನು ಅಂಗೀಕರಿಸುತ್ತಿದ್ದೇನೆ. ಈ ಹಿನ್ನೆಲೆಯಲ್ಲಿ ಪ್ರಧಾನಿ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದೇನೆ ಎಂದು ರಾನಿಲ್ ವಿಕ್ರಮಸಿಂಘೆ ಅವರು ಟ್ವೀಟ್ ಮಾಡಿದ್ದಾರೆ. ಅದರ ಬೆನ್ನಲ್ಲೇ, ಉದ್ರಿಕ್ತ ಗುಂಪು ಅವರ ನಿವಾಸದ ಮೇಲೆ ದಾಳಿ ನಡೆಸಿ, ಬೆಂಕಿ ಹಚ್ಚಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಮರನಾಥ: ಬಹುತೇಕ ಕನ್ನಡಿಗರು ಸುರಕ್ಷಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮರನಾಥ ಯಾತ್ರೆಗೆ ರಾಜ್ಯದಿಂದ ತೆರಳಿದ್ದ 370 ಯಾತ್ರಿಗಳ ಮಾಹಿತಿಯು ವಿಕೋಪ ನಿರ್ವಹಣಾ ಸಹಾಯವಾಣಿಗೆ ಲಭಿಸಿದ್ದು, ಇವರಲ್ಲಿ ಬಹುತೇಕ ಮಂದಿ ಸುರಕ್ಷಿತವಾಗಿದ್ದಾರೆ.

ಬಹುತೇಕ ಯಾತ್ರಿಗಳು ರಾಮನಗರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಮೈಸೂರು, ಮಂಡ್ಯ, ಶಿವಮೊಗ್ಗ, ಬಾಗಲಕೋಟೆ, ದಕ್ಷಿಣ ಕನ್ನಡ ಮತ್ತು ಕೋಲಾರ ಜಿಲ್ಲೆಯವರು. ಯಾತ್ರಿಗಳ ಮಾಹಿತಿಯನ್ನು ಕಾಶ್ಮೀರದಲ್ಲಿನ ಎನ್‌ಡಿಆರ್‌ಎಫ್ ನಿಯಂತ್ರಣ ಕೊಠಡಿ ಮತ್ತು ಅಮರನಾಥ ದೇವಸ್ಥಾನ ಮಂಡಳಿಗೆ ನೀಡಲಾಗಿದ್ದು, ಅಗತ್ಯ ನೆರವು ನೀಡುವಂತೆ ರಾಜ್ಯ ಸರ್ಕಾರ ಕೋರಿದೆ.

6ನೇ ಪುಟ ನೋಡಿ

ಬ್ರಿಟನ್ ಪ್ರಧಾನಿ ಸ್ಥಾನದ ಆಕಾಂಕ್ಷಿಗಳಲ್ಲಿ ಸುನಕ್ ಮುಂದೆ

ಲಂಡನ್ (ಪಿಟಿಐ): ಬ್ರಿಟನ್‌ನ ಕನ್ಸರ್ವೇಟಿವ್ ಪಕ್ಷದ ನಾಯಕತ್ವ ವಹಿಸಿಕೊಳ್ಳಲು, ಆ ಮೂಲಕ ಮುಂದಿನ ಪ್ರಧಾನಿಯಾಗುವ ಸ್ಪರ್ಧೆಯಲ್ಲಿ ಮಾಜಿ ಹಣಕಾಸು ಸಚಿವ ರಿಷಿ ಸುನಕ್ ಮುಂಚೂಣಿಯಲ್ಲಿದ್ದು, ಶನಿವಾರ ಔಪಚಾರಿಕವಾಗಿ ಪ್ರಚಾರ ಆರಂಭಿಸಿದ್ದಾರೆ.

3

ಚಿನಕುರಳಿ

ಪ್ರಕಾಶ್ ಶೆಟ್ಟಿ

ಕರಾವಳಿಯಲ್ಲಿ ಮುಂದುವರಿದ ಮಳೆ

ಬೆಂಗಳೂರು: ರಾಜ್ಯದ ಕರಾವಳಿ ಭಾಗದಲ್ಲಿ ಶನಿವಾರವೂ ಮಳೆ ಮುಂದುವರಿದಿದ್ದು, ಮಲೆನಾಡಿನಲ್ಲಿ ಮಳೆಯ ಅಬ್ಬರ ಕೊಂಚ ತಗ್ಗಿದೆ. ಇತರ ಜಿಲ್ಲೆಗಳಲ್ಲಿ ಮಳೆಯಿಂದಾಗಿ ಹಲವೆಡೆ ಮನೆಗಳು ಹಾನಿಗೀಡಾಗಿದ್ದು, ಕೆಲವೆಡೆ ರಸ್ತೆಗಳು ಕುಸಿದಿವೆ.

ಚಿಕ್ಕಮಗಳೂರು ಜಿಲ್ಲೆ ಮತ್ತು ಕಲಬುರಗಿ ಜಿಲ್ಲೆಯ ಹಲವೆಡೆ ಬೆಳೆಗಳಿಗೆ ಹಾನಿಯಾಗಿದೆ. ಕಲಬುರಗಿ ಜಿಲ್ಲೆಯ ಚಿತ್ತಾಪುರ ಪಟ್ಟಣದಲ್ಲಿ ಶುಕ್ರವಾರ ರಾತ್ರಿ ಮನೆಯ ಗೋಡೆ ಕುಸಿದು ಆರೀಫಾ ಬೇಗಂ ಸರ್ದಾರ್ ಅಲಿ ಎಂಬುವವರು ಮೃತಪಟ್ಟಿದ್ದು, ಇಬ್ಬರಿಗೆ ಗಾಯಗಳಾಗಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಫಲ್ಗುಣಿ ನದಿ ತುಂಬಿ ಹರಿಯುತ್ತಿದ್ದು, ವೇಣೂರು ಬಳಿ ಮೃತದೇಹವೊಂದು ನೀರಿನಲ್ಲಿ ತೇಲಿಹೋಗುತ್ತಿರುವುದು ಗ್ರಾಮಸ್ಥರಿಗೆ ಗೋಚರಿಸಿದೆ. ಆದರೆ, ಯಾರ ಶವ ಎಂಬ ವಿವರ ತಿಳಿದುಬಂದಿಲ್ಲ. ನೇತ್ರಾವತಿ, ಶಾಂಭವಿ, ತುಂಗಾ, ಭದ್ರಾ ಮತ್ತು ಹೇಮಾವತಿ ನದಿಗಳು ತುಂಬಿ ಹರಿಯುತ್ತಿವೆ. ಶಿವಮೊಗ್ಗ ಜಿಲ್ಲೆಯಲ್ಲಿ ಜೋಗಜಲಪಾತ ಮೈದುಂಬಿದ್ದು ಪ್ರವಾಸಿಗರ ಆಕರ್ಷಣೆಯ ಕೇಂದ್ರವಾಗಿದೆ.

ಮೂರು ಜಿಲ್ಲೆಗಳಿಗೆ 'ರೆಡ್ ಅಲರ್ಟ್': ನೈರುತ್ಯ ಮುಂಗಾರು ರಾಜ್ಯದಾದ್ಯಂತ ಮತ್ತಷ್ಟು ಬಿರುಸುಗೊಂಡಿದ್ದು, ಮುಂದಿನ 48 ಗಂಟೆಗಳು ಕರಾವಳಿ ಜಿಲ್ಲೆಗಳಲ್ಲಿ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ದಕ್ಷಿಣ ಕನ್ನಡ, ಉತ್ತರ ಕನ್ನಡ ಹಾಗೂ ಉಡುಪಿ ಜಿಲ್ಲೆಗೆ ಭಾನುವಾರ ಹಾಗೂ ಸೋಮವಾರವೂ 'ರೆಡ್ ಅಲರ್ಟ್' ಘೋಷಿಸಲಾಗಿದೆ. ರಾಜ್ಯದ ಬಹುತೇಕ ಕಡೆ ಮಳೆ ಮುಂದುವರೆಯಲಿದೆ. ಕರಾವಳಿ ತೀರದಲ್ಲಿ ಮುಂದಿನ 48 ಗಂಟೆಗಳು ಬಿರುಗಾಳಿಯ ವೇಗ ಪ್ರತಿ ಗಂಟೆಗೆ ಗರಿಷ್ಠ 55 ಕಿ.ಮೀ ತಲುಪುವ ಸಾಧ್ಯತೆಯಿದೆ. ಆದ್ದರಿಂದ ಮೀನುಗಾರರು ಸಮುದ್ರಕ್ಕೆ ತೆರಳಬಾರದು ಎಂದು ಇಲಾಖೆ ಸೂಚಿಸಿದೆ.

ದಕ್ಷಿಣ ಒಳನಾಡಿನ ಚಿಕ್ಕಮಗಳೂರು, ಕೊಡಗು ಹಾಗೂ ಶಿವಮೊಗ್ಗ ಜಿಲ್ಲೆಗಳಿಗೆ ಮುಂದಿನ ಎರಡು ದಿನ 'ಆರೆಂಜ್ ಅಲರ್ಟ್' ನೀಡಲಾಗಿದೆ. ಬೀದರ್, ಯಾದಗಿರಿ, ಕಲಬುರ್ಗಿ, ವಿಜಯಪುರ, ಬೆಳಗಾವಿ, ಧಾರವಾಡ, ಹಾವೇರಿ ಹಾಗೂ ಹಾಸನ ಜಿಲ್ಲೆಗೆ ಭಾನುವಾರ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ. ಈ ಜಿಲ್ಲೆಗಳಲ್ಲಿ ಕೆಲವೆಡೆ ಭಾರಿ ಮಳೆಯಾಗಲಿದೆ ಎಂದು ಇಲಾಖೆ ತಿಳಿಸಿದೆ.

ಇನ್ನಷ್ಟು ಸುದ್ದಿಗಳು 5

ಪಿಎಸ್‌ಐ ಅಕ್ರಮ: ಪೌಲ್ ಡೈರಿಯಲ್ಲಿ ಪ್ರಭಾವಿಗಳ ಹೆಸರು

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದಲ್ಲಿ ಬಂಧಿಸಲಾಗಿರುವ ಎಡಿಜಿಪಿ ಅಮ್ರಿತ್ ಪೌಲ್ ಅವರಿಗೆ ಸೇರಿದ್ದು ಎನ್ನಲಾದ ಡೈರಿಯನ್ನು ಸಿಐಡಿ ಅಧಿಕಾರಿಗಳು ಜಪ್ತಿ ಮಾಡಿದ್ದಾರೆ. ಇದರಿಂದಾಗಿ ಪ್ರಕರಣದ ತನಿಖೆಗೆ ಪ್ರಮುಖ ತಿರುವೊಂದು ಸಿಕ್ಕಿದಂತಾಗಿದೆ.

ನೇಮಕಾತಿ ವಿಭಾಗದ ಮುಖ್ಯಸ್ಥರಾಗಿದ್ದ ಎಡಿಜಿಪಿ ಅಮ್ರಿತ್ ಪೌಲ್, ಪಿಎಸ್‌ಐ ನೇಮಕಾತಿ ಪ್ರಕ್ರಿಯೆ ಅಂಶಗಳನ್ನು ಡೈರಿಯಲ್ಲಿ ದಾಖಲಿಸುತ್ತಿದ್ದರೆಂಬ ಮಾಹಿತಿ ಗೊತ್ತಾಗಿದೆ. ಕೆಲವು ಅಧಿಕಾರಸ್ಥರು, ರಾಜಕೀಯ ಪಕ್ಷಗಳ ಮುಖಂಡರು, ಐಪಿಎಸ್ ಅಧಿಕಾರಿಗಳು, ಡಿವೈಎಸ್ಪಿಗಳು, ಇನ್‌ಸ್ಪೆಕ್ಟರ್‌ಗಳು ಹಾಗೂ ವಿವಿಧ ಕ್ಷೇತ್ರಗಳ ಪ್ರಭಾವಿಗಳ ಹೆಸರು ಡೈರಿಯಲ್ಲಿರುವುದಾಗಿ ಸಿಐಡಿ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

'ಪೌಲ್ ಅವರ ಸಹಕಾರ ನಗರದಲ್ಲಿರುವ ಮನೆ, ಚಿಕ್ಕಬಳ್ಳಾಪುರ ರಸ್ತೆಯಲ್ಲಿರುವ ಫಾರ್ಮ್‌ಹೌಸ್ (ತೋಟದ ಮನೆ) ಹಾಗೂ ಕಚೇರಿ ಮೇಲೆ ಇತ್ತೀಚೆಗಷ್ಟೇ ದಾಳಿ ಮಾಡಲಾಗಿತ್ತು. ಡೈರಿ ಹಾಗೂ ಇತರೆ ದಾಖಲೆಗಳನ್ನು ಲಭ್ಯವಾಗಿದ್ದು, ಪರಿಶೀಲನೆ ನಡೆಸಲಾಗುತ್ತಿದೆ' ಎಂದೂ ಮೂಲಗಳು ಹೇಳಿವೆ.

'ಪಿಎಸ್‌ಐ ಅಕ್ರಮ ಪ್ರಕರಣ ಬಯಲಾಗುತ್ತಿದ್ದಂತೆ ಪೌಲ್ ಅವರನ್ನು ಆಂತರಿಕ ಭದ್ರತಾ ವಿಭಾಗಕ್ಕೆ (ಐಎಸ್‌ಡಿ) ವರ್ಗಾಯಿಸಲಾಗಿತ್ತು. ಈ ಸಂದರ್ಭದಲ್ಲಿ ಹಲವು ದಾಖಲೆಗಳನ್ನು ಕಚೇರಿಯಿಂದ ಸ್ಥಳಾಂತರಿಸಲಾಗಿದೆ. ಆ ಪೈಕಿ ಡೈರಿ ಹಾಗೂ ಕೆಲ ದಾಖಲೆಗಳು ಮಾತ್ರ ಸಿಕ್ಕಿವೆ' ಎಂದೂ ತಿಳಿಸಿವೆ.

ಅಭ್ಯರ್ಥಿಗಳ ಹೆಸರು ಸಮೇತ ಉಲ್ಲೇಖ: 'ಪ್ರಭಾವಿಗಳು, ತಮ್ಮ 'ಆಪ್ತ'ರ ನೇಮಕಾತಿ ಆಗಬೇಕೆಂದು ಪೌಲ್ ಅವರಿಗೆ ಸೂಚಿಸಿದ್ದರು. ಅವರ ಮೌಖಿಕ ಆಜ್ಞೆ ಪಾಲಿಸಿದ್ದ ಪೌಲ್, ಯಾವ ಅಭ್ಯರ್ಥಿಗಳ ಹೆಸರನ್ನು ಯಾರ್ಯಾರು ಶಿಫಾರಸು ಮಾಡಿದ್ದಾರೆ ಎಂದು ಹೆಸರು/ಹುದ್ದೆ ಸಹಿತ ಡೈರಿಯಲ್ಲಿ ಉಲ್ಲೇಖಿಸಿದ್ದಾರೆ' ಎಂದು ಸಿಐಡಿ ಮೂಲಗಳು ತಿಳಿಸಿವೆ.

'ಎಡಿಜಿಪಿ ಅವರ ಅಸಲಿ ಕೈ ಬರಹ ಹಾಗೂ ಡೈರಿಯಲ್ಲಿರುವ ಕೈ ಬರಹಕ್ಕೂ ಹೊಂದಾಣಿಕೆ ಆಗಬೇಕಿದೆ. ಡೈರಿಯನ್ನು ಪರೀಕ್ಷೆಗಾಗಿ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ' ಎಂದೂ ತಿಳಿಸಿವೆ.

ಸ್ವಯಂಪ್ರೇರಿತ ಪ್ರಕರಣ ದಾಖಲಿಸಿ, ವಿಚಾರಣೆ ಆರಂಭಿಸಿದ ಲೋಕಾಯುಕ್ತ

ಝಳಕಿ ತನಿಖಾ ಠಾಣೆ: ಎಂವಿಐಗಳ ದರ್ಬಾರು!

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಜಯಪುರ ಜಿಲ್ಲೆಯ ಝಳಕಿಯಲ್ಲಿರುವ ಅಂತರರಾಜ್ಯ ಸಾರಿಗೆ ತನಿಖಾ ಠಾಣೆಯಲ್ಲಿ ಮೋಟಾರು ವಾಹನ ಇನ್‌ಸ್ಪೆಕ್ಟರ್‌ಗಳು (ಎಂವಿಐ) ಯಾರ ಅಂಕೆಗೂ ಸಿಗದೆ ಸ್ವೇಚ್ಛಾಚಾರದಿಂದ ದರ್ಬಾರು ನಡೆಸುತ್ತಿರುವುದನ್ನು ಕಣ್ಣಾರೆ ಕಂಡುಬಂದಿರುವ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ, ಈ ಕುರಿತು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ಆರಂಭಿಸಿದ್ದಾರೆ.

ನೂತನ ಲೋಕಾಯುಕ್ತರಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಜೂನ್ 24ರಂದು ವಿಜಯಪುರ ಜಿಲ್ಲೆಗೆ ಭೇಟಿ ನೀಡಿದ್ದ ಪಾಟೀಲ, ಸಾರ್ವಜನಿಕರ ಅಹವಾಲು ಆಲಿಸಿದ್ದರು. ಸಾರಿಗೆ ಇಲಾಖೆಯ ಕಾರ್ಯವೈಖರಿ ಕುರಿತು ಹೆಚ್ಚು ದೂರುಗಳು ಕೇಳಿಬಂದ ಕಾರಣದಿಂದ ಖುದ್ದಾಗಿ ಝಳಕಿಯಲ್ಲಿರುವ ಅಂತರರಾಜ್ಯ ಸಾರಿಗೆ ತನಿಖಾ ಠಾಣೆಗೆ ಭೇಟಿ ನೀಡಿ ಪರಿಶೀಲಿಸಿದ್ದರು.

'ಝಳಕಿ ತನಿಖಾ ಠಾಣೆಯಲ್ಲಿ ಒಂಬತ್ತು ಮೋಟಾರು ವಾಹನ ಇನ್‌ಸ್ಪೆಕ್ಟರ್‌ಗಳಿದ್ದಾರೆ. ಪ್ರತಿ ಪಾಳಿಯಲ್ಲಿ ತಲಾ ಮೂವರು ಕಾರ್ಯನಿರ್ವಹಿಸುತ್ತಿದ್ದಾರೆ. ಎಂವಿಐಗಳ ಹಾಜರಾತಿ, ಅವರು ಯಾವ ರೀತಿ ಕೆಲಸ ಮಾಡುತ್ತಾರೆ? ಕೆಲಸದ ಸ್ವರೂಪ ಕುರಿತು ನಿಗಾ ಮತ್ತು ನಿಯಂತ್ರಣ ವ್ಯವಸ್ಥೆಯೇ ಇಲ್ಲ. ಎಂವಿಐಗಳ ವಿರುದ್ಧ ದೂರು ಸ್ವೀಕರಿಸುವ ಮತ್ತು ಅವುಗಳನ್ನು ವಿಲೇವಾರಿ ಮಾಡುವುದಕ್ಕೂ ಒಂದು ವ್ಯವಸ್ಥೆ ಇಲ್ಲ' ಎಂದು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಸೆಕ್ಷನ್ 7(2) ಮತ್ತು ಸೆಕ್ಷನ್ 9(3)(ಎ) ಅಡಿಯಲ್ಲಿ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು, ವಿಚಾರಣೆ ಆರಂಭಿಸಲು ಜೂನ್ 30ರಂದು ಹೊರಡಿಸಿರುವ ಆದೇಶದಲ್ಲಿ ಲೋಕಾಯುಕ್ತರು ಉಲ್ಲೇಖಿಸಿದ್ದಾರೆ.

ಸಾರಿಗೆ ಇಲಾಖೆ ಕಾರ್ಯದರ್ಶಿ, ಸಾರಿಗೆ ಆಯುಕ್ತರು, ಬೆಳಗಾವಿ ವಿಭಾಗ ಜಂಟಿ ಸಾರಿಗೆ ಆಯುಕ್ತರು, ವಿಜಯಪುರ ಪ್ರಾದೇಶಿಕ ಸಾರಿಗೆ ಅಧಿಕಾರಿ ಆನಂದ ಪಾರ್ಥನಹಳ್ಳಿ ಮತ್ತು ಝಳಕಿ ತನಿಖಾ ಠಾಣೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಒಂಬತ್ತು ಎಂವಿಐಗಳನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ. ತನಿಖಾ ಠಾಣೆಯಲ್ಲಿ ಅಧಿಕಾರಿಗಳ ಕಾರ್ಯನಿರ್ವಹಣೆ ಮೇಲೆ ನಿಯಂತ್ರಣ ಮತ್ತು ನಿಗಾ ಇರಿಸಲು ಕೈಗೊಂಡ ಕ್ರಮಗಳ ಕುರಿತು ವರದಿ ನೀಡುವಂತೆ ಮೊದಲ ನಾಲ್ಕು ಪ್ರತಿವಾದಿಗಳಿಗೆ ನಿರ್ದೇಶನ ನೀಡಿದ್ದಾರೆ.

ತನಿಖಾ ಠಾಣೆಯಲ್ಲಿ ಕಾರ್ಯನಿರ್ವಹಿಸುವಾಗ ನಿಯಮ ಪಾಲಿಸದೇ ಇರುವ ಆರೋಪ ಕುರಿತಂತೆ ಉತ್ತರ ನೀಡುವಂತೆ ಒಂಬತ್ತು ಎಂವಿಐಗಳಿಗೆ ಸೂಚಿಸಲಾಗಿದೆ. ಆಗಸ್ಟ್ 19ಕ್ಕೆ ಮುಂದಿನ ವಿಚಾರಣೆ ನಿಗದಿಯಾಗಿದೆ.

2,437 ಅರ್ಜಿ ವಿಲೇವಾರಿ ಬಾಕಿ

ವಿಜಯಪುರ ಪ್ರಾದೇಶಿಕ ಸಾರಿಗೆ ಅಧಿಕಾರಿ ಕಚೇರಿಯಲ್ಲಿ 2,437 ಅರ್ಜಿಗಳನ್ನು ದೀರ್ಘ ಕಾಲದಿಂದ ವಿಲೇವಾರಿ ಮಾಡದೆ ಬಾಕಿ ಇರಿಸಿಕೊಂಡಿರುವುದನ್ನು ಲೋಕಾಯುಕ್ತರು ಪತ್ತೆಮಾಡಿದ್ದಾರೆ. ಈ ಬಗ್ಗೆಯೂ ವಿಚಾರಣೆ ಕೈಗೆತ್ತಿಕೊಂಡಿದ್ದು, ಅರ್ಜಿಗಳನ್ನು ಬಾಕಿ ಇಡಲು ಕಾರಣವಾದ ಅಂಶಗಳ ಕುರಿತು ವರದಿ ಸಲ್ಲಿಸುವಂತೆ ಪ್ರಾದೇಶಿಕ ಸಾರಿಗೆ ಅಧಿಕಾರಿ ಆನಂದ ತೀರ್ಥನಹಳ್ಳಿ ಅವರಿಗೆ ನಿರ್ದೇಶನ ನೀಡಿದ್ದಾರೆ.

ತನಿಖಾ ಠಾಣೆಗೆ ಉಸ್ತುವಾರಿಯೇ ಇಲ್ಲ

ಝಳಕಿ ತನಿಖಾ ಠಾಣೆಗೆ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ (ಎಆರ್‌ಟಿಒ) ದರ್ಜೆಯ ಅಧಿಕಾರಿಯನ್ನು ಉಸ್ತುವಾರಿಯನ್ನಾಗಿ ನೇಮಿಸಬೇಕು. ಆದರೆ, ದೀರ್ಘ ಸಮಯದಿಂದ ಈ ಹುದ್ದೆ ಖಾಲಿ ಇದೆ. ವಿಜಯಪುರ ಆರ್‌ಟಿಒ ಆನಂದ ತೀರ್ಥನಹಳ್ಳಿ ಅವರಿಗೇ ಝಳಕಿ ತನಿಖಾ ಠಾಣೆಯ ಉಸ್ತುವಾರಿಯನ್ನೂ ವಹಿಸಲಾಗಿದೆ. ಅವರು ಆರ್‌ಟಿಒ ಕಚೇರಿಗೆ ಸೀಮಿತವಾಗಿದ್ದು, ತನಿಖಾ ಠಾಣೆ ಕಾರ್ಯನಿರ್ವಹಣೆ ಕುರಿತು ನಿಗಾ ಇರಿಸುತ್ತಿಲ್ಲ ಎಂದು ಮೂಲಗಳು ತಿಳಿಸಿವೆ.

10 YEARS OF UNIVERSITY RECOGNITION 20 YEARS OF ACADEMIC EXCELLENCE

LEARNING UNLIMITED...

REVA UNIVERSITY Bengaluru, India

ADMISSIONS OPEN 2022 - 23

Unleash Your True Potential

- School of Computing & Information Technology
  - B.Tech. - CSIT, CS & SE, ISE, CSE (AI & ML)
- School of Computer Science & Engineering
  - B.Tech. - CSE, AI & DS, CSE (IoT & Cyber Security incl. BCT)
- School of Electronics & Communication Engineering
  - B.Tech. - ECE, ECM, Robotics & Automation
- School of Civil Engineering
  - B.Tech. - CE
- School of Mechanical Engineering
  - B.Tech. - ME, MET
- School of Electrical & Electronics Engineering
  - B.Tech. - EEE
- School of Architecture
  - Bachelor of Architecture
  - Bachelor of Science (Interior Design)
  - Master of Architecture (Environmental Architecture)

- REVA Business School
- School of Management Studies
- School of Commerce
- School of Computer Science & Applications
- School of Applied Sciences
- School of Allied Health Sciences
- School of Arts, Humanities & Social Sciences
- School of Performing Arts & Indic Studies
- School of Legal Studies

OFFICE OF ADMISSIONS
REVA University, Rukmini Knowledge Park, Kattigenahalli, Yelahanka, Bengaluru, Karnataka 560064
Apply Online @ reva.edu.in
call 90211 90211

To get more details log on to https://reva.edu.in

ಐಎಎಸ್ ಅಧಿಕಾರಿಗೆ ಬೆದರಿಕೆ: ಬಂಧನ

ಬೆಂಗಳೂರು: ಐಎಎಸ್ ಅಧಿಕಾರಿ ಮನೀಶ್ ಮೌದ್ಗಿಲ್ ಅವರಿಗೆ ಜೀವ ಬೆದರಿಕೆಯೊಡ್ಡಿದ್ದ ಆರೋಪದಡಿ ಗೋವಿಂದರಾಜು ಎಂಬುವರನ್ನು ಸಂಪಿಗೆಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಅಬಕಾರಿ ಸಚಿವ ಗೋಪಾಲಯ್ಯ ಅವರ ಆಪ್ತ ಕಾರ್ಯದರ್ಶಿ ಹೆಸರಿನಲ್ಲಿ ಮೌದ್ಗಿಲ್ ಅವರಿಗೆ ಕರೆ ಮಾಡಿದ್ದ ಆರೋಪಿ, ಜೀವ ಬೆದರಿಕೆ ಹಾಕಿದ್ದ. ಈ ಬಗ್ಗೆ ದಾಖಲಾದ ಪ್ರಕರಣದಲ್ಲಿ ಆರೋಪಿ ಗೋವಿಂದರಾಜುನನ್ನು ಬಂಧಿಸಲಾಗಿದ್ದು, ಸದ್ಯ ಈತ ನ್ಯಾಯಾಂಗ ಬಂಧನದಲ್ಲಿದ್ದಾನೆ' ಎಂದು ಮೂಲಗಳು ತಿಳಿಸಿವೆ.

'ಮನೀಶ್ ಮೌದ್ಗಿಲ್ ಆಡಳಿತಾತ್ಮಕ ಕಾರಣಕ್ಕಾಗಿ ತಮ್ಮ ಕಾರು ಚಾಲಕ ಆನಂದ್ ಅವರನ್ನು ಕೋಲಾರಕ್ಕೆ ವರ್ಗಾಯಿಸಿದ್ದರು. ಮೌದ್ಗಿಲ್ ಅವರಿಗೆ ರಾತ್ರಿ ಕರೆ ಮಾಡಿದ್ದ ಆರೋಪಿ, 'ನಾನು ಗೋಪಾಲಯ್ಯ ಅವರ ಆಪ್ತ ಕಾರ್ಯದರ್ಶಿ. ಚಾಲಕ ಆನಂದ್ ವರ್ಗಾವಣೆಯನ್ನು ಕೂಡಲೇ ರದ್ದು ಮಾಡಬೇಕು. ಇಲ್ಲದಿದ್ದರೆ ಪರಿಣಾಮ ಎದುರಿಸಬೇಕಾಗುತ್ತದೆ' ಎಂದು ಬೆದರಿಸಿದ್ದ' ಎಂದು ಹೇಳಿವೆ.

ಆಸ್ಪತ್ರೆಗಳಲ್ಲಿನ ಹೊರ ರೋಗಿಗಳಲ್ಲಿ ಶೇ 30ರಷ್ಟು ಮಂದಿ ಜ್ವರ ಪೀಡಿತರು

ಹವಾಮಾನ ವೈಪರೀತ್ಯ:ವೈರಾಣು ಜ್ವರ

• ವರುಣ ಹೆಗಡೆ

ಬೆಂಗಳೂರು: ಹವಾಮಾನದಲ್ಲಿನ ವೈಪರೀತ್ಯ, ಮಳೆಯಿಂದಾಗಿ ನಗರದ ಜನರನ್ನು ವೈರಾಣು ಜ್ವರ ಕಾಡಲಾರಂಭಿಸಿದೆ. ಆಸ್ಪತ್ರೆಗಳ ಹೊರ ರೋಗಿ ವಿಭಾಗಗಳಿಗೆ ಭೇಟಿ ನೀಡುತ್ತಿರುವವರಲ್ಲಿ ಶೇ 30ಕ್ಕೂ ಅಧಿಕ ಮಂದಿ ಜ್ವರ ತಪಾಸಣೆಗೆ ಒಳಪಡುತ್ತಿದ್ದಾರೆ.

ಕಳೆದೊಂದು ತಿಂಗಳಿನಿಂದ ನಗರದಲ್ಲಿ ಮಳೆ ಸುರಿಯುತ್ತಿದೆ. ವಾರದಿಂದ ಮೋಡ ಕವಿದ ವಾತಾವರಣ ಮುಂದುವರೆದಿದ್ದು, ಗರಿಷ್ಠ ತಾಪಮಾನ 25 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ತಾಪಮಾನ 20 ಡಿಗ್ರಿ ಸೆಲ್ಸಿಯಸ್ ಇದ್ದು, ಸಾಧಾರಣ ಮಳೆಯಾಗುತ್ತಿದೆ. ಆಗಾಗ ಸುರಿಯುತ್ತಿರುವ ಮಳೆಯಿಂದಾಗಿ ಜನರಲ್ಲಿನ ಜ್ವರ ಗಂಭೀರ ಸ್ವರೂಪ ಪಡೆದುಕೊಳ್ಳುತ್ತಿದ್ದು, ಮಕ್ಕಳು ಹಾಗೂ ವೃದ್ಧರು ಹೆಚ್ಚಾಗಿ ಗಾಸಿಗೊಳ್ಳುತ್ತಿದ್ದಾರೆ.

ಪ್ರಜಾವಾಣಿ ವಿಶೇಷ

ಜಯನಗರ ಜನರಲ್ ಆಸ್ಪತ್ರೆ, ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆ, ಕೆ.ಸಿ. ಜನರಲ್ ಆಸ್ಪತ್ರೆ, ವಿಕ್ಟೋರಿಯಾ, ವಾಣಿವಿಲಾಸ ಸೇರಿದಂತೆ ಪ್ರಮುಖ ಸರ್ಕಾರಿ ಆಸ್ಪತ್ರೆಗಳಿಗೆ ಪ್ರತಿನಿತ್ಯ ಸರಾಸರಿ 50 ಜ್ವರ ಪೀಡಿತರು ಭೇಟಿ ನೀಡುತ್ತಿದ್ದಾರೆ. ಅದೇ ರೀತಿ, ಮಣಿಪಾಲ್, ನಾರಾಯಣ ಹೆಲ್ತ್, ಅಪೋಲೊ, ಫೋರ್ಟಿಸ್ ಸೇರಿದಂತೆ ವಿವಿಧ ಖಾಸಗಿ ಆಸ್ಪತ್ರೆಗಳಿಗೂ ಜ್ವರದ ಚಿಕಿತ್ಸೆಗಾಗಿ ಬರುವವರ ಸಂಖ್ಯೆಯಲ್ಲಿ ಏರಿಕೆಯಾಗುತ್ತಿದೆ. ವಿವಿಧ ಕ್ಲಿನಿಕ್‌ಗಳಲ್ಲಿ ಸಹ ರೋಗಿಗಳ ದಟ್ಟಣೆ ಹೆಚ್ಚಾಗುತ್ತಿದೆ.

ಮಕ್ಕಳಿಗೆ ಸಮಸ್ಯೆ: 'ಮಕ್ಕಳಲ್ಲಿ ರೋಗ ನಿರೋಧಕ ಶಕ್ತಿ ಕಡಿಮೆ ಇರುತ್ತದೆ. ಹಾಗಾಗಿ, ಸಾಮಾನ್ಯವಾಗಿ ಜ್ವರ ಮೊದಲು ಮಕ್ಕಳಿಗೆ ಬರುತ್ತದೆ. ಬಳಿಕ ಮನೆಮಂದಿಗೆಲ್ಲ ಹರಡುತ್ತದೆ. ನೆಗಡಿ, ಕೆಮ್ಮು, ಮೈ-ಕೈ ನೋವಿನಿಂದ ಪ್ರಾರಂಭವಾಗಿ, ಐದಾರು ದಿನ ಬಾಧಿಸುತ್ತದೆ. ಜ್ವರ ಗಂಭೀರ ಸ್ವರೂಪ ಪಡೆದಾಗ ನ್ಯುಮೋನಿಯಾ ಆಗುವ ಸಾಧ್ಯತೆಗಳಿವೆ' ಎಂದು ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆಯ ನಿರ್ದೇಶಕ ಡಾ.ಕೆ.ಎಸ್. ಸಂಜಯ್ ತಿಳಿಸಿದರು.

'ಆಸ್ಪತ್ರೆಯ ಹೊರ ರೋಗ ವಿಭಾಗಕ್ಕೆ ಪ್ರತಿನಿತ್ಯ 300ಕ್ಕೂ ಅಧಿಕ ಮಂದಿ ಭೇಟಿ ನೀಡುತ್ತಾರೆ. ಅವರಲ್ಲಿ ಮೂರನೇ ಒಂದರಷ್ಟು ಜ್ವರದ ಪ್ರಕರಣಗಳಾಗಿವೆ' ಎಂದು ಮಾಹಿತಿ ನೀಡಿದರು.

'ವಾತಾವರಣದಲ್ಲಿನ ಬದಲಾವಣೆಗಳು ದೇಹದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತವೆ. ಫ್ಲೂ (ಇನ್‌ಫ್ಲುಯೆಂಝಾ) ಜತೆಗೆ ವೈರಾಣು ಸೋಂಕು ಕಾಣಿಸಿಕೊಳ್ಳುತ್ತಿದೆ. ಆಸ್ಪತ್ರೆ ದಾಖಲಾತಿ ಪ್ರಕಾರ ಕಳೆದ ವರ್ಷಕ್ಕೆ ಹೋಲಿಸಿದರೆ ಜೂನ್ ತಿಂಗಳಲ್ಲಿ ಜ್ವರ ಪೀಡಿತರ ಸಂಖ್ಯೆ ಶೇ 15ರಷ್ಟು ಹೆಚ್ಚಳವಾಗಿದೆ' ಎಂದು ನಾರಾಯಣ ಹೆಲ್ತ್ ಸಿಟಿಯ ಆಂತರಿಕ ಔಷಧ ವಿಭಾಗದ ಸಲಹೆಗಾರ ಡಾ. ಮಹೇಶ್ ಕುಮಾರ್ ಅವರು ತಿಳಿಸಿದರು.

ರೋಗ ತಡೆಗೆ ಮುಖಗವಸು ಸಹಾಯಕ

'ಆಸ್ಪತ್ರೆಯ ಹೊರ ರೋಗಿ ವಿಭಾಗಕ್ಕೆ ಪ್ರತಿನಿತ್ಯ ಸರಾಸರಿ 150 ರೋಗಿಗಳು ಭೇಟಿ ನೀಡುತ್ತಿದ್ದು, ಅರ್ಧಕ್ಕೂ ಅಧಿಕ ಮಂದಿ ಜ್ವರ ತಪಾಸಣೆಗೆ ಒಳಪಡುತ್ತಿದ್ದಾರೆ. ಪ್ರತಿ ವರ್ಷ ಈ ಅವಧಿಯಲ್ಲಿ ವೈರಾಣು ಜ್ವರ ಉಲ್ಬಣವಾಗುತ್ತದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಹೆಚ್ಚಿನವರು ಜ್ವರಪೀಡಿತರಾಗುತ್ತಿದ್ದಾರೆ. ಇದು ಒಬ್ಬರಿಂದ ಒಬ್ಬರಿಗೆ ಹರಡುತ್ತದೆ. ಮುಖಗವಸು ಧರಿಸುವಿಕೆಯಿಂದ ಸೋಂಕಿತ ವ್ಯಕ್ತಿ ಸೀನಿದಾಗ, ಕೆಮ್ಮಿದಾಗ ಹೊರಹೊಮ್ಮುವ ಹನಿ ಗಾಳಿ ಸೇರದಂತೆ ತಡೆಯಬಹುದು' ಎಂದು ಕೆ.ಸಿ. ಜನರಲ್ ಆಸ್ಪತ್ರೆ ವೈದ್ಯ ಡಾ. ಲಕ್ಷ್ಮೀಪತಿ ತಿಳಿಸಿದರು.

'ಟೈಫಾಯಿಡ್ ಸೇರಿ ವಿವಿಧ ಜ್ವರಗಳ ಚಿಕಿತ್ಸೆಗೆ ರೋಗಿಗಳು ಬರಲಾರಂಭಿಸಿದ್ದಾರೆ. ಈ ಅವಧಿಯಲ್ಲಿ ನೀರು, ಆಹಾರ ಸೇವಿಸುವಾಗ ಜಾಗೃತೆ ವಹಿಸಬೇಕು' ಎಂದು ಸಿ.ವಿ. ರಾಮನ್ ಸಾರ್ವಜನಿಕ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ರಾಧಾಕೃಷ್ಣ ಅವರು ಹೇಳಿದರು.

ತಣ್ಣನೆ ವಾತಾವರಣದಿಂದಾಗಿ ದೇಹದಲ್ಲಿ ರೋಗ ನಿರೋಧಕ ಶಕ್ತಿ ಕುಗ್ಗುತ್ತದೆ. ಸೀನುವಾಗ, ಕೆಮ್ಮುವಾಗ ಎಚ್ಚರ ವಹಿಸಬೇಕು.

ಡಾ.ಕೆ.ಎಸ್. ಸಂಜಯ್, ಇಂದಿರಾ ಗಾಂಧಿ ಮಕ್ಕಳ ಆಸ್ಪತ್ರೆ ನಿರ್ದೇಶಕ

ವೈರಾಣು, ಡೆಂಗಿ ಸೇರಿದಂತೆ ವಿವಿಧ ಜ್ವರಗಳ ಚಿಕಿತ್ಸೆಗೆ ಆಸ್ಪತ್ರೆಗೆ ಬರುವವರ ಸಂಖ್ಯೆ ವಾರದಿಂದ ಹೆಚ್ಚುತ್ತಿದೆ. ವಾತಾವರಣದಲ್ಲಿನ ಬದಲಾವಣೆಯೇ ಇದಕ್ಕೆ ಮುಖ್ಯ ಕಾರಣ.

ಡಾ. ಲಕ್ಷ್ಮೀಪತಿ, ಕೆ.ಸಿ. ಜನರಲ್ ಆಸ್ಪತ್ರೆ ಮಕ್ಕಳ ತಜ್ಞ

ಜ್ವರದ ಪ್ರಮುಖ ಲಕ್ಷಣಗಳು

- ತೀವ್ರ ಆಯಾಸ, ದಣಿವು
- ಮೈ ಕೈ ನೋವು
- ತಲೆನೋವು
- ನೆಗಡಿ, ಜ್ವರ
- ಕೆಮ್ಮು
- ಮೂಗು ಕಟ್ಟುವುದು
- ಕಣ್ಣುಗಳಲ್ಲಿ ಅಸ್ವಸ್ಥತೆ
- ಗಂಟಲು ಉರಿ

ಸುದ್ದಿ 2 ನಿಮಿಷ

'ವೈದ್ಯರು ಮನುಷ್ಯತ್ವ ಮರೆಯಬಾರದು'

ಬೆಂಗಳೂರು: 'ಸಮಾಜದಲ್ಲಿ ವೈದ್ಯರಿಗೆ ವಿಶಿಷ್ಟ ಸ್ಥಾನವಿದೆ. ಇನ್ನೊಂದು ಜೀವ ಉಳಿಸುವ ಕಾಯಕದಲ್ಲಿ ನಿರತರಾಗಿರುವ ವೈದ್ಯರು ಮನುಷ್ಯತ್ವ ಮರೆಯಬಾರದು' ಎಂದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ ಡಾ. ಸಿ.ರಾಮಚಂದ್ರ ತಿಳಿಸಿದರು.

ಸಂಸ್ಥೆಯು ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಪದವಿ ಪ್ರದಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, 'ಇನ್ನೊಬ್ಬರಿಗೆ ಜೀವ ನೀಡುವ ಶಕ್ತಿ ವೈದ್ಯರಿಗೆ ಮಾತ್ರ ಇರುತ್ತದೆ. ಇಂತಹ ಪುಣ್ಯದ ಕೆಲಸ ಮಾಡುತ್ತಿರುವ ವೈದ್ಯರು, ರೋಗಿಗಳನ್ನು ಮಾನವೀಯ ಗುಣಗಳಿಂದ ಕಾಣಬೇಕು' ಎಂದು ಹೇಳಿದರು.

'ನರ್ಸಿಂಗ್ ಶಿಕ್ಷಣದಲ್ಲಿ ಸಂಸ್ಥೆ ಮುಂಚೂಣಿಯಲ್ಲಿದೆ. ಇಲ್ಲಿನ ಮೌಲ್ಯಯುತ ಶಿಕ್ಷಣ ಹಾಗೂ ತರಬೇತಿಗೆ ಎಲ್ಲೆಡೆ ಮೆಚ್ಚುಗೆ ವ್ಯಕ್ತವಾಗುತ್ತಿದೆ. ವಿದೇಶಗಳಿಂದಲೂ ವಿದ್ಯಾರ್ಥಿಗಳು ವ್ಯಾಸಂಗಕ್ಕಾಗಿ ಬರುತ್ತಿದ್ದಾರೆ' ಎಂದು ತಿಳಿಸಿದರು.

ಉದ್ಯಮಿ ಆರ್. ರಾಜಶೇಖರ್, 'ಅನಾರೋಗ್ಯದ ಸ್ಥಿತಿಯನ್ನು ಆರೋಗ್ಯದತ್ತ ಕೊಂಡೊಯ್ಯುವ ಪುಣ್ಯದ ಕೆಲಸವನ್ನು ವೈದ್ಯರು ಮಾಡುತ್ತಿದ್ದಾರೆ. ಅವರ ಸೇವೆಗೆ ಬೆಲೆ ಕಟ್ಟಲಾಗದು. ವೈದ್ಯ ವಿದ್ಯಾರ್ಥಿಗಳು ಸಮಾಜದಲ್ಲಿ ಸಿಗುವ ಉತ್ತಮ ಅವಕಾಶಗಳನ್ನು ಬಳಸಿಕೊಂಡು, ಉನ್ನತ ಸ್ಥಾನ ಪಡೆಯಬೇಕು' ಎಂದು ಹೇಳಿದರು.

ಪಿಇಎಸ್: ಬ್ಯಾಡ್ಮಿಂಟನ್ ಅಂಕಣ ಉದ್ಘಾಟನೆ

ಬೆಂಗಳೂರು: 'ಗುರುವು ದೇವರಿಗಿಂತ ದೊಡ್ಡವನು. ದೇವರು ಭೌತಿಕ ವಿಷಯಗಳನ್ನು ನೀಡಿದರೆ, ಗುರುಗಳು ಜ್ಞಾನವನ್ನು ನೀಡುತ್ತಾರೆ' ಎಂದು ವಾರಾಣಸಿಯ ಶಿವಾನಂದ ಆಶ್ರಮದ ಶತಾಯುಷಿ ಸ್ವಾಮಿ ಶಿವಾನಂದ ಹೇಳಿದರು.

ನಗರದ ಪಿಇಎಸ್ ವಿಶ್ವವಿದ್ಯಾಲಯದಲ್ಲಿ ನಿರ್ಮಿಸಿದ್ದ ಬ್ಯಾಡ್ಮಿಂಟನ್ ಅಂಕಣ ಉದ್ಘಾಟಿಸಿ ಅವರು ಮಾತನಾಡಿದರು.

'ನನ್ನ ಗುರುಗಳ ಆಶೀರ್ವಾದದಿಂದ 125ನೇ ವಯಸ್ಸಿನಲ್ಲೂ ಜೀವನ ನಡೆಸುತ್ತಿದ್ದೇನೆ. ಪ್ರತಿಯೊಬ್ಬರೂ ಗುರುಗಳನ್ನು ಗೌರವಿಸಬೇಕು' ಎಂದು ಹೇಳಿದರು. ವಿ.ವಿಯ ಕುಲಾಧಿಪತಿ ಡಾ.ಎಂ.ಆರ್.ದೊರೆಸ್ವಾಮಿ, 'ಕ್ರೀಡಾ ಸೌಲಭ್ಯ ಹೆಚ್ಚಿಸಲಾಗಿದೆ. ತಜ್ಞರಿಂದ ವಿದ್ಯಾರ್ಥಿಗಳಿಗೆ ತರಬೇತಿ ಕೊಡಿಸಲಾಗುತ್ತಿದೆ' ಎಂದು ಹೇಳಿದರು. ಜಿಮ್ನ್ಯಾಷಿಯಂ, ಬಾಸ್ಕೆಟ್‌ಬಾಲ್ ಅಂಕಣ, ಬ್ಯಾಡ್ಮಿಂಟನ್ ಅಂಕಣ, ಟೇಬಲ್ ಟೆನಿಸ್, ಸ್ಕ್ವಾಷ್ ಕೋರ್ಟ್, ಯೋಗ ಸ್ಟುಡಿಯೊ, ರನ್ನಿಂಗ್ ಟ್ರ್ಯಾಕ್ ಮತ್ತು ಕ್ರೀಡಾ ವಿಜ್ಞಾನ ಕೇಂದ್ರವನ್ನು ನಿರ್ಮಿಸಲಾಗಿದೆ ಎಂದು ಹೇಳಿದರು.

ಕುಲಪತಿಗಳಾದ ಡಾ.ಜೆ.ಸೂರ್ಯ ಪ್ರಸಾದ್, ಕುಲಸಚಿವರಾದ ಡಾ.ಕೆ.ಎಸ್.ಶ್ರೀಧರ್, ಕ್ರೀಡಾ ನಿರ್ದೇಶಕರಾದ ವಿನಯ್ ಹಾಜರಿದ್ದರು.

'ಶೂ, ಸಾಕ್ಸ್‌ನಲ್ಲಿ ಕಮಿಷನ್ ಹೊಡೆಯದಿದ್ದರೆ ಸಾಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಾಲಾ ಮಕ್ಕಳಿಗೆ ಶೂ, ಸಾಕ್ಸ್ ವಿತರಣೆಗೆ ₹132 ಕೋಟಿ ನೀಡುವುದಾಗಿ ಮುಖ್ಯಮಂತ್ರಿ ಘೋಷಿಸಿದ್ದಾರೆ. ಇದು ಮಕ್ಕಳ ವಿಚಾರವಾಗಿದ್ದು, ಸರ್ಕಾರ ಇದರಲ್ಲಿ ಶೇ 40 ಕಮಿಷನ್ ಹೊಡೆಯದಿದ್ದರೆ ಸಾಕು' ಎಂದು ಕೆಪಿಸಿಸಿ ಸಂವಹನ ವಿಭಾಗದ ಮುಖ್ಯಸ್ಥ, ಶಾಸಕ ಪ್ರಿಯಾಂಕ್ ಖರ್ಗೆ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, 'ಮೂರು ವರ್ಷಗಳಿಂದ ವಿದ್ಯಾರ್ಥಿಗಳಿಗೆ ಸಮವಸ್ತ್ರ ನೀಡಿಲ್ಲ. ಕಳೆದ ವರ್ಷ ಎರಡು ಸಮವಸ್ತ್ರ ನೀಡಬೇಕಿದ್ದ ಸರ್ಕಾರ, ಒಂದು ಸಮವಸ್ತ್ರ ನೀಡಿತ್ತು. ಮಕ್ಕಳು ಪ್ರತಿ ವರ್ಷ ಪ್ರತಿಭಟನೆ ಮಾಡಿ ಸಮವಸ್ತ್ರ ಪಡೆಯಬೇಕೇ' ಎಂದು ಪ್ರಶ್ನಿಸಿದರು.

'ಹೈಕೋರ್ಟ್‌ಗೆ ಸಲ್ಲಿಸಿರುವ ವರದಿ ಪ್ರಕಾರ ಅಂಗನವಾಡಿ ಮಕ್ಕಳಿಂದ ಪ್ರೌಢ ಶಾಲೆವರೆಗೆ 10 ಲಕ್ಷ ಮಕ್ಕಳು ಶಾಲೆಯಿಂದ ಹೊರಗಿದ್ದಾರೆ. ಅವರನ್ನು ಶಾಲೆಗೆ ವಾಪಸು ಕರೆತರುವ ಯೋಗ್ಯತೆ ಸರ್ಕಾರಕ್ಕಿಲ್ಲ. ಬಡತನ ಎಂದರೆ ಗೊತ್ತಿದೆಯೇ. ಉಚಿತ ಸೈಕಲ್ ಯೋಜನೆ ಎಲ್ಲಿ ಹೋಯಿತು. ರಾಯಚೂರು, ಕಲಬುರಗಿ ಭಾಗದ ಮಕ್ಕಳಲ್ಲಿ ಹೆಚ್ಚುತ್ತಿರುವ ಅಪೌಷ್ಟಿಕತೆ ತಡೆಗೆ ಯಾವ ಯೋಜನೆ ಇದೆ' ಎಂದರು.

'ಪಿಎಸ್‌ಐ ನೇಮಕಾತಿ ಅಕ್ರಮ ಕುರಿತು ಕಾಂಗ್ರೆಸ್ ಬಳಿ ಯಾವ ಸಾಕ್ಷ್ಯಾಧಾರಗಳಿವೆ' ಎಂದು ಬಿಜೆಪಿ ಕೇಳಿರುವ ಬಗ್ಗೆ ಪ್ರಶ್ನಿಸಿದಾಗ, 'ಈ ಪ್ರಕರಣದ ತನಿಖೆಯನ್ನು ನಡೆಸಲು ಈ ಸರ್ಕಾರ ಅಸಮರ್ಥವಾಗಿದೆ ಎಂದು ಒಪ್ಪಿಕೊಳ್ಳಲಿ. ಅವರಿಗೆ ತನಿಖೆ ಮಾಡಲು ಸಾಧ್ಯವಾಗದಿದ್ದರೆ ತನಿಖೆಯ ಅಧಿಕಾರವನ್ನು ನಮ್ಮ ಕೈಗೆ ನೀಡಲಿ. ನಾವು ಮಾಡಿ ತೋರಿಸುತ್ತೇವೆ. ಈ ಹಗರಣದಲ್ಲಿ ನಿಮ್ಮ ಪಾಲು ಇಲ್ಲದಿದ್ದರೆ ನ್ಯಾಯಾಂಗ ತನಿಖೆಗೆ ನೀಡಲು ಭಯವೇಕೆ?' ಎಂದು ರಾಜ್ಯ ಸರ್ಕಾರವನ್ನು ಪ್ರಶ್ನಿಸಿದರು.

'ಶೂ, ಸಾಕ್ಸ್, ಸಮವಸ್ತ್ರ ಕೊಡಿ'

ಬೆಂಗಳೂರು: 'ಶಾಲೆಗಳು ಈಗಾಗಲೇ ಆರಂಭವಾಗಿದ್ದು, ಶೂ, ಸಾಕ್ಸ್, ಸಮವಸ್ತ್ರ ತಕ್ಷಣವೇ ಮಕ್ಕಳಿಗೆ ಕೊಡಬೇಕು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಒತ್ತಾಯಿಸಿದರು.

'ಬಡ ಮಕ್ಕಳಿಗೆ ಅನುಕೂಲವಾಗಲಿ,ಸಮಾನ ಮನೋಭಾವ ಇರಲಿ ಎಂದು ನಾವು (ಕಾಂಗ್ರೆಸ್ ಸರ್ಕಾರ) ವಿದ್ಯಾರ್ಥಿಗಳಿಗೆ ಶೂ, ಸಾಕ್ಸ್ ಕೊಡುತ್ತಿದ್ದೆವು. ಆದರೆ, ಈಗಿನ ಸರ್ಕಾರ ಅದನ್ನು ನಿಲ್ಲಿಸಲು ಹೊರಟಿತ್ತು. ನಾವು ಒತ್ತಾಯಿಸಿದ ಮೇಲೆ ಕೊಡಲು ಒಪ್ಪಿದೆ' ಎಂದರು.

15ಕ್ಕೆ ಸಾರಿಗೆ ನೌಕರರ ಸಮ್ಮೇಳನ

ಬೆಂಗಳೂರು: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟವು ಇದೇ 15ಕ್ಕೆ ದಾವಣಗೆರೆಯ ತ್ರಿಶೂಲ್ ಕಲಾ ಭವನದಲ್ಲಿ ನೌಕರರ ಸಮ್ಮೇಳನ ಹಮ್ಮಿಕೊಂಡಿದೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ನೌಕರರ ಕೂಟದ ರಾಜ್ಯಾಧ್ಯಕ್ಷ ಚಂದ್ರಶೇಖರ್ ಆರ್., 'ಸಾರಿಗೆ ಸಂಸ್ಥೆಗಳ ಅಭಿವೃದ್ಧಿ ಹಾಗೂ ನೌಕರರ ಹಿತ ಚಿಂತನೆಗೆ ಬಗ್ಗೆ ಸಮ್ಮೇಳನದಲ್ಲಿ ಚರ್ಚೆ ನಡೆಸಲಾಗುತ್ತದೆ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನಾಲ್ಕೂ ನಿಗಮಗಳ ನೌಕರರಿಗೆ ಸರ್ಕಾರಿ ನೌಕರರಂತೆ ವೇತನ ನೀಡಬೇಕು' ಎಂದು ಆಗ್ರಹಿಸಿದರು.

'ಮುಷ್ಕರದ ಸಮಯದಲ್ಲಿ ವಜಾಗೊಂಡ ನೌಕರರನ್ನು ಪುನಃ ನೇಮಿಸಿಕೊಳ್ಳಬೇಕು. ಈ ಬಗ್ಗೆ ಸಮ್ಮೇಳನದಲ್ಲಿ ಆಗ್ರಹಿಸಲಾಗುವುದು' ಎಂದರು.

6 ಹೆದ್ದಾರಿ ವಿಸ್ತರಣೆ ಕಾಮಗಾರಿಗಳ ವೇಳೆ ಲೋಕೋಪಯೋಗಿ ಇಲಾಖೆ ಕ್ರಮ

1,500 ಮರಗಳ ಸ್ಥಳಾಂತರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕೋಪಯೋಗಿ ಇಲಾಖೆಯು (ಪಿಡಬ್ಲ್ಯುಡಿ) ಬೆಂಗಳೂರು ಸುತ್ತಮುತ್ತ ಆರು ಹೆದ್ದಾರಿಗಳ ವಿಸ್ತರಣೆ ಕಾಮಗಾರಿಗಳ ವೇಳೆ 1,500 ಮರಗಳನ್ನು ಸ್ಥಳಾಂತರಿಸಿದೆ. ಮುಂದೆಯೂ ರಸ್ತೆ ಕಾಮಗಾರಿಗಳ ಸಂದರ್ಭದಲ್ಲಿ ಮರಗಳನ್ನು ಕಡಿಯುವ ಬದಲಿಗೆ ಸ್ಥಳಾಂತರ ಮಾಡಲಾಗುವುದು ಎಂದು ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ ತಿಳಿಸಿದ್ದಾರೆ.

ರಾಷ್ಟ್ರೀಯ ಹೆದ್ದಾರಿ-4 ರಲ್ಲಿ ಬೂದಿಗೆರೆ ಕ್ರಾಸ್, ಗೊಲ್ಲಹಳ್ಳಿ ಮೂಲಕ ನೆಲಮಂಗಲದಿಂದ ಮಧುರೈಗೆ ತೆರಳುವ ಹೆದ್ದಾರಿ, ರಾಜಾನುಕುಂಟೆ ಮೂಲಕ ದೇವನಹಳ್ಳಿಯಿಂದ ಮಧುರೈಗೆ ತೆರಳುವ ಹೆದ್ದಾರಿ, ಹಾರೋಹಳ್ಳಿ ಮೂಲಕ ಬಿಡದಿಯಿಂದ ಜಿಗಣಿಗೆ ತೆರಳುವ ಹೆದ್ದಾರಿ, ಜಿಗಣಿ ಮೂಲಕ ಬನ್ನೇರುಘಟ್ಟ ಮಾರ್ಗವಾಗಿ ಆನೇಕಲ್ ಸಂಪರ್ಕಿಸುವ ಹೆದ್ದಾರಿ, ಅತ್ತಿಬೆಲೆ ಮೂಲಕ ಆನೇಕಲ್ ಮಾರ್ಗವಾಗಿ ಕಾಟಂನಲ್ಲೂರು ಗೇಟ್ (ಎನ್.ಹೆಚ್.-4) ತಲುಪುವ ಮಾರ್ಗಗಳಲ್ಲಿ ಒಟ್ಟು 155 ಕಿ.ಮೀ. ಉದ್ದದ ರಸ್ತೆ ವಿಸ್ತರಣೆ ಕಾಮಗಾರಿಗಳು ನಡೆಯುತ್ತಿವೆ. ಈ ಕಾಮಗಾರಿಗಳ ಸ್ಥಳಗಳಲ್ಲಿದ್ದ 2,100 ಮರಗಳ ಪೈಕಿ 1,500 ಮರಗಳನ್ನು ಸ್ಥಳಾಂತರ ಮಾಡಲಾಗಿದೆ ಎಂದು ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.

ರಸ್ತೆ ಕಾಮಗಾರಿಗಳ ವೇಳೆ ಮರಗಳನ್ನು ಕಡಿದು ಪರಿಸರ ನಾಶಪಡಿಸುವ ಕ್ರಮವನ್ನು ಕೈಬಿಡಲಾಗುವುದು. ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮವು ಆರು ಹೆದ್ದಾರಿಗಳ ಇಕ್ಕೆಲಗಳಲ್ಲಿದ್ದ ಹೊಂಗೆ, ಗುಲ್‌ಮೊಹರ್, ಸಿಸ್ಸೋ, ಅರಳಿ, ಬೇವು, ಬಸರಿ, ಅಕೇಷಿಯಾ, ನೀಲಗಿರಿ ಮರಗಳನ್ನು ಯಶಸ್ವಿಯಾಗಿ ಸ್ಥಳಾಂತರಿಸಲಾಗಿದೆ ಎಂದು ತಿಳಿಸಿದ್ದಾರೆ.

'ಸ್ಥಳಾಂತರಿಸಿದ ಮರಗಳನ್ನು ಮಂಡೂರು, ಹೊಸಕೋಟೆ ಕೆರೆ, ಬೆಟ್ಟಕೋಟೆ ಅರಣ್ಯ, ಮೈಲನಹಳ್ಳಿ, ಹೆಸರಘಟ್ಟ, ಸೊಣ್ಣೇನಹಳ್ಳಿ, ದಿಬ್ಬೂರು, ಕೃಷ್ಣದೊಡ್ಡಿ, ಹಾರಗದ್ದೆ ಕೆರೆ, ಗುಂಜೂರ್ ಕೆರೆ ಮತ್ತಿತರ ಕಡೆಗಳಲ್ಲಿ ನೆಟ್ಟು ಪೋಷಿಸಲಾಗುತ್ತಿದೆ. ಸ್ಥಳಾಂತರದ ವೇಳೆ ಮರಗಳಿಗೆ ಹಾನಿಯಾಗದಂತೆ, ಅಪಾಯಕಾರಿ ಸೋಂಕು ತಗುಲದಂತೆ ಎಚ್ಚರಿಕೆ ವಹಿಸಲಾಗಿದೆ. ಆಯಾ ಮರಗಳಿಗೆ ಹೊಂದಿಕೆಯಾಗುವ ಮಣ್ಣನ್ನು ಗುರುತಿಸಿ, ಅಲ್ಲಿಯೇ ನಾಟಿ ಮಾಡಲಾಗುತ್ತಿದೆ' ಎಂದು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಆರ್. ಶಿವಪ್ರಸಾದ್ ಹೇಳಿದ್ದಾರೆ.

ರಸ್ತೆ ಕಾಮಗಾರಿಯೊಂದರ ಸ್ಥಳದಲ್ಲಿದ್ದ ಮರವೊಂದನ್ನು ಸ್ಥಳಾಂತರ ಮಾಡಲು ಸಿದ್ಧತೆ ನಡೆಸಿರುವುದು

ಮರು ಕಡಿಯುವ ಬದಲು ಅವನ್ನು ಬೇರೆಡೆಗೆ ಸ್ಥಳಾಂತರಿಸಿ ಮರುನಾಟಿ ಮಾಡಲಾಗಿದೆ. ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ತಜ್ಞರ ಸಲಹೆಯಂತೆ ಈ ಕೆಲಸ ಮಾಡಲಾಗಿದೆ.

ಸಿ.ಸಿ. ಪಾಟೀಲ

ಲೋಕೋಪಯೋಗಿ ಸಚಿವ

150 ಕೌಶಲಾಭಿವೃದ್ಧಿ ಕೇಂದ್ರ ಸ್ಥಾಪನೆ

ಬೆಂಗಳೂರು: ರಾಜದಲ್ಲಿ 150 ಸ್ಥಳಗಳಲ್ಲಿ ಕೌಶಲ ಅಭಿವೃದ್ಧಿ ಕೇಂದ್ರ ಸ್ಥಾಪಿಸಲಾಗಿದ್ದು, ಅಲ್ಲಿ ಆಧುನಿಕ ಯಂತ್ರೋಪಕರಣ ಅಳವಡಿಸಲಾಗಿದೆ ಎಂದು ರಾಜ್ಯ ಕೌಶಲ ಅಭಿವೃದ್ಧಿ ಇಲಾಖೆ ಪ್ರಧಾನ ಕಾರ್ಯದರ್ಶಿ ಡಾ.ಎಸ್. ಸೆಲ್ವಕುಮಾರ್ ಹೇಳಿದರು.

ಬಾಹ್ಯಾಕಾಶ ತಂತ್ರಜ್ಞಾನ ಕೇಂದ್ರದ ಸಹಯೋಗದಲ್ಲಿ ಕರ್ನಾಟಕ ದಲಿತ ಉದ್ದಿಮೆದಾರರ ಸಂಘವು ಆಯೋಜಿಸಿದ್ದ ವಿಚಾರಸಂಕಿರಣದಲ್ಲಿ ಮಾತನಾಡಿ, 'ಐ.ಟಿ ಕಂಪನಿಗಳಲ್ಲಿ ಕೆಲಸ ಮಾಡಲು ಬಯಸುವ ಹಾಗೂ ಸ್ವಂತ ಉದ್ಯಮ ಸ್ಥಾಪಿಸಲು ಇಚ್ಛಿಸುವ ಯುವಜನರಿಗೆ ತಕ್ಕ ತರಬೇತಿ ನೀಡಲಾಗುವುದು. 23 ಕೌಶಲ ಕೋರ್ಸ್‌ಗಳನ್ನು ಶುರು ಮಾಡಲಾಗಿದ' ಎಂದರು.

ಉದ್ಯಮ ಕ್ಷೇತ್ರದ ಅಗತ್ಯಕ್ಕೆ ತಕ್ಕಂತೆ ಕೌಶಲ ಅಭಿವೃದ್ಧಿಗೆ ₹5 ಸಾವಿರ ಕೋಟಿ ವೆಚ್ಚದಲ್ಲಿ ರಾಜ್ಯದ 150 ಐಟಿಐ ಕಾಲೇಜುಗಳಲ್ಲಿ ಕೌಶಲ ಅಭಿವೃದ್ಧಿ ಕೇಂದ್ರ ಆರಂಭಿಸಲಾಗಿದೆ ಎಂದರು. ದಲಿತ ಉದ್ದಿಮೆದಾರರ ಸಂಘದ ಕಾರ್ಯಾಧ್ಯಕ್ಷ ಸಿ.ಜಿ.ಶ್ರೀನಿವಾಸನ್ ಮಾತನಾಡಿ, 'ಯುವ ಉದ್ದಿಮೆದಾರರ ಮುಂದೆ ಅವಕಾಶಗಳ ರಾಶಿಯಿದೆ. ಆದರೆ, ಅವುಗಳ ಸದ್ಬಳಕೆ ಮಾಡಿಕೊಳ್ಳಲು ಬೇಕಾದ ತಿಳಿವಳಿಕೆ ಕೊರತೆ ಇದೆ' ಎಂದು ವಿಷಾದಿಸಿದರು.

ಸಣ್ಣ ಕೈಗಾರಿಕೆ ಬೆಳೆಸಲು ಕೇಂದ್ರ ಸರ್ಕಾರವು ಪೂರಕ ನೀತಿ ರೂಪಿಸಿದೆ. ಶೇ 20ರಷ್ಟು ಉತ್ಪನ್ನಗಳನ್ನು ಸಣ್ಣ ಕೈಗಾರಿಕೆಗಳಿಂದ ಖರೀದಿಸಬೇಕು ಎನ್ನುವುದು ಕೇಂದ್ರದ ನೀತಿಯಾಗಿದೆ ಎಂದು ನಿವೃತ್ತ ಐಎಎಸ್ ಅಧಿಕಾರಿ ಡಾ.ಇ.ವೆಂಕಟಯ್ಯ ಹೇಳಿದರು.

ರಾಜ್ಯ ಕೌಶಲ ಅಭಿವೃದ್ಧಿ ಇಲಾಖೆ ಪ್ರಧಾನ ಕಾರ್ಯದರ್ಶಿ ಡಾ.ಎಸ್.ಸೆಲ್ವಕುಮಾರ್ (ಎಡಬದಿ) ಅವರಿಗೆ ದಲಿತ ಉದ್ದಿಮೆದಾರರ ಸಂಘದ ಕಾರ್ಯಾಧ್ಯಕ್ಷ ಸಿ.ಜಿ. ಶ್ರೀನಿವಾಸನ್ ಅವರು ಪುಸ್ತಕಗಳನ್ನು ನೀಡಿದರು

ನಾಟ್ಯ

ರಂಗ ಪ್ರವೇಶ

ಎನ್.ಆರ್. ಕಾಲೋನಿಯ ಪತ್ತಿ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಭರತನಾಟ್ಯ ಕಲಾವಿದೆ ಸಂಜನಾ ಬಳ್ಳಲ ಅವರು ರಂಗ ಪ್ರವೇಶ ಮಾಡಿದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಸಿಎಓ/ಸಿಎನ್/ಬಿಎನ್‌ಸಿ/41/2022
ದಿನಾಂಕ : 01-07-2022

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
(I) ಗದಗ - ವಾಡಿ ಹೊಸ ಬಿಜಿ ಮಾರ್ಗದ ಯಲಬುರ್ಗ, ಹನುಮಾಪುರ, ಲಿಂಗನಬಂಡಿ ಮತ್ತು ಕುಷ್ಟಗಿ ರೈಲ್ವೆ ನಿಲ್ದಾಣಗಳ ಹೊಸ ನಿಲ್ದಾಣ ಕಟ್ಟಡಗಳ ವಿದ್ಯುದೀಕರಣ. (II) ಗದಗ - ವಾಡಿ ಹೊಸ ಬಿಜಿ ಮಾರ್ಗದ ಯಲಬುರ್ಗದಲ್ಲಿನ ಹೊಸ ರೈಲ್ವೆ ಸಿಬ್ಬಂದಿ ವಸತಿ ಗೃಹಗಳ ವಿಧ 2 - 24 ಯೂನಿಟ್‌ಗಳು, ವಿಧ 3 - 04 ಯೂನಿಟ್‌ಗಳ ವಿದ್ಯುದೀಕರಣ. (ಟೆಂಡರ್ ಉಲ್ಲೇಖ ಸಂ. ಇಸಿಎನ್-06-2022)	ರೂ. 4,76,10,191/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 28-07-2022 ರಂದು 11:00 ಗಂಟೆವರೆಗೆ

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಉಪ ಮುಖ್ಯ ವಿದ್ಯುತ್ ಇಂಜಿನಿಯರ್ / ನಿರ್ಮಾಣ ಬೆಂಗಳೂರು ದಂಡು

ಪಿಯುಬಿ/212/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022-23

S.W.Railways SWRRLY SWRRLY

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಸಿಎಓ/ಸಿಎನ್/ಬಿಎನ್‌ಸಿ/43/2022
ದಿನಾಂಕ : 01-07-2022

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
(1) ಧಾರವಾಡ ಯಾರ್ಡ್‌ನಲ್ಲಿ ಎಲ್‌ಸಿ ಸಂ.297 (ಶೆಡ್ಯೂಲ್ ಎ). (2) ಮುಳವಾಡ ಮತ್ತು ವಿಜಯಪುರ ನಡುವೆ ಎಲ್‌ಸಿ ಸಂ.81 (ಶೆಡ್ಯೂಲ್ ಬಿ). (3) ಹುಬ್ಬಳ್ಳಿ ಮತ್ತು ಹೊಸಪೇಟೆ ನಡುವೆ ಎಲ್‌ಸಿ ಸಂ. 32 (ಶೆಡ್ಯೂಲ್ ಸಿ). (4) ಕೊಪ್ಪಳ ಮತ್ತು ಗಿಣಿಗೇರ ನಡುವೆ ಎಲ್‌ಸಿ ಸಂ. 66 (ಶೆಡ್ಯೂಲ್ ಡಿ). (5) ಗಿಣಿಗೇರ ಮತ್ತು ಮುನಿರಾಬಾದ್ ನಡುವೆ ಎಲ್‌ಸಿ ಸಂ. 72 (ಶೆಡ್ಯೂಲ್ ಇ) ಇವುಗಳ ಬದಲಿಗೆ ರಸ್ತೆ ಮೇಲ್ಸೇತುವೆಯ ಲೈಟಿಂಗ್ ವ್ಯವಸ್ಥೆ. (ಟೆಂಡರ್ ಉಲ್ಲೇಖ ಸಂ. ಇಸಿಎನ್-09-2022)	ರೂ. 1,18,54,668/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 28-07-2022 ರಂದು 11:00 ಗಂಟೆವರೆಗೆ

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಉಪ ಮುಖ್ಯ ವಿದ್ಯುತ್ ಇಂಜಿನಿಯರ್ / ನಿರ್ಮಾಣ ಬೆಂಗಳೂರು ದಂಡು

ಪಿಯುಬಿ/214/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022-23

S.W.Railways SWRRLY SWRRLY

ನಗರದಲ್ಲಿ ಇಂದು

ತಪ್ತ ಮುದ್ರಾ ಧಾರಣ: ಸುಬುಧೇಂದ್ರ ತೀರ್ಥ ಸ್ವಾಮೀಜಿ, ಆಯೋಜನೆ: ರಾಘವೇಂದ್ರ ಸ್ವಾಮೀಜಿ ಮಠ, ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮೀಜಿ ಮಠ, ಜಯನಗರ, ಬೆಳಿಗ್ಗೆ 7.30ರಿಂದ

ವಿಪ್ರ ಚಿಂತನಾ ಗೋಷ್ಠಿ: ಎ.ವಿ. ಪ್ರಸನ್ನ, ಕೆ.ಪಿ. ಪುತ್ತೂರಾಯ, ವಿ.ಬಿ. ಆರತಿ: ಧಾರ್ಮಿಕ ಗೋಷ್ಠಿ: ಹ.ರಾ. ನಾಗರಾಜಾಚಾರ್ಯ, ಎಸ್. ಸೋಮಸುಂದರ್ ದೀಕ್ಷಿತ್, ಅರವಿಂದ ಎಂ. ಅನಂತ ನಾರಾಯಣ, ಆಯೋಜನೆ: ವಿಜಯನಗರ ವಿಪ್ರವೃಂದ, ಸ್ಥಳ: ಆದಿಚುಂಚನಗಿರಿ ಸಮುದಾಯ ಭವನ, ವಿಜಯನಗರ, ಬೆಳಿಗ್ಗೆ 9.30

ಚಿಕೇನಕೊಪ್ಪದ ಚನ್ನವೀರ ಶರಣರ 27ನೇ ಪುಣ್ಯ ಸ್ಮರಣೆ: ಸಾನ್ನಿಧ್ಯ: ಮಲ್ಲಿಕಾರ್ಜುನ ಸ್ವಾಮೀಜಿ, ಅಧ್ಯಕ್ಷತೆ: ಶಿವಶಾಂತವೀರ ಶರಣರು, ಉಪನ್ಯಾಸ: ಕಜಂಪಾಡಿ ಸುಬ್ರಹ್ಮಣ್ಯ ಭಟ್, ಭಕ್ತಿ ಸಂಗೀತ: ರವೀಂದ್ರ ಸೊರಗಾಂವಿ, ನಿರೂಪಣೆ: ಸವಿತಾ ಶಿವಕುಮಾರ್, ಆಯೋಜನೆ ಹಾಗೂ ಸ್ಥಳ: ಜಗದ್ಗುರು ರೇಣುಕಾಚಾರ್ಯ ವಿದ್ಯಾಸಂಸ್ಥೆ, ಆನಂದರಾವ್ ವೃತ್ತ, ಬೆಳಿಗ್ಗೆ 10

ಗಾಂಧಿನಗರ ವಿಧಾನಸಭಾ ಕ್ಷೇತ್ರ ಕಾರ್ಯಚಟುವಟಿಕೆಗಳ ಉದ್ಘಾಟನೆ: ದಿನೇಶ್ ಗುಂಡೂರಾವ್, ಅಧ್ಯಕ್ಷತೆ: ಎಂ. ಪ್ರಕಾಶಮೂರ್ತಿ, ಆಯೋಜನೆ: ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ನಗರ ಜಿಲ್ಲೆ ಘಟಕ, ಸ್ಥಳ: ಶೇಷಾದ್ರಿಪುರ ಕಾಲೇಜಿನ ದತ್ತಿ ಸಭಾಂಗಣ, ಶೇಷಾದ್ರಿಪುರ, ಬೆಳಿಗ್ಗೆ 10.30

ಸುಗ್ಗಿ 2022: ವಿದ್ಯಾರ್ಥಿನಿಲಯಗಳ ವಾರ್ಷಿಕೋತ್ಸವ, ಸಾನ್ನಿಧ್ಯ: ಬಸವಲಿಂಗ ಪಟ್ಟದೇವರು, ಉದ್ಘಾಟನೆ: ಗೊ.ರು. ಚನ್ನಬಸಪ್ಪ, ಮುಖ್ಯ ಅತಿಥಿ: ಅಂಬ ಳಿಕೆ ಹಿರಿಯಣ್ಣ, ಅಧ್ಯಕ್ಷತೆ: ಎಲ್. ರೇವಣ್ಣಸಿದ್ಧಯ್ಯ, ಆಯೋಜನೆ ಹಾಗೂ ಸ್ಥಳ: ರಾವ್ ಬಹದ್ದೂರ್ ಧರ್ಮಪ್ರವರ್ತ ಗುಬ್ಬಿ ತೋಟದಪ್ಪ ಧರ್ಮಸಂಸ್ಥೆ, ಬೆಳಿಗ್ಗೆ 10.30



ಕೋ.ಚೆನ್ನಬಸಪ್ಪ ಅವರ ಜನ್ಮಶತಾಬ್ದಿ ಸಮಾರಂಭ: ಉದ್ಘಾಟನೆ: ನ್ಯಾ. ಶಿವರಾಜ ವಿ. ಪಾಟೀಲ, ಅಧ್ಯಕ್ಷತೆ: ಮಹೇಶ ಜೋಶಿ, ಮುಖ್ಯ ಅತಿಥಿಗಳು: ಬಿ.ಎಲ್. ಶಂಕರ್, ಶಿವಯೋಗಿ ಕಳಸದ, ವೂಡೇ ಪಿ. ಕೃಷ್ಣ, ಉಪಸ್ಥಿತಿ: ಪ್ರಭುದೇವ ಕೋಣನ, ಆಯೋಜನೆ: ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ: ಮಹದೇವ ದೇಸಾಯಿ ಸಭಾಂಗಣ, ಗಾಂಧಿ ಭವನ, ಬೆಳಿಗ್ಗೆ 10.30

ಡಾ.ಸಿ. ಜಯಲಕ್ಷ್ಮಿ 60 ಸಂಭ್ರಮಾಚರಣೆ ಹಾಗೂ ಸಾಧಕರಿಗೆ ಪ್ರಶಸ್ತಿ ಪ್ರದಾನ: ಅಭಿನಂದಿಸುವವರು: ಬಿ.ಟಿ. ಲಲಿತಾ ನಾಯಕ್, ಮುಖ್ಯ ಅತಿಥಿಗಳು: ರಾಮ ಕೃಷ್ಣ, ಅಧ್ಯಕ್ಷತೆ: ಡಿಂಗ್ರಿ ನಾಗರಾಜ್, ಆಯೋಜನೆ: ತೆಲುಗು ಜಂಗಮ ವಿದ್ಯಾಭಿವೃದ್ಧಿ ಟ್ರಸ್ಟ್, ಸ್ಥಳ: ಕಸ್ತೂರಬಾ ಸಭಾಂಗಣ, ಗಾಂಧಿ ಭವನ, ಶಿವಾನಂದ ವೃತ್ತ, ಬೆಳಿಗ್ಗೆ 11

ಪ್ರೊ.ಜಿ.ಎಸ್. ದೀಕ್ಷಿತ್ ಹಾಗೂ ಪಂಡಿತ್ ಎ. ಸುಬ್ಬಯ್ಯ ಶಾಸ್ತ್ರಿ ಸ್ಮಾರಕ ದತ್ತಿ ಉಪನ್ಯಾಸ: ವಿಷಯ: 'ಡಾ.ಎಸ್. ಆರ್. ರಾವ್ ಅವರ ಜೀವನ ಮತ್ತು ಸಾಧನೆಗಳು', ಉಪನ್ಯಾಸಕರು: ಸಿ.ಬಿ. ಪಾಟೀಲ, ಅಧ್ಯಕ್ಷತೆ: ಚೂಡಾಮಣಿ ನಂದಗೋಪಾಲ್, ವಿಷಯ: 'ಕರಾವಳಿಯಲ್ಲಿ ಜೈನ ಧರ್ಮ ಹೊಸ ಶೋಧ', ಉಪನ್ಯಾಸಕರು: ಪಿ.ಎನ್. ನರಸಿಂಹಮೂರ್ತಿ, ಅಧ್ಯಕ್ಷತೆ: ದೇವರಕೊಂಡಾರೆಡ್ಡಿ, ಆಯೋಜನೆ ಹಾಗೂ ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಮಧ್ಯಾಹ್ನ 12

'ಕೃಷ್ಣ ಮಾಸಡಿ ಸಮಗ್ರ ಕತೆಗಳು' ಪುಸ್ತಕ ಬಿಡುಗಡೆ: ಉದ್ಘಾಟನೆ: ಸಿದ್ದರಾಮಯ್ಯ, ಕೃತಿ ಬಿಡುಗಡೆ: ಕೋಣಂದೂರು ಲಿಂಗಪ್ಪ, ಅಧ್ಯಕ್ಷತೆ: ಪ್ರೊ. ಎಸ್.ಜಿ. ಸಿದ್ಧರಾಮಯ್ಯ, ಮುಖ್ಯ ಅತಿಥಿಗಳು: ಎಲ್. ಹನುಮಂತಯ್ಯ, ಮೋಹನ್ ಕೊಂಡಜ್ಜಿ, ನಟರಾಜ್ ಹುಳಿಯಾರ್, ಪ್ರಸ್ತಾವನೆ: ಜಾಣಗೆರೆ ವೆಂಕಟರಾಮಯ್ಯ, ಆಯೋಜನೆ: ಜಾಣಗೆರೆ ಪತ್ರಿಕೆ ಪ್ರಕಾಶನ, ಸಾಹಿತ್ಯ ಸಂಗಮ ಟ್ರಸ್ಟ್, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

'ನನ್ನ ಮೆಚ್ಚಿನ ಪುಸ್ತಕ' ಕಾರ್ಯಕ್ರಮ: ಉಪಸ್ಥಿತಿ: ಜೋಗಿ, ಶ್ರೀನಿವಾಸ ಪ್ರಭು, ಅಧ್ಯಕ್ಷತೆ: ವಿಜಯಲಕ್ಷ್ಮಿ ಸತ್ಯಮೂರ್ತಿ, ಆಯೋಜನೆ: ಖುತುಗಾನ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆ: ಸ್ಥಳ: ಬಹುರೂಪಿ ಬುಕ್ ಹೌಸ್, ಸಂಜಯನಗರ ಮುಖ್ಯ ರಸ್ತೆ, ಸಂಜೆ 4

ಎನ್. ಗಾಯತ್ರಿ ಅನುವಾದದ 'ನಾ ಅಲೆಯ ಉಬ್ಬರವಾದೆ' ಪುಸ್ತಕ ಬಿಡುಗಡೆ: ರಾಜೇಂದ್ರ ಚೆನ್ನಿ, ಪುಸ್ತಕ ಕುರಿತು: ದು. ಸರಸ್ವತಿ, ಅಧ್ಯಕ್ಷತೆ: ಸಿದ್ದನಗೌಡ ಪಾಟೀಲ, ಉಪಸ್ಥಿತಿ: ಗೀತಾ ಹರಿಹರನ್, ಎನ್. ಗಾಯತ್ರಿ, ಆಯೋಜನೆ: ನವಕರ್ನಾಟಕ ಪ್ರಕಾಶನ, ಸ್ಥಳ: ಬಿ.ಎಂ.ಶ್ರೀ. ಸಭಾಂಗಣ, ನರಸಿಂಹರಾಜ ಕಾಲೋನಿ, ಬೆಳಿಗ್ಗೆ 10.45

ಸಾಂಸ್ಕೃತಿಕ ಕಾರ್ಯಕ್ರಮಗಳು ಸಮ್ಮಿಲನೋತ್ಸವ 2022: ಮುಖ್ಯ ಅತಿಥಿ: ಬಿ.ಸಿ. ನಾಗೇಶ್, ಗೌರವ ಅತಿಥಿಗಳು: ಎ. ನಾರಾಯಣಸ್ವಾಮಿ, ವಿ. ಸುನೀಲ್ ಕುಮಾರ್, ಪಿ.ಜಿ.ಆರ್. ಸಿಂಧ್ಯ, ಕಿಶೋರ್ ಆಳ್ವ, ಶಶೀಧರ್ ಶೆಟ್ಟಿ, ಮಹಾಬಲೇಶ್ವರ್, ತೇಜಸ್ವಿನಿ ಅನಂತಕುಮಾರ್, ಆಯೋಜನೆ: ಕುವೈತ್ ಕನ್ನಡ ಕೂಟ ಕ್ಷೇಮಾಭ್ಯುದಯ ಸಂಘ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 9.30

ರಾಗಿ ಕಣ ಸಂತೆ: ಅಗ್ನಿ ತಂಡದಿಂದ ಪರ್ರೆ ಕುಣಿತ, ಸ್ಥಳ: ರಾಗಿ ಕಣ, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 10.30

ರಂಗ ಸಂಭ್ರಮ: ರಂಗ ಗೀತೆಗಳು, ದಿ.ಬಿ.ಕೆ. ಜಗನ್ನಾಥ್ ಅವರ ಸಂಸ್ಮರಣೆ, 'ಸ್ನಿಗ್ಧ' ನಾಟಕ ಪ್ರದರ್ಶನ, ಆಯೋಜನೆ: ಅಂತರಂಗ ಬಹಿರಂಗ, ಸ್ಥಳ: ಸೇವಾಸದನ, ಮಲ್ಲೇಶ್ವರ, ಸಂಜೆ 4

ವೀಣಾ ವಾದನ: ವೀಣೆ: ಶ್ರೀಲಕ್ಷ್ಮೀ ದಾಸ್, ಮೃದಂಗ: ಆರ್. ರಾಮನಾಥ್, ಘಟ: ಎನ್. ಗುರುಮೂರ್ತಿ, ಆಯೋಜನೆ: ತ್ಯಾಗರಾಜ ಗಾನಸಭಾ ಟ್ರಸ್ಟ್, ಸ್ಥಳ: ಬಾಲಮೋಹನ ವಿದ್ಯಾಮಂದಿರ, ರಾಜಾಜಿನಗರ, ಸಂಜೆ 5

ಬಸವಣ್ಣನವರ ಪುತ್ಥಳಿ ಅನಾವರಣ: ಸಾನ್ನಿಧ್ಯ: ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ಧಲಿಂಗ ಸ್ವಾಮೀಜಿ, ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಉಪಸ್ಥಿತಿ: ಡಿ. ಕೆ. ಶಿವಕುಮಾರ್, ಎಂ.ಬಿ. ಪಾಟೀಲ, ತೇಜಸ್ವಿ ಸೂರ್ಯ, ಅಧ್ಯಕ್ಷತೆ: ಸೌಮ್ಯ ರೆಡ್ಡಿ, ಆಯೋಜನೆ: ಬಿಬಿಎಂಪಿ, ಸ್ಥಳ: ರಾಷ್ಟ್ರೀಯ ವಿದ್ಯಾಲಯ ರಸ್ತೆ ಜಂಕ್ಷನ್ ನಲ್ಲಿರುವ ಉದ್ಯಾನವನ, ಶಾಖಾಂಬರಿನಗರ, ಮಾರೇನಹಳ್ಳಿ ರಸ್ತೆ, ಸಂಜೆ 6

ಹರಿವು ಬುಕ್ಸ್ ಪ್ರಕಾಶನದ ಚೊಚ್ಚಲ ಕೃತಿಗಳ ಬಿಡುಗಡೆ: ಮುಖ್ಯ ಅತಿಥಿಗಳು: ಕವಿರಾಜ್, ಲಕ್ಷ್ಮೀಕಾಂತ್ ವಿ., ಬಿ.ಎಂ. ವೆಂಕಟೇಶ್, ಆಯೋಜನೆ: ಹರಿವು ಬುಕ್ಸ್, ಸ್ಥಳ: ಬಿ.ಪಿ. ವಾಡಿಯಾ ಸಭಾಂಗಣ, ಬಸವನಗುಡಿ, ಬೆಳಿಗ್ಗೆ 10.30

'ಸಿಂಗ್, ಡ್ಯಾನ್ಸ್ ಆ್ಯಂಡ್ ಪ್ರೇ' ಪುಸ್ತಕ ಬಿಡುಗಡೆ: ಮುಖ್ಯ ಅತಿಥಿಗಳು: ಸುಧಾ ಮೂರ್ತಿ, ಎಸ್. ಸೋಮನಾಥ್, ರಿಕಿ ಕೇಜ್, ಹಿಂದೋಲ್ ಸೇನ್‌ಗುಪ್ತ, ಅಧ್ಯಕ್ಷತೆ: ಮಧು ಪಂಡಿತ್ ದಾಸ್, ಚಂಚಲಪತಿ ದಾಸ್, ಆಯೋಜನೆ ಹಾಗೂ ಸ್ಥಳ: ಇಸ್ಕಾನ್, ರಾಜಾಜಿನಗರ, ಮಧ್ಯಾಹ್ನ 12

ಅವ್ಯವಹಾರ: ಪ್ರಕರಣ ಸಿಬಿಐ ತನಿಖೆಗೆ ವಹಿಸಲು ಷೇರುದಾರರ ಆಗ್ರಹ

ದೆಹಲಿಯಲ್ಲಿ ಪ್ರತಿಭಟನೆಗೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ಸೇರಿದಂತೆ ಕೆಲವು ಸಹಕಾರ ಬ್ಯಾಂಕ್‌ಗಳಲ್ಲಿ ಕೋಟ್ಯಂತರ ರೂಪಾಯಿ ಅವ್ಯವಹಾರ ನಡೆದಿದ್ದು, ಈ ಬ್ಯಾಂಕ್‌ಗಳ ಷೇರುದಾರರಿಗೆ ನ್ಯಾಯ ಕಲ್ಪಿಸಲು ಆಗ್ರಹಿಸಿ ದೆಹಲಿಯಲ್ಲಿ ಪ್ರತಿಭಟನೆ ನಡೆಸಲು ನಿರ್ಧರಿಸಲಾಗಿದೆ' ಎಂದು ಗುರು ರಾಘವೇಂದ್ರ ಕೋ–ಆಪರೇಟಿವ್ ಬ್ಯಾಂಕ್ ಷೇರುದಾರರು ಮತ್ತು ಠೇವಣಿದಾರರ ಹಿತರಕ್ಷಣಾ ವೇದಿಕೆ ಮಹಾಪೋಷಕ ಶಂಕರ್ ಗುಹಾ ದ್ವಾರಕಾನಾಥ್ ಬೆಳ್ಳೂರು ಹೇಳಿದರು.

ಬಸವನಗುಡಿಯ ಅಭಿನವ ವಿದ್ಯಾ ವಿಹಾರ ಸಭಾಂಗಣದಲ್ಲಿ ಶನಿವಾರ ನಡೆದ ಚಿಂತನ ಮಂಥನ ಸಭೆಯಲ್ಲಿ ಬ್ಯಾಂಕ್ ಷೇರುದಾರರು ಮತ್ತು ಠೇವಣಿದಾರರು ಪಾಲ್ಗೊಂಡಿದ್ದರು

ನಗರದ ಅನ್ನಪೂರ್ಣ ಭವನದಲ್ಲಿ ಶನಿವಾರ ನಡೆದ ಸಮಾಲೋಚನಾ ಸಭೆ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 'ಸರ್ಕಾರದಿಂದ ನ್ಯಾಯ ದೊರೆಯಲಿದೆ ಎಂದು ತಾಳ್ಮೆ ವಹಿಸಿದ್ದೆವು. ಆದರೆ, ಹಗರಣವು ಬೆಳಕಿಗೆ ಬಂದು ಎರಡೂವರೆ ವರ್ಷವಾದರೂ ನ್ಯಾಯ ಸಿಕ್ಕಿಲ್ಲ. ಸಂಸತ್ ಅಧಿವೇಶನದ ವೇಳೆ ದೆಹಲಿಯಲ್ಲಿ ಪ್ರತಿಭಟನೆ ನಡೆಸಿ ಸಿಬಿಐ ತನಿಖೆಗೆ ಆಗ್ರಹಿಸಲಾಗುವುದು' ಎಂದರು.

'ಷೇರುದಾರರಿಗೆ ವಂಚನೆಯಾಗಿದ್ದರೂ ಸರ್ಕಾರವು ಯಾವುದೇ ದಾರಿ ತೋರಿಸುತ್ತಿಲ್ಲ. ಗುರು ರಾಘವೇಂದ್ರ, ಸಾರ್ವಭೌಮ, ವಸಿಷ್ಠ ಹಾಗೂ ಗಣಪತಿ ಬ್ಯಾಂಕ್‌ಗಳಲ್ಲೂ ವಂಚನೆ ನಡೆದಿದೆ' ಎಂದು ಆರೋಪಿಸಿದರು.

'ಹಗರಣ ಬೆಳಕಿಗೆ ಬಂದಮೇಲೆ ತನಿಖೆಗೆ ಆಗ್ರಹಿಸುತ್ತಲೇ ಬಂದಿದ್ದೇವೆ. ಆದರೂ, ಪರಿಹಾರ ಲಭಿಸಿಲ್ಲ. ಸಿಬ್ಬಂದಿ ವಿರುದ್ಧವೂ ಕ್ರಮ ಆಗಿಲ್ಲ. ಅವರೆಲ್ಲರೂ ಐಷಾರಾಮಿ ಕಾರಿನಲ್ಲಿ ಸಂಚರಿಸುತ್ತಿದ್ದಾರೆ. ಷೇರುದಾರರು ಮಾತ್ರ ಸಾಲ ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ' ಎಂದು ಹೇಳಿದರು.

'ವಂಚನೆಗೆ ಒಳಗಾದವರ ಮಹಾಒಕ್ಕೂಟ ರಚಿಸಲು ತೀರ್ಮಾನ ತೆಗೆದುಕೊಳ್ಳಲಾಗಿದೆ. ಹಗರಣಗಳ ಬಗ್ಗೆ ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಿ ವಂಚನೆಗೆ ಒಳಗಾದವರಿಗೆ ಪರಿಹಾರ ನೀಡಬೇಕೆಂದು ದೆಹಲಿಯಲ್ಲಿ ನಡೆಯುವ ಪ್ರತಿಭಟನೆಯಲ್ಲಿ ಆಗ್ರಹಿಸಲಾಗುವುದು' ಎಂದರು.

ಉಪವಾಸ ಸತ್ಯಾಗ್ರಹ: 'ದೆಹಲಿಯಲ್ಲಿ ರಾಜ್ಯದ ಸಂಸದರೊಂದಿಗೂ ಚರ್ಚಿಸಿ ಪರಿಹಾರ ಕಲ್ಪಿಸಲು ಮನವಿ ಮಾಡಲಾಗುವುದು. ಆಗಲೂ ನ್ಯಾಯ ಸಿಗದಿದ್ದರೆ ದೆಹಲಿಯಲ್ಲಿ ಉಪವಾಸ ಸತ್ಯಾಗ್ರಹ ನಡೆಸಲಾಗುವುದು' ಎಂದು ಎಚ್ಚರಿಸಿದರು.

ರಾಜ್ಯಸಭಾ ಸದಸ್ಯ ಜಿ.ಸಿ. ಚಂದ್ರಶೇಖರ್, 'ಬ್ಯಾಂಕ್ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಮೂರು ಬಾರಿ ಸಂಸತ್‌ನಲ್ಲಿ ಧ್ವನಿ ಎತ್ತಿದ್ದೇನೆ. ಆದರೂ, ಸರ್ಕಾರ ಈ ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಂಡಿಲ್ಲ' ಎಂದರು.

ರಿಸರ್ವ್‌ಬ್ಯಾಂಕ್‌ನ ನಿವೃತ್ತ ಒಂಬುಡ್ಸ್‌ಮನ್ ಪಳನಿ ಸ್ವಾಮಿ ಉಪಸ್ಥಿತರಿದ್ದರು.

ಗುರು ಸಾರ್ವಭೌಮ ಸೌಹಾರ್ದ ಸಹಕಾರ ಬ್ಯಾಂಕ್, ಗುರು ರಾಘವೇಂದ್ರ ಸಹಕಾರ ಬ್ಯಾಂಕ್, ಬೆಳ್ಳಿ–ಬೆಳಕು ಸೌಹಾರ್ದ ಸಹಕಾರ ಬ್ಯಾಂಕ್, ಕಣ್ವ ಸೌಹಾರ್ದ ಸಹಕಾರ ಬ್ಯಾಂಕ್, ವಸಿಷ್ಠ ಸೌಹಾರ್ದ ಸಹಕಾರ ಬ್ಯಾಂಕ್, ಸಿರಿ-ವೈಭವ ಸಹಕಾರ ಬ್ಯಾಂಕ್, ಶೈಲಗಿರಿ ಸೌಹಾರ್ದ ಬ್ಯಾಂಕ್‌ನಲ್ಲಿ ವಂಚನೆಗೊಳಾಗದ ಠೇವಣಿದಾರರು, ಷೇರುದಾರರು ಸಮಾಲೋಚನಾ ಸಭೆಯಲ್ಲಿ ಪಾಲ್ಗೊಂಡಿದ್ದರು.

ಪಕ್ಷಭೇದ ಮರೆತು ಹೋರಾಟ

ವಂಚನೆಗೆ ಒಳಗಾದವರಿಗೆ ಹಣ ವಾಪಸ್ ಕೊಡಿಸಲು ರಾಜಕೀಯ ನಾಯಕರು ಪ್ರಯತ್ನಿಸಬೇಕು. ಪಕ್ಷಭೇದ ಮರೆತು ಹೋರಾಟ ನಡೆಸಬೇಕು. ಈ ವಿಚಾರದಲ್ಲೂ ರಾಜಕೀಯ ಮಾಡಿದರೆ ನೂರಾರು ಗ್ರಾಹಕರಿಗೆ ಮೋಸ ಆಗಲಿದೆ. ಪ್ರತಿಷ್ಠೆ ಬಿಟ್ಟು ಗ್ರಾಹಕರ ಪರವಾಗಿ ಹೋರಾಟ ಮಾಡಬೇಕು. ಮುಳ್ಳಿನ ಮೇಲೆ ಬಟ್ಟೆ ಬಿದ್ದಿದ್ದು ಜಾಣ್ಮೆಯಿಂದ ಬಿಡಿಸಿಕೊಳ್ಳಬೇಕಾದ ಸಮಯ ಬಂದಿದೆ ಎಂದು ಜಿ.ಸಿ. ಚಂದ್ರಶೇಖರ್ ಎಚ್ಚರಿಸಿದರು.

ಸ್ಥಳೀಯ ಶಾಸಕರು ಹಾಗೂ ಸಂಸದರು ಆರೋಪಿಗಳ ಪರವಾಗಿದ್ದಾರೆ ಎನ್ನುವ ಅನುಮಾನ ಕಾಡುತ್ತಿದೆ.

ಶಂಕರ್ ಗುಹಾ ದ್ವಾರಕನಾಥ್ ಬೆಳ್ಳೂರು
ಮಹಾಪೋಷಕ, ಹಿತರಕ್ಷಣಾ ವೇದಿಕೆ

ಸಂಸತ್‌ನಲ್ಲಿ ಮತ್ತೆ ಅವ್ಯವಹಾರದ ಕುರಿತು ಪ್ರಶ್ನಿಸಿ ನ್ಯಾಯ ಕೊಡಿಸಲು ಪ್ರಯತ್ನಿಸುತ್ತೇನೆ

ಜಿ.ಸಿ.ಚಂದ್ರಶೇಖರ್, ರಾಜ್ಯಸಭೆ ಸದಸ್ಯ

ಮೌಂಟ್ ಕಾರ್ಮೆಲ್ ಕಾಲೇಜಿನ ಅಮೃತ ಮಹೋತ್ಸವ

ಮಾತೃಭಾಷೆಯಲ್ಲಿಯೇ ಪ್ರಾಥಮಿಕ ಶಿಕ್ಷಣ ಇರಲಿ: ವೆಂಕಯ್ಯ ನಾಯ್ಡು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಾಥಮಿಕ ಶಿಕ್ಷಣ ಮಾತೃಭಾಷೆಯಲ್ಲಿಯೇ ಇರಬೇಕು. ಮಾತೃಭಾಷೆ ಕಣ್ಣು ಇದ್ದಂತೆ. ಇತರ ಭಾಷೆಗಳು ಕನ್ನಡಕ ಇದ್ದಂತೆ' ಎಂದು ಉಪ ರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು ಹೇಳಿದರು.

ಮೌಂಟ್ ಕಾರ್ಮೆಲ್ ಕಾಲೇಜಿನ ಅಮೃತ ಮಹೋತ್ಸವನ್ನು ಉದ್ಘಾಟಿಸಿ ಶನಿವಾರ ಮಾತನಾಡಿದ ಅವರು, 'ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಮಾತೃಭಾಷೆಯಲ್ಲಿ ಕಲಿಕೆಗೆ ಹೆಚ್ಚಿನ ಒತ್ತು ನೀಡುತ್ತಿದೆ' ಎಂದರು.

'ಇಂಗ್ಲಿಷ್ ಮಾಧ್ಯಮದಲ್ಲಿ ಕಲಿಯದಿದ್ದರೆ ಬದುಕಿನಲ್ಲಿ ಸಾಧನೆ ಸಾಧ್ಯ ಇಲ್ಲ ಎನ್ನುವುದು ತಪ್ಪು ಕಲ್ಪನೆ. ನಮ್ಮ ರಾಷ್ಟ್ರಪತಿ ಹಳ್ಳಿಯಲ್ಲಿ ಓದಿದವರು. ಪ್ರಧಾನಿ, ಮುಖ್ಯ ನ್ಯಾಯಮೂರ್ತಿ ಕಾನ್ವೆಂಟ್ ನೋಡಿದವರಲ್ಲ. ಹಾಗೆಂದು, ಇತರ ಭಾಷೆಗಳನ್ನು ಕಲಿಯಬಾರದು ಎಂದಲ್ಲ. ಸಂವಹನಕ್ಕೆ ಇತರ ಭಾಷೆಗಳೂ ಬೇಕಿದೆ' ಎಂದರು.

'ಗುರಿ ನೆಟ್ಟು ಹೆಚ್ಚಿನ ಪರಿಶ್ರಮದಿಂದ ಸಾಧನೆ ಸಾಧ್ಯ. ಶಿಸ್ತು ಅಗತ್ಯ. ನಾಲ್ಕು 'ಸಿ'ಗಳು (ಕ್ಯಾರೆಕ್ಟರ್, ಕೆಪೆಸಿಟಿ, ಕಾಂಡಕ್ಟ್, ಕೆರಿಯರ್) ಇರಬೇಕು. ಆದರೆ, ಈಗ ಕಾಸ್ಟ್, ಕಮ್ಯುನಲ್, ಕ್ಯಾಷ್, ಕ್ರಿಮಿನಾಲಿಟಿ ಮುನ್ನಲೆಗೆ ಬಂದಿದೆ. ನಿಷ್ಪಕ್ಷಪಾತ ಮತ್ತು ಸಮ ಸಮಾಜ ನಿರ್ಮಿಸಲು ಶಿಕ್ಷಣ ಅತ್ಯಂತ ಶಕ್ತಿಶಾಲಿ ಸಾಧನ' ಎಂದರು.

ಮೌಂಟ್ ಕಾರ್ಮೆಲ್ ಶಿಕ್ಷಣ ಸಂಸ್ಥೆಯ ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಉಪರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು ಅವರೊಂದಿಗೆ ಮಾಜಿ ರಾಜ್ಯಪಾಲರಾದ ಮಾರ್ಗರೇಟ್ ಆಳ್ವಾ, ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಲಿಂಗರಾಜ ಗಾಂಧಿ, ಬೆಂಗಳೂರು ಆರ್ಚ್ ಬಿಷಪ್ ಪೀಟರ್ ಮಚಾಡೋ, ಮೌಂಟ್ ಕಾರ್ಮೆಲ್ ಕಾಲೇಜು ಪ್ರಾಂಶುಪಾಲರಾದ ಅರ್ಪಣಾ ಇದ್ದರು — ಪ್ರಜಾವಾಣಿ ಚಿತ್ರ

'ಮಹಿಳಾ ವಿಮೋಚನೆಗೆ ಅಡ್ಡಿಯಾಗಿರುವ ಅಡೆತಡೆಗಳನ್ನು ತೆಗೆದುಹಾಕಬೇಕು. ಮಹಿಳಾ ಶಿಕ್ಷಣಕ್ಕೆ ಹೆಚ್ಚಿನ ಉತ್ತೇಜನ ನೀಡಬೇಕು' ಎಂದ ಅವರು, ಶಿಕ್ಷಣದ ಮೂಲಕ ಮಹಿಳಾ ವಿಮೋಚನೆಗೆ ಒತ್ತು ನೀಡಿದ ವೀರಶೈವ ಚಳುವಳಿಯನ್ನು ಶ್ಲಾಘಿಸಿದರು.

ಅಮೃತ ಮಹೋತ್ಸವದ ಸ್ಮರಣಾರ್ಥ ಅಂಚೆ ಇಲಾಖೆ ಹೊರ ತಂದ ವಿಶೇಷ ಲಕೋಟೆಯನ್ನು ಬಿಡುಗಡೆ ಮಾಡಲಾಯಿತು. ರಾಜ್ಯಪಾಲ ಥಾವರಚಂದ್ ಗೆಹಲೋತ್, ಗೋವಾದ ಮಾಜಿ ರಾಜ್ಯಪಾಲರಾದ ಮಾರ್ಗರೇಟ್ ಆಳ್ವಾ, ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಲಿಂಗರಾಜ ಗಾಂಧಿ, ಕರ್ನಾಟಕ ವೃತ್ತದ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಎಸ್. ರಾಜೇಂದ್ರ ಕುಮಾರ್, ಬೆಂಗಳೂರಿನ ಆರ್ಚ್ ಬಿಷಪ್ ಪೀಟರ್ ಮಚಾಡೊ ಇದ್ದರು.

ಬ್ರಿಟನ್: ಮುಂಚೂಣಿಯಲ್ಲಿ ಸುನಕ್

ಲಂಡನ್ (ಪಿಟಿಐ): ಬ್ರಿಟನ್‌ನ ಕನ್ಸರ್ವೇಟಿವ್ ಪಕ್ಷದ ನಾಯಕತ್ವ ವಹಿಸಿಕೊಳ್ಳಲು, ಆ ಮೂಲಕ ಮುಂದಿನ ಪ್ರಧಾನಿಯಾಗುವ ಸ್ಪರ್ಧೆಯಲ್ಲಿ ಮಾಜಿ ಹಣಕಾಸು ಸಚಿವ ರಿಷಿ ಸುನಕ್ ಮುಂಚೂಣಿಯಲ್ಲಿದ್ದು, ಶನಿವಾರ ಔಪಚಾರಿಕವಾಗಿ ಪ್ರಚಾರ ಆರಂಭಿಸಿದ್ದಾರೆ.

ಇನ್ಫೊಸಿಸ್ ಸಹಸಂಸ್ಥಾಪಕ ನಾರಾಯಣ ಮೂರ್ತಿ ಅವರ ಅಳಿಯ ರಿಷಿ, ಕನ್ಸರ್ವೇಟಿವ್ ಪಕ್ಷದ ಮಾಜಿ ಅಧ್ಯಕ್ಷ ಆಲಿವರ್ ಡೌಡೆನ್ ಮತ್ತು ಮಾಜಿ ಕ್ಯಾಬಿನೆಟ್ ಸಚಿವ ಲಿಯಾಮ್ ಫಾಕ್ಸ್ ಸೇರಿದಂತೆ ಸಂಸತ್ತಿನ ಹಿರಿಯ ಟೋರಿ ಸದಸ್ಯರ ಬೆಂಬಲವನ್ನು ಪಡೆದಿದ್ದಾರೆ.

ರಿಷಿ ಅವರು ಪ್ರಧಾನಿಯಾದರೆ ಈ ಹುದ್ದೆಗೆ ಏರಿದ ಭಾರತೀಯ ಮೂಲದ ಮೊದಲ ವ್ಯಕ್ತಿಯಾಗಲಿದ್ದಾರೆ.

ಬ್ರಿಟನ್‌ನ ಓಡ್ಸ್‌ಚೆಕ್ಸರ್ ಬೆಟ್ಟಿಂಗ್ ಏಜೆನ್ಸಿಯ ಬುಕ್ಕಿಗಳ ಪ್ರಕಾರ, ಪ್ರಧಾನಿ ಸ್ಥಾನದ ಪ್ರಬಲ ಆಕಾಂಕ್ಷಿಗಳ ಪೈಕಿ ರಿಷಿ ಮುಂಚೂಣಿಯಲ್ಲಿದ್ದಾರೆ. ಸ್ಪರ್ಧೆಯಲ್ಲಿ ಕೇಳಿ ಬರುತ್ತಿರುವ ಮತ್ತಿಬ್ಬರು ಅಭ್ಯರ್ಥಿಗಳಾದ ಬ್ರಿಟನ್‌ನ ವಿದೇಶಾಂಗ ಕಾರ್ಯದರ್ಶಿ ಲಿಜ್ ಟ್ರಸ್ ಮತ್ತು ರಕ್ಷಣಾ ಕಾರ್ಯದರ್ಶಿ ಬೆನ್ ವ್ಯಾಲೇಸ್ ಹೆಸರು ಇನ್ನಷ್ಟೇ ಘೋಷಣೆಯಾಗಬೇಕಿದೆ.

'ಕೋವಿಡ್‌ನ ದುಃಸ್ವಪ್ನವನ್ನು ಎದುರಿಸಿದ ಕಠಿಣ ಸಮಯದಲ್ಲಿ ನಾನು ಸರ್ಕಾರದಲ್ಲಿ ಅತ್ಯಂತ ಕಷ್ಟಕರವಾಗಿದ್ದ ಇಲಾಖೆಯನ್ನು ಮುನ್ನಡೆಸಿದ್ದೇನೆ. ಕನ್ಸರ್ವೇಟಿವ್ ಪಕ್ಷದ ಮುಂದಿನ ನಾಯಕತ್ವ ವಹಿಸಿಕೊಳ್ಳಲು ಹಾಗೂ ನಿಮ್ಮ ಮುಂದಿನ ಪ್ರಧಾನಿಯಾಗಲು ಬೆಂಬಲ ಕೋರುತ್ತಿದ್ದೇನೆ' ಎಂದು 'ರೆಡಿಫಾರ್ ರಿಷಿ' ಎನ್ನುವ ಹ್ಯಾಷ್‌ಟ್ಯಾಗ್‌ನಲ್ಲಿ ಸಾಮಾಜಿಕ ಮಾಧ್ಯಮಗಳಲ್ಲಿ ಬಿಡುಗಡೆಯಾದ ಪ್ರಚಾರ ವಿಡಿಯೊದಲ್ಲಿ ರಿಷಿ ಮನವಿ ಮಾಡಿದ್ದಾರೆ.



ಜ್ಯೋತಿಷಿ ಮನೆಗೆ ನುಗ್ಗಿ ದರೋಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಗೇರಿ ರೈಲ್ವೆ ನಿಲ್ದಾಣ ಸಮೀಪದಲ್ಲಿರುವ ಜ್ಯೋತಿಷಿ ಪ್ರಮೋದ್ ಎಂಬುವರ ಮನೆಗೆ ನುಗ್ಗಿದ್ದ ದುಷ್ಕರ್ಮಿಗಳ ತಂಡ, ಚಿನ್ನಾಭರಣ ಹಾಗೂ ನಗದು ದೋಚಿ ಪರಾರಿಯಾಗಿದೆ.

'ಜ್ಯೋತಿಷ ಕೇಳುವ ನೆಪದಲ್ಲಿ ಶನಿವಾರ ಬೆಳಿಗ್ಗೆ 9 ಗಂಟೆ ಸುಮಾರಿಗೆ ಮನೆಗೆ ಬಂದಿದ್ದ ಮೂವರು ದುಷ್ಕರ್ಮಿಗಳು, ಪ್ರಮೋದ್ ಮೇಲೆ ಹಲ್ಲೆ ಮಾಡಿದ್ದರು. ನಂತರ, 400 ಗ್ರಾಂ ಚಿನ್ನಾಭರಣ ಹಾಗೂ ₹5 ಲಕ್ಷ ನಗದು ದೋಚಿಕೊಂಡು ಹೋಗಿದ್ದಾರೆ' ಎಂದು ಪಶ್ಚಿಮ ವಿಭಾಗದ ಡಿಸಿಪಿ ಲಕ್ಷ್ಮಣ ನಿಂಬರಗಿ ತಿಳಿಸಿದರು.

'ದುಷ್ಕರ್ಮಿಗಳ ಹಲ್ಲೆಯಿಂದಾಗಿ ಪ್ರಮೋದ್ ಮುಖಕ್ಕೆ ಗಾಯವಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದಾರೆ. ಅವರು ನೀಡಿರುವ ಹೇಳಿಕೆ ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ಆರೋಪಿಗಳ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ' ಎಂದೂ ಹೇಳಿದರು.

'ಪ್ರಮೋದ್ ಅವರು ಒಂಟಿಯಾಗಿ ಮನೆಯಲ್ಲಿ ವಾಸವಿದ್ದರು. ಈ ಬಗ್ಗೆ ತಿಳಿದಿದ್ದವರೇ ಜ್ಯೋತಿಷ ಕೇಳುವ ನೆಪದಲ್ಲಿ ಮನೆಗೆ ನುಗ್ಗಿ ಕೃತ್ಯ ಎಸಗಿರುವ ಅನುಮಾನವಿದೆ. ಮನೆ ಸುತ್ತಮುತ್ತಲಿನ ಸಿ.ಸಿ.ಟಿ.ವಿ ಕ್ಯಾಮೆರಾ ಪರಿಶೀಲನೆ ನಡೆಸಲಾಗುತ್ತಿದೆ' ಎಂದೂ ತಿಳಿಸಿದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಕಾಣೆಯಾಗಿದ್ದಾರೆ

ಶ್ರೀ ಜಗದೀಶಪ್ಪ ಸಜ್ಜನ್

ಸಾ.ಕನಕಗಿರಿ, ಜಿಲ್ಲಾ. ಕೊಪ್ಪಳ ಅವರು ದಿನಾಂಕ : 7-7-2022ರಂದು ಕಾಣೆಯಾಗಿದ್ದಾರೆ, ಎಲ್ಲಿಯಾದರೂ ಸಿಕ್ಕರೆ ಈ ಕೆಳಗಿನ ನಂಬರ್‌ಗಳಿಗೆ ಕಾಲ್ ಮಾಡಿ ತಿಳಿಸಿದವರಿಗೆ ಸೂಕ್ತ ಬಹುಮಾನ ನೀಡಲಾಗುವುದು.

9164262626
9986961777

ಆರೋಪಿಯ ₹50 ಲಕ್ಷದ ಆಸ್ತಿ ಜಪ್ತಿ

ಬೆಂಗಳೂರು: ಗಾಂಜಾ ಮಾರಾಟದ ಆರೋಪಿ, ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ಪುಷ್ಪಾಪುರ ಗ್ರಾಮದ ಜಿ. ಮಲ್ಲೇಶ್ ಎಂಬಾತ ಅಕ್ರಮವಾಗಿ ಗಳಿಸಿದ್ದ ₹50 ಲಕ್ಷ ಮೌಲ್ಯದ ಚರಾಸ್ತಿ ಹಾಗೂ ಸ್ಥಿರಾಸ್ತಿಯನ್ನು ಸಿ.ಸಿ.ಬಿ ಪೊಲೀಸರು ವಶಪಡಿಸಿಕೊಂಡಿದ್ದಾರೆ. ಬೆಂಗಳೂರಿನಲ್ಲಿ ಎನ್‌ಡಿಪಿಎಸ್ ಕಾಯ್ದೆ ಅಡಿ ಆರೋಪಿಯಿಂದ ಅಕ್ರಮ ಆಸ್ತಿ ವಶಕ್ಕೆ ಪಡೆದ ಪ್ರಥಮ ಪ್ರಕರಣ ಇದಾಗಿದೆ.

ಆರೋಪಿಯು 12 ವರ್ಷಗಳಿಂದ ಗಾಂಜಾ ಮಾರಾಟ ದಂಧೆಯಲ್ಲಿ ತೊಡಗಿದ್ದ. ಈತನ ವಿರುದ್ಧ ಎನ್‌ಡಿಪಿಎಸ್ ಕಾಯ್ದೆ ಅಡಿ ಬೆಂಗಳೂರು ನಗರ, ಮೈಸೂರು, ಚಾಮರಾಜನಗರ ಜಿಲ್ಲೆಯ ವಿವಿಧ ಪೊಲೀಸ್ ಠಾಣೆಗಳಲ್ಲಿ 2014ರಿಂದ 2022ರ ತನಕ ಒಟ್ಟು 7 ಪ್ರಕರಣಗಳು ದಾಖಲಾಗಿದ್ದವು. ಈತ ಗಾಂಜಾ ಮಾರಾಟವನ್ನೇ ದಂಧೆಯಾಗಿ ಮಾಡಿಕೊಂಡಿದ್ದ. ತಮಿಳುನಾಡು, ಆಂಧ್ರಪ್ರದೇಶ, ಒಡಿಶಾ ರಾಜ್ಯಗಳಿಂದ ಗಾಂಜಾವನ್ನು ಖರೀದಿಸಿ ಅದನ್ನು ರಾಜ್ಯದ ವಿವಿಧೆಡೆ ಪೂರೈಸುತ್ತಿದ್ದ. ಅದರಿಂದ ಬಂದ ಹಣದಲ್ಲಿ ಪತ್ನಿ ಹಾಗೂ ಪುತ್ರನ ಹೆಸರಿನಲ್ಲಿ 2013ರಲ್ಲಿ ಚಾಮರಾಜನಗರ ಜಿಲ್ಲೆಯ ಶಾಗ್ಯ ಗ್ರಾಮದಲ್ಲಿ ₹50 ಲಕ್ಷ ಮೌಲ್ಯದ 8 ಎಕರೆ ಜಮೀನು ಖರೀದಿಸಿದ್ದ.

ಈತನ ಹೆಸರಿನ ಐದು ಬ್ಯಾಂಕ್ ಖಾತೆಗಳಲ್ಲಿದ್ದ ₹3 ಲಕ್ಷ ಹಣವನ್ನು ತನಿಖಾಧಿಕಾರಿಗಳು ಮುಟ್ಟುಗೋಲು ಹಾಕಿಕೊಂಡಿದ್ದಾರೆ ಎಂದು ಸಿ.ಸಿ.ಬಿ ಮೂಲಗಳು ತಿಳಿಸಿವೆ.

ಆರೋಪಿಯ ಪುತ್ರ, ಪತ್ನಿಯ ಹೆಸರಿನಲ್ಲಿ ವಿವಿಧ ಬ್ಯಾಂಕ್‌ಗಳಲ್ಲಿ ಖಾತೆ ತೆರೆದು ಅನಧಿಕೃತವಾಗಿ ಜಮೆ ಮಾಡಿದ್ದ. ವಿವಿಧ ಎಲೆಕ್ಟ್ರಾನಿಕ್ ವರ್ಗಾವಣೆಗಳಿಂದ ಲಕ್ಷಾಂತರ ರೂಪಾಯಿ ಹಣವು ಆರೋಪಿ ಖಾತೆಗೆ ಜಮೆ ಆಗಿರುವುದು ಪತ್ತೆಯಾಗಿದೆ. ಆದಾಯ ತೆರಿಗೆ ಪಾವತಿಸದೆ ವಹಿವಾಟು ಮರೆಮಾಚಿರುವುದು ತನಿಖೆಯಿಂದ ಪತ್ತೆಯಾಗಿದೆ ಎಂದು ಮೂಲಗಳು ಹೇಳಿವೆ.

ಡ್ರಗ್ಸ್: ಆರೋಪಿಗಳ ಸೆರೆ

ಬೆಂಗಳೂರು: ಬಾಣಸವಾಡಿ ಠಾಣೆ ವ್ಯಾಪ್ತಿಯಲ್ಲಿ ಡ್ರಗ್ಸ್ ಮಾರುತ್ತಿದ್ದ ಆರೋಪದಡಿ ಇಬ್ಬರು ಮಹಿಳೆಯರನ್ನು ಪೊಲೀಸರು ಬಂಧಿಸಿದ್ದಾರೆ.

'ಉಗಾಂಡ ಪ್ರಜೆಗಳಾದ ನಾಮುತೆಬಿ ಶಮಿರಾ (25), ನಾನ್ಫೂಕ್ ಫಿಯೋನಾ (27) ಬಂಧಿತರು. ಇವರಿಂದ ₹1.50 ಲಕ್ಷ ಮೌಲ್ಯದ ಎಂಡಿಎಂಎ ಮಾತ್ರೆಗಳು ಮತ್ತು 2 ಮೊಬೈಲ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಪ್ರವಾಸ ಹಾಗೂ ವೈದ್ಯಕೀಯ ವೀಸಾದಡಿ ಆರೋಪಿಗಳು 2020ರಲ್ಲಿ ಭಾರತಕ್ಕೆ ಬಂದಿದ್ದರು. ವೀಸಾ ಅವಧಿ ಮುಗಿದರೂ ದೇಶದಲ್ಲಿ ಅಕ್ರಮವಾಗಿ ನೆಲೆಸಿದ್ದ ಆರೋಪಿಗಳು, ಆಫ್ರಿಕಾ ಪೆಡ್ಲರ್‌ಗಳ ಮೂಲಕ ಡ್ರಗ್ಸ್ ತಂದು ಮಾರುತ್ತಿದ್ದರು' ಎಂದು ತಿಳಿಸಿದರು.

'ಎಚ್‌ಆರ್‌ಬಿಆರ್ ಬಡಾವಣೆಯ 3ನೇ ಹಂತದ ಸರ್ವೀಸ್ ರಸ್ತೆಯಲ್ಲಿರುವ ಬಿಡಿಎ ಪಾರ್ಕ್ ಬಳಿ ಜುಲೈ 8ರಂದು ಸುತ್ತಾಡುತ್ತಿದ್ದ ಆರೋಪಿಗಳು, ಪರಿಚಯಸ್ಥ ಗ್ರಾಹಕರಿಗೆ ಡ್ರಗ್ಸ್ ಮಾರುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಹೇಳಿದರು.

ಡ್ರಗ್ಸ್ ಮಾರಾಟ: ಇಬ್ಬರ ಬಂಧನ

ಬೆಂಗಳೂರು: ಡ್ರಗ್ಸ್ ಮಾರಾಟ ಪ್ರಕರಣದಲ್ಲಿ ಯೂಟ್ಯೂಬರ್ ಸೇರಿ ಇಬ್ಬರು ಆರೋಪಿಗಳನ್ನು ಕಾಡುಗೊಂಡನಹಳ್ಳಿ (ಕೆ.ಜಿ.ಹಳ್ಳಿ) ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಯೂಟ್ಯೂಬರ್ ಎಂಎಂಡಿ ಮೋಲಾ ಅಲಿಯಾಸ್ ಓಬೆಜಿ ಹಾಗೂ ಸ್ಯಾಮ್ಯುಯಲ್ ಬಂಧಿತರು. ಇವರಿಂದ 15 ಗ್ರಾಂ ಎಂಡಿಎಂಎ, ಎರಡು ಮೊಬೈಲ್ ಹಾಗೂ ₹1,220 ನಗದು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ನೈಜೀರಿಯಾದ ಓಬೆಜಿ, ಕೆಲ ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದ. ಯೂಟ್ಯೂಬ್‌ನಲ್ಲಿ 'ಎಂಎಂಡಿ ಮೋಲಾ' ಹೆಸರಿನಲ್ಲಿ ಚಾನೆಲ್ ತೆರೆದು, ವಿಡಿಯೊ ಅಪ್‌ಲೋಡ್ ಮಾಡುತ್ತಿದ್ದ. ಇದರ ಜೊತೆಯಲ್ಲೇ ಈತ, ಸ್ನೇಹಿತನ ಜೊತೆ ಸೇರಿ ಡ್ರಗ್ಸ್ ಮಾರಾಟಕ್ಕೆ ಇಳಿದಿದ್ದ. ಎಚ್‌ಬಿಆರ್ ಲೇಔಟ್‌ನ 1ನೇ ಹಂತದ ಟೀಚರ್ಸ್ ಕಾಲೊನಿಗೆ ಜುಲೈ 7ರಂದು ಬಂದಿದ್ದ ಆರೋಪಿಗಳು, ಗ್ರಾಹಕರಿಗೆ ಎಂಡಿ ಎಂಎ ಡ್ರಗ್ಸ್ ಮಾರುತ್ತಿದ್ದರು. ಈ ಬಗ್ಗೆ ಮಾಹಿತಿ ಕಲೆ ಹಾಕಿದ್ದ ಸಿಬ್ಬಂದಿ, ದಾಳಿ ಮಾಡಿ ಆರೋಪಿ ಗಳನ್ನು ಬಂಧಿಸಿದ್ದಾರೆ. ಆರೋಪಿಗಳಿಗೆ ಡ್ರಗ್ಸ್ ಪೂರೈಕೆ ಮಾಡುತ್ತಿದ್ದ ವ್ಯಕ್ತಿಗಳು ತಲೆಮರೆಸಿಕೊಂಡಿದ್ದಾರೆ' ಎಂದೂ ಹೇಳಿದರು.

PRM/KA/RERA/1251/308/PR/201201/003733	PRM/KA/RERA/1251/309/PR/211209/004576	PRM/KA/RERA/1251/446/PR/210312/004002	PRM/KA/RERA/1251/309/PR/180120/001878	PRM/KA/RERA/1251/308/PR/280222/004739	PRM/KA/RERA/1251/309/PR/181122/002151	PRM/KA/RERA/1251/308/PR/290122/004660
ELECTRONIC CITY	YELAHANKA	K R PURAM	THANISANDRA MAIN ROAD	CHANDAPURA	THANISANDRA	SARJAPURA
NEAR BOSCH HOSA ROAD JUNCTION	10 MINS. YELAHANKA POLICE STATION	NEAR GARDEN CITY UNIVERSITY	10 MINS. FROM MANYATA TECH PARK	10 MINS. NARAYANA HRUDAYALAYA	NEAR KNS INSTITUTE OF TECHNOLOGY	SARJAPURA - ATTIBELE ROAD
₹ 31.00 - 62.00 Lacs*	₹ 31.22 - 42.42 Lacs*	₹ 39.36 - 65.13 Lacs*	₹ 1.20 - 1.49 Crores*	₹ 25.62 - 34.72 Lacs*	₹ 35.16 - 41.16 Lacs*	₹ 27.10 - 40.15 Lacs*
2 & 3-BHK	2 & 3-BHK	2 & 3-BHK	3-BHK	2 & 3-BHK	2-BHK	2 & 3-BHK
₹ 3,100 / Sq. Ft.	₹ 3,500 / Sq. Ft.	₹ 3,800 / Sq. Ft.	READY TO OCCUPY	₹ 2,800 / Sq. Ft.	READY TO OCCUPY	₹ 2,800 / Sq. Ft.
9164 045 000	8880 758 758	8880 438 000	8088 779 779	8880 013 310	8880 461 461	9164 122 000

*Prices mentioned are base price and may vary with dimensions, floors, and availability. Brand names mentioned in this advertisement are for demarcation & not for promotion. Travel time may vary with real-time traffic conditions and the route followed to reach the destination, please check your maps for precise and accurate travel time from your location.

www.dsmaxproperties.com
For more details/information about the projects, visit: www.rera.karnataka.gov.in

ಸಂಗ್ರಹ ಚಿತ್ರ

ಮಾಹಿತಿ, ಪ್ರಚಾರದ ಕೊರತೆ, ಬೆಳೆ ನಷ್ಟ ಸಮೀಕ್ಷಾ ವಿಧಾನದ ಬಗ್ಗೆಯೂ ಆಕ್ಷೇಪ

ಬೇಕು ಎಂದಾಗ ಸಿಗದ ಬೆಳೆ ವಿಮೆ ಪರಿಹಾರ

● ವಿ.ಸೂರ್ಯನಾರಾಯಣ

ಚಾಮರಾಜನಗರ: ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಗೆ ರಾಜ್ಯದಲ್ಲಿ ನಿರೀಕ್ಷಿಸಿದಷ್ಟು ಯಶಸ್ಸು ಸಿಕ್ಕಿಲ್ಲ. ಯೋಜನೆ ಆರಂಭಗೊಂಡ 2016 ಹಾಗೂ ಮರು ವರ್ಷ 2017ರಲ್ಲಷ್ಟೇ ಹೆಚ್ಚಿನ ರೈತರು ನೋಂದಾಯಿಸಿದ್ದರು. ನಂತರ ಆಸಕ್ತಿ ತೋರಿಲ್ಲ.

ಪ್ರಚಾರ-ಮಾಹಿತಿ ಕೊರತೆ, ಸಕಾಲಕ್ಕೆ ಪರಿಹಾರ ದೊರಕದಿರುವುದು, ಅವೈಜ್ಞಾನಿಕ ಬೆಳೆ ಸಮೀಕ್ಷೆ, ದಾಖಲೆಗಳನ್ನು ಸಂಗ್ರಹಿಸುವ ಸವಾಲು– ಇವು ನಿರಾಸಕ್ತಿಗೆ ರೈತರು ಕೊಡುವ ಕಾರಣಗಳು.

ಕೃಷಿ ಇಲಾಖೆಯು ಯೋಜನೆಯ ಬಗ್ಗೆ ತಿಳಿ ಹೇಳುತ್ತಿಲ್ಲ. ವಿಮೆಯ ಪ್ರಯೋಜನದ ಬಗ್ಗೆ ರೈತರಿಗೆ ಅರಿವಿಲ್ಲ ಎಂಬುದು ಕೆಲವು ಕೃಷಿಕರ ಆರೋಪ. ಆದರೆ, ಅಧಿಕಾರಿಗಳು ಅದನ್ನು ನಿರಾಕರಿಸುತ್ತಾರೆ.

'ಮಾಧ್ಯಮಗಳ ಮೂಲಕ ಸಾಕಷ್ಟು ಪ್ರಚಾರ ಮಾಡಲಾಗುತ್ತದೆ. ಹಳ್ಳಿಗಳಲ್ಲಿ ರೈತ ಸಂಪರ್ಕ ಕೇಂದ್ರಗಳ ಮೂಲಕ ರೈತರನ್ನು ಸಂಪರ್ಕಿಸಿ ತಿಳಿ ಹೇಳಲಾಗುತ್ತದೆ. ಕರಪತ್ರ ಹಂಚಲಾಗುತ್ತದೆ, ಡಂಗೂರ ಹೊಡೆಸುವುದು, ಜಾಗೃತಿ ಕಾರ್ಯಕ್ರಮಗಳನ್ನೂ ನಡೆಸಲಾಗುತ್ತದೆ' ಎನ್ನುತ್ತಾರೆ.

'ಬಹುತೇಕ ರೈತರು ಹವಾಮಾನ ಪರಿಸ್ಥಿತಿ ನೋಡಿಕೊಂಡು ವಿಮೆ ಬಗ್ಗೆ ನಿರ್ಧರಿಸುತ್ತಾರೆ. ಉತ್ತಮ ಮಳೆಯಾಗಿ, ಬೆಳೆ ಚೆನ್ನಾಗಿ ಬರುವಂತಿದ್ದರೆ ವಿಮೆಗೆ ನೋಂದಾಯಿಸಲು ಮುಂದಾಗುವುದಿಲ್ಲ' ಎಂಬುದು ನೋಂದಣಿ ಕಡಿಮೆಯಾಗುತ್ತಿರುವುದಕ್ಕೆ ಅಧಿಕಾರಿಗಳು ನೀಡುವ ಕಾರಣ. ಆದರೆ ಇದು ಪೂರ್ಣ ನಿಜವಲ್ಲ.

ವಿಳಂಬ ಪಾವತಿ: ಅಗತ್ಯವಿದ್ದಾಗ ವಿಮೆ ಮೊತ್ತ ಪಾವತಿಯಾಗದಿರುವುದು ರೈತರು ವಿಮೆ ಮೇಲೆ ನಿರಾಸಕ್ತಿ ಹೊಂದಲು ಪ್ರಮುಖ ಕಾರಣ.

ತಾಂತ್ರಿಕ ಕಾರಣಗಳ ನೆಪದಲ್ಲಿ ರೈತರು ವರ್ಷಾನುಗಟ್ಟಲೆ ವಿಮೆ ಪರಿಹಾರದಿಂದ ವಂಚಿತರಾದ ನಿದರ್ಶನಗಳಿವೆ. ಚಾಮರಾಜನಗರದಲ್ಲಿ 27 ಸಾವಿರಕ್ಕೂ ಹೆಚ್ಚು ರೈತರು ವಿಮೆ ಪರಿಹಾರಕ್ಕಾಗಿ ಐದು ವರ್ಷಕಾದಿದ್ದಾರೆ.

ಜಿಲ್ಲೆಯಲ್ಲಿ 2016ರ ಹಿಂಗಾರು ಹಂಗಾಮಿನಲ್ಲಿ 27,467 ರೈತರು ವಿಮೆಗೆ ನೋಂದಾಯಿಸಿದ್ದರು. ಆ ಪೈಕಿ 27,108 ಮಂದಿಗೆ ₹ 12.77 ಕೋಟಿಗಳಷ್ಟು ವಿಮೆ ಪರಿಹಾರ ಬಂದಿರಲಿಲ್ಲ. ಇದಕ್ಕೆ ತಾಂತ್ರಿಕ ಕಾರಣವನ್ನು ನೀಡಲಾಗಿತ್ತು. ಕಳೆದ ವರ್ಷಾರಂಭದಲ್ಲಿ ಪಾವತಿಯಾಗಿದೆ. ಇದಾದ ನಂತರ ಸಕಾಲಕ್ಕೆ ಪರಿಹಾರ ಮೊತ್ತ ಬರುವುದಿಲ್ಲ ಎಂಬ ಭಾವನೆ ರೈತರಲ್ಲಿ ಬೇರೂರಿದ್ದು, 2017ರಿಂದ ವಿಮೆಗೆ ನೋಂದಣಿ ಮಾಡುವವರು ಕಡಿಮೆಯಾಗಿದ್ದಾರೆ.

ಕಳೆದ ವರ್ಷದ ಮುಂಗಾರು ಅವಧಿಯ ವಿಮೆ ಪರಿಹಾರ ಬಹುತೇಕ ರೈತರಿಗೆ ಪಾವತಿಯಾಗಿದೆ. ಹಿಂಗಾರು ಅವಧಿಯ ಪ್ರಕ್ರಿಯೆ ಇನ್ನೂ ಆರಂಭವಾಗಿಲ್ಲ.

ಬೆಳೆ ನಷ್ಟವಾದಾಗ ಇಲಾಖೆ ಅನುಸರಿಸುವ ಸಮೀಕ್ಷೆ ವಿಧಾನದ ಬಗ್ಗೆ ಬಹುತೇಕ ರೈತರು ಆಕ್ಷೇಪಿಸುತ್ತಾರೆ. 'ನಷ್ಟದ ಅಂದಾಜು ಮಾಡುವಾಗ ಹೋಬಳಿ, ವ್ಯಾಪ್ತಿಯನ್ನು ಪರಿಗಣಿಸಲಾಗುತ್ತದೆ. ಹೀಗಾಗಿ ನಷ್ಟ ಅನುಭವಿಸಿದ ನಿಜವಾದ ರೈತರಿಗೆ ಪರಿಹಾರ ಸಿಗುವುದಿಲ್ಲ' ಎಂಬುದು ಅವರ ದೂರು.

'ಈಗ ಮೊಬೈಲ್ ಆ್ಯಪ್ ಮೂಲಕವೇ ಸಮೀಕ್ಷೆ ನಡೆಸಲಾಗುತ್ತಿದ್ದು, ವೈಜ್ಞಾನಿಕವಾಗಿಯೇ ನಷ್ಟವನ್ನು ಗುರುತಿಸಲಾಗುತ್ತದೆ' ಎಂಬುದು ಇಲಾಖೆಯ ಸಮಜಾಯಿಷಿ.

'ಜಾಗೃತಿ ಮೂಡಿಸಲಾಗುತ್ತಿದೆ'

ಮುಂಗಾರಿನಲ್ಲಿ ಬೆಳೆ ವಿಮೆ ಬಗ್ಗೆ ರೈತರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಹಳ್ಳಿಗಳಲ್ಲಿ ಡಂಗೂರ ಬಾರಿಸಿ, ಕರಪತ್ರ ಹಂಚಲಾಗುತ್ತಿದೆ. ಬಿತ್ತನೆ ನಂತರವೇ ರೈತರ ಪ್ರತಿಕ್ರಿಯೆ ಗೊತ್ತಾಗಲಿದೆ. ಒಣ ಬೇಸಾಯ ಪ್ರದೇಶದ ರೈತರು ಚೆನ್ನಾಗಿ ಸ್ಪಂದಿಸುತ್ತಾರೆ

– **ಮಲ್ಲಿಕಾರ್ಜುನ,** ಕೃಷಿ ಇಲಾಖೆ ಜಂಟಿ ನಿರ್ದೇಶಕ, ಬಳ್ಳಾರಿ ಜಿಲ್ಲೆ

ಬೆಳೆ ನಷ್ಟ ಸಮೀಕ್ಷೆ ಅವೈಜ್ಞಾನಿಕವಾಗಿದೆ. ನಷ್ಟ ಅನುಭವಿಸಿದವರಿಗೆ ವೈಜ್ಞಾನಿಕ ಪರಿಹಾರ ಸಿಗುವುದಿಲ್ಲ. ರೈತರು ವಿಮೆ ಮಾಡಿಸಲು ಹಿಂದೇಟು ಹಾಕುತ್ತಿದ್ದಾರೆ

ಸೋಮಶೇಖರ್, ರೈತ, ಮಂಡ್ಯ

ಅಧಿಕಾರಿಗಳು ಬೆಳೆ ವಿಮೆ ಎನ್ನುತ್ತಿರುತ್ತಾರೆ. ನನಗೆ ಅದರ ಬಗ್ಗೆ ಸ್ವಲ್ಪವೂ ಮಾಹಿತಿ ಇಲ್ಲ. ನಾನು ಮಾಡಿಸಿಲ್ಲ

ಪುನೀತ್, ಯುವ ರೈತ, ಚಾಮರಾಜನಗರ

ಯಾರು ಏನಂತಾರೆ?

ವಿಮಾ ಕಂಪನಿಗಳಿಗೆ ಅನುಕೂಲ

ಬೆಳೆ ವಿಮೆ ಯೋಜನೆಯಿಂದ ರೈತರಿಗೆ ಅನುಕೂಲ ಆಗುತ್ತಿಲ್ಲ. ಕೃಷಿ ಇಲಾಖೆ ಬೆಳೆ ವಿಮೆ ಕುರಿತು ಪ್ರಚಾರ ಮಾಡುತ್ತದೆ. ಒಮ್ಮೆ ವಿಮಾ ಕಂತು ಕಟ್ಟಿದ ಮೇಲೆ ರೈತರ ಕಡೆ ಗಮನಹರಿಸುವುದಿಲ್ಲ. 2018-19 ಮತ್ತು 2019-20ರಲ್ಲಿ ರಾಗಿ ಮತ್ತು ಹುರುಳಿ ಬೆಳೆಗೆ ವಿಮೆ ಮಾಡಿಸಿದ್ದೆ. ನಯಾಪೈಸೆ ಹಣ ಬರಲಿಲ್ಲ. ಕೃಷಿ ಅಧಿಕಾರಿಗಳನ್ನು ಪ್ರಶ್ನಿಸಿದರೆ ವಿಮಾ ಕಂಪನಿ ಕೇಳಬೇಕು ಎನ್ನುತ್ತಾರೆ. ಕಂಪನಿಯವರನ್ನು ಹುಡುಕಿ ಕೆಲ ರೈತರೊಂದಿಗೆ ಬೆಂಗಳೂರಿಗೂ ಹೋಗಿದ್ದೆವು. ಕೃಷಿ ಇಲಾಖೆ ಕಚೇರಿಯಲ್ಲೂ ಪ್ರತಿಭಟಿಸಿದೆವು. ಪ್ರಯೋಜನವಾಗಲಿಲ್ಲ. ರೈತರ ಹೆಸರಿನಲ್ಲಿ ವಿಮಾ ಕಂಪನಿಗಳು ಹಣ ಮಾಡುತ್ತಿವೆ.

ಶಿವಾನಂದ

ರೈತ, ಅನಕಲ್ ಗ್ರಾಮ, ಚಿಂತಾಮಣಿ ತಾಲ್ಲೂಕು.

ವಿಮೆಯಿಂದ ರೈತರಿಗೆ ಅನುಕೂಲ

ಸರ್ಕಾರದ ಸೂಚಿಸಿದ ವಿಮಾ ಕಂತಿನ ಹಣ ಪಾವತಿಸಿ ಮೂರು ವರ್ಷಗಳಿಂದ ಮುಸುಕಿನ-ಜೋಳಕ್ಕೆ ವಿಮೆ ಮಾಡಿಸುತ್ತಿದ್ದೇವೆ. ಬೆಳೆ ನಷ್ಟದ ಸಮಯದಲ್ಲಿ ನಮ್ಮ ಬ್ಯಾಂಕ್ ಖಾತೆಗೆ ವಿಮಾ ಹಣ ಜಮೆ ಆಗಿದೆ. ಕಳೆದ ಸಾಲಿನಲ್ಲಿ ಮೂರು ಎಕರೆ ಮುಸುಕಿನ-ಜೋಳಕ್ಕೆ ₹ 1,200 ವಿಮಾ ಕಂತು ಪಾವತಿಸಿದ್ದೆವು. ₹ 19,000 ವಿಮೆ ಬಂದಿದೆ. ವಿಮೆ ಮಾಡಿಸುವುದರಿಂದ ರೈತರಿಗೆ ಅನುಕೂಲವಾಗುತ್ತಿದೆ.

ಕೆ.ಎನ್. ನಾರಾಯಣರೆಡ್ಡಿ

ಕಮಡಿಕೆ ಗ್ರಾಮ, ಗುಡಿಬಂಡೆ ತಾಲ್ಲೂಕು.

ತಾಂತ್ರಿಕ ಕಾರಣಗಳಿಂದ ಬಾಕಿ

ತಾಂತ್ರಿಕ ಕಾರಣಗಳಿಂದ ಕೋಲಾರ ಜಿಲ್ಲೆಯಲ್ಲಿ 2018ರಿಂದ 700 ರೈತರಿಗೆ ಬೆಳೆ ವಿಮೆ ಪರಿಹಾರ ನೀಡುವುದು ಬಾಕಿ ಇದೆ. ಇನ್ನುಳಿದ ರೈತರಿಗೆ ಸಕಾಲಕ್ಕೆ ಪರಿಹಾರ ಹಣ ನೀಡಲಾಗಿದೆ. ಕಳೆದ ವರ್ಷ 4 ಸಾವಿರ ಮಂದಿ ವಿಮೆ ಮಾಡಿಸಿದ್ದರು. ಮಳೆಯಿಂದ ಬೆಳೆ ನಷ್ಟವಾದ ಶೇ 50ರಷ್ಟು ರೈತರಿಗೆ ಪರಿಹಾರ ಲಭಿಸಿದೆ. ಸರ್ಕಾರವೇ ಕಂಪನಿ ಜೊತೆ ಒಪ್ಪಂದ ಮಾಡಿಕೊಂಡು ಬೆಳೆ ವಿಮೆಗೆ ನೋಂದಣಿ ಮಾಡಿಸಿಕೊಳ್ಳುವುದರಿಂದ ಮಧ್ಯವರ್ತಿಗಳ ಪಾತ್ರ ಇರುವುದಿಲ್ಲ. ಈ ಭಾಗದಲ್ಲಿ ಟೊಮೆಟೊ, ಮಾವಿಗೆ ಹೆಚ್ಚಾಗಿ ವಿಮೆ ಮಾಡಿಸುತ್ತಾರೆ. ರಾಗಿ ಬೆಳೆಗಾರರು ಆಸಕ್ತಿ ತೋರುವುದಿಲ್ಲ.

ವಿ.ಡಿ. ರೂಪಾದೇವಿ

ಜಂಟಿ ನಿರ್ದೇಶಕಿ, ಕೃಷಿ ಇಲಾಖೆ, ಕೋಲಾರ.

ನೆಮ್ಮದಿ ತಂದ ಹವಾಮಾನ ಆಧರಿತ ಬೆಳೆ ವಿಮೆ

● ಪ್ರವೀಣ ಕುಮಾರ್ ಪಿ.ವಿ.

ಮಂಗಳೂರು: ಕರಾವಳಿ ಜಿಲ್ಲೆಗಳಲ್ಲಿ ಅಡಿಕೆಗೆ ಮಳೆಗಾಲದಲ್ಲಿ ಕೊಳೆರೋಗ ಬಾಧಿಸುವುದರಿಂದ ಬೆಳೆಗಾರರು ಪ್ರತಿ ವರ್ಷವೂ ಸಮಸ್ಯೆ ಎದುರಿಸುತ್ತಾರೆ. ಹವಾಮಾನ ಆಧರಿತ ಬೆಳೆ ವಿಮೆ ಪದ್ಧತಿ ಜಾರಿಯಾದ ಬಳಿಕ ಬೆಳೆಗಾರರಲ್ಲಿ ಕೊಳೆರೋಗದ ಚಿಂತೆ ತುಸು ಕಡಿಮೆಯಾಗಿದೆ.

ಬೆಳೆಗೆ ಹೆಕ್ಟೇರ್‌ಗೆ ₹1.28 ಲಕ್ಷ ವಿಮೆ ಕಂತು ಪಾವತಿಸಬೇಕು. ಅದರಲ್ಲಿ ₹6,400 ಪ್ರೀಮಿಯಂ ಅನ್ನು ರೈತರು ಕಟ್ಟಿದರೆ ಶೇ 95ರಷ್ಟು ಮೊತ್ತ ಸರ್ಕಾರವೇ ಭರಿಸುತ್ತದೆ. ಜುಲೈ 1ರಿಂದ ಜೂನ್ 30ರ (ಒಂದು ವರ್ಷ) ಅವಧಿಯಲ್ಲಿ ಹವಾಮಾನದಲ್ಲಿ ಏರುಪೇರಾದರೆ ಬೆಳೆಗಾರರು ವಿಮಾ ಪರಿಹಾರ ಮೊತ್ತ ಪಡೆಯುತ್ತಾರೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 97,491 ಹೆಕ್ಟೇರ್ ಅಡಿಕೆ ಪ್ರದೇಶ ಇದೆ. 2017ರಲ್ಲಿ 1,902 ಘಟಕಗಳಿಗೆ ₹ 3.51 ಕೋಟಿ, 2018ರಲ್ಲಿ 14,553 ಘಟಕಗಳಿಗೆ ₹39.74 ಕೋಟಿ, 2020ರಲ್ಲಿ 54,775 ಘಟಕಗಳಿಗೆ ₹98.14 ಕೋಟಿ ಪಾವತಿ ಆಗಿದೆ.

'ಈ ಹಿಂದೆ ಅರ್ಜಿ ಸಲ್ಲಿಸಿ, ಅಧಿಕಾರಿಗಳು ಬಂದು ನಷ್ಟ ಅಂದಾಜು ಮಾಡಿದ ನಂತರ ಪರಿಹಾರ ಸಿಗುತ್ತಿತ್ತು. ಈಗ ಮಳೆಯಲ್ಲಿ ಏರುಪೇರಾದರೆ ಸಾಕು, ಕೊಳೆರೋಗ ಬಾಧಿಸದಿದ್ದರೂ ವಿಮೆ ಮೊತ್ತ ಸಿಗುತ್ತದೆ. ಮೂರು ವರ್ಷಗಳಿಂದ ನಿರಂತರವಾಗಿ ಪರಿಹಾರ ಪಡೆದಿದ್ದೇನೆ' ಎಂದು ಪುತ್ತೂರು ತಾಲ್ಲೂಕು ಕಡಮಜಲಿನ ಸುಭಾಷ್ ರೈ ತಿಳಿಸಿದರು.

ಹವಾಮಾನ ಏರುಪೇರಿಗೆ ಸಂಬಂಧಿಸಿ ಈ ಹಿಂದೆ ನಿರ್ದಿಷ್ಟ ಹೋಬಳಿಯ ಅಂಕಿ ಅಂಶಗಳ ಆಧಾರದಲ್ಲಿ ವಿಮೆ ಮೊತ್ತ ನಿಗದಿಪಡಿಸಲಾಗುತ್ತಿತ್ತು. ಆಗ ಕೆಲವೊಂದು ಕಡೆ ನಿರಂತರ ಮಳೆಯಾಗಿದ್ದರೂ ಅದು ಸಂಬಂಧಪಟ್ಟ ಹವಾಮಾನ ಕೇಂದ್ರದಲ್ಲಿ ದಾಖಲಾಗದಿದ್ದರೆ ಬೆಳೆಗಾರರು ಹವಾಮಾನ ವೈಪರೀತ್ಯದ ಪ್ರಕಾರ ವಿಮೆ ಪಡೆಯಲು ಸಾಧ್ಯವಾಗುತ್ತಿರಲಿಲ್ಲ. ಈಗ ಆ ಸಮಸ್ಯೆ ನೀಗಿಸಲಾಗಿದೆ.

'ರಾಜ್ಯ ನೈಸರ್ಗಿಕ ವಿಕೋಪ ನಿಗಾ ಕೇಂದ್ರವು ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸ್ಥಾಪಿಸಿರುವ ಹವಾಮಾನ ಕೇಂದ್ರಗಳಲ್ಲಿ ದಾಖಲಾಗುವ ಮಳೆ ಹಾಗೂ ಉಷ್ಣಾಂಶದ ಆಧಾರದಲ್ಲಿ ಪರಿಹಾರ ನಿಗದಿಪಡಿಸಲಾಗುತ್ತದೆ. ಈ ಯೋಜನೆಗೆ ಉತ್ತಮ ಸ್ಪಂದನೆ ಇದೆ' ಎಂದು ಜಿಲ್ಲಾ ತೋಟಗಾರಿಕಾ ಉಪನಿರ್ದೇಶಕ ಎಚ್.ಆರ್.ನಾಯ್ಕ್ 'ಪ್ರಜಾವಾಣಿ'ಗೆ ತಿಳಿಸಿದರು.

ಬೆಳೆ ವಿಮೆಗೆ ಮಧ್ಯವರ್ತಿಗಳ ಕನ್ನ

ಒಂದನೇ ಪುಟದಿಂದ

'ಬೆಳೆ ವಿಮೆ ಕಂತು ಪಾವತಿಸಿದವರಿಗೆ ಪರಿಹಾರ ಸಿಕ್ಕಿಲ್ಲ. ವಿಮೆ ಕಂಪನಿ ಅಧಿಕಾರಿಗಳು ಹಾಗೂ ಏಜೆಂಟರು ತಮಗೆ ಬೇಕಾದ ಬೆಳೆ ನಿರ್ಣಯಿಸಿ, ಬೇಕಾದ ರೈತರಿಗೆ ವಿಮೆ ಜಾರಿಗೊಳಿಸುವುದನ್ನು ದಾಖಲೆಗಳೇ ಹೇಳುತ್ತವೆ. 25, 50 ಎಕರೆ ಭೂಮಿ ಹೊಂದಿರುವ ರೈತರನ್ನು ಗುರುತಿಸಿ ಅವರ ಉತಾರದ ಮೇಲೆ ವಿಮೆ ಕಂತು ಪಾವತಿಸಿ, ತಮಗೆ ಬೇಕಾದ ಬ್ಯಾಂಕ್ ಖಾತೆಗೆ ಜೋಡಿಸಿ ಲಕ್ಷಾಂತರ ರೂಪಾಯಿ ಪಡೆದಿದ್ದಾರೆ. ಪಾಳು ಬಿದ್ದ ಭೂಮಿಗೆ ಬೆಳೆ ನಿಗದಿಪಡಿಸಿ, ಅದಕ್ಕೂ ವಿಮೆ ನೀಡಲಾಗಿದೆ' ಎಂದು ಡೋಣಿ ಗ್ರಾಮದ ರೈತರೊಬ್ಬರು ಹೇಳಿದ್ದಾರೆ.

'ಮುಂಡರಗಿ ತಾಲ್ಲೂಕು ವ್ಯಾಪ್ತಿಯಲ್ಲಿ ಈ ರೀತಿಯ ಅಕ್ರಮಗಳು ಸಾಕಷ್ಟು ನಡೆದಿವೆ. ಆದರೆ, ಒಂದೇ ಪ್ರಕರಣ ದಾಖಲಾಗಿದೆ. ಅಕ್ರಮ ಬಯಲಿಗೆ ಬರುತ್ತಿದ್ದಂತೆ ಬೆದರಿದ ಮಧ್ಯವರ್ತಿಗಳು ರೈತರ ಜೊತೆ ಸಂಧಾನ ಮಾಡಿಕೊಂಡಿದ್ದರಿಂದ ಅನೇಕ ಪ್ರಕರಣಗಳು ಠಾಣೆ ಮೆಟ್ಟಿಲು ಹತ್ತಲಿಲ್ಲ' ಎನ್ನುತ್ತಾರೆ. ಕೃಷಿಯಲ್ಲಿ ನಿರೀಕ್ಷಿತ ಲಾಭಕ್ಕಿಂತ ನಷ್ಟವೇ ಹೆಚ್ಚು. ಕಾಯಂ ಆಗಿ 'ನಷ್ಟರೇಖೆ'ಯಲ್ಲೇ ಉಳಿದುಕೊಂಡಿರುವ ರೈತರ ಹಣಕಾಸಿನ ಸ್ಥಿತಿಯನ್ನು ಸ್ವಲ್ಪ ಮಟ್ಟಿಗಾದರೂ ಮೇಲೆತ್ತುವ ಉದ್ದೇಶದಿಂದ ಅನುಷ್ಠಾನಕ್ಕೆ ತಂದ ಬೆಳೆ ವಿಮೆ ಯೋಜನೆಯಲ್ಲಿ ಅಕ್ರಮಗಳು ನಡೆಯುತ್ತಿರುವುದರಿಂದ ಯೋಜನೆಯ ಉದ್ದೇಶ ಸಾರ್ಥಕಗೊಳಿಸಲು ಸಾಧ್ಯವಾಗಿಲ್ಲ.

ನೊಂದ ರೈತರೇ ದೂರು ಕೊಡಲಿ...

ಈ ಹಿಂದೆ ರೈತರ ಹೆಸರಿನಲ್ಲಿ ಯಾರು ಬೇಕಾದರೂ ಬೆಳೆವಿಮೆ ಮಾಡಿಸಬಹುದಿತ್ತು. ಮಧ್ಯವರ್ತಿಗಳು, ವಿಮೆ ಕಟ್ಟದ ರೈತರ ಮಾಹಿತಿ ಪಡೆದು, ಅಂಥವರ ಹೆಸರಿನಲ್ಲಿ ಅವರೇ ವಿಮೆ ಪಾವತಿಸಿ, ಪರಿಹಾರ ಪಡೆಯುತ್ತಿದ್ದರು. 2016ರಿಂದ ಇಲ್ಲಿಯವರೆಗೆ ಗದಗ ಜಿಲ್ಲೆಗೆ ₹1,089 ಕೋಟಿ ಬಂದಿದ್ದು, ರೈತರ ಖಾತೆಗೆ ನೇರವಾಗಿ ಜಮಾ ಆಗಿದೆ. ಬೆಳೆ ವಿಮೆ ಪರಿಹಾರ ವಿತರಣೆಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನದಲ್ಲಿದೆ.

ಬೆಳೆ ವಿಮೆಯಲ್ಲಿ ಆಗಿರುವ ಅಕ್ರಮಗಳನ್ನು ತಡೆಗಟ್ಟಲು ಕೃಷಿ ಇಲಾಖೆ ಮುಂದಾಗಿದೆ. ಒಬ್ಬ ರೈತನ ಹೆಸರಿನಲ್ಲಿ ಮತ್ತೊಬ್ಬರು ವಿಮೆ ತುಂಬಲು ನಿಜವಾದ ಭೂ ಮಾಲೀಕನಿಂದ ಲಿಖಿತ ಒಪ್ಪಿಗೆ ಪತ್ರ ತರುವುದನ್ನು ಕಡ್ಡಾಯಗೊಳಿಸಲಾಗಿದೆ.

ಬೆಳೆ ವಿಮೆಯಲ್ಲಿ ಗೋಲ್‌ಮಾಲ್ ಆಗಿರುವುದು ಹೊಸಬಗೆಯ ಅಪರಾಧ. ಮೋಸಕ್ಕೆ ಒಳಗಾದ ರೈತ ದೂರು ಕೊಟ್ಟರೆ ಖದೀಮರ ಹೆಡೆಮುರಿ ಕಟ್ಟಬಹುದು. ರೈತರ ಆಕ್ರೋಶ ಭುಗಿಲೆದ್ದರೆ ಅಕ್ರಮ ಮಾಡಿದವರ ಹೆಸರು ಆಚೆಗೆ ಬರುತ್ತದೆ. ಹೀಗಾಗಿ 211 ಪ್ರಕರಣಗಳ ಬೆಳೆ ವಿಮೆಯನ್ನು ತಡೆಹಿಡಿಯಲಾಗಿದೆ.

ಜಿಯಾವುಲ್ಲಾ ಕೆ., ಗದಗ ಜಿಲ್ಲಾ ಕೃಷಿ ಇಲಾಖೆ ಜಂಟಿ ನಿರ್ದೇಶಕ

ಬೆಳೆ ವಿಮೆ ಕ್ಲೇಮ್ ಆಗದೇ ರೈತರು ಕಂಗಾಲು

ಸಾಲ ಮಾಡಿ ಕಂತು ಕಟ್ಟಿದರೂ ಸಿಗದ ವಿಮೆ

● ಜಿ.ಬಿ. ನಾಗರಾಜ

ಚಿತ್ರದುರ್ಗ: 'ಸಾಲ ಮಾಡಿ ಸತತ ಮೂರು ವರ್ಷ ಶೇಂಗಾ ಬೆಳೆಗೆ ವಿಮೆ ಕಂತು ಕಟ್ಟಿದೆ. ಆದರೆ, ಒಮ್ಮೆಯೂ ವಿಮೆ ಪರಿಹಾರ ಹಣ ಸಿಕ್ಕಿಲ್ಲ. ಕೃಷಿ ಹಾಗೂ ಕೂಲಿಯನ್ನೇ ನಂಬಿಕೊಂಡಿರುವ ನಮಗೆ ಒಂದೊಂದು ಪೈಸೆಯೂ ಮುಖ್ಯ. ಬೆಳೆ ನಷ್ಟಕ್ಕೆ ವಿಮೆ ಪರಿಹಾರ ದೊರೆಯದಿದ್ದರೆ ಕಂತು ಏಕೆ ಪಾವತಿಸಬೇಕು....'

– ಇದು ಬರಪೀಡಿತ ಚಳ್ಳಕೆರೆ ತಾಲ್ಲೂಕಿನ ಹಿರೇಹಳ್ಳಿಯ ರೈತ ಮಂಜುನಾಥ್ ಪ್ರಶ್ನೆ. 2019–20ರಿಂದ ಪ್ರತಿ ವರ್ಷದ ಮುಂಗಾರು ಹಂಗಾಮಿನ ಶೇಂಗಾ ಬೆಳೆಗೆ ಅವರು ಕಂತು ಪಾವತಿಸಿದ್ದಾರೆ. ಮಳೆಯಾಶ್ರಿತ ಎಂಟು ಎಕರೆಗೆ ಪ್ರತಿ ಬಾರಿ ₹ 4 ಸಾವಿರದಷ್ಟು ಹಣ ಕಟ್ಟಿದ್ದಾರೆ.

'ಬೆಳೆ ವಿಮೆ ಬಗ್ಗೆ ಕೃಷಿ ಮತ್ತು ಬ್ಯಾಂಕ್ ಅಧಿಕಾರಿಗಳು ಗಮನ ಸೆಳೆದರು. ಬೆಳೆ ಸಾಲಕ್ಕೆ ವಿಮೆ ಕಡ್ಡಾಯಗೊಳಿಸಿದ್ದರಿಂದ ಕಂತಿನ ಮೊತ್ತವನ್ನು ಪಾವತಿಸಿಕೊಂಡೇ ಸಾಲ ನೀಡಲಾಗುತ್ತಿತ್ತು. ಹೀಗೆ ಮೂರು ವರ್ಷ ಹಣ ಕಳೆದುಕೊಂಡಿದ್ದರಿಂದ ವಿಮೆಯ ಸಹವಾಸವೇ ಬೇಡವೆಂದು ತೀರ್ಮಾನಿಸಿದ್ದೇನೆ' ಎಂದು ಬೇಸರ ವ್ಯಕ್ತಪಡಿಸಿದರು.

2019 ಹಾಗೂ 2020ರಲ್ಲಿ ಮಳೆ ಕೊರತೆಯಿಂದ ಶೇಂಗಾ ಬೆಳೆಗೆ ಹಾನಿಯಾಯಿತು. 2021ರಲ್ಲಿ ಅಧಿಕ ಮಳೆಯಿಂದ ತೇವಾಂಶ ಹೆಚ್ಚಿದ ಪರಿಣಾಮ ಇಳುವರಿ ಕುಸಿಯಿತು. ಮಂಜುನಾಥ್ ಅವರಿಗೆ ಮೂರು ವರ್ಷವೂ ಬೆಳೆ ಕೈಗೆ ಸಿಕ್ಕಿಲ್ಲ. ಇದಕ್ಕೆ ಪರಿಹಾರವಾಗಿ ವಿಮೆ ಪರಿಹಾರವೂ ಬಂದಿಲ್ಲ. ಫಸಲ್ ಬಿಮಾ ಯೋಜನೆಯ ಬಗ್ಗೆ ಅವರು ಸಂಪೂರ್ಣ ನಂಬಿಕೆ ಕಳೆದುಕೊಂಡಿದ್ದಾರೆ.

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ನೇಸರಗಿಯ ರೈತ ಸೋಮಪ್ಪ ಮಾಳಣ್ಣವರ ಅನುಭವ ಇದಕ್ಕಿಂತ ಭಿನ್ನವಾಗಿಲ್ಲ. 'ಇತ್ತೀಚಿನ ವರ್ಷಗಳಲ್ಲಿ ಉತ್ತಮ ಫಸಲು ಕೈಗೆ ಬರುತ್ತಿರಲಿಲ್ಲ. ಏನೋ ನೆರವಾಗಬಹುದೆಂದು ಮುಂಗಾರು ಹಾಗೂ ಹಿಂಗಾರು ಹಂಗಾಮಿನಲ್ಲಿ ವಿಮೆ ಹಣ ಕಟ್ಟಿದ್ದೆ. ಆದರೆ, ವಿಮೆ ಕ್ಲೇಮ್ ಮೊತ್ತ ಬಾರದ್ದರಿಂದ ಇನ್ನಷ್ಟು ತೊಂದರೆಗೆ ಸಿಲುಕಿದ್ದೇನೆ' ಎಂದು 'ಪ್ರಜಾವಾಣಿ' ಎದುರು ಅಳಲು ತೋಡಿಕೊಂಡರು.

'2016–17ರಲ್ಲಿ ತುಂಬಿದ್ದ ವಿಮೆ ಹಣ ಬರಲಿಲ್ಲ. ಹೀಗಾಗಿ, ನಂತರದ ಮೂರು ವರ್ಷ ವಿಮೆ ಕಂತು ಕಟ್ಟಿರಲಿಲ್ಲ. ಕಳೆದ ಬಾರಿ ಕೃಷಿ ಇಲಾಖೆ ಅಧಿಕಾರಿಗಳ ಒತ್ತಾಯದ ಮೇರೆಗೆ ಮುಂಗಾರು ಹಂಗಾಮಿನಲ್ಲಿ ಸೋಯಾಬಿನ್‌ಗೆ ₹ 1,200 ವಿಮೆ, ಹಿಂಗಾರಿನಲ್ಲಿ ಕಡಲೆಗೆ ₹ 600 ಮತ್ತು ಜೋಳಕ್ಕೆ ₹ 200 ಕಟ್ಟಿದ್ದೇನೆ. ವಿಮೆ ಮೊತ್ತ ಬಾರದ್ದರಿಂದ ಇನ್ನಷ್ಟು ಇಕ್ಕಟ್ಟಿಗೆ ಸಿಲುಕಿದ್ದೇನೆ' ಎಂದರು.

ನಾಲ್ಕೈದು ವರ್ಷಗಳಿಂದ ನಿಂಬೆ ಬೆಳೆಗೆ ವಿಮೆ ತುಂಬುತ್ತಾ ಬಂದಿದ್ದೇವೆ. ಆಲಿಕಲ್ಲು ಮಳೆ ಬಿದ್ದು ಗಿಡಗಳು ಹಾಳಾಗಿವೆ. ಬಿರುಗಾಳಿಗೆ ಸಾಕಷ್ಟು ಗಿಡಗಳು ಬಿದ್ದಿವೆ. ಒಂದೇ ಒಂದು ಪೈಸೆ ವಿಮೆ ಹಣ ಬಂದಿಲ್ಲ.

ಶಂಕರಗೌಡ ಅಗ್ನಿ, ರೈತ ಬೂದಿಹಾಳ ಗ್ರಾಮ, ಬಸವನಬಾಗೇವಾಡಿ

ಅಂಕ ಪಟ್ಟಿ ಬಿಡುಗಡೆ: ಅಭ್ಯರ್ಥಿಗಳಿಗೆ ಸಿಸಿಬಿ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಪದವಿ ಕಾಲೇಜುಗಳಲ್ಲಿ ಖಾಲಿ ಇರುವ 1,242 ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪರೀಕ್ಷೆ ನಡೆಸಿದ್ದ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಅಂಕಗಳ ಪಟ್ಟಿ ಬಿಡುಗಡೆ ಮಾಡಿದ್ದು, ಇದರ ಬೆನ್ನಲ್ಲೇ ಪ್ರಶ್ನೆಗಳ ಸೋರಿಕೆ ಪ್ರಕರಣದಲ್ಲಿ ಕೆಲವು ಅಭ್ಯರ್ಥಿಗಳಿಗೆ ಸಿಸಿಬಿ ಪೊಲೀಸರು ನೋಟಿಸ್ ನೀಡಿದ್ದಾರೆ.

ರಾಜ್ಯದಾದ್ಯಂತ ಪರೀಕ್ಷೆ ಬರೆದಿದ್ದ ಅಭ್ಯರ್ಥಿಗಳ ಒಎಂಆರ್ ಪ್ರತಿಗಳ ಮೌಲ್ಯಮಾಪನ ಮುಕ್ತಾಯಗೊಳಿಸಿರುವ ಕೆಇಎ, ಸ್ಪರ್ಧಾತ್ಮಕ ಪರೀಕ್ಷೆಯ ವಿಷಯವಾರು ಅಂಕಪಟ್ಟಿಯನ್ನು ಜಾಲತಾಣದಲ್ಲಿ ಪ್ರಕಟಿಸಿದೆ.

ಭೂಗೋಳ ವಿಜ್ಞಾನ ವಿಷಯದ ಪ್ರಶ್ನೆಗಳ ಸೋರಿಕೆ ಪ್ರಕರಣದ ತನಿಖೆ ನಡೆಸುತ್ತಿರುವ ಸಿಸಿಬಿ ಪೊಲೀಸರು, ಅನುಮಾನಾಸ್ಪದ ಅಭ್ಯರ್ಥಿಗಳ ಬಗ್ಗೆಯೂ ಮಾಹಿತಿ ಕಲೆಹಾಕುತ್ತಿದ್ದಾರೆ.

ಒಎಂಆರ್ ಪ್ರತಿ ನೀಡದಿದ್ದಕ್ಕೆ ಮತ್ತೊಮ್ಮೆ ಪತ್ರ: 'ಮಾರ್ಚ್ 14ರಂದು ನಡೆದಿದ್ದ ಭೂಗೋಳ ವಿಜ್ಞಾನ ವಿಷಯ ಪರೀಕ್ಷೆಯ 18 ಪ್ರಶ್ನೆಗಳು, ಪರೀಕ್ಷೆಗೂ ಮುನ್ನವೇ ಸೋರಿಕೆ ಆಗಿದ್ದವು. ಈ ಬಗ್ಗೆ ಮಲ್ಲೇಶ್ವರ ಠಾಣೆಗೆ ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ ದೂರು ನೀಡಿದ್ದರು.

'ಪ್ರಶ್ನೆಗಳನ್ನು ಸೋರಿಕೆ ಮಾಡಿದ್ದ ಆರೋಪದಡಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ ಕುಲಸಚಿವರಾಗಿದ್ದ (ಮೌಲ್ಯಮಾಪನ) ಪ್ರೊ. ಎಚ್. ನಾಗರಾಜ್ ಹಾಗೂ ಅವರ ಪಿಎಚ್‌ಡಿ ವಿದ್ಯಾರ್ಥಿ ಆರ್. ಸೌಮ್ಯಾ ಅವರನ್ನು ಈಗಾಗಲೇ ಬಂಧಿಸಲಾಗಿದೆ. ಅಕ್ರಮ ಎಸಗಿದ್ದ ಅನುಮಾನದಡಿ ಇಬ್ಬರು ಅಭ್ಯರ್ಥಿಗಳ ಒಎಂಆರ್ ಪ್ರತಿ ನೀಡುವಂತೆ ಕೆಇಎಗೆ ಪತ್ರ ಬರೆಯಲಾಗಿತ್ತು. ಮೌಲ್ಯಮಾಪನ ನೆಪ ಹೇಳಿದ್ದ ಕೆಇಎ, ಇದುವರೆಗೂ ಒಎಂಆರ್ ನೀಡಿಲ್ಲ' ಎಂದು ಸಿಸಿಬಿ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಲಭ್ಯವಿರುವ ಮಾಹಿತಿ ಆಧರಿಸಿ 10ಕ್ಕೂ ಹೆಚ್ಚು ಅಭ್ಯರ್ಥಿಗಳ ಪಟ್ಟಿ ಸಿದ್ಧಪಡಿಸಲಾಗಿದೆ. ಅವರೆಲ್ಲರಿಗೂ ನೋಟಿಸ್ ನೀಡಲಾಗಿದ್ದು, ವಿಚಾರಣೆಗೆ ಹಾಜರಾಗುವಂತೆ ಸೂಚಿಸಲಾಗಿದೆ. ಸಿಸಿಬಿಯ ಎಸಿಬಿ ನೇತೃತ್ವದ ತಂಡ, ಅಭ್ಯರ್ಥಿಗಳ ವಿಚಾರಣೆ ನಡೆಸಲಿದೆ. ಅವರ ಹೇಳಿಕೆ ಪರಿಶೀಲಿಸಿದ ಬಳಿಕವೇ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದೂ ಹೇಳಿದರು.

'ಅಂಕಪಟ್ಟಿ ಬಿಡುಗಡೆಯಾಗಿರುವುದರಿಂದ, ಅಭ್ಯರ್ಥಿಗಳ ಒಎಂಆರ್ ಪ್ರತಿ ನೀಡುವಂತೆ ಕೆಇಎಗೆ ಮತ್ತೊಮ್ಮೆ ಪತ್ರ ಬರೆಯಲಾಗುವುದು. ಅದಕ್ಕೆ ಪ್ರತಿಕ್ರಿಯೆ ನೀಡದಿದ್ದರೆ, ಕಾನೂನು ಪ್ರಕಾರ ಅಧಿಕಾರಿಗಳಿಗೆ ನೋಟಿಸ್ ನೀಡಲಾಗುವುದು' ಎಂದೂ ತಿಳಿಸಿದರು.

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 10-7-1997

● **ಲಾಲೂ ರಾಜೀನಾಮೆಗೆ ಗುಜ್ರಾಲ್ ಆಗ್ರಹ**

ಬದೌನ್ (ಉತ್ತರ ಪ್ರದೇಶ), ಜುಲೈ 9 (ಪಿಟಿಐ)– ಮೇವು ಹಗರಣದಲ್ಲಿ ಸಿಬಿಐ ಆರೋಪ ಪಟ್ಟಿ ಸಲ್ಲಿಸಿರುವುದರಿಂದ ತಮ್ಮ ಸ್ಥಾನದಿಂದ ಕೆಳಗಿಳಿಯಬೇಕೆಂದು ಬಿಹಾರದ ಮುಖ್ಯಮಂತ್ರಿ ಲಾಲೂ ಪ್ರಸಾದ್ ಯಾದವ್ ಅವರಿಗೆ ಪ್ರಧಾನಿ ಐ.ಕೆ. ಗುಜ್ರಾಲ್ ಇಂದು ಕರೆ ನೀಡಿದರು.

ಎಡ ಪಕ್ಷಗಳ ಜತೆ ಈ ವಿಷಯದಲ್ಲಿ ಯಾವುದೇ ಭಿನ್ನಾಭಿಪ್ರಾಯವನ್ನು ತಾವು ಹೊಂದಿಲ್ಲ ಎಂದು ಅವರು ಹೇಳಿದರು.

50 ವರ್ಷಗಳ ಹಿಂದೆ

ಸೋಮವಾರ, 10-7-1972

● **ಬೆಳಗಾವಿಯಲ್ಲಿ ಇಳಿಯುತ್ತಿದ್ದ ವಿಮಾನಕ್ಕೆ ಜಖಂ**

ಬೆಳಗಾವಿ, ಜುಲೈ 9– ಮುಂಬೈನಿಂದ ಬೆಳಗಾವಿಗೆ ನಿಯಮಿತ ವೇಳಾಪಟ್ಟಿಗೆ ಅನುಗುಣವಾಗಿ ಇಂದು ಬೆಳಿಗ್ಗೆ ಬಂದ ಇಂಡಿಯನ್ ಏರ್‌ಲೈನ್ಸ್‌ಗೆ ಸೇರಿದ ವಿಮಾನವು ನಿಲ್ದಾಣದಲ್ಲಿ ಇಳಿಯುತ್ತಿದ್ದಾಗ ಜಖಂಗೊಂಡು ನಿಂತಿತು. ಪ್ರಯಾಣಿಕರು ಮತ್ತು ಸಿಬ್ಬಂದಿವರ್ಗ ಯಾವ ಅಪಾಯವೂ ಇಲ್ಲದೇ ಪಾರಾದರು.

● **ಕರಾಚಿಯಲ್ಲಿ ಭಾಷಾ ಘರ್ಷಣೆ: ಕರ್ಫ್ಯೂ, ಸೇನೆಗೆ ಹತೋಟಿ ಹೊಣೆ**

ಕರಾಚಿ, ಜುಲೈ 9– ಸಿಂಧ್ ಪ್ರಾಂತ್ಯದಲ್ಲಿ ಸಿಂಧಿ ಭಾಷೆಗೆ ಅಧಿಕೃತ ಮನ್ನಣೆ ನೀಡಿರುವುದನ್ನು ಪ್ರತಿಭಟಿಸಿ ಪಾಕಿಸ್ತಾನದಲ್ಲಿ ಆರಂಭವಾಗಿರುವ ಗಲಭೆ ಇಂದು 3ನೇ ದಿನಕ್ಕೆ ತಲುಪಿತು. ಸೇನೆಗೆ ಗಲಭೆಯ ಹತೋಟಿ ಹೊಣೆಯನ್ನು ಒಪ್ಪಿಸಲಾಗಿದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಭಾನುವಾರ ಜುಲೈ 10, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಆಷಾಢ ಶುಕ್ಲ ಏಕಾದಶಿ ಗಂ. 14-14 ನಕ್ಷತ್ರ: ವಿಶಾಖಾ ಗಂ. 09-55 ಯೋಗ: ಶುಭ ಗಂ. 24-44, ಕರಣ: ವಿಷ್ಟಿ ಗಂ. 14-14, ಮಿಥುನ ಮಾಸದ 25 ನೇ ದಿನ.
ರಾಹುಕಾಲ: ಸಾಯಂಕಾಲ 04:30–06:00 ಸೂರ್ಯೋದಯ : 06-13 ಸೂರ್ಯಾಸ್ತ : 06-58 ಮುಸ್ಲಿಂ ದಿನಾಂಕ : 10 ಜುಲ್‌ಹಿಜಾ ದಿನ ವಿಶೇಷ : ಪ್ರಥಮ ಏಕಾದಶಿ, ಹರಿಸಾಯನಿ ಏಕಾದಶಿ, ಈದ್-ಉಝ್-ಜುಹಾ (ಬಕ್ರೀದ್)
ಅದೃಷ್ಟ ಸಂಖ್ಯೆ : 5, 7

ಮೇಷ: ತಾತ್ಕಾಲಿಕವಾಗಿ ಕೆಲವು ಕೆಲಸದಲ್ಲಿ ಅಡಚಣೆ ಉಂಟಾಗಿ ನಿಮ್ಮ ಮನಸ್ಸಿಗೆ ನೋವಾಗಬಹುದು. ಇಂಟೀರಿಯರ್ ಡೆಕೋರೇಷನ್, ಅನಿಮೇಷನ್, ಡಿಸೈನ್‌ಗೆ ಸಂಬಂಧಪಟ್ಟಂತಹ ವ್ಯವಹಾರ, ಓದಿನಲ್ಲಿದ್ದರೆ ಪ್ರಗತಿ.

ವೃಷಭ: ಅತಿಯಾದ ಆಲಸ್ಯ, ಅಹಂಕಾರ, ಸಂದರ್ಭಕ್ಕೆ ಉಚಿತವಲ್ಲದ ಮಾತುಗಾರಿಕೆಯಿಂದ ನಿಮ್ಮ ಗೌರವ ಕಡಿಮೆಯಾಗಲಿದೆ. ವೃತ್ತಿಯಲ್ಲಿ ಉನ್ನತ ಸ್ಥಾನಕ್ಕೆ ಏರಲು ಬೇಕಾದ ತಯಾರಿಯನ್ನು ಮಾಡಿಕೊಳ್ಳಿ. ಕಿರು ಸಂಚಾರದ ಯೋಗ.

ಮಿಥುನ: ಮಕ್ಕಳ ಮಾನಸಿಕ ಬೆಳವಣಿಗೆ ಮತ್ತು ವಿದ್ಯಾಭ್ಯಾಸದ ಕಡೆಗೆ ಗಮನ ಹರಿಸಿ, ಏಕಾಗ್ರತೆಯನ್ನು ಕಾಯ್ದುಕೊಳ್ಳುವ ಮಾರ್ಗ ಕಂಡುಕೊಳ್ಳಿರಿ. ಮಕ್ಕಳ ವಿದ್ಯಾವರ್ಧನೆಗೆ ಶ್ರೀ ಶಾರದಾಂಬೆಯನ್ನು ಪೂಜಿಸಿ, ಅಭಿವೃದ್ಧಿಯಾಗುವುದು.

ಕರ್ಕಾಟಕ: ಪರಿಶೀಲನೆಯಿಲ್ಲದೆ ಯಾವ ಕೆಲಸದಲ್ಲೂ ಹೂಡಿಕೆ ಬೇಡ. ಧನಾಗಮನದಲ್ಲಿ ಹೆಚ್ಚಳ, ಬಹುಪಾಲು ವೆಚ್ಚ. ಕೌಟುಂಬಿಕ ವಾದ ವಿವಾದಗಳು ನಡೆಯದಂತೆ, ಎಲ್ಲರಲ್ಲೂ ಹೊಂದಾಣಿಕೆ ಇರುವಂತೆ ನೋಡಿಕೊಳ್ಳಿ.

ಸಿಂಹ: ಸಾಂಸಾರಿಕ ವಿಷಯದಲ್ಲಿ ಹಿರಿಯರ ಮಾತು ಮೀರದಿರಿ. ರಕ್ತ ಸಂಬಂಧೀ ಖಾಯಿಲೆಯವರು ರಕ್ತ ಪರೀಕ್ಷೆ ಮಾಡಿಸುವುದು ಒಳ್ಳೆಯದು. ಹಣ್ಣು-ಹೂವಿನ ಮಾರಾಟಮಾಡುವವರಿಗೆ ಅಧಿಕ ಲಾಭಾಂಶದ ನಿರೀಕ್ಷೆ ಸರಿಯಲ್ಲ.

ಕನ್ಯಾ: ಸ್ನೇಹಿತರ ವ್ಯವಹಾರದಲ್ಲಿ ಸಂಶಯ, ಅಪನಂಬಿಕೆಯು ಬಾರದಂತೆ ಕಾರ್ಯವೈಖರಿ ಇದ್ದು, ಕಾಪಾಡಿಕೊಳ್ಳುವುದರಿಂದ ಸಂಬಂಧ ಗಟ್ಟಿಯಾಗಿರುತ್ತದೆ. ಸುಬ್ರಹ್ಮಣ್ಯನನ್ನು ಆರಾಧಿಸುವುದರಿಂದ ಆರೋಗ್ಯಭಾಗ್ಯ.

ತುಲಾ: ದಾನ-ಧರ್ಮ ಪ್ರವೃತ್ತಿಯಿಂದ ಕೆಲವು ಶುಭ ಫಲಗಳು ನಿಮ್ಮ ಅನುಭವಕ್ಕೆ ಬರಲಿವೆ. ನಿಮ್ಮ ಉದ್ಯೋಗದಲ್ಲಿ ಬದಲಾವಣೆಯು ಉತ್ಸಾಹವನ್ನು ಹೆಚ್ಚಿಸುವುದು. ಮಾತೃವರ್ಗದವರ ನೆರವಿನಿಂದ ಆರ್ಥಿಕ ಚೇತರಿಕೆ.

ವೃಶ್ಚಿಕ: ಲೇವಾದೇವಿ ವ್ಯವಹಾರಗಳು ಸಾಧಾರಣ ಮಟ್ಟದಲ್ಲಿ ನಡೆಯುವುದು. ಪೊಲೀಸ್ ಹುದ್ದೆಯಲ್ಲಿರುವವರಿಗೆ ಮುಂಬಡ್ತಿಯ ಸಾಧ್ಯತೆ ಇದೆ. ಕಬ್ಬಿಣ, ತಾಮ್ರದ ಮಾರಾಟಗಾರರಿಗೆ ಉದ್ಯೋಗದಲ್ಲಿ ಬಿಡುವಿಲ್ಲದಂತಾಗುತ್ತದೆ.

ಧನು: ಮಾನಸಿಕ ಸಮಾಧಾನ ದೊರೆತು ಹಂತ ಹಂತವಾಗಿ ಅನುಕೂಲ ವಾತಾವರಣದ ಅನುಭವವಾಗಲಿದೆ. ಸಂತಾನಾಪೇಕ್ಷಿಗಳು ಫಲವನ್ನು ಪಡೆಯುವಿರಿ. ಶಿವನ ಆರಾಧನೆಯಿಂದ ಅಭೀಷ್ಟ ಪ್ರಾಪ್ತಿ.

ಮಕರ: ರಾಜಕೀಯ ವ್ಯಕ್ತಿಗಳ ಜೊತೆಗಿನ ವ್ಯವಹಾರದಲ್ಲಿ ಅತ್ಯಂತ ಲಾಭ.ಷ ಸತ್ಯ ಮಾರ್ಗದಿಂದ ಕಾರ್ಯ ಪ್ರವೃತ್ತರಾದಲ್ಲಿ ಹೆಚ್ಚಿನ ಅಭಿವೃದ್ಧಿಯು ಅನುಭವಕ್ಕೆ ಬರಲಿದೆ. ಸಾಹಿತ್ಯ ಸಂಗೀತ ವಿಷಯಗಳತ್ತ ಮನಸ್ಸು ತಿರುಗುವುದು.

ಕುಂಭ: ಕೊಟ್ಟ ಮಾತನ್ನು ಉಳಿಸಿ ಕೊಳ್ಳುವ ಮಾರ್ಗದಲ್ಲಿ ನಿಮ್ಮ ಹೆಜ್ಜೆ ಇರಲಿ. ಪಾಲುದಾರಿಕೆಯ ವ್ಯವಹಾರದಲ್ಲಿ ಹೆಚ್ಚಿನ ಜವಾಬ್ದಾರಿ. ಪಾಲುಗಾರರಲ್ಲಿ ಮುಖಾಮುಖಿ ವಿಚಾರಗಳನ್ನು ವಿನಿಮಯ ಮಾಡಿಕೊಳ್ಳುವುದು ಒಳ್ಳೆಯದು.

ಮೀನ: ಸಂಗೀತಗಾರರಿಗೆ, ಭಾಷಣಕಾರರಿಗೆ ಮೌಲ್ಯಯುತವಾದ ವೇದಿಕೆ ದೊರಕುವುದು. ಹಣದ ವಿಷಯದಲ್ಲಿ ಚಿಂತೆಯ ಅಗತ್ಯವಿಲ್ಲ. ನಿಯಮಬದ್ಧವಾಗಿ ಹಾಗು ಸಂಜೆಯ ಒಳಗಾಗಿ ಕೆಲಸ ಕಾರ್ಯಗಳನ್ನು ಪೂರ್ತಿಗೊಳಿಸಿ.

ಪದಬಂಧ 5014

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಸರಸ ಸಲ್ಲಾಪವನ್ನು ಹೀಗೂ ಹೇಳುತ್ತಾರೆ (4)
3.ದ್ರವ ರೂಪದ ಲೋಹ (4)
5.ಚಿಕ್ಕ ಕೊಂಬೆ (3)
6.ಒನಪು ತೋರಿದಾಗ ಬಂದಿರುವ ಸ್ಮರಣೆ (3)
8.ಸನ್ಯಾಸ ಪಡೆದವನ ರಚನೆ ಇದು! (3)
9.ನರಿಯೊಳಗೆ ಜೇನುತುಪ್ಪ ಇದೆಯಲ್ಲಾ! (3)
10.ಹೂವುಗಳಿಂದ ಭಟ್ಟಿಯಿಳಿಸಿ ತೆಗೆದ ಸುಗಂಧದ್ರವ್ಯ (3)
11.ಲಕ್ಷ ಹಣನೀಡಿದರೂ ತೋರಿಸಿದ ಅನಾದರ! (3)
12.ದಾಯಾದಿಯನ್ನು ಬೀಳ್ಕೊಡುವುದು! (3)
13.ಅಲುಗಾಟ ಅಥವಾ ಸಂಚಾರ (3)
14.ಮುಸಲ್ಮಾನರ ಪ್ರಾರ್ಥನಾ ಮಂದಿರ (3)
16.ಶಕೆ ಕಾಲದಲ್ಲಿ ಮುತ್ತುವ ಸೊಳ್ಳೆ (3)
18.ಕನ್ನಡಿಗನಿಗೆ ದೊರೆತ ಟ್ರೇನಿಂಗ್! (4)
19.ದೂಷಣೆ ಮಾಡುತ್ತಿರುವ ಹಾಸ್ಯಗಾರ! (4)

ಮೇಲಿಂದ ಕೆಳಕ್ಕೆ

1.ಈಕೆ ಹೆಂಗಸು (3)
2.ತುಂಟಿಯ ಅಧರ! (2)
3.ಟಪಾಲು ತಂದವನ ಹಿಸ್ಸೆ! (2)
4.ತಿಂಗಳ ಕೊನೆಯಲ್ಲಿ ಒಂದಾಗಿ ಸೇರಿಸಿದುದು! (3)
7.ಮತ್ತೆ ಅಭಿವೃದ್ಧಿಗೆ ಬರುವಿಕೆ (5)
8.ಬ್ರಹ್ಮನ ಕಟ್ಟಳೆಯಿದು (5)
13.ಅಗಿದು ನುರಿಸಿದುದು (3)
15.ಅಂಕಣದಲ್ಲಿ ಕಾಣಿಸಿದ ತೇದಿ (3)
16.ಕುಶಾಗ್ರಮತಿಯ ಬುದ್ಧಿ (2)
17.ಕವನವನ್ನು ಬರೆದವನು (2)



5013ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
11.ಮಲಯಜ 3.ಜಾತವೇದ 5.ತೆವಳು 7.ಮಿತ್ರ 9.ಮನವರಿಕೆ 11.ಸ್ಥಳಪುರಾಣ 13.ಸರಿ 16.ಗಾಯಕ 18.ಸನ್ನಿಧಾನ 19.ಸರಿತ್ವತಿ

ಮೇಲಿಂದ ಕೆಳಕ್ಕೆ:
1.ಮರುಭೂಮಿ 2.ಜತೆ 3.ಜಾಳು 4.ದಕ್ಷಿಣೆ 6.ಬೆಳ್ಳುಳ್ಳಿ 8.ತ್ರಯಸ್ಥ 10.ಕೆಲಸ 12.ರಾಧೇಯ 14.ರಿಯಾಯಿತಿ 15.ಪ್ರಯಾಸ 16.ಗಾನ 17.ಕಸ

ಸುಡೊಕು 5400

			2		9			
		1		8			7	
	7		1		4			
		4				1		
2	8		6	9	1			
		7					6	5
	5			1			2	7
	1	6	8		2	5		
4	2			5				

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5399 ಸುಡೊಕು

3	5	1	7	4	2	9	8	6
6	9	2	1	5	8	3	7	4
4	7	8	3	6	9	2	1	5
1	6	4	8	9	5	7	2	3
9	2	5	4	3	7	8	6	1
8	3	7	6	2	1	4	5	9
2	1	3	9	7	6	5	4	8
5	4	6	2	8	3	1	9	7
7	8	9	5	1	4	6	3	2

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.



ಭಟ್ಕಳ ತಾಲ್ಲೂಕಿನ ಕೊಪ್ಪ ಗ್ರಾಮ ಪಂಚಾಯ್ತಿ ಹೆಗ್ಗದ್ದೆಯಲ್ಲಿ ಮಣ್ಣು ಕುಸಿದು ರಸ್ತೆಗೆ ಬಿದ್ದು ಸಂಚಾರ ಕಡಿತಗೊಂಡಿದೆ

ಕೆಆರ್‌ಎಸ್ ಜಲಾಶಯದಿಂದ ನದಿಗೆ ನೀರು ಬಿಡುಗಡೆ ಮಾಡಲಾಗಿದೆ

ಸೋಮವಾರಪೇಟೆ ತಾಲ್ಲೂಕಿನ ಶಾಂತಳ್ಳಿ, ಮಲ್ಲಳ್ಳಿ, ಪುಷ್ಪಗಿರಿ ಮಾರ್ಗ ಮಧ್ಯೆ ರಸ್ತೆ ಮೇಲೆ ಬರೆ ಕುಸಿದ ಪರಿಣಾಮ ರಸ್ತೆ ಸಂಚಾರಕ್ಕೆ ಆಡಚಣೆಯಾಗಿತ್ತು. ತಹಶೀಲ್ದಾರ್ ಗೋವಿಂದರಾಜು ಭೇಟಿ ನೀಡಿ ಪರಿಶೀಲಿಸಿದರು

ರಾಜ್ಯದ ವಿವಿಧೆಡೆ ಮನೆಗಳಿಗೆ ಹಾನಿ ● ಮರುಕಳಿಸಿದ ಜೋಗದ ವೈಭವ

ಜಲಾಶಯಗಳಿಗೆ ಜೀವಕಳೆ

ಪ್ರಜಾವಾಣಿ ವಾರ್ತೆ

ಕಾರ್ಗಲ್ (ಶಿವಮೊಗ್ಗ): ಮುಂಗಾರು ಮಳೆಯ ಅಬ್ಬರಕ್ಕೆ ಮೈದುಂಬಿರುವ ಜೋಗ ಜಲಪಾತದ ವೈಭವವನ್ನು ಸವಿಯಲು ವಾರಾಂತ್ಯದಲ್ಲಿ ಪ್ರವಾಸಿಗರ ದಂಡು ಜೋಗಕ್ಕೆ ಲಗ್ಗೆಯಿಡುತ್ತಿದೆ.

ರಾಜ್ಯದ ವಿವಿಧೆಡೆಯಿಂದ ಬಂದಿದ್ದ ಪ್ರವಾಸಿಗರು ಶನಿವಾರ ಸುರಿಯುತ್ತಿದ್ದ ಮಳೆಯನ್ನೂ ಲೆಕ್ಕಿಸದೆ ಜಲಪಾತದ ಮುಂಭಾಗದ ಮೈಸೂರು ಬಂಗಲೆಯಲ್ಲಿ ಛಾಯಾಚಿತ್ರ ಕ್ಲಿಕ್ಕಿಸುತ್ತಿದ್ದರು.

ಜೋಗ ಜಲಪಾತವನ್ನು ವಿಶ್ವದರ್ಜೆಯ ಪ್ರವಾಸಿ ತಾಣವಾಗಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ₹185 ಕೋಟಿಯ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದೆ. 'ಕಾಮಗಾರಿ ನಡೆಯುತ್ತಿರುವುದರಿಂದ ಭಾರಿ ವಾಹನಗಳು ಮತ್ತು ಯಂತ್ರಗಳ ಮಧ್ಯೆಯೇ ಸಂಚರಿಸಬೇಕಾಗಿದ್ದು, ಪ್ರವಾಸಿಗರಿಗೆ ಕಿರಿಕಿರಿಯಾಗಿದೆ. ಶನಿವಾರ ಮತ್ತು ಭಾನುವಾರ ಕಾಮಗಾರಿಗಳನ್ನು ಸ್ಥಗಿತಗೊಳಿಸಬೇಕು' ಎಂದು ಹುಬ್ಬಳ್ಳಿಯ ಪ್ರವಾಸಿಗ ಮೈಲಾರಪ್ಪ ಒತ್ತಾಯಿಸಿದರು

ಮಳೆ ಕೊಂಚ ಇಳಿಮುಖ: ಶಿವಮೊಗ್ಗ ಜಿಲ್ಲೆಯಲ್ಲಿ 24 ಗಂಟೆಗಳಲ್ಲಿ ಮಳೆಯ ಪ್ರಮಾಣ ಕೊಂಚ ಇಳಿಮುಖವಾಗಿದೆ. ಸಾಗರ ತಾಲ್ಲೂಕಿನ ಭಾರಂಗಿ ಹೋಬಳಿಯ ಉರುಳುಗಲ್ಲು ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಮಳೆ ನೀರಿನ ರಭಸಕ್ಕೆ ಕೊಚ್ಚಿ ಹೋಗಿದೆ.

ಜಲಾಶಯಗಳಿಗೆ ಜೀವಕಳೆ: ಕೆಆರ್‌ಎಸ್ ಜಲಾಶಯ ಹಾಗೂ ತುಂಗಭದ್ರಾ ಜಲಾಶಯ ತುಂಬುವ ಹಂತಕ್ಕೆ ಬಂದಿವೆ. ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲ್ಲೂಕಿನ ಹಿಡಕಲ್‌ನ ರಾಜಾ ಲಖಮಗೌಡ ಜಲಾಶಯದಲ್ಲಿ ಶನಿವಾರ ಒಂದೇ ದಿನ ಆರು ಅಡಿ ನೀರು ಹೆಚ್ಚಳವಾಗಿದೆ.

ಕೆಆರ್‌ಎಸ್‌ನಿಂದ 10 ಸಾವಿರ ಕ್ಯುಸೆಕ್ ನೀರು ಬಿಡುಗಡೆ (ಮಂಡ್ಯ): ಕೆಆರ್‌ಎಸ್ ಜಲಾಶಯ ಗರಿಷ್ಠಮಟ್ಟ ತಲುಪುತ್ತಿದ್ದು ಜಲಾಶಯದ ಸುರಕ್ಷತೆ ದೃಷ್ಟಿಯಿಂದ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಶನಿವಾರ 10 ಸಾವಿರ ಕ್ಯುಸೆಕ್ ನೀರು ಬಿಡುಗಡೆ ಮಾಡಿದ್ದಾರೆ. ಜಲಾಶಯ ಭರ್ತಿಗೆ 2.75 ಅಡಿ ಬಾಕಿ ಉಳಿದಿದೆ. ಹೇಮಾವತಿ ಜಲಾಶಯದಿಂದಲೂ ನೀರು ಬರುತ್ತಿರುವ ಕಾರಣ ನೀರು ಬಿಡುಗಡೆ ಮಾಡಲಾಗಿದೆ. ನದಿ ತೀರದಲ್ಲಿ ವಾಸಿಸುವ ಜನರ ಸುರಕ್ಷತೆ ದೃಷ್ಟಿಯಿಂದ ನಿಗಮದ ಅಧಿಕಾರಿಗಳು ಜನರಿಗೆ ಎಚ್ಚರಿಕೆ ನೀಡಿದ್ದಾರೆ.

ಶನಿವಾರ ರಾತ್ರಿ, ಭಾನುವಾರ ಮತ್ತಷ್ಟು ನೀರು ಹರಿಸುವ ಸಾಧ್ಯತೆ ಇದ್ದು ಎಚ್ಚರಿಕೆ ವಹಿಸುವಂತೆ ಸೂಚಿಸಲಾಗಿದೆ.

ಕರಾವಳಿಯಲ್ಲಿ ಮಳೆ ಮುಂದುವರಿಕೆ (ಮಂಗಳೂರು): ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಮಲೆನಾಡು ಭಾಗದಲ್ಲಿ ಮಳೆ ಮುಂದುವರಿದಿದೆ.

ಅರಬ್ಬಿಸಮುದ್ರದಲ್ಲಿ ಜುಲೈ 10 ರವರೆಗೂ 3.5 ಮೀ.ನಿಂದ 4 ಮೀ. ಎತ್ತರದ ಅಲೆಗಳು ಕಾಣಿಸಿಕೊಳ್ಳಲಿವೆ. ಪ್ರತಿ ಸೆಕೆಂಡ್‌ಗೆ 50ಸೆಂ.ಮೀ.ನಿಂದ 70 ಸೆಂ.ಮೀ ವೇಗದಲ್ಲಿ ಅಲೆಗಳು ಅಪ್ಪಳಿಸಲಿವೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಉಡುಪಿ ಜಿಲ್ಲೆಯ ಕಾಪು ತಾಲ್ಲೂಕು ಪಡುಬಿದ್ರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನಡಿಪಟ್ನದಲ್ಲಿ ಕಡಲ್ಕೊರೆತ ಉಂಟಾಗಿದೆ. ಪಾದೆಬೆಟ್ಟುವಿನಲ್ಲಿ ನೆರೆ ಬಂದಿದ್ದು ಹಲವು ಮನೆಗಳಿಗೆ ನೀರು ನುಗ್ಗಿದೆ.

ಚಿಕ್ಕಮಗಳೂರು ಜಿಲ್ಲೆಯ ಗಿರಿ ಶ್ರೇಣಿಯ ಕವಿಕಲ್ ಗಂಡಿಯ ಬಳಿ ಎಸ್ಟೇಟ್ ಪಕ್ಕದ ಪ್ರದೇಶದಲ್ಲಿ ಮಣ್ಣು ಕುಸಿದಿದೆ. ಐದಳ್ಳಿ ಗ್ರಾಮದಲ್ಲಿ ನೀಲಮ್ಮ ಅವರ ಮನೆ ನೆಲಸಮವಾಗಿದೆ. ಕೊಪ್ಪ ತಾಲ್ಲೂಕಿನ ನಾರ್ವೆ ಭಾಗದಲ್ಲಿ ತುಂಗಾ ನದಿ ನೀರು ಗದ್ದೆಗಳಿಗೆ ನುಗ್ಗಿದೆ.

ಭಾರಿ ವಾಹನ ಸಂಚಾರ ನಿಷೇಧ (ಮಡಿಕೇರಿ): ಕೊಡಗು ಜಿಲ್ಲೆಯಲ್ಲಿ ಶನಿವಾರ ಬಿರುಸಿನಿಂದ ಮಳೆಸುರಿದಿದ್ದು, ರಸ್ತೆಗಳೆಲ್ಲವೂ ಹಾಳಾಗಿರುವುದರಿಂದ ಜಿಲ್ಲೆಯಾದ್ಯಂತ ಭಾರಿ ವಾಹನಗಳ ಸಂಚಾರವನ್ನು ಅ.15ರವರೆಗೂ ನಿಷೇಧಿಸಿ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ್ ಆದೇಶ ಹೊರಡಿಸಿದ್ದಾರೆ.

ಸೋಮವಾರಪೇಟೆ ತಾಲ್ಲೂಕಿನ ಶುಂಠಿ ಮಂಗಳೂರು– ಕೊರ್ಲಳ್ಳಿ–ಬೀಟಿಕಟ್ಟೆ ಸಂಪರ್ಕ ರಸ್ತೆ ಸುಮಾರು 30 ಮೀಟರ್ ದೂರದವರೆಗೆ ಬಿರುಕು ಬಿಟ್ಟಿದೆ. ಸೋಮವಾರಪೇಟೆ ತಾಲ್ಲೂಕಿನ ಶಾಂತಳ್ಳಿ, ಮಲ್ಲಳ್ಳಿ, ಪುಷ್ಪಗಿರಿ ಮಾರ್ಗ ಮಧ್ಯೆ ರಸ್ತೆಗೆ ಮಣ್ಣು ಕುಸಿದಿದೆ.

ಕುಸಿದ ಮಣ್ಣು (ಹಾಸನ): ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ದೋಣಿಗಾಲ್‌ನ ಬೆಂಗಳೂರು– ಮಂಗಳೂರು ರಾಷ್ಟ್ರೀಯ ಹೆದ್ದಾರಿಯ ಕೆಳಭಾಗದಲ್ಲಿ ಸಣ್ಣದಾಗಿ ಭೂಕುಸಿತ ಉಂಟಾಗಿದೆ.

ಆಲೂರು ತಾಲ್ಲೂಕಿನಲ್ಲಿ 4 ಮನೆ-ಹಾನಿಗೀಡಾಗಿವೆ. ಅರಕಲ ಗೂಡು ತಾಲ್ಲೂಕಿನ ಕೊಣನೂರು ವ್ಯಾಪ್ತಿ ಯಲ್ಲಿ 15 ಹಾಗೂ ಅರಕಲಗೂಡು ತಾಲ್ಲೂಕು ಮರವಳಲು ಗ್ರಾಮದಲ್ಲಿ ಮನೆಯ ಗೋಡೆ ಕುಸಿದಿದೆ.

ಕಾರವಾರ: ಮುಂಡಗೋಡ, ದಾಂಡೇಲಿ, ಹಳಿಯಾಳ ಮತ್ತು ಶಿರಸಿ ತಾಲ್ಲೂಕುಗಳಲ್ಲಿ ದಿನವಿಡೀ ಮಳೆಯಾಗಿದೆ. ಜಿಲ್ಲೆಯಲ್ಲಿ ಶುಕ್ರವಾರ 16 ಮನೆಗಳಿಗೆ ಭಾಗಶಃ ಹಾನಿಯಾಗಿದೆ.

ಧಾರಾಕಾರ ಮಳೆ (ಕಲಬುರಗಿ): ಕಲಬುರಗಿ, ಯಾದಗಿರಿ, ಬೀದರ್, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಶನಿವಾರ ಇಡೀ ದಿನ ಮಳೆಯಾಯಿತು.

ಕಲಬುರಗಿ ಜಿಲ್ಲೆಯ ಚಿಂಚೋಳಿ ಮತ್ತು ಸೇಡಂ ತಾಲ್ಲೂಕಿನ ಕೆಲ ಗ್ರಾಮಗಳ ಜಮೀನುಗಳಲ್ಲಿ ಮಳೆ ನೀರು ನಿಂತಿದ್ದು, ಬೆಳೆ ಹಾನಿಯಾಗಿವೆ. ಕಲಬುರಗಿ ನಗರ ಸೇರಿ ಚಿಂಚೋಳಿ, ಸೇಡಂ, ಕಮಲಾಪುರ, ಚಿತ್ತಾಪುರ ತಾಲ್ಲೂಕಿನ ವಿವಿಧೆಡೆ ಬಿರುಸಿನ ಮಳೆಯಾಗಿದೆ. ಯಾದಗಿರಿ, ಬೀದರ್ ಮತ್ತು ರಾಯಚೂರು ಜಿಲ್ಲೆಗಳ ವಿವಿಧೆಡೆ ತುಂತುರು ಮಳೆಯಾಗಿದೆ.



ಜೋಗ ಜಲಪಾತದ ವೈಭವ ಶನಿವಾರ ಕಂಡುಬಂದಿದ್ದು ಹೀಗೆ...

ಕೆಟ್ಟುನಿಂತ ದೋಣಿ: 8 ಜನರ ರಕ್ಷಣೆ

ಕೊಡಗು: ಕುಶಾಲನಗರ ತಾಲ್ಲೂಕಿನ ನಂಜರಾಯಪಟ್ಟಣದಿಂದ ದುಬಾರೆ ಹಾಡಿಗೆ 8 ಜನರನ್ನು ಕರೆದೊಯ್ಯುತ್ತಿದ್ದ ಯಾಂತ್ರಿಕ ದೋಣಿಯೊಂದು ಶನಿವಾರ ಉಕ್ಕಿ ಹರಿಯುತ್ತಿದ್ದ ಕಾವೇರಿ ನದಿಯ ಮಧ್ಯೆ ಕೆಟ್ಟು ನಿಂತು ಆತಂಕ ಸೃಷ್ಟಿಸಿತ್ತು. ಮತ್ತೊಂದು ದೋಣಿಯ ಮೂಲಕ ಅವರನ್ನು ರಕ್ಷಿಸಲಾಯಿತು.

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಹಾಸನ ಜಿಲ್ಲೆಯ ಆಲೂರು ತಾಲ್ಲೂಕಿನ ಕೆ. ಹೊಸಕೋಟೆ ಹೋಬಳಿ ಹಾಡ್ಯ ಗ್ರಾಮದಲ್ಲಿ ಮನೆಯೊಂದು ಮಳೆಯಿಂದ ಸಂಪೂರ್ಣ ಹಾನಿಯಾಗಿದೆ

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	122.05	31,792	13,511
ಹಾರಂಗಿ	2,859	2,855.05	14,170	14,100
ಕಬಿನಿ	2284.00	2281.5	15,500	10,000
ಹೇಮಾವತಿ	2,922	2,917.15	17,641	250
ಲಿಂಗನಮಕ್ಕಿ	1,819	1775.35	47,968	2139.16
ಸೂಪಾ (ಮೀ)	564	527.8	31,006	-
ಮಾಣಿ	594	576.98	7,145	-
ತುಂಗಭದ್ರಾ	1,633	1,623.90	1,01,429	216
ಮಲಪ್ರಭಾ	2079.5	2,055.60	4,256	194
ಘಟಪ್ರಭಾ	2175	103.16	20,407	106
ಭದ್ರಾ	186	168.8	28,016	146
ಆಲಮಟ್ಟಿ (ಮೀ)	519.6	515.77	78,390	451
ನಾರಾಯಣಪುರ (ಮೀ)	492.25	491.06	1,586	00

* ನೆಲಮಟ್ಟದಿಂದ



ಹೊಸಪೇಟೆ ಸಮೀಪದ ತುಂಗಭದ್ರಾ ಜಲಾಶಯ ತುಂಬುವ ಹಂತಕ್ಕೆ ಬಂದಿದೆ ಪ್ರಜಾವಾಣಿ ಚಿತ್ರ

56,825 ಚ.ಕಿ.ಮೀ ಪರಿಸರ ಸೂಕ್ಷ್ಮ ಪ್ರದೇಶ

ಒಂದನೇ ಪುಟದಿಂದ

● ಗಣಿಗಾರಿಕೆ, ಕಲ್ಲುಗಣಿಗಾರಿಕೆ ಮತ್ತು ಮರಳು ಗಣಿಗಾರಿಕೆಯನ್ನು ಪೂರ್ಣ ನಿಷೇಧಿಸಲಾಗಿದೆ. ಹಾಲಿ ನಡೆಯುತ್ತಿರುವ ಗಣಿಗಾರಿಕೆಗಳನ್ನು ಅಂತಿಮ ಅಧಿಸೂಚನೆ ಹೊರಬಿದ್ದ ದಿನದಿಂದ ಐದು ವರ್ಷದೊಳಗೆ ತೆರವುಗೊಳಿಸಲಾಗುತ್ತದೆ.
● ಹೊಸದಾಗಿ ಯಾವುದೇ ಉಷ್ಣ ವಿದ್ಯುತ್ ಯೋಜನೆಗಳನ್ನು ಕೈಗೆತ್ತಿಕೊಳ್ಳುವಂತಿಲ್ಲ. ಅಸ್ತಿತ್ವದಲ್ಲಿರುವ ಸ್ಥಾವರಗಳ ವಿಸ್ತರಣೆಗೂ ಅವಕಾಶವಿಲ್ಲ.
● ಕೇಂದ್ರ ಅಥವಾ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗಳು 'ಕೆಂಪು' ಪಟ್ಟಿಯಲ್ಲಿ ನಿಗದಿಪಡಿಸಿರುವ ಕೈಗಾರಿಕೆಗಳ ಸ್ಥಾಪನೆ ಮತ್ತು ವಿಸ್ತರಣೆಯನ್ನು ನಿಷೇಧಿಸಲಾಗಿದೆ. ಆರೋಗ್ಯ ರಕ್ಷಣಾ ಸಂಸ್ಥೆಗಳೂ ಸೇರಿದಂತೆ ಅಸ್ತಿತ್ವದಲ್ಲಿರುವ 'ಕೆಂಪು' ಪಟ್ಟಿಯ ಎಲ್ಲ ಕೈಗಾರಿಕೆಗಳ ಮುಂದುವರಿಕೆಗೆ ಅವಕಾಶ ಕಲ್ಪಿಸಲಾಗಿದೆ.
● 20,000 ಚ.ಮೀಟರ್ ವಿಸ್ತೀರ್ಣಕ್ಕೂ ಹೆಚ್ಚಿನ ಕಟ್ಟಡ, ನಿರ್ಮಾಣಕ್ಕೆ ಸಂಬಂಧಿಸಿದ ಹೊಸ ಯೋಜನೆಗಳು, 50 ಹೆಕ್ಟೇರ್ ಅಥವಾ 1,50,000 ಚ.ಮೀಟರ್‌ಗಿಂತ ಹೆಚ್ಚಿನ ವಿಸ್ತೀರ್ಣದ ಟೌನ್‌ಶಿಪ್ ಮತ್ತು ಪ್ರದೇಶಾಭಿವೃದ್ಧಿ ಯೋಜನೆಗಳನ್ನು ನಿಷೇಧಿಸಲಾಗಿದೆ. ಆದರೆ, ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಈಗಾಗಲೇ ಇರುವ ವಸತಿಗಳ ದುರಸ್ತಿ, ವಿಸ್ತರಣೆ, ನವೀಕರಣಕ್ಕೆ ನಿರ್ಬಂಧವಿಲ್ಲ.

ಯೋಜನೆ, ಚಟುವಟಿಕೆಗಳ ನಿಯಂತ್ರಣ ಹೇಗೆ?
● ಪರಿಸರದ ಮೇಲೆ ಬೀರುವ ಪರಿಣಾಮವನ್ನು ಅವಲೋಕಿಸಿ ಹೊಸ ಜಲವಿದ್ಯುತ್ ಯೋಜನೆಗಳಿಗೆ ಅವಕಾಶ ನೀಡಬಹುದು. 2006ರ ಸೆಪ್ಟೆಂಬರ್ 14ರಂದು ಹೊರಡಿಸಲಾಗಿರುವ ಆದೇಶಕ್ಕೆ ಅನುಗುಣವಾಗಿ ಈ ಯೋಜನೆಯ ಮೌಲ್ಯಮಾಪನ ಆಗಬೇಕು.
● ಪಶ್ಚಿಮ ಘಟ್ಟಗಳ ಪ್ರದೇಶಕ್ಕೆ ಸಂಬಂಧಿಸಿದ ಈ ಅಧಿಸೂಚನೆಯ ನಿಯಮ ಜಾರಿ ಮತ್ತು ಮೇಲ್ವಿಚಾರಣೆ ಅಧಿಕಾರ ರಾಜ್ಯ ಸರ್ಕಾರದ್ದು.
● ಪಶ್ಚಿಮ ಘಟ್ಟ ವ್ಯಾಪ್ತಿಯ ಆರು ರಾಜ್ಯ ಸರ್ಕಾರಗಳ ಸಹಯೋಗದಲ್ಲಿ ಕೇಂದ್ರ ಪರಿಸರ, ಅರಣ್ಯ ಸಚಿವಾಲಯವು ಪಶ್ಚಿಮ ಘಟ್ಟಗಳಿಗೆ ಸಂಬಂಧಿಸಿದ ಮೇಲ್ವಿಚಾರಣಾ ಕೇಂದ್ರ ಸ್ಥಾಪಿಸುತ್ತದೆ.

ಗಾಡ್ಗೀಳ್, ಕಸ್ತೂರಿರಂಗನ್ ಸಮಿತಿ ಹೇಳಿದ್ದೇನು?

ಪಶ್ಚಿಮ ಘಟ್ಟದ ಜೀವ ವೈವಿಧ್ಯದ ಸಂರಕ್ಷಣೆಗೆ ಉದ್ದೇಶದಿಂದ ಹಿರಿಯ ವಿಜ್ಞಾನಿ ಮಾಧವ ಗಾಡ್ಗೀಳ್ ನೇತೃತ್ವದಲ್ಲಿ ಕೇಂದ್ರ ಸರ್ಕಾರ ಈ ಹಿಂದೆ ಸಮಿತಿ ರಚಿಸಿತ್ತು. ಈ ಸಮಿತಿಯು ಆಗಸ್ಟ್ 31ರ 2011ರಲ್ಲಿ ಘಟ್ಟದ 1,29,037 ಚದರ ಕಿ.ಮೀ ವ್ಯಾಪ್ತಿಯಲ್ಲಿ ಪರಿಸರ ಸೂಕ್ಷ್ಮ ಪ್ರದೇಶವೆಂದು ಘೋಷಿಸಬಹುದು ಎನ್ನುವ ಶಿಫಾರಸು ಮಾಡಿತ್ತು. ಘಟ್ಟದ ಶೇ 64ರಷ್ಟು ಪ್ರದೇಶದಲ್ಲಿ ಅಭಿವೃದ್ಧಿಗೆ ಕೆಲ ನಿಯಂತ್ರಣ ಹೇರಬೇಕು ಎಂದು ಶಿಫಾರಸು ಮಾಡಿತ್ತು. ಇದಕ್ಕೆ ರಾಜಕೀಯವಾಗಿ ವಿರೋಧ ಎದುರಾದಾಗ ಕೇಂದ್ರ ಸರ್ಕಾರ ಗಾಡ್ಗೀಳ್ ವರದಿ ಪರಿಶೀಲನೆಗೆ 2013ರ ಏಪ್ರಿಲ್ 15ರಂದು ಡಾ.ಕೆ. ಕಸ್ತೂರಿ ರಂಗನ್ ಸಮಿತಿ ರಚಿಸಿತ್ತು. ಈ ಸಮಿತಿ ಅದೇ ವರ್ಷದ ನ. 13ರಂದು ವರದಿ ನೀಡಿ, ಘಟ್ಟದ ಶೇ 37ರಷ್ಟು ಅರಣ್ಯ ಪ್ರದೇಶವನ್ನು ಅಂದರೆ 59,940 ಚದರ ಕಿ.ಮೀ ಪ್ರದೇಶವನ್ನು ಪರಿಸರ ಸೂಕ್ಷ್ಮ ಪ್ರದೇಶ ಎಂದು ಗುರುತಿಸಿತ್ತು.

ಅಪರಿಚಿತರಿಗೆ ₹70 ಲಕ್ಷಕ್ಕೆ ಬೇಡಿಕೆ!

ಪಿಎಸ್‌ಐ ಅಕ್ರಮ: ಸಿಐಡಿ ಸಲ್ಲಿಸಿರುವ ಚಾರ್ಜ್‌ಶೀಟ್‌ನಲ್ಲಿ ಉಲ್ಲೇಖ

● ಮನೋಜಕುಮಾರ್ ಗುದ್ದಿ

ಕಲಬುರಗಿ: ಪಿಎಸ್‌ಐ ನೇಮಕಾತಿ ಅಕ್ರಮದ ಕಿಂಗ್‌ಪಿನ್ ಆದ ಕಾಂಗ್ರೆಸ್ ಮುಖಂಡ ಆರ್.ಡಿ.ಪಾಟೀಲ ಪರೀಕ್ಷೆಯಲ್ಲಿ ಪಾಸ್ ಮಾಡಿಸಿಕೊಡಲು ತನ್ನ ಆಪ್ತರಿಗೆ ₹40 ಲಕ್ಷ, ಅಪರಿಚಿತ ಅಭ್ಯರ್ಥಿಗಳಿಂದ ₹70 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದನ್ನು ಕೋರ್ಟ್‌ಗೆ ಸಿಐಡಿ ಸಲ್ಲಿಸಿದ ಚಾರ್ಜ್‌ಶೀಟ್‌ನಲ್ಲಿ ಉಲ್ಲೇಖಿಸಿದೆ.

'ಅಫಜಲಪುರದ ಕಾಂಗ್ರೆಸ್ ಶಾಸಕ ಎಂ.ವೈ.ಪಾಟೀಲ ಅವರ ಗನ್‌ಮ್ಯಾನ್ ಆಗಿದ್ದ ಹಯ್ಯಾಳಿ ದೇಸಾಯಿಗೆ ₹ 40 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದರೂ ಅಂತಿಮವಾಗಿ ₹ 30 ಲಕ್ಷಕ್ಕೆ ಒಪ್ಪಂದವಾಗಿತ್ತು. ಮತ್ತೊಬ್ಬ ಅಭ್ಯರ್ಥಿ ವಿಶಾಲಗೆ ಪರೀಕ್ಷೆ ದಿನ ಬ್ಲೂಟೂತ್ ಸಾಧನ ಒದಗಿಸಿ ಉತ್ತರ ಹೇಳಲು ₹ 70 ಲಕ್ಷಕ್ಕೆ ಬೇಡಿಕೆ ಇಡಲಾಗಿತ್ತು. ಅಂತಿಮವಾಗಿ ₹ 42 ಲಕ್ಷಕ್ಕೆ ಒಪ್ಪಂದವಾಗಿತ್ತು. ಮತ್ತೊಬ್ಬ ಅಭ್ಯರ್ಥಿ ಎನ್.ವಿ. ಸುನೀಲ ಎಂಬಾತನಿಗೆ ಆರ್.ಡಿ. ಪಾಟೀಲ ಮೊದಲು ₹50 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದ. ನಂತರ ₹30 ಲಕ್ಷಕ್ಕೆ ಒಪ್ಪಂದ ಮಾಡಿಕೊಳ್ಳಲಾಗಿತ್ತು' ಎಂದೂ ತಿಳಿಸಲಾಗಿದೆ.

'ತಮ್ಮ 'ಗಿರಾಕಿಗಳ' ಹುಡುಕಾಟವನ್ನು ಆರ್.ಡಿ. ಪಾಟೀಲ ಮತ್ತು ಅಣ್ಣ ಮಹಾಂತೇಶ ಪಾಟೀಲ 2021ರ ಸೆಪ್ಟೆಂಬರ್‌ನಿಂದ ಶುರು ಮಾಡಿದ್ದರು. ಅಫಜಲಪುರದ ಪ್ರವಾಸಿ ಮಂದಿರ, ಕಲಬುರಗಿಯ ಕೇಂದ್ರ ಬಸ್ ನಿಲ್ದಾಣ ಬಳಿ ಅಭ್ಯರ್ಥಿಗಳಿಂದ ಹಣ ಪಡೆದಿದ್ದರು' ಎಂದು ಸಿಐಡಿ ತಿಳಿಸಿದೆ.

ಬ್ಲೂಟೂತ್ ಸಾಗಿಸುವ ಹೊಣೆ ಮೇತ್ರಿಗೆ: ಕಲಬುರಗಿ ಎಸ್ಪಿ ಕಚೇರಿಯ ಬೆರಳಚ್ಚು ವಿಭಾಗದಲ್ಲಿ ಸಿಪಿಐ ಆಗಿದ್ದ ಆನಂದ ಮೇತ್ರಿಗೆ ಪರೀಕ್ಷಾ ಕೇಂದ್ರದಲ್ಲಿ ಅಭ್ಯರ್ಥಿಗಳ ಬ್ಲೂಟೂತ್ ಸಾಧನಗಳನ್ನು ಯಾವುದೇ ತೊಂದರೆ ಆಗದಂತೆ ಒಳ ಸಾಗಿಸುವ ಹೊಣೆಗಾರಿಕೆ ವಹಿಸಲಾಗಿತ್ತು. ಇದನ್ನು ಆನಂದ ಮೇತ್ರಿ ನಿರ್ವಹಿಸಿದ್ದ ಅಂಶ ಆರೋಪ ಪಟ್ಟಿಯಲ್ಲಿದೆ.

ಸಿಮ್ ಒದಗಿಸುವುದು ಅಭ್ಯರ್ಥಿಗಳ ಹೊಣೆ!: ಪಿಎಸ್‌ಐ ಪರೀಕ್ಷೆ ದಿನ ಉತ್ತರ ಹೇಳಲು ಬೇಕಾದ ಬ್ಲೂಟೂತ್ ಒದಗಿಸುವಲ್ಲಿ ಆರ್.ಡಿ. ಪಾಟೀಲ ಒಂದೇ ಬಗೆಯ ವಿಧಾನವನ್ನು ಅನುಸರಿಸಿದ್ದ ಎಂದು ತನಿಖೆ ವೇಳೆ ಗೊತ್ತಾಗಿದೆ.

'ಪ್ರತಿ ಅಭ್ಯರ್ಥಿ ಭೇಟಿ ಮಾಡಿದಾಗಲೂ ಪಾಟೀಲ, ಮಹಾಂತೇಶ ಪಾಟೀಲ ಮುಂಗಡ ಹಣವಾಗಿ ₹5– 10 ಲಕ್ಷದವರೆಗೆ ಪಡೆದಿದ್ದರು. ಉಳಿದ ಹಣವನ್ನು ಫಲಿತಾಂಶ ಪ್ರಕಟವಾದ ಬಳಿಕ ನೀಡಲು ಅವಕಾಶ ನೀಡಿದ್ದರು. ಪರೀಕ್ಷೆ ಕೆಲ ದಿನ ಇರುವಂತೆ ಬ್ಲೂಟೂತ್ ಉಪಕರಣ ನೀಡುತ್ತಿದ್ದರು. ಅದಕ್ಕೆ ಸಂಪರ್ಕ ಕಲ್ಪಿಸಲು ಬೇಕಾದ ಸಿಮ್ ಕಾರ್ಡ್‌ಗಳನ್ನು ಅಭ್ಯರ್ಥಿಗಳೇ ಹೊಂದಿಸಬೇಕು ಎಂದು ತಾಕೀತು ಮಾಡಿ ಅವರಿಂದ ಪಡೆಯುತ್ತಿದ್ದರು. ಪರೀಕ್ಷೆ ಮುಗಿದ ಬಳಿಕ ಅವುಗಳನ್ನು ಎಸೆದು ಬಿಡುತ್ತಿದ್ದರು' ಎಂದು ಚಾರ್ಜ್‌ಶೀಟ್‌ನಲ್ಲಿ ತಿಳಿಸಲಾಗಿದೆ.

'ಬಕ್ರೀದ್'ನ ಸಂದೇಶ

● ಮಹಮ್ಮದ್ ನೂಮಾನ್

ಪ್ರವಾದಿ ಇಬ್ರಾಹಿಂ ಅವರ ತ್ಯಾಗ--ಬಲಿದಾನಗಳ ನೆನಪಿನಲ್ಲಿ ಆಚರಿಸುವ ಹಬ್ಬವೇ 'ಈದುಲ್ ಅದ್‌ಹಾ'. ಭಾರತದಲ್ಲಿ ಈ ಹಬ್ಬ 'ಬಕ್ರೀದ್' ಎಂದೇ ಪ್ರಸಿದ್ಧಿ ಪಡೆದುಕೊಂಡಿದೆ. ದೇಶದಾದ್ಯಂತ ಮುಸ್ಲಿಮರು ಇಂದು (ಜುಲೈ 10) ಹಬ್ಬವನ್ನು ಸಂಭ್ರಮದಿಂದ ಆಚರಿಸುತ್ತಿದ್ದಾರೆ.

'ರಂಜಾನ್' ತಿಂಗಳ ಉಪವಾಸದ ಬಳಿಕ 'ಈದುಲ್ ಫಿತ್ರ್' ಹಬ್ಬ ಆಚರಿಸುವುದಾದರೆ, ಇಸ್ಲಾಮಿಕ್ ಕ್ಯಾಲೆಂಡರಿನ 'ದುಲ್ ಹಜ್ಜ್' ತಿಂಗಳ 10ರಂದು ಬಕ್ರೀದ್ ಆಚರಣೆ ನಡೆಯುತ್ತದೆ.

ನಾಲ್ಕು ಸಾವಿರ ವರ್ಷಗಳಿಗೂ ಹಿಂದೆ ಹುಟ್ಟಿದ್ದ ಪ್ರವಾದಿ ಇಬ್ರಾಹಿಂ ಅವರ ತ್ಯಾಗವನ್ನು ನೆನಪಿಸುವುದು 'ಬಕ್ರೀದ್'ನ ಮುಖ್ಯ ಆಶಯ. ಇಬ್ರಾಹಿಂ ಅವರು ಪ್ರವಾದಿ ಮುಹಮ್ಮದ್ ಅವರಿಗಿಂತ ಎರಡೂವರೆ ಸಾವಿರ ವರ್ಷಗಳ ಹಿಂದೆ ಹುಟ್ಟಿದ್ದರು.

ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿಯುವುದು, ಸೋದರತ್ವ ಬೆಳೆಸಿಕೊಳ್ಳುವುದು, ದೇವನಿಗಾಗಿ ಯಾವುದೇ ತ್ಯಾಗಕ್ಕೂ ಸಿದ್ಧರಾಗಬೇಕು ಎಂಬ ಸಂದೇಶವನ್ನು ಈ ಹಬ್ಬ ಸಾರುತ್ತದೆ.

ಹಬ್ಬದ ಆಚರಣೆ: ಬಕ್ರೀದ್‌ನ ದಿನ ಬೆಳಿಗ್ಗೆ ಈದ್ಗಾಗಳು ಮತ್ತು ಮಸೀದಿಗಳಲ್ಲಿ ಸಾಮೂಹಿಕ ಈದ್ ನಮಾಜ್ ಇರುತ್ತದೆ. ಮಕ್ಕಳು, ಹಿರಿಯರು ಹೊಸ ಉಡುಗೆ ತೊಟ್ಟು ಪ್ರಾರ್ಥನೆಯಲ್ಲಿ ಪಾಲ್ಗೊಳ್ಳುವರು. ನಮಾಜ್‌ಗೂ ಮುನ್ನ ಕೆಲ ಹೊತ್ತು 'ತಕ್ಬೀರ್' ಮೊಳಗಿಸಲಾಗುತ್ತದೆ.

ನಮಾಜ್ ಬಳಿಕ ಪರಸ್ಪರ ಶುಭಾಶಯ ತಿಳಿಸಿ, ಗೆಳೆಯರ ಮತ್ತು ಸಂಬಂಧಿಕರ ಮನೆಗೆ ಭೇಟಿ ನೀಡುವರು. ಯಾವುದಾದರೂ ಕಾರಣದಿಂದ ಕೋಪಿಸಿಕೊಂಡಿರುವರು ಕೂಡ ದ್ವೇಷವನ್ನು ಮರೆತು ಶುಭಾಶಯ ವಿನಿಮಯ ಮಾಡುವರು. ವ್ಯಕ್ತಿಗಳು, ಕುಟುಂಬಗಳ ನಡುವೆ ಬಾಂಧವ್ಯ ಬೆಳೆಯಲು ಹಬ್ಬ ನೆರವಾಗುತ್ತದೆ.

ಮನೆಗಳಲ್ಲಿ ಹಬ್ಬದ ಊಟ, ವಿಶೇಷ ಖಾದ್ಯಗಳನ್ನು ತಯಾರಿಸುವರು. ಗೆಳೆಯರು, ಬಂಧುಗಳನ್ನು ಆಹ್ವಾನಿಸಿ ಜೊತೆಯಾಗಿ ಊಟ ಮಾಡಿ, ಸಂಭ್ರಮ ಹಂಚಿಕೊಳ್ಳುವರು. ಹಬ್ಬದ ದಿನ ದಾನವಾಗಿ ದೊರೆಯುವ ಮಾಂಸ, ಹಣ, ದಿನಸಿ ಸಾಮಗ್ರಿಗಳಿಂದ ಎಷ್ಟೋ ಬಡಕುಟುಂಬಗಳಿಗೂ ಹಬ್ಬದ ಸಂಭ್ರಮದಲ್ಲಿ ಪಾಲ್ಗೊಳ್ಳುವ ಅವಕಾಶ ಕಲ್ಪಿಸುತ್ತದೆ.

ಜಾನುವಾರು ಬಲಿ: ಜಾನುವಾರು ಬಲಿ ನೀಡುವುದು 'ಬಕ್ರೀದ್'ನ ಪ್ರಮುಖ ಆಚರಣೆಯಾಗಿದೆ. ಪ್ರವಾದಿ ಇಬ್ರಾಹಿಂ ಅವರ ಜೀವನದಲ್ಲಿ ನಡೆದಿದ್ದ ಘಟನೆಯೊಂದರ ನೆನಪಿನಲ್ಲಿ ಜಾನುವಾರು ಬಲಿ ನೀಡಲಾಗುತ್ತದೆ.

ಅಲ್ಲಾಹನ ಆದೇಶದಂತೆ ಇಬ್ರಾಹಿಂ, ತಮ್ಮ ಪುತ್ರ ಇಸ್ಮಾಯಿಲ್ ಅವರನ್ನು ಬಲಿಯರ್ಪಿಸಲು ಮುಂದಾಗುವರು. ತಮ್ಮ ಮಗನನ್ನೇ ಬಲಿ ನೀಡಲು ಸಿದ್ಧವಾಗಿದ್ದ ಇಬ್ರಾಹಿಂ ಅವರ ಭಕ್ತಿಯನ್ನು ಅಲ್ಲಾಹನು ಮೆಚ್ಚಿ ಪುತ್ರನ ಬದಲು ಒಂದು ಟಗರನ್ನು ಬಲಿಯರ್ಪಿಸುವಂತೆ ಸೂಚಿಸುತ್ತಾರೆ ಎಂದು ಮುಸ್ಲಿಮರ ಧರ್ಮಗ್ರಂಥದಲ್ಲಿ ತಿಳಿಸಲಾಗಿದೆ.

ಇಬ್ರಾಹಿಂ ಅವರ ತ್ಯಾಗವನ್ನು ನೆನಪಿಸಲು ಹಬ್ಬದ ದಿನ ಜಾನುವಾರು ಬಲಿ ಅರ್ಪಿಸಲಾಗುತ್ತದೆ. ಆರ್ಥಿಕವಾಗಿ ಸಬಲರಾಗಿರುವ ಎಲ್ಲರೂ ಪ್ರಾಣಿಬಲಿ ನೀಡಬೇಕು. ಪ್ರಾಣಿಯಿಂದ ಲಭಿಸಿದ ಮಾಂಸವನ್ನು ಸಮನಾಗಿ ಮೂರು ಪಾಲು ಮಾಡಬೇಕು. ಅದರಲ್ಲಿ ಒಂದು ಭಾಗವನ್ನು ಸ್ವತಃ ಬಳಸಿಕೊಳ್ಳಬಹುದು. ಇನ್ನೆರಡು ಪಾಲುಗಳನ್ನು ಸಂಬಂಧಿಕರು ಹಾಗೂ ಬಡವರಿಗೆ ಹಂಚಬೇಕು.

ಹಜ್ ಯಾತ್ರೆ

ಸೌದಿ ಅರೇಬಿಯಾದ ಮಕ್ಕಾದಲ್ಲಿ ಪವಿತ್ರ ಹಜ್ ಯಾತ್ರೆ ನಡೆಯುವ ಸಮಯದಲ್ಲೇ ಈ ಹಬ್ಬ ಆಚರಿಸಲಾಗುತ್ತದೆ. ಜೀವನದಲ್ಲಿ ಒಂದು ಬಾರಿಯಾದರೂ ಹಜ್ ಯಾತ್ರೆ ಕೈಗೊಳ್ಳಬೇಕು ಎಂದು ಇಸ್ಲಾಂ ಹೇಳುತ್ತದೆ. ಹಜ್‌ನ ಧಾರ್ಮಿಕ ವಿಧಿ--ವಿಧಾನಗಳು ಈ ಹಬ್ಬದೊಂದಿಗೆ ಮುಕ್ತಾಯಗೊಳ್ಳುತ್ತದೆ.

ಬಕ್ರೀದ್ ಮುನ್ನಾದಿನ ಅಥವಾ 'ದುಲ್ ಹಜ್ಜ್' ತಿಂಗಳ ಒಂಬತ್ತರಂದು ಹಜ್ ಯಾತ್ರಿಕರು ಮಕ್ಕಾ ನಗರದ ಅರಫಾತ್ ಎಂಬ ಬೆಟ್ಟದ ಬಳಿ ಸೇರುತ್ತಾರೆ. ಈ ಯಾತ್ರಿಕರಿಗೆ ಬೆಂಬಲ ನೀಡಲು ವಿಶ್ವದಾದ್ಯಂತ ಮುಸ್ಲಿಮರು ಈ ದಿನ ಉಪವಾಸವಿರುತ್ತಾರೆ.

ಈ ಬಾರಿ ವಿದೇಶದ 8.50 ಲಕ್ಷ ಯಾತ್ರಿಕರು ಸೇರಿದಂತೆ ಒಟ್ಟು 10 ಲಕ್ಷ ಮಂದಿಗೆ ಹಜ್‌ನಲ್ಲಿ ಪಾಲ್ಗೊಳ್ಳಲು ಸೌದಿ ಸರ್ಕಾರ ಅವಕಾಶ ನೀಡಿದೆ. ಕೋವಿಡ್‌ಗೆ ಮುಂಚೆ ಅಂದರೆ 2019 ರಲ್ಲಿ ಸುಮಾರು 25 ಲಕ್ಷ ಮಂದಿ ಹಜ್‌ನಲ್ಲಿ ಭಾಗವಹಿಸಿದ್ದರು. ಕೋವಿಡ್ ಕಾರಣ 2020 ಮತ್ತು 2021ರಲ್ಲಿ ವಿದೇಶಿಯರಿಗೆ ಹಜ್‌ಗೆ ಅವಕಾಶ ನೀಡಿರಲಿಲ್ಲ.

ವಿಜಯಪುರದಲ್ಲಿ ಲಘು ಭೂಕಂಪನ

ವಿಜಯಪುರ: ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಶನಿವಾರ ಮುಂಜಾನೆ ಭೂಕಂಪನದ ಅನುಭವವಾಗಿದೆ. ಬೆಳಿಗ್ಗೆ 6.22ಕ್ಕೆ ಭೂಮಿ 10 ಸೆಕೆಂಡ್‌ಗೂ ಹೆಚ್ಚು ಸಮಯ ಕಂಪಿಸಿದೆ. ಜೊತೆಗೆ ಭಾರೀ ಶಬ್ದ ಭೂಮಿಯೊಳಗಿಂದ ಕೇಳಿಬಂದಿದೆ. 'ವಿಜಯಪುರ ತಾಲ್ಲೂಕಿನ ಕನ್ನೂರು ಗ್ರಾಮ ಕೇಂದ್ರಿತವಾಗಿ ಸಂಭವಿಸಿದ ಭೂಕಂಪನದ ತೀವ್ರತೆ ರಿಕ್ಟರ್ ಮಾಪಕದಲ್ಲಿ 4.4 ರಷ್ಟು ದಾಖಲಾಗಿದೆ' ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಪತ್ತು ನಿರ್ವಹಣಾ ಕೇಂದ್ರ ಖಚಿತಪಡಿಸಿದೆ.

'ಭೂ ಕಂಪನದಿಂದಾಗಿ ತಿಕೋಟಾ ಹಾಗೂ ಇಂಡಿ ತಾಲ್ಲೂಕುಗಳಲ್ಲಿ ಸುಮಾರು 48 ಮನೆಗಳ ಗೋಡೆ ಬಿರುಕು ಬಿಟ್ಟಿವೆ, ಎರಡು ಮನೆಗಳ ಗೋಡೆಗಳು ಭಾಗಶಃ ಬಿದ್ದು ಹೋಗಿವೆ. ಇಂಡಿ ತಾಲ್ಲೂಕಿನ ಬಳ್ಳೊಳ್ಳಿ ಗ್ರಾಮದಲ್ಲಿ 15 ಅಡಿಯ ಬಾವಿಯ ನೀರು ಬತ್ತಿ ಹೋಗಿದೆ' ಎಂದು ಜಿಲ್ಲಾಧಿಕಾರಿ ವಿಜಯ ಮಹಾಂತೇಶ ತಿಳಿಸಿದ್ದಾರೆ.

ಬಾಗಲಕೋಟೆ ವರದಿ: ಜಿಲ್ಲೆಯ ಜಮಖಂಡಿ ತಾಲ್ಲೂಕಿನ ತುಬಚಿ, ಶೂರ್ಪಾಲಿ, ಜಂಬಗಿ ಗ್ರಾಮಗಳಲ್ಲಿಯೂ ಭೂಕಂಪನ ಆಗಿರುವುದನ್ನು ಜಿಲ್ಲಾಧಿಕಾರಿ ಪಿ. ಸುನೀಲ್ ಕುಮಾರ ಖಚಿತ ಪಡಿಸಿದ್ದಾರೆ.

ಅಥಣಿ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಶಿರಹಟ್ಟಿ ಹಾಗೂ ಸುತ್ತಲಿನ ಕೆಲ ಹಳ್ಳಿಗಳಲ್ಲಿ ಶನಿವಾರ ಬೆಳಿಗ್ಗೆ ಲಘು ಭೂಕಂಪನದ ಅನುಭವವಾಗಿದ್ದು ರಿಕ್ಟರ್ ಮಾಪನದಲ್ಲಿ ಇದು 4.4 ನಷ್ಟು ಕಂಪನ ದಾಖಲಾಗಿದೆ. ಕೆಲವು ಮನೆಗಳ ಗೋಡೆಗಳಲ್ಲಿ ಸಣ್ಣ ಬಿರುಕು ಬಿಟ್ಟಿದೆ ಎಂದು ತಹಶೀಲ್ದಾರ್ ಸುರೇಶ ಮುಂಜೆ ಗ್ರಾಮಕ್ಕೆ ಭೇಟಿ ನೀಡಿ ಮಾಹಿತಿ ನೀಡಿದ್ದಾರೆ.

ಎಂಪಿಎಂಗೆ ಜಮೀನು ಗುತ್ತಿಗೆ: ಹಾಲಪ್ಪ ವಿರೋಧ

ಸಾಗರ: ಶಿವಮೊಗ್ಗ ಜಿಲ್ಲೆಯಲ್ಲಿ 41,460 ಎಕರೆಯನ್ನು ಮೈಸೂರು ಪೇಪರ್ ಮಿಲ್‌ಗೆ (ಎಂಪಿಎಂ) 40 ವರ್ಷಗಳ ಅವಧಿಗೆ ಗುತ್ತಿಗೆ ನೀಡಿರುವ ಸರ್ಕಾರದ ಕ್ರಮವನ್ನು ಬಿಜೆಪಿಯ ಶಾಸಕ ಎಚ್. ಹಾಲಪ್ಪ ಹರತಾಳು ವಿರೋಧಿಸಿದ್ದಾರೆ.

'ಜನಪ್ರತಿನಿಧಿಗಳ ಗಮನಕ್ಕೆ ಬಾರದಂತೆ ಎಂಪಿಎಂಗೆ ಭೂಮಿಯನ್ನು ಗುತ್ತಿಗೆ ನೀಡಲಾಗುತ್ತಿದೆ. ಸಾಗರ ತಾಲ್ಲೂಕಿನಲ್ಲಿ 6,060 ಎಕರೆ, ಹೊಸನಗರ ತಾಲ್ಲೂಕಿನಲ್ಲಿ 4 ಸಾವಿರ ಎಕರೆ ಭೂಮಿಯನ್ನು ಏಕ ಜಾತಿಯ ನೆಡುತೋಪು ಬೆಳೆಸಲು ಗುತ್ತಿಗೆ ನೀಡುತ್ತಿರುವುದು ಸರಿಯಲ್ಲ' ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು ಆಕ್ಷೇಪಿಸಿದರು.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು
ಪ್ರಜಾವಾಣಿ ಕನ್ನಡ ಧ್ವನಿ
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ನಾಳೆ
ನಾಟಕ ಪ್ರದರ್ಶನಕ್ಕೂ ಅಡ್ಡಿ ಸರಿಯೇ?
ಸಂವಾದ
ಬೆಳಿಗ್ಗೆ 11 ರಿಂದ 12
ಭಾಗವಹಿಸುವವರು:
ಸಿ.ಬಸವಲಿಂಗಯ್ಯ, ರಂಗನಿರ್ದೇಶಕ, ಮೈಸೂರು
ಗುಂಡಣ್ಣ ಚಿಕ್ಕಮಗಳೂರು, ರಂಗನಿರ್ದೇಶಕ, ಬೆಂಗಳೂರು
ಬಿ.ಜಯಪ್ರಕಾಶ್ ಗೌಡ, ರಂಗಕರ್ಮಿ, ಕರ್ನಾಟಕ ಸಂಘದ ಅಧ್ಯಕ್ಷ, ಮಂಡ್ಯ
ಪ್ರತಿಭಾ ಎಂ.ವಿ., ರಂಗನಿರ್ದೇಶಕಿ, ಸಾಗರ

ದಾನಿಗಳು ನೀಡಿದ ಜಾಗ ಶಾಲೆ ಹೆಸರಿಗೆ ದಾಖಲೀಕರಣ ● ಜಾಗದ ವಿವರ ನೀಡಲು ಸೂಚನೆ

ಸರ್ಕಾರಿ ಶಾಲಾ ಜಾಗ ಖಾತೆ ಅಭಿಯಾನ ಶುರು

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ದಾನಿಗಳ ಹೆಸರಿನಲ್ಲಿರುವ ಜಾಗವನ್ನು ಸರ್ಕಾರಿ ಶಾಲೆಗಳ ಹೆಸರಿಗೆ ದಾಖಲೀಕರಣ ಮಾಡುವ 'ಜಾಗ ಖಾತೆ ಅಭಿಯಾನ' ತಾಲ್ಲೂಕಿನಲ್ಲಿ ಆರಂಭಗೊಂಡಿದೆ.

ಚಿಕ್ಕಮಗಳೂರು ವಿಭಾಗದ ಉಪ ವಿಭಾಗಾಧಿಕಾರಿ ಡಾ.ಎಚ್.ಎಲ್. ನಾಗರಾಜ್ ಅವರು ಅಭಿಯಾನ ಶುರು ಮಾಡಿದ್ದಾರೆ. ತಾಲ್ಲೂಕಿನ ಯಲಗುಡಿಗೆ, ಭಕ್ತರಹಳ್ಳಿ, ಬೀರಾಪುರ ಸಹಿತ ಎಂಟು ಗ್ರಾಮಗಳ ಶಾಲೆಗಳ ದಾಖಲೀಕರಣ ಪ್ರಕ್ರಿಯೆ ಪೂರ್ಣಗೊಳಿಸಲಾಗಿದೆ.

ಜೂನ್ 29ರಂದು ಸರ್ಕಾರಿ ಶಾಲೆ ಮುಖ್ಯ ಶಿಕ್ಷಕರ ಸಭೆ ನಡೆಸಿ, ಶಾಲಾ ಜಾಗ ವಿವರ ನೀಡಲು ತಿಳಿಸಲಾಗಿದೆ.

ಜಿಲ್ಲೆಯಲ್ಲಿ ಕಿರಿಯ ಪ್ರಾಥಮಿಕ 724, ಹಿರಿಯ ಪ್ರಾಥಮಿಕ 901 ಹಾಗೂ ಪ್ರೌಢಶಾಲೆಗಳು 356 ಇವೆ. ಚಿಕ್ಕಮಗಳೂರು ತಾಲ್ಲೂಕಿನ ಕೆಲವು ಶಾಲೆಗಳ ಮುಖ್ಯಶಿಕ್ಷಕರು ಈ ಸಂಬಂಧ ಮನವಿ ಸಲ್ಲಿಸಿದ್ದಾರೆ

ಜಿಲ್ಲೆಯ ಶೇ. 30ರಷ್ಟು ಶಾಲೆಗಳ ಜಾಗ ದಾಖಲೀಕರಣವಾಗಿಲ್ಲ. ಜಾಗ ದಾನ ನೀಡಿದವರು ಪೌತಿಯಾಗಿದ್ದು, ಕುಟುಂಬದವರ ಹೆಸರಿಗೆ ಖಾತೆ ವರ್ಗಾವಣೆಯಾಗಿರುವ ಪ್ರಕರಣಗಳೇ ಹೆಚ್ಚಿವೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

'ಜಿಲ್ಲೆಯ ಮಲೆನಾಡಿನಲ್ಲಿ ಶಾಲಾ ಜಾಗ ಬಹಳಷ್ಟು ದಾಖಲೀಕರಣ ಆಗಿಲ್ಲ. ಭೂಮಿ ಬೆಲೆ ಈಗ ಹೆಚ್ಚಾಗಿದೆ. ಹೀಗಾಗಿ, ಕೆಲವರು ಜಾಗದ ವಿಚಾರದಲ್ಲಿ ತಗಾದೆ ಎತ್ತಿದ್ದಾರೆ. ಕೆಲವೆಡೆ ಅರಣ್ಯ ಜಾಗ ತೊಡಕು ಇದೆ' ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಜಿ. ರಂಗನಾಥಸ್ವಾಮಿ ತಿಳಿಸಿದರು.

ಚಿಕ್ಕಮಗಳೂರು ತಾಲ್ಲೂಕಿನ ಗಾಳಿಹಳ್ಳಿಯ ಪರ್ವತೇಗೌಡ ಅವರು ಶಾಲೆಗೆ 20 ಗುಂಟೆ ಜಾಗ ನೀಡಿದ್ದರು. ಪರ್ವತೇಗೌಡ ಅವರ ಪೌತಿಯಾಗಿದ್ದು, ಪುತ್ರ ಗಂಗಾಧರಪ್ಪ ಅವರ ಹೆಸರಿಗೆ ಖಾತೆ ವರ್ಗಾವಣೆಯಾಗಿತ್ತು. ಶಾಲೆ ಮುಖ್ಯ ಶಿಕ್ಷಕ ಚಂದ್ರೇಗೌಡ ಅವರು ಉಪ ವಿಭಾಗಾಧಿಕಾರಿಗೆ ಖಾತೆ ಮಾಡಿಸಿಕೊಡಲು ಮನವಿ ಸಲ್ಲಿಸಿದ್ದರು. ಉಪವಿಭಾಗಾಧಿಕಾರಿ ಡಾ.ಎಚ್.ಎಲ್. ನಾಗರಾಜ್ ಅವರು ಗಂಗಾಧರಪ್ಪ ಅವರೊಂದಿಗೆ ಮಾತನಾಡಿ ಶಾಲೆ ಹೆಸರಿಗೆ ಖಾತೆ ಮಾಡಿಸಿಕೊಟ್ಟಿದ್ದಾರೆ.

'ನಮ್ಮ ತಂದೆಯವರು 1985ರಲ್ಲಿ 20 ಗುಂಟೆ ಜಾಗವನ್ನು ಶಾಲೆಗೆ ದಾನ ನೀಡಿದ್ದರು. ಜಾಗದ ಖಾತೆ ನನ್ನ ಹೆಸರಿಗಿತ್ತು. ಜಾಗವನ್ನು ಶಾಲೆ ಹೆಸರಿಗೆ ಖಾತೆ ಮಾಡಿಕೊಟ್ಟಿದ್ದೇನೆ' ಎಂದು ಗಾಳಿಹಳ್ಳಿಯ ಗಂಗಾಧರಪ್ಪ ತಿಳಿಸಿದರು.

'ಶೀಘ್ರವೇ ಅದಾಲತ್'

'ಶಾಲಾ ಜಾಗ ಖಾತೆ ನಿಟ್ಟಿನಲ್ಲಿ ಚಿಕ್ಕಮಗಳೂರು ತಾಲ್ಲೂಕು ಮಟ್ಟದ ಅದಾಲತ್ ಅನ್ನು ಶೀಘ್ರದಲ್ಲಿ ಆಯೋಜಿಸಲು ಉದ್ದೇಶಿಸಲಾಗಿದೆ' ಎಂದು ಉಪ ವಿಭಾಗಾಧಿಕಾರಿ ಡಾ.ಎಚ್.ಎಲ್.ನಾಗರಾಜ್ ತಿಳಿಸಿದರು.

'ಶಾಲಾ ಜಾಗ ಖಾತೆ ದಾಖಲೀಕರಣ ಮಾಡಿ, ಒತ್ತುವರಿ ತೆರವುಗೊಳಿಸಿ, ನರೇಗಾದಡಿ ಶಾಲೆ ಜಾಗಕ್ಕೆ ಬೇಲಿ ಹಾಕಲಾಗುವುದು' ಎಂದು ಅವರು ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಜುಬೈರ್‌ಗೆ ವಾರೆಂಟ್

ಲಖೀಂಪುರ ಖೇರಿ (ಪಿಟಿಐ): 'ಆಲ್ಟ್ ನ್ಯೂಸ್' ಸಹಸಂಸ್ಥಾಪಕ ಮೊಹಮ್ಮದ್ ಜುಬೈರ್ ವಿರುದ್ಧ ಲಖೀಂಪುರ ಖೇರಿ ಜಿಲ್ಲೆಯ ಹೆಚ್ಚುವರಿ ಮುಖ್ಯ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ (ಎಸಿಜೆಎಂ) ನ್ಯಾಯಾಲಯ ವಾರೆಂಟ್ ಹೊರಡಿಸಿದೆ.

'2021ರ ನವೆಂಬರ್ 25ರಂದು ದಾಖಲಾಗಿದ್ದ ದೂರಿನ ಸಂಬಂಧ ವಿಚಾರಣೆಗಾಗಿ ಇದೇ 11ರಂದು ನ್ಯಾಯಾಲಯಕ್ಕೆ ಹಾಜರಾಗುವಂತೆ ಸೂಚಿಸಲಾಗಿದೆ. ವಾರೆಂಟ್ ಪ್ರತಿಯನ್ನು ಜುಬೈರ್ ಅವರಿಗೆ ಶುಕ್ರವಾರವೇ ತಲುಪಿಸಲಾಗಿದೆ' ಎಂದು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಅರುಣ್ ಕುಮಾರ್ ಸಿಂಗ್ ಹೇಳಿದ್ದಾರೆ.

ಹವಾಮಾನ ವೈಪರೀತ್ಯ ಪಠ್ಯ ಮರು ಸೇರ್ಪಡೆ

ನವದೆಹಲಿ: ಶಾಲಾ ಪಠ್ಯಕ್ರಮದಿಂದ ಕೈಬಿಡಲಾಗಿದ್ದ ಹವಾಮಾನ ವೈಪರೀತ್ಯಕ್ಕೆ ಸಂಬಂಧಿಸಿದ ಪಠ್ಯವನ್ನು ಮರುಸೇರ್ಪಡೆ ಮಾಡುವುದಾಗಿ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಭರವಸೆ ನೀಡಿದ್ದಾರೆ. ಕೋವಿಡ್ ಬಳಿಕ ವಿದ್ಯಾರ್ಥಿಗಳ ಮೇಲಿನ ಒತ್ತಡ ತಗ್ಗಿಸಲು 6ರಿಂದ 12ನೇ ತರಗತಿಯ ಶೇ 30ರಷ್ಟು ಪಠ್ಯವನ್ನು ಕಡಿತ ಮಾಡಲಾಗಿತ್ತು. ಹವಾಮಾನ ವೈಪರೀತ್ಯ, ಮುಂಗಾರು, ಮಳೆ ಮಾರುತಗಳು ಮೊದಲಾದ ವಿಷಯಗಳನ್ನು ಒಳಗೊಂಡ ಪಠ್ಯಕ್ಕೆ ಕತ್ತರಿ ಹಾಕಿದ ಎನ್‌ಸಿಇಆರ್‌ಟಿ ನಡೆಗೆ ಶಿಕ್ಷಕರು ಆಕ್ಷೇಪ ವ್ಯಕ್ತಪಡಿಸಿದ್ದರು.

16 ಮೃತದೇಹ ಪತ್ತೆ; 15 ಸಾವಿರ ಯಾತ್ರಾರ್ಥಿಗಳ ಸ್ಥಳಾಂತರ: 25 ಜನರು ಆಸ್ಪತ್ರೆಗೆ ದಾಖಲು

ಅಮರನಾಥ: 40 ಜನರ ಸುಳಿವಿಲ್ಲ

ಪ್ರಜಾವಾಣಿ ವಾರ್ತೆ

ಶ್ರೀನಗರ: ದಕ್ಷಿಣ ಕಾಶ್ಮೀರದ ಅಮರನಾಥದಲ್ಲಿ ಶುಕ್ರವಾರ ಸಂಭವಿಸಿದ ದಿಢೀರ್ ಪ್ರವಾಹದಿಂದ ಮೃತಪಟ್ಟವರ ಸಂಖ್ಯೆ 16ಕ್ಕೆ ಏರಿಕೆಯಾಗಿದ್ದು, ರಕ್ಷಣಾ ಕಾರ್ಯಾಚರಣೆಯನ್ನು ಮುಂದುವರಿಸಲಾಗಿದೆ. ಪ್ರವಾಹ ಹಾಗೂ ಭೂಕುಸಿತದಲ್ಲಿ ಗಾಯಗೊಂಡ 25 ಜನರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಬದುಕುಳಿದವರಿಗಾಗಿ ರಕ್ಷಣಾ ತಂಡಗಳು ಶುಕ್ರವಾರ ರಾತ್ರಿಯಿಂದಲೂ ಕಾರ್ಯಾಚರಣೆ ನಡೆಸುತ್ತಿವೆ. 15 ಸಾವಿರಕ್ಕೂ ಹೆಚ್ಚು ಅಮರನಾಥ ಯಾತ್ರಾರ್ಥಿಗಳನ್ನು ಬೇಸ್‌ಕ್ಯಾಂಪ್‌ಗೆ ಸ್ಥಳಾಂತರಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಈವರೆಗೆ 16 ಮೃತದೇಹಗಳನ್ನು ಪತ್ತೆ ಮಾಡಲಾಗಿದೆ. ನಾಪತ್ತೆಯಾದ ಇನ್ನೂ 40 ಜನರಿಗಾಗಿ ಹುಡುಕಾಟ ನಡೆಯುತ್ತಿದೆ.

ಪಂಚತರಣಿ ಬೇಸ್‌ಕ್ಯಾಂಪ್‌ಗೆ ಬಹುತೇಕ ಯಾತ್ರಾರ್ಥಿಗಳನ್ನು ಸ್ಥಳಾಂತರ ಮಾಡಲಾಗಿದೆ. ಜಮ್ಮುವಿನ ಬಾಲಟಾಲ್ ಹಾಗೂ ಪಹಲ್ಗಾಮ್ ಬೇಸ್‌ಕ್ಯಾಂಪ್‌ಗಳಿಂದ ಅಮರನಾಥಕ್ಕೆ ಹೊರಟಿದ್ದ ಯಾತ್ರಾರ್ಥಿಗಳ ಹೊಸ ತಂಡಕ್ಕೆ ಶನಿವಾರ ತಡೆ ಒಡ್ಡಲಾಗಿದೆ.

'ಮತ್ತೆ ಭೂಕುಸಿತ ಆಗಿರುವ ಬಗ್ಗೆ ವರದಿಯಾಗಿಲ್ಲ. ನಿರಂತರ ಮಳೆಯಾಗುತ್ತಿದ್ದರೂ, ರಕ್ಷಣಾ ಕಾರ್ಯಾಚರಣೆಗೆ ಅಡ್ಡಿಯಾಗಿಲ್ಲ' ಎಂದು ಎನ್‌ಡಿಆರ್‌ಎಫ್ ಮಹಾನಿರ್ದೇಶಕ ಅತುಲ್ ಕರ್ವಾಲ್ ಅವರು ಹೇಳಿದ್ದಾರೆ. ಎನ್‌ಡಿಆರ್‌ಎಫ್‌ನ 4 ತಂಡಗಳ 100ಕ್ಕೂ ಹೆಚ್ಚು ಸದಸ್ಯರು ರಕ್ಷಣಾ ಕಾರ್ಯದಲ್ಲಿ ಕೈಜೋಡಿಸಿದ್ದಾರೆ. ಸೇನೆ, ಎಸ್‌ಡಿಆರ್‌ಎಫ್, ಸಿಆರ್‌ಪಿಎಫ್ ಸದಸ್ಯರೂ ತೊಡಗಿಸಿಕೊಂಡಿದ್ದಾರೆ ಎಂದು ಅವರು ಹೇಳಿದ್ದಾರೆ.

'ಶನಿವಾರ ನಸುಕಿನ ಸುಮಾರು 4 ಗಂಟೆವರೆಗೂ ಯಾತ್ರಾರ್ಥಿಗಳ ಸ್ಥಳಾಂತರ ಕೆಲಸ ನಡೆಯಿತು. ಪ್ರವಾಹಕ್ಕೆ ಸಾಕ್ಷಿಯಾದ ಸ್ಥಳದಲ್ಲಿ ಈಗ ಯಾವ ಯಾತ್ರಾರ್ಥಿಯೂ 'ಇಲ್ಲ' ಎಂದು ಐಟಿಬಿಪಿ ವಕ್ತಾರರು ತಿಳಿಸಿದ್ದಾರೆ.

ಅಮರನಾಥ ಗುಹೆ ಬಳಿ ದಿಢೀರ್ ಪ್ರವಾಹದಲ್ಲಿ ಗಾಯಗೊಂಡ ವ್ಯಕ್ತಿಯೊಬ್ಬರನ್ನು ಹೆಲಿಕಾಪ್ಟರ್ ಮೂಲಕ ಬಾಲಟಾಲ್‌ಗೆ ಕರೆತರಲಾಯಿತು–ಪಿಟಿಐ ಚಿತ್ರ

ಹಗುರ ಹೆಲಿಕಾಪ್ಟರ್ ಬಳಕೆ

ಭಾರತೀಯ ವಾಯುಪಡೆಯ ಎಂಐ–17 ಹಾಗೂ ಅತ್ಯಾಧುನಿಕ ಹಗುರ ಹೆಲಿಕಾಪ್ಟರ್‌ಗಳನ್ನು ರಕ್ಷಣಾ ಕಾರ್ಯಕ್ಕೆ ಬಳಸಿಕೊಳ್ಳಲಾಗಿದೆ. ಅತ್ಯಾಧುನಿಕ ಉಪಕರಣಗಳೊಂದಿಗೆ ಪರ್ವತ ರಕ್ಷಣಾ ತಂಡಗಳು ಹಾಗೂ ನಿಗಾ ತಂಡಗಳು ಕಾರ್ಯಾಚರಣೆ ಕೈಗೊಂಡಿವೆ. ಅವಶೇಷಗಳಡಿ ಬದುಕುಳಿದವರನ್ನು ಪತ್ತೆ ಹಚ್ಚಲು ಶ್ವಾನದಳದ ನೆರವು ಪಡೆಯಲಾಗಿದೆ ಎಂದು ಸೇನಾಧಿಕಾರಿಗಳು ತಿಳಿಸಿದ್ದಾರೆ.

ಮೇಘಸ್ಫೋಟ ಅಲ್ಲ, ದಿಢೀರ್ ಪ್ರವಾಹ: ಐಎಂಡಿ

ಅಮರನಾಥ ಗುಹೆ ಸಮೀಪ ಉಂಟಾದ ದಿಢೀರ್ ಪ್ರವಾಹಕ್ಕೆ ಸ್ಥಳೀಯವಾಗಿ ಸುರಿದ ಭಾರಿ ಮಳೆ ಕಾರಣ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಶನಿವಾರ ಸ್ಪಷ್ಟಪಡಿಸಿದೆ.

ಶುಕ್ರವಾರ ಸಂಜೆ 4.30ರಿಂದ 6.30ರ ಸಮಯದಲ್ಲಿ 31 ಮಿಲಿಮೀಟರ್ ಮಳೆ ಸುರಿದಿದ್ದು, ಇದನ್ನು 'ಮೇಘಸ್ಫೋಟ' ಎಂಬುದಾಗಿ ವರ್ಗೀಕರಿಸಲಾಗದು ಎಂದು ವಿಜ್ಞಾನಿಗಳು ತಿಳಿಸಿದ್ದಾರೆ. ಐಎಂಡಿ ಪ್ರಕಾರ, ಒಂದು ಗಂಟೆಯ ಅವಧಿಯಲ್ಲಿ 100 ಮಿಲಿಮೀಟರ್ ಮಳೆ ಸುರಿದರೆ, ಆ ವಿದ್ಯಮಾನವನ್ನು ಮೇಘಸ್ಫೋಟ ಎಂದು ಕರೆಯಬಹುದು.

'ಅಮರನಾಥ ಗುಹೆ ಸಮೀಪದ ಎತ್ತರದ ಬೆಟ್ಟಗಳಲ್ಲಿ ಸುರಿದ ಭಾರಿ ಮಳೆಯು ದಿಢೀರ್ ಪ್ರವಾಹಕ್ಕೆ ಕಾರಣ ಆಗಿರಬಹುದು' ಎಂದು ಐಎಂಡಿ ಮಹಾನಿರ್ದೇಶಕ ಮೃತ್ಯುಂಜಯ ಮೊಹಾಪಾತ್ರ ಹೇಳಿದ್ದಾರೆ. ಯಾತ್ರಾರ್ಥಿಗಳಿಗೆ ಮಾಹಿತಿ ನೀಡುವ ಉದ್ದೇಶದಿಂದ ಅಮರನಾಥ ಗುಹೆಯ ಸಮೀಪ ಹವಾಮಾನ ಕೇಂದ್ರ ಸ್ಥಾಪಿಸಲಾಗಿದೆ. ಆದರೆ, ಗುಹೆ ಸುತ್ತಲಿನ ಬೆಟ್ಟ ಪ್ರದೇಶಗಳ ಮೇಲೆ ನಿಗಾ ಇಡಲು ಅಲ್ಲಿ ಹವಾಮಾನ ಕೇಂದ್ರಗಳು ಇಲ್ಲ. ಈ ಬೆಟ್ಟಪ್ರದೇಶಗಳು ದುರ್ಗಮವಾಗಿದ್ದು ಹವಾಮಾನ ಕೇಂದ್ರಗಳನ್ನು ಸ್ಥಾಪಿಸಲು ಸಾಧ್ಯವಾಗಿಲ್ಲ ಎಂದು ಮೂಲಗಳು ತಿಳಿಸಿವೆ.

ದೋಡಾದಲ್ಲೂ ದಿಢೀರ್ ಪ್ರವಾಹ

ಜಮ್ಮುವಿನ ದೋಡಾದಲ್ಲಿ ಶನಿವಾರ ನಸುಕಿನ 4 ಗಂಟೆ ಸಮಯದಲ್ಲಿ ದಿಢೀರ್ ಪ್ರವಾಹ ಉಂಟಾಯಿತು. ಥಾತ್ರಿ ವಲಯದ ಘಂಟಿ ಅರಣ್ಯ ಪ್ರದೇಶದಲ್ಲಿ ಇದ್ದಕ್ಕಿದ್ದಂತೆ ಪ್ರವಾಹ ಉಂಟಾಯಿತು. ಯಾವುದೇ ಪ್ರಾಣಹಾನಿಯಾಗಿಲ್ಲ. ಕೆಲವು ವಾಹನಗಳು ಕೆಸರಿನಲ್ಲಿ ಹೂತುಹೋದವು. ಹೆದ್ದಾರಿ ಸಂಚಾರ ಕೆಲಕಾಲ ಸ್ಥಗಿತವಾಗಿತ್ತು.

ಬ್ರಿಟನ್ ಪ್ರಧಾನಿ ಸ್ಥಾನದ ಆಕಾಂಕ್ಷಿಗಳಲ್ಲಿ ಸುನಕ್ ಮುಂದೆ

ಲಂಡನ್ (ಪಿಟಿಐ): ಬ್ರಿಟನ್‌ನ ಕನ್ಸರ್ವೇಟಿವ್ ಪಕ್ಷದ ನಾಯಕತ್ವ ವಹಿಸಿಕೊಳ್ಳಲು, ಆ ಮೂಲಕ ಮುಂದಿನ ಪ್ರಧಾನಿಯಾಗುವ ಸ್ಪರ್ಧೆಯಲ್ಲಿ ಮಾಜಿ ಹಣಕಾಸು ಸಚಿವ ರಿಷಿ ಸುನಕ್ ಮುಂಚೂಣಿಯಲ್ಲಿದ್ದು, ಶನಿವಾರ ಔಪಚಾರಿಕವಾಗಿ ಪ್ರಚಾರ ಆರಂಭಿಸಿದ್ದಾರೆ.

ಇನ್ಫೊಸಿಸ್ ಸಹಸಂಸ್ಥಾಪಕ ನಾರಾಯಣ ಮೂರ್ತಿ ಅವರ ಅಳಿಯ ರಿಷಿ, ಕನ್ಸರ್ವೇಟಿವ್ ಪಕ್ಷದ ಮಾಜಿ ಅಧ್ಯಕ್ಷ ಆಲಿವರ್ ಡೌಡೆನ್ ಮತ್ತು ಮಾಜಿ ಕ್ಯಾಬಿನೆಟ್ ಸಚಿವ ಲಿಯಾಮ್ ಫಾಕ್ಸ್ ಸೇರಿದಂತೆ ಸಂಸತ್ತಿನ ಹಿರಿಯ ಟೋರಿ ಸದಸ್ಯರ ಬೆಂಬಲವನ್ನು ಪಡೆದಿದ್ದಾರೆ.

ದೇಶದ ಆರ್ಥಿಕ ಸ್ಥಿತಿಯನ್ನು ಸಮರ್ಥವಾಗಿ ನಿಭಾಯಿಸುವ ಸಾಮರ್ಥ್ಯವೂ ರಿಷಿ ಅವರಿಗಿದೆ ಎನ್ನುವ ಮಾತುಗಳೂ ಕೇಳಿಬಂದಿವೆ. ರಿಷಿ ಅವರು ಪ್ರಧಾನಿ ಸ್ಥಾನ ಗೆದ್ದರೆ ಈ ಹುದ್ದೆಗೇರಿದ ಭಾರತೀಯ ಮೂಲದ ಮೊದಲ ವ್ಯಕ್ತಿಯಾಗಲಿದ್ದಾರೆ.

ಬ್ರಿಟನ್‌ನ ಓಡ್ಸ್‌ಚೆಕ್ಸರ್ ಬೆಟ್ಟಿಂಗ್ ಏಜೆನ್ಸಿಯ ಬುಕ್ಕಿಗಳ ಪ್ರಕಾರ, ಪ್ರಧಾನಿ ಸ್ಥಾನದ ಪ್ರಬಲ ಆಕಾಂಕ್ಷಿಗಳ ಪೈಕಿ ರಿಷಿ ಮುಂಚೂಣಿಯಲ್ಲಿದ್ದಾರೆ. ಸ್ಪರ್ಧೆಯಲ್ಲಿ ಕೇಳಿಬರುತ್ತಿರುವ ಮತ್ತಿಬ್ಬರು ಅಭ್ಯರ್ಥಿಗಳಾದ ಬ್ರಿಟನ್‌ನ ವಿದೇಶಾಂಗ ಕಾರ್ಯದರ್ಶಿ ಲಿಜ್ ಟ್ರಸ್ ಮತ್ತು ರಕ್ಷಣಾ ಕಾರ್ಯದರ್ಶಿ ಬೆನ್ ವ್ಯಾಲೇಸ್ ಹೆಸರು ಇನ್ನಷ್ಟೇ ಘೋಷಣೆಯಾಗಬೇಕಿದೆ.

ರಿಷಿ ಸುನಕ್

'ಕೋವಿಡ್‌ನ ದುಃಸ್ವಪ್ನವನ್ನು ಎದುರಿಸಿದ ಕಠಿಣ ಸಮಯದಲ್ಲಿ ನಾನು ಸರ್ಕಾರದಲ್ಲಿ ಅತ್ಯಂತ ಕಷ್ಟಕರವಾಗಿದ್ದ ಇಲಾಖೆಯನ್ನು ಮುನ್ನಡೆಸಿದ್ದೇನೆ. ಕನ್ಸರ್ವೇಟಿವ್ ಪಕ್ಷದ ಮುಂದಿನ ನಾಯಕತ್ವ ವಹಿಸಿಕೊಳ್ಳಲು ಹಾಗೂ ನಿಮ್ಮ ಮುಂದಿನ ಪ್ರಧಾನಿಯಾಗಲು ಬೆಂಬಲ ಕೋರುತ್ತಿದ್ದೇನೆ' ಎಂದು 'ರೆಡಿಫಾರ್ ರಿಷಿ' ಎನ್ನುವ ಹ್ಯಾಷ್‌ಟ್ಯಾಗ್‌ನಲ್ಲಿ ಸಾಮಾಜಿಕ ಮಾಧ್ಯಮಗಳಲ್ಲಿ ಬಿಡುಗಡೆಯಾದ ಪ್ರಚಾರ ವಿಡಿಯೊದಲ್ಲಿ ರಿಷಿ ಮನವಿ ಮಾಡಿದ್ದಾರೆ.

ಭದ್ರತಾ ನ್ಯೂನತೆ ಒಪ್ಪಿದ ಪೊಲೀಸರು

ಟೋಕಿಯೊ (ಎಎಫ್‌ಪಿ): ಮಾಜಿ ಪ್ರಧಾನಿ ಶಿಂಜೊ ಅಬೆ ಅವರಿಗೆ ಒದಗಿಸಿದ್ದ ಭದ್ರತೆಯಲ್ಲಿ ಸಮಸ್ಯೆಗಳು ಇದ್ದವು ಎಂಬುದನ್ನು ಜಪಾನ್ ಪೊಲೀಸರು ಶನಿವಾರ ಒಪ್ಪಿಕೊಂಡಿದ್ದಾರೆ.

ಗುಂಡು ಹಾರಿಸಿದ ದುಷ್ಕರ್ಮಿ ತೆತ್ಸುಯ ಯಮಾಗಾಮಿನಿಂದ ವಿವರಗಳನ್ನು ಪೊಲೀಸರು ಇನ್ನೂ ಕಲೆ ಹಾಕುತ್ತಿದ್ದಾರೆ.

ಗೊಟಬಯ ಪಲಾಯನ

ಒಂದನೇ ಪುಟದಿಂದ

ದೇಶದ ವಿವಿಧ ಭಾಗಗಳಿಂದ ಕೊಲಂಬೊದತ್ತ ಜನರು ಬರುತ್ತಿದ್ದು, ಪ್ರತಿಭಟನೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಅಧ್ಯಕ್ಷ ಸ್ಥಾನಕ್ಕೆ ಗೊಟಬಯ ರಾಜೀನಾಮೆ ನೀಡುವವರೆಗೆ ಪ್ರತಿಭಟನೆ ಮುಂದುವರಿಸುವುದಾಗಿ ಎಚ್ಚರಿಸಿದ್ದಾರೆ.

ಕೊಲಂಬೊದ ಹೃದಯಭಾಗದ ಫೋರ್ಟ್ ಪ್ರದೇಶದಲ್ಲಿರುವ ಗೊಟಬಯ ಅವರ ನಿವಾಸಕ್ಕೆ ಭಾರಿ ಭದ್ರತೆಯನ್ನು ಒದಗಿಸಲಾಗಿತ್ತು. ಆದರೆ, ಸಾಗರೋಪಾದಿಯಲ್ಲಿ ಮನೆಯತ್ತ ಬಂದ ಪ್ರತಿಭಟನಕಾರರು, ತಡೆಗೋಡೆಗಳನ್ನು ಕೆಡವಿ, ಕಾಂಪೌಂಡ್ ಹಾರಿ ಅಧ್ಯಕ್ಷರ ನಿವಾಸದೊಳಗೆ ನುಗ್ಗಿದ್ದಾರೆ.

ಪ್ರತಿಭಟನಕಾರರು ಅಧ್ಯಕ್ಷರ ನಿವಾಸವನ್ನು ತಮ್ಮ ಹಿಡಿತಕ್ಕೆ ತೆಗೆದುಕೊಂಡಿದ್ದರೂ, ಯಾವುದೇ ಹಾನಿ ಮಾಡಿಲ್ಲ ಹಾಗೂ ಹಿಂಸಾಚಾರದಲ್ಲಿ ತೊಡಗಿಲ್ಲ ಎಂದು ಮೂಲಗಳು ಹೇಳಿವೆ. ಅಧ್ಯಕ್ಷರ ಐಷಾರಾಮಿ ನಿವಾಸದಲ್ಲಿನ ಈಜುಕೊಳದಲ್ಲಿ ಪ್ರತಿಭಟನಕಾರರು ಈಜುತ್ತಿದ್ದ, ಮೋಜಿನಲ್ಲಿ ತೊಡಗಿದ್ದ ದೃಶ್ಯಗಳಿರುವ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿವೆ.

ಪ್ರತಿಭಟನಕಾರರನ್ನು ಚದುರಿಸಲು ಪೊಲೀಸರು ಅಶ್ರುವಾಯು ಶೆಲ್ ಸಿಡಿಸುವ ಜೊತೆಗೆ ಜಲಫಿರಂಗಿಗಳನ್ನು ಬಳಸಿದ್ದಾರೆ. ಕೊನೆಗೆ ಗಾಳಿಯಲ್ಲಿ ಗುಂಡು ಹಾರಿಸಿದ್ದಾರೆ. ಈ ಸಂದರ್ಭದಲ್ಲಿ ನಡೆದ ಘರ್ಷಣೆಯಿಂದಾಗಿ ಇಬ್ಬರು ಪೊಲೀಸ್ ಅಧಿಕಾರಿಗಳು ಸೇರಿ ಕನಿಷ್ಠ 30 ಜನರು ಗಾಯಗೊಂಡಿದ್ದಾರೆ. ಅವರನ್ನು ನಗರದ ನ್ಯಾಷನಲ್ ಆಸ್ಪತ್ರೆಗೆ ದಾಖಲಿಸಲಾಗಿದೆ. ದೇಶದ ವಿವಿಧ ನಗರಗಳಿಂದಲೂ ಪ್ರತಿಭಟನಕಾರರು ರೈಲುಗಳ ಮೂಲಕ ಕೊಲಂಬೊಕ್ಕೆ ಬಂದಿದ್ದಾರೆ. ಕೊಲಂಬೊಕ್ಕೆ ರೈಲುಗಳನ್ನು ಓಡಿಸುವಂತೆ ಗಾಲೆ, ಕ್ಯಾಂಡಿ, ಮಟಾರಗಳಲ್ಲಿನ ರೈಲು ನಿಲ್ದಾಣದ ಅಧಿಕಾರಿಗಳೊಂದಿಗೆ ಜನರು ಮಾತಿನ ಚಕಮಕಿಯನ್ನೂ ನಡೆಸಿದ್ದಾರೆ.

ಕೆಪಿಸಿಸಿಗೆ ರಾಜಕೀಯ ವಿದ್ಯಮಾನಗಳ ಸಮಿತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ವಿಧಾನಸಭಾ ಚುನಾವಣೆಗೆ ಪಕ್ಷವನ್ನು ಸಜ್ಜುಗೊಳಿಸುವ ಸಲುವಾಗಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯಲ್ಲಿ (ಕೆಪಿಸಿಸಿ) ರಾಜಕೀಯ ವಿದ್ಯಮಾನಗಳ ಸಮಿತಿಯನ್ನು ಎಐಸಿಸಿ ಶನಿವಾರ ರಚಿಸಿದೆ.

ಪಕ್ಷದ ಕರ್ನಾಟಕ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಸಮಿತಿಗೆ ಸಂಚಾಲಕರಾಗಿರುವರು. ಸಮಿತಿಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಕೆಪಿಸಿಸಿಯ ಪ್ರಚಾರ ಸಮಿತಿಯ ಅಧ್ಯಕ್ಷ ಎಂ.ಬಿ.ಪಾಟೀಲ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಹಿರಿಯ ಮುಖಂಡ ಕೆ.ಎಚ್.ಮುನಿಯಪ್ಪ, ಶಾಸಕ ದಿನೇಶ್ ಗುಂಡೂರಾವ್, ಹಿರಿಯ ಮುಖಂಡ ಎಂ.ವೀರಪ್ಪ ಮೊಯಿಲಿ, ಮಾರ್ಗರೇಟ್ ಆಳ್ವ, ಶಾಸಕ ಡಾ.ಜಿ.ಪರಮೇಶ್ವರ, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಸತೀಶ ಜಾರಕಿಹೊಳಿ, ರಾಮಲಿಂಗಾ ರೆಡ್ಡಿ, ಈಶ್ವರ ಖಂಡ್ರೆ, ಸಲೀಂ ಅಹ್ಮದ್, ಆರ್. ಧ್ರುವನಾರಾಯಣ, ಸಂಸದ ಡಿ.ಕೆ. ಸುರೇಶ್, ವಿರೋಧ ಪಕ್ಷದ ಉಪ ನಾಯಕ ಯು.ಟಿ.ಖಾದರ್, ಶಾಸಕರಾದ ಕೆ.ಆರ್.ರಮೇಶ್ ಕುಮಾರ್, ಕೆ.ಜೆ.ಜಾರ್ಜ್, ಪಕ್ಷದ ರಾಷ್ಟ್ರೀಯ ಕಾರ್ಯಪಡೆಯ ಸದಸ್ಯ ಸುನಿಲ್ ಕನಗೋಳ್, ಶಾಸಕ ಕೃಷ್ಣ ಬೈರೇಗೌಡ, ಯುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಬಿ.ವಿ.ಶ್ರೀನಿವಾಸ್, ಶಾಸಕ ಆರ್.ವಿ.ದೇಶಪಾಂಡೆ, ಅಲ್ಲಂ ವೀರಭದ್ರಪ್ಪ, ಎಐಸಿಸಿ ಕಾರ್ಯದರ್ಶಿಗಳಾದ ಬೋಸರಾಜು, ಸಂದೀಪ್ ಇರುತ್ತಾರೆ.

ಬಿ.ರಮಾನಾಥ ರೈ, ಎಚ್. ಆಂಜನೇಯ, ವಿನಯ್ ಕುಮಾರ್ ಸೊರಕೆ, ರಾಣಿ ಸತೀಶ್, ಉಮಾಶ್ರೀ, ಲಕ್ಷ್ಮಿ ಹೆಬ್ಬಾಳಕರ, ಡಾ.ಅಂಜಲಿ ನಿಂಬಾಳ್ಕರ ಸಮಿತಿಗೆ ವಿಶೇಷ ಆಹ್ವಾನಿತರಾಗಿರುವರು ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ತಿಳಿಸಿದ್ದಾರೆ.

ರಾಜ್ಯಕ್ಕೆ ಐವರು ಎಐಸಿಸಿ ಕಾರ್ಯದರ್ಶಿಗಳು: ಪಕ್ಷದ ಕರ್ನಾಟಕ ಉಸ್ತುವಾರಿಗೆ ನೆರವಾಗಲು ಐವರು ಎಐಸಿಸಿ ಕಾರ್ಯದರ್ಶಿಗಳನ್ನು ನೇಮಿಸಲಾಗಿದೆ. ಡಿ.ಶ್ರೀಧರ್ ಬಾಬು, ಪಿ.ಸಿ.ವಿಷ್ಣುನಾದ್, ರೋಜಿ ಎಂ.ಜಾನ್, ಮಯೂರ ಎಸ್.ಜಯಕುಮಾರ್, ಅಭಿಷೇಕ್ ದತ್ ಅವರನ್ನು ನೇಮಕ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಅಮರನಾಥ: ಬಹುತೇಕ ಕನ್ನಡಿಗರು ಸುರಕ್ಷಿತ

ಒಂದನೇ ಪುಟದಿಂದ

ಯಾತ್ರಾರ್ಥಿಗಳಿಗೆ ನೆರವು ಕಲ್ಪಿಸಲು ಮತ್ತು ಸಂಬಂಧಿಕರಿಗೆ ನಿರಂತರವಾಗಿ ಮಾಹಿತಿ ಒದಗಿಸುವ ಕೇಂದ್ರವನ್ನು ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣೆ ಪ್ರಾಧಿಕಾರ (ಕೆಎಸ್‌ಡಿಎಂಎ) ಆರಂಭಿಸಿದೆ.

ಕನ್ನಡಿಗರ ರಕ್ಷಣೆಗೆ ಕ್ರಮ: 'ಅಮರನಾಥ ಯಾತ್ರೆ ಕೈಗೊಂಡಿರುವ ಕನ್ನಡಿಗರ ರಕ್ಷಣೆಗೆ ಸರ್ಕಾರ ಕ್ರಮ ಕೈಗೊಂಡಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶನಿವಾರ ತಿಳಿಸಿದರು.

'ರಾಜ್ಯದಿಂದ ಅಮರನಾಥ ಯಾತ್ರೆ ಕೈಗೊಂಡಿರುವ ಕನ್ನಡಿಗರು ಸುರಕ್ಷಿತವಾಗಿದ್ದು, ಯಾವುದೇ ಅಹಿತಕರ ಸುದ್ದಿಯೂ ಬಂದಿಲ್ಲ. ಜಮ್ಮು ಮತ್ತು ಕಾಶ್ಮೀರ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಜೊತೆ ಸಂಪರ್ಕದಲ್ಲಿದ್ದೇವೆ' ಎಂದರು.

'ರಕ್ಷಣಾ ಕಾರ್ಯಕ್ಕಾಗಿ ಸಹಾಯವಾಣಿಯನ್ನೂ ಸಹ ತೆರೆಯಲಾಗಿದೆ. ಈಗಾಗಲೇ ಹಲವು ಮಂದಿ ಕರೆ ಮಾಡಿ ತಾವು ಸಿಲುಕಿರುವ ಸ್ಥಳದ ಬಗ್ಗೆ ಮಾಹಿತಿ ನೀಡಿದ್ದಾರೆ. ರಕ್ಷಣಾ ಕಾರ್ಯವನ್ನು ಕೈಗೊಳ್ಳಲಾಗಿದೆ' ಎಂದು ತಿಳಿಸಿದರು.

'ಮುಖ್ಯ ಕಾರ್ಯದರ್ಶಿಗಳು ನೇರವಾಗಿ ಕೇಂದ್ರ ಸರ್ಕಾರದೊಂದಿಗೆ ಸಂಪರ್ಕದಲ್ಲಿದ್ದಾರೆ. ತೊಂದರೆಗೆ ಸಿಲುಕಿರುವವರು ಸಹಾಯವಾಣಿಗೆ ಕರೆ ಮಾಡಿದರೆ ತಕ್ಷಣವೇ ರಕ್ಷಣೆಗೆ ಕ್ರಮ ವಹಿಸಲಾಗುವುದು' ಎಂದರು.

ಸಹಾಯವಾಣಿ ವಿವರ

ಎನ್‌ಡಿಆರ್‌ಎಫ್: 011-23438 252, 011-23438253

ಕಾಶ್ಮೀರ ವಿಭಾಗೀಯ ಸಹಾಯವಾಣಿ: 0194- 2496240

ದೇವಸ್ಥಾನ ಮಂಡಳಿಯ ಸಹಾಯವಾಣಿ: 0194-2313149

ನವದೆಹಲಿಯ ಕರ್ನಾಟಕ ಭವನದ ನಿವಾಸಿ ಆಯುಕ್ತರ ಅಧಿಕಾರಿ ಸಂಖ್ಯೆ: 011-24103701, 24103702, 011-26115515, 26117666

ಕರ್ನಾಟಕ ರಾಜ್ಯ ತುರ್ತು ಕಾರ್ಯಾಚರಣೆ ಕೇಂದ್ರ : 080-1070, 22340676

ಸಹಾಯವಾಣಿ 24 ಗಂಟೆಗಳ ಕಾಲವೂ ಕಾರ್ಯನಿರ್ವಹಿಸಲಿದೆ.

ಸವಿನೆನಪು

ಶ್ರೀ ಆರ್. ಎಂ. ರಾಜಣ್ಣ
ನಿಮ್ಮ ಆದರ್ಶವೇ ನಮಗೆ ದಾರಿದೀಪ
ಶ್ರೀಮತಿ ಭಾರತಿ ರಾಜಣ್ಣ ಮತ್ತು ಕುಟುಂಬದವರು
ಶ್ರೀ ಆರ್. ಎಂ. ನಾಗರಾಜ ಮತ್ತು ಕುಟುಂಬದವರು
ರಾಮಚಂದ್ರಪುರ.

'ದ್ವಿತೀಯಾರ್ಧದಲ್ಲಿ ಹಣದುಬ್ಬರ ಇಳಿಕೆ'

ನವದೆಹಲಿ (ಪಿಟಿಐ): 'ಹಣದುಬ್ಬರವು ಪ್ರಸಕ್ತ ಹಣಕಾಸು ವರ್ಷದ ದ್ವಿತೀಯಾರ್ಧದಲ್ಲಿ ಕ್ರಮೇಣ ಇಳಿಕೆ ಆಗುವ ನಿರೀಕ್ಷೆ ಇದೆ' ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಗವರ್ನರ್ ಶಕ್ತಿಕಾಂತ್ ದಾಸ್ ಶನಿವಾರ ತಿಳಿಸಿದ್ದಾರೆ.

'ಬಲಿಷ್ಠ ಮತ್ತು ಸುಸ್ಥಿರ ಬೆಳವಣಿಗೆ ಸಾಧಿಸುವ ನಿಟ್ಟಿನಲ್ಲಿ ಹಣದುಬ್ಬರವನ್ನು ನಿಯಂತ್ರಣಕ್ಕೆ ತರಲು ಅಗತ್ಯವಾದ ಹಣಕಾಸಿನ ಕ್ರಮಗಳನ್ನು ಕೇಂದ್ರೀಯ ಬ್ಯಾಂಕ್ ಮುಂದುವರಿಸಲಿದೆ' ಎಂದೂ ಅವರು ಹೇಳಿದ್ದಾರೆ.

ಕೌಟಿಲ್ಯ ಆರ್ಥಿಕ ಸಮಾವೇಶದ ಉದ್ಘಾಟನೆಯ ವೇಳೆ ಅವರು ಮಾತನಾಡಿದರು.

ಚಿನ್ನ, ಬೆಳ್ಳಿ (ಬೆಂಗಳೂರು)

ಸ್ಟ್ಯಾಂಡರ್ಡ್ ಚಿನ್ನ (10 ಗ್ರಾಂ)	₹52,650
ಆಭರಣ ಚಿನ್ನ (1 ಗ್ರಾಂ)	₹4,865
ಬೆಳ್ಳಿ (ಕೆ.ಜಿಗೆ)	₹58,400

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1590 (1580)
ಸೋಯಾ (ರಿಫೈನ್ಡ್)	₹1270 (1270)
ಸೂರ್ಯಕಾಂತಿ (ರಿಫೈನ್ಡ್)	₹1610 (1600)
ಪಾಮೋಲಿನ್	₹1205 (1200)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹530
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹530

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹175
ಆರ್‌ಎಸ್‌ಎಸ್-5	₹166
ಗುಡ್ ಲಾಟ್	₹158

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹111-480
ದ್ವಿತಳಿ (ಬಿ.ವಿ)	₹215-751

ಜುಲೈ 26ರಂದು ತರಂಗಾಂತರ ಹರಾಜು ಪ್ರಕ್ರಿಯೆ

5ಜಿ ಹರಾಜು: ಅದಾನಿ ಭಾಗಿ

ನವದೆಹಲಿ (ಪಿಟಿಐ): 5ಜಿ ತರಂಗಾಂತರ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವುದಾಗಿ ಅದಾನಿ ಸಮೂಹವು ಶನಿವಾರ ಖಚಿತಪಡಿಸಿದೆ.

'ಈ ಹರಾಜಿನ ಮೂಲಕ ಭಾರತವು ಮುಂದಿನ ಪೀಳಿಗೆಯ 5ಜಿ ಸೇವೆಗಳಿಗೆ ಸಿದ್ಧತೆ ನಡೆಸುತ್ತಿದ್ದು, ಬಿಡ್ಡಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಿರುವವರಲ್ಲಿ ನಾವೂ ಒಬ್ಬರಾಗಿದ್ದೇವೆ' ಎಂದು ಸಮೂಹವು ಪ್ರಕಟಣೆಯಲ್ಲಿ ತಿಳಿಸಿದೆ.

'ವಿಮಾನ ನಿಲ್ದಾಣ, ಬಂದರು ಮತ್ತು ಸಾಗಣೆ, ವಿದ್ಯುತ್ ಉತ್ಪಾದನೆ, ವಿತರಣೆ ಮತ್ತು ವಿವಿಧ ತಯಾರಿಕಾ ಕೆಲಸಗಳಲ್ಲಿ ಸುಧಾರಿತ ಸೈಬರ್ ಭದ್ರತೆಯ ಜೊತೆಗೆ ಖಾಸಗಿ ನೆಟ್‌ವರ್ಕ್ ಪರಿಹಾರಗಳನ್ನು ಕಲ್ಪಿಸಲು ನಾವು ಹರಾಜಿನಲ್ಲಿ ಭಾಗವಹಿಸುತ್ತಿದ್ದೇವೆ' ಎಂದು ಸಮೂಹದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮುಕೇಶ್ ಅಂಬಾನಿ ಒಡೆತನದ ರಿಲಯನ್ಸ್ ಜಿಯೊ ಮತ್ತು ಸುನೀಲ್ ಮಿತ್ತಲ್‌ಗೆ ಸೇರಿದ ಭಾರ್ತಿ ಏರ್‌ಟೆಲ್ ಕಂಪನಿಗಳ ಎದುರು ನೇರ ಸ್ಪರ್ಧೆಗೆ ಇಳಿಯಲು ಗೌತಮ್ ಅದಾನಿ ಒಡೆತನದ ಅದಾನಿ ಸಮೂಹವು ಹರಾಜಿನಲ್ಲಿ ಭಾಗವಹಿಸುವ ಯೋಜನೆ ಹೊಂದಿದೆ ಎಂದು ಮೂಲಗಳು ಶುಕ್ರವಾರ ಹೇಳಿದ್ದವು.

ಜುಲೈ 26ರಂದು 5ಜಿ ತರಂಗಾಂತರ ಹರಾಜು ಪ್ರಕ್ರಿಯೆ ನಡೆಯಲಿದೆ. ಇದಕ್ಕೆ ಅರ್ಜಿ ಸಲ್ಲಿಸಲು ನೀಡಿದ್ದ ಗಡುವು ಶುಕ್ರವಾರ ಅಂತ್ಯವಾಗಿದ್ದು ಒಟ್ಟಾರೆ ನಾಲ್ಕು ಅರ್ಜಿಗಳು ಸಲ್ಲಿಕೆ ಆಗಿವೆ.

ಜಿಯೊ, ಏರ್‌ಟೆಲ್ ಮತ್ತು ವೊಡಾಫೋನ್ ಐಡಿಯಾ ಕಂಪನಿಗಳು ಅರ್ಜಿ ಸಲ್ಲಿಸಿವೆ. ಅದಾನಿ ಸಮೂಹವು ನಾಲ್ಕನೇ ಅರ್ಜಿದಾರ ಆಗಿದೆ ಎಂದು ಮೂಲಗಳು ಹೇಳಿದ್ದವು.

ಹರಾಜಿನಲ್ಲಿ ಭಾಗವಹಿಸುವ ಮೂಲಕ ಇದೇ ಮೊದಲ ಬಾರಿಗೆ ಅದಾನಿ ಮತ್ತು ಅಂಬಾನಿ ಒಡೆತನದ ಕಂಪನಿಗಳು ನೇರವಾಗಿ ಸ್ಪರ್ಧೆಗೆ ಇಳಿಯಲಿವೆ. ಅದಾನಿ ಸಮೂಹವು ನವೀಕರಿಸುವ ಇಂಧನ, ಆರೋಗ್ಯ ಸೇವೆ ಸೇರಿದಂತೆ ಇನ್ನೂ ಹಲವು ಕ್ಷೇತ್ರಗಳಲ್ಲಿ ತನ್ನ ವಹಿವಾಟನ್ನು ವಿಸ್ತರಿಸುತ್ತಿದೆ.

ಬ್ಯಾಂಕ್ ಆಫ್ ಬರೋಡಾ ಬೆಂಗಳೂರು ವಲಯದ ಮುಖ್ಯಸ್ಥ ಸುಧಾಕರ್ ಡಿ. ನಾಯಕ್ ಅವರು ರಾಜ್ಯಸಭೆಗೆ ನಾಮನಿರ್ದೇಶನ ಆಗಿರುವ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ ಅವರನ್ನು ಅಭಿನಂದಿಸಿದರು

ಟ್ವಿಟರ್ ಖರೀದಿ: ಹಿಂದೆ ಸರಿದ ಇಲಾನ್ ಮಸ್ಕ್

ಸ್ಯಾನ್ ಫ್ರಾನ್ಸಿಸ್ಕೊ (ಎಪಿ): ನಕಲಿ ಖಾತೆಗಳ ಸಂಖ್ಯೆಯ ಬಗ್ಗೆ ಮಾಹಿತಿ ನೀಡಲು ಟ್ವಿಟರ್ ವಿಫಲವಾಗಿದೆ. ಹೀಗಾಗಿ ಆ ಕಂಪನಿಯನ್ನು ಖರೀದಿಸುವ ನಿರ್ಧಾರವನ್ನು ಕೈಬಿಡುವುದಾಗಿ ಟೆಸ್ಲಾ ಕಂಪನಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಇಲಾನ್ ಮಸ್ಕ್ ಹೇಳಿದ್ದಾರೆ.

ಮಸ್ಕ್ ಅವರು ₹ 3.41 ಲಕ್ಷ ಕೋಟಿಗೆ (44 ಬಿಲಿಯನ್ ಡಾಲರ್) ಟ್ವಿಟರ್ ಕಂಪನಿಯನ್ನು ಖರೀದಿಸಲು ಮುಂದಾಗಿದ್ದರು.

ಮಸ್ಕ್ ಅವರ ವಕೀಲ ಮೈಕ್ ರಿಂಗ್ಲರ್ ಅವರು ಟ್ವಿಟರ್ ಆಡಳಿತ ಮಂಡಳಿಗೆ ಪತ್ರ ಬರೆದಿದ್ದು, ನಕಲಿ ಖಾತೆಗಳಿಗೆ ಸಂಬಂಧಿಸಿದಂತೆ ಎರಡು ತಿಂಗಳ ಮಾಹಿತಿ ನೀಡುವಂತೆ ಮಸ್ಕ್ ಕೇಳಿದ್ದರು. ಆದರೆ, ಆ ಬಗ್ಗೆ ಮಾಹಿತಿ ನೀಡಲು ಕಂಪನಿ ನಿರಾಕರಿಸಿದೆ ಅಥವಾ ವಿಫಲವಾಗಿದೆ. ಮಸ್ಕ್ ಅವರ ಮನವಿಯನ್ನು ಟ್ವಿಟರ್ ಕಡೆಗಣಿಸಿದೆ. ಒಪ್ಪಲು ಸಾಧ್ಯವಾಗದೇ ಇರುವ ಕಾರಣಗಳನ್ನು ನೀಡಿ ಮಾಹಿತಿ ನೀಡಲು ನಿರಾಕರಿಸಿದೆ ಎಂದು ಪತ್ರದಲ್ಲಿ ಹೇಳಲಾಗಿದೆ.

ಟ್ವಿಟರ್‌ನ ವಹಿವಾಟು ಮತ್ತು ಹಣಕಾಸಿನ ಸ್ಥಿತಿಯನ್ನು ತಿಳಿಯಲು ಹಾಗೂ ವಿಲೀನವನ್ನು ಪೂರ್ಣಗೊಳಿಸಲು ಈ ಮಾಹಿತಿಯು ಅಗತ್ಯವಾಗಿದೆ ಎಂದು ಮಸ್ಕ್ ಹೇಳಿದ್ದಾರೆ. ಮಾಹಿತಿ ನೀಡದೇ ಇದ್ದರೆ ಖರೀದಿ ಒಪ್ಪಂದವನ್ನು ಕೈಬಿಡುವುದಾಗಿ ಮಸ್ಕ್ ಅವರು ಈ ಹಿಂದೆಯೇ ಎಚ್ಚರಿಕೆ ನೀಡಿದ್ದರು.

'ಕಾನೂನು ಹೋರಾಟ'

'ಮಸ್ಕ್ ಅವರೊಂದಿಗೆ ಒಪ್ಪಿದ ಬೆಲೆ ಮತ್ತು ನಿಯಮಗಳಂತೆ ಖರೀದಿ ಒಪ್ಪಂದವನ್ನು ಪೂರ್ಣಗೊಳಿಸಲು ಟ್ವಿಟರ್ ಮಂಡಳಿಯು ಬದ್ಧವಾಗಿದೆ. ಒಪ್ಪಂದ ಮುಂದುವರಿಸುವಂತೆ ಮಾಡಲು ಕಾನೂನು ಕ್ರಮವನ್ನು ಅನುಸರಿಸಲು ಯೋಜಿಸಲಾಗಿದೆ. ನಾವು ಗೆಲುವ ಸಾಧಿಸುವ ವಿಶ್ವಾಸವಿದೆ' ಎಂದು ಟ್ವಿಟರ್‌ನ ಆಡಳಿತ ಮಂಡಳಿ ಅಧ್ಯಕ್ಷ ಬ್ರೆಟ್ ಟೇಲರ್ ಟ್ವೀಟ್ ಮಾಡಿದ್ದಾರೆ.

ಟಾಟಾ ಪ್ರಯಾಣಿಕ ವಾಹನ ಬೆಲೆ ಏರಿಕೆ

ನವದೆಹಲಿ (ಪಿಟಿಐ): ಟಾಟಾ ಮೋಟರ್ಸ್ ಕಂಪನಿಯು ಶನಿವಾರದಿಂದ ಜಾರಿಗೆ ಬರುವಂತೆ ತನ್ನೆಲ್ಲಾ ಪ್ರಯಾಣಿಕ ವಾಹನಗಳ ಬೆಲೆಯನ್ನು ಶೇ0.55ರಷ್ಟು ಏರಿಕೆ ಮಾಡಿರುವುದಾಗಿ ತಿಳಿಸಿದೆ.

ತಯಾರಿಕಾ ವೆಚ್ಚ ಹೆಚ್ಚಾಗುತ್ತಿದ್ದು, ಅದನ್ನು ಭಾಗಶಃ ಸರಿದೂಗಿಸಲು ಈ ನಿರ್ಧಾರಕ್ಕೆ ಬರಲಾಗಿದೆ. ವಾಹನಗಳ ವಿವಿಧ ಮಾದರಿಗಳು ಮತ್ತು ಆವೃತ್ತಿಗಳಿಗೆ ಅನುಗುಣವಾಗಿ ಬೆಲೆಯಲ್ಲಿ ಏರಿಕೆ ಆಗಲಿದೆ ಎಂದು ಹೇಳಿದೆ.

ಮುಂಬೈ ಧಾರಣೆ

ಶೇಂಗಾ 9-7-2022

ಜಾವಾ 70/80(ಹೊಸ)	10950-11000
ಜಾವಾ 80/90(ಹೊಸ)	10350-10400
ದಪ್ಪ ಮಧ್ಯಪ್ರದೇಶ(ಹೊಸ)	9850-9900
ದಪ್ಪ ಗುಜರಾತ್(ಹೊಸ)	10750-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1590)
ಒಂದು ವಾರದ ಡೆಲಿವರಿ	1595 (1585)
ಸೋಯಾ ಕಚ್ಚಾ	1230 (1210)
ಪಾಮ್ ವಾರದ ಡೆಲಿವರಿ	1203 (1198)
ಸೂರ್ಯಕಾಂತಿ ಎಣ್ಣೆ ಕಚ್ಚಾ	1560 (1550)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 50,790 (50,650)

ಬೆಳ್ಳಿ ಕೆ.ಜಿ 56,650 (56,450)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಹೋಟೆಲ್‌ನಲ್ಲಿ ಸೇವಾ ಶುಲ್ಕ: 85 ದೂರು ದಾಖಲು

ನವದೆಹಲಿ (ಪಿಟಿಐ): ಹೋಟೆಲ್‌ಗಳಲ್ಲಿ ಸೇವಾ ಶುಲ್ಕ ಸಂಗ್ರಹಿಸಲಾಗುತ್ತಿದೆ ಎಂದು ಬೆಂಗಳೂರು ಸೇರಿದಂತೆ ಹಲವು ನಗರಗಳಿಂದ ರಾಷ್ಟ್ರೀಯ ಗ್ರಾಹಕ ಸಹಾಯವಾಣಿಗೆ (ಎನ್‌ಸಿಎಚ್) ಒಟ್ಟು 85 ದೂರುಗಳು ಬಂದಿವೆ.

ಗ್ರಾಹಕರಿಂದ ಸೇವಾ ಶುಲ್ಕ ಸಂಗ್ರಹಿಸದಂತೆ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದ ಬಳಿಕ, ಜುಲೈ 5 ರಿಂದ 8ರ ಒಳಗೆ ಈ ದೂರುಗಳು ಬಂದಿವೆ ಎಂದು ಕೇಂದ್ರ ಗ್ರಾಹಕರ ರಕ್ಷಣಾ ಪ್ರಾಧಿಕಾರವು (ಸಿಸಿಪಿಎ) ಶನಿವಾರ ಮಾಹಿತಿ ನೀಡಿದೆ.

ನಿಯಮ ಉಲ್ಲಂಘನೆ ಮಾಡಿರುವವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಿರುವುದಾಗಿ ಅದು ಹೇಳಿದೆ.

ಹೋಟೆಲ್‌ಗಳು ಯಾವುದೇ ರೀತಿಯಲ್ಲಿಯೂ ಗ್ರಾಹಕರಿಂದ ಸೇವಾ ಶುಲ್ಕ ಸಂಗ್ರಹಿಸುವಂತೆ ಇಲ್ಲ. ಸೇವಾ ಶುಲ್ಕ ಪಾವತಿಯು ಗ್ರಾಹಕರ ಆಯ್ಕೆಗೆ ಬಿಟ್ಟಿದ್ದಾಗಿದೆ ಎಂದು ಪ್ರಾಧಿಕಾರವು ಸ್ಪಷ್ಟವಾಗಿ ಹೇಳಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ ಸಕಲೇಶಪುರ

ಕೂಳೆ	400-420
ನಡುಗೋಲು	450-480
ರಾಶಿ	500-520
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	470

ಕೊಬ್ಬರಿ ಧಾರಣೆ ತಿಪಟೂರು

ಕನಿಷ್ಠ	12800
ಗರಿಷ್ಠ	14200
ಮಾದರಿ	14000
ಒಟ್ಟು ಆವಕ (ಚೀಲ)	2377

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15900	15600	15700	220.45 ಸೆಂಟ್ಸ್
ಎಸಿ	8960	8500	8550	
ಆರ್‌ಪಿ	9500	9400	9500	ಲಂಡನ್
ಆರ್‌ಸಿ	4625	4500	4550	1981 ಡಾಲರ್ಸ್

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್ : ಒತ್ತಡ ಮುಕ್ತ ಚಾಲನೆ ಸಂಬಳ: 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

General

ಕೆಲಸಕ್ಕೆ ಬೇಕಾಗಿದ್ದಾರೆ:ನಿವೃತ್ತ ರಾಜ್ಯ ಮತ್ತು ಕೇಂದ್ರ ಸರ್ಕಾರಿ ನೌಕರರು ಹಾಗೂ ಗೃಹಿಣಿಯರು,30 ವರ್ಷ ಮೇಲ್ಪಟ್ಟವರು, SSLC ಹಾಗೂ DEGREE ಪಾಸಾದವರು ಬೇಕಾಗಿದ್ದಾರೆ, ಸಂಬಳ, E.S.I., P.F.ಸೌಲಭ್ಯವಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಸಂಪರ್ಕಿಸಿ:9663987757.

Teachers/ Professors

SRI.RAMAKRISHNA EDUCATION Society, Halasuru,Bangalore Requires Experienced PE-TEACHERS (BP.Ed/ CP.Ed). 8861248642/ 9845048824/ srkes1963@gmail.com

Hospital & Medical Jobs

ವಿನಾಯಕ ಚಾರಿಟಬಲ್ ಟ್ರಸ್ಟ್ ವೃದ್ಧಾಶ್ರಮ ವತಿಯಿಂದ SSLC/PUC ಯುವಕ/ಯುವತಿಯರಿಗೆ ANM ನರ್ಸಿಂಗ್ ಟ್ರೈನಿಂಗ್ ಉಚಿತ ಊಟ ವಸತಿ, Salary ಸರ್ಟಿಫಿಕೇಟ್ ನೀಡಲಾಗುತ್ತದೆ 8884343999/ 8884278999

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

Wanted

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ OT. 17,800-68,000. 9538811104, 9538811223

ಶ್ರೀಶಕ್ತಿ ಹೆಲ್ತ್‌ಕೇರ್ ಗೆ ಯುವಕ-ಯುವತಿಯರು Helper ಕೆಲಸಕ್ಕೆ ಬೇಕಾಗಿದ್ದಾರೆ. ತಿಂಗಳಿಗೆ ವೇತನ 13,000/- ರಿಂದ 15,000/- ಸ್ಥಳ: ಶೇಷಾದ್ರಿಪುರಂ, ಬೆಂಗಳೂರು-90196 26612

ರಿಯಲ್ ಎಸ್ಟೇಟ್ ಸೆಲ್ಲಿಂಗ್

Old Airport Road

2BHK 1100 SFT White marble Flooring Adjacent to Old Airport Rd Car Prkg and Semi Furn Murugeshpalya for IMMEDIATE SALE CONTACT 9701378389 NO Brokers

Farm House/ Land/ Resorts

Out-Station

ಕೃಷಿ ತೋಟ ಮಾರಾಟಕ್ಕಿದೆ. ಹೊನ್ನಾಳಿ ತಾಲ್ಲೂಕು, ಹೊನ್ನಾಳಿ ಹರಿಹರ ರಸ್ತೆಯ ಮಾಸಡಿ ಗ್ರಾಮದ ಹತ್ತಿರ, 5.2 ಎಕರೆಯುಳ್ಳ, ತೆಂಗು, ಶ್ರೀಗಂಧ, ಖಾಲಿ ಜಮೀನು ಹಾಗೂ ಸುಸಜ್ಜಿತ ತೋಟದ ಮನೆ ಮಾರಾಟಕ್ಕಿವೆ. ಸಂಪರ್ಕಿಸಿ: 8792554159, 9036600199, 9972497841

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ರೆಂಟಲ್ ಪ್ರಾಪರ್ಟೀಸ್

Accommodation Available

Commercial

ಸಾಗರದ ಜೆ.ಸಿ.ರೋಡ್‌ನಲ್ಲಿ 16x90 ಅಳತೆಯ ನೆಲ ಮಾಳಿಗೆ ಮತ್ತು ಮಹಡಿ ಬಾಡಿಗೆಗೆ ಇದೆ ಕೂಡಲೇ ಸಂಪರ್ಕಿಸಿ: 94481 38143, 99002 18256.

ಭವಿಷ್ಯ

Astrology

★||ವಶೀಕರಣ ಸ್ಪೆಷಲಿಸ್ಟ್||★ ಇಷ್ಟಪಟ್ಟವರು ನಿಮ್ಮಂತೆ ಆಗಲು ನೋಡುವ ಮೂಲಕ, ಮಾತನಾಡುವ ಮೂಲಕ, ಹೆಸರಿನ ಮೂಲಕ ಸ್ತ್ರೀವಶೀಕರಣ 27ನಿಮಿಷಗಳಲ್ಲಿ ಶಾಶ್ವತ ಪರಿಹಾರ. 9535088827"

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ:ಭವಿಷ್ಯ:ಖಚಿತ:ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು-ಶ್ರೀಕ್ಷೇತ್ರಧರ್ಮಸ್ಥಳ: 7022443071

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಪ್ರವಾಸ

Travel

ಶ್ರೀ ಶಿವನಂದಿ ಟೂರ್ಸ್ 8792104518, 8147311578 ಚಾರ್‌ಧಾಮ್ (ವಿಮಾನ, ಹೆಲಿಕಾಪ್ಟರ್, ಕುದುರೆ ಎಲ್ಲಾ ದರಗಳು ಸೇರಿ 50000/ 12 ದಿನ, 09/09, 07/10) ನೇಪಾಳ 11 ದಿನ. ಗುಜರಾತ್ 12 ದಿನ. ರಾಜಸ್ಥಾನ್ 10 ದಿನ. ಮಧ್ಯಪ್ರದೇಶ್ 15 ದಿನ. ವೈಷ್ಣದೇವಿ 12 ದಿನ. ಕಾಶಿ, ಜಾರ್ಖಂಡ್ 09 ದಿನ

DH ಪ್ರಜಾವಾಣಿ
Classifieds EDUCATION SPECIAL
SPECIAL RATES FOR • Admission Notice, Education Success • Congratulation Ads
For More Details Contact:
Jerry Louis : 9731810277 | Ravichandra : 9901641752
Vishal GM : 9845114560 | Tanveer : 9886213331
Email : dhclassifieds@deccanherald.co.in

ಟಿ20: ಗೌರವ ಉಳಿಸಿದ ರವೀಂದ್ರ ಜಡೇಜ; ಪದಾರ್ಪಣೆಯಲ್ಲಿ ಮಿಂಚಿದ ರಿಚರ್ಡ್ ಗ್ಲೀಸನ್

ಕ್ರಿಕೆಟ್: ಭಾರತಕ್ಕೆ ಸರಣಿ ಕೈವಶ

ಬರ್ಮಿಂಗ್‌ಹ್ಯಾಮ್: ಅಲ್ಪಮೊತ್ತಕ್ಕೆ ಕುಸಿಯುವ ಆತಂಕ ಎದುರಿಸಿದ್ದ ಭಾರತ ತಂಡವು ಗೌರವಯುತ ಮೊತ್ತ ಗಳಿಸಲು ರವೀಂದ್ರ ಜಡೇಜ ಕಾರಣರಾದರು. ಮಧ್ಯಮವೇಗಿ ಭುವನೇಶ್ವರ್ ಕುಮಾರ್ ಈ ಮೊತ್ತಕ್ಕೆ ಗೆಲುವಿನ ಹೊಳಪು ತುಂಬಿದರು. ಇದರಿಂದಾಗಿ ಇಂಗ್ಲೆಂಡ್ ವಿರುದ್ಧದ ಟಿ20 ಸರಣಿಯನ್ನು ಭಾರತವು ಕೈವಶ ಮಾಡಿಕೊಂಡಿತು.

ಎಜ್‌ಬಾಸ್ಟನ್ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಎರಡನೇ ಟಿ20 ಪಂದ್ಯದಲ್ಲಿ ಟಾಸ್ ಗೆದ್ದ ಇಂಗ್ಲೆಂಡ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಜಡೇಜ (ಔಟಾಗದೆ 46; 29ಎ, 4X5) ಮಿಂಚಿನ ಬ್ಯಾಟಿಂಗ್ ಬಲದಿಂದ ಭಾರತ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 170 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಇಂಗ್ಲೆಂಡ್ 17 ಓವರ್‌ಗಳಲ್ಲಿ 121 ರನ್‌ಗಳಿಗೆ ಆಲೌಟ್ ಆಗಲು ಭುವನೇಶ್ವರ್ ಕುಮಾರ್ (15ಕ್ಕೆ3) ಕಾರಣರಾದರು. 49 ರನ್‌ಗಳಿಂದ ಗೆದ್ದ, ರೋಹಿತ್ ಬಳಗವು ಸರಣಿಯಲ್ಲಿ 2–0 ಮುನ್ನಡೆ ಸಾಧಿಸಿತು. ಮೂರನೇ ಮತ್ತು ಕೊನೆಯ ಟಿ20 ಪಂದ್ಯವು ಭಾನುವಾರ ನಡೆಯಲಿದೆ.

ಇನಿಂಗ್ಸ್‌ನ ಮೊದಲ ಎಸೆತದಲ್ಲಿಯೇ ಜೇಸನ್ ರಾಯ್ ವಿಕೆಟ್ ಗಳಿಸಿದ ಭುವಿ, ಮೂರನೇ ಓವರ್‌ನಲ್ಲಿ ಜೋಸ್ ಬಟ್ಲರ್‌ಗೂ ಡಗ್‌ಔಟ್ ಹಾದಿ ತೋರಿಸಿದರು. ಇದೇ ಹಾದಿಯಲ್ಲಿ ಸಾಗಿದ ಬೂಮ್ರಾ ಅವರು ಲಿವಿಂಗ್‌ಸ್ಟೋನ್ ಸ್ಯಾಮ್ ಕರನ್ ವಿಕೆಟ್‌ಗಳನ್ನು ಗಳಿಸಿ ಜೊತೆಯಾಟಗಳು ಬೆಳೆಯದಂತೆ ನೋಡಿಕೊಂಡರು. 35 ರನ್ ಗಳಿಸಿದ್ದ ಮೋಯಿನ್ ಅಲಿ ವಿಕೆಟ್ ಗಳಿಸಿದ ಪಾಂಡ್ಯ ಮಿಂಚಿದರು. ಇನ್ನೊಂದೆಡೆ ಡೇವಿಡ್ ವಿಲಿ (ಔಟಾಗದೆ 33) ಅವರ ಏಕಾಂಗಿ ಹೋರಾಟಕ್ಕೆ ತಕ್ಕ ಫಲ ಸಿಗಲಿಲ್ಲ. ಸ್ಪಿನ್ನರ್ ಯಜುವೇಂದ್ರ ಚಾಹಲ್ (10ಕ್ಕೆ2) ಭುವಿಗೆ ಉತ್ತಮ ಜೊತೆ ನೀಡಿದರು.

ಜಡೇಜ ಮಿಂಚು: ಆರನೇ ಕ್ರಮಾಂಕದಲ್ಲಿ ಜಡೇಜ ಕ್ರೀಸ್‌ಗೆ ಬಂದಾಗ ತಂಡದ ಸ್ಥಿತಿ ಚೆನ್ನಾಗಿರಲಿಲ್ಲ. 89 ರನ್‌ಗಳಿಗೆ ಐದು ವಿಕೆಟ್‌ಗಳನ್ನು ಕಳೆದುಕೊಂಡಿತ್ತು. ಆದರೆ ಆತಂಕದ ನಡುವೆಯೂ ಎಡಗೈ ಬ್ಯಾಟರ್ ಜಡೇಜ ದಿಟ್ಟ ಆಟವಾಡಿದರು. 158.62ರ ಸ್ಟ್ರೈಕ್‌ರೇಟ್‌ನಲ್ಲಿ ಬ್ಯಾಟಿಂಗ್ ಮಾಡಿದರು. ಇದರಿಂದ ತಂಡವು ಹೋರಾಟದ ಮೊತ್ತ ಗಳಿಸಿತು.

ರೋಹಿತ್–ರಿಷಭ್ ಉತ್ತಮ ಆರಂಭ: ನಾಯಕ ರೋಹಿತ್ ಶರ್ಮಾ (31) ಮತ್ತು ರಿಷಭ್ ಪಂತ್ (26) ಭಾರತಕ್ಕೆ ಉತ್ತಮ ಆರಂಭ ನೀಡಿದರು. ಮೊದಲ ವಿಕೆಟ್‌ಗೆ 49 ರನ್ ಗಳಿಸಿದರು. ಐದನೇ ಓವರ್‌ನಲ್ಲಿ ರೋಹಿತ್ ವಿಕೆಟ್ ಗಳಿಸಿದ 34 ವರ್ಷದ ಗ್ಲೀಸನ್ ತಮ್ಮ ಖಾತೆ ತೆರೆದರು. ನಂತರದ ತಮ್ಮ ಇನ್ನೊಂದು ಓವರ್‌ನಲ್ಲಿ ದೊಡ್ಡ ಬೇಟೆಯನ್ನೇ ಆಡಿಬಿಟ್ಟರು. ಲಯ ಕಂಡುಕೊಳ್ಳಲು ಪರದಾಡುತ್ತಿರುವ ವಿರಾಟ್ ವಿಕೆಟ್ ಕಬಳಿಸುವಲ್ಲಿ ಯಶಸ್ವಿಯಾದರು. ಪೇಸ್ ಮತ್ತು ಬೌನ್ಸ್ ಇದ್ದ ಎಸೆತವನ್ನು ಆಡುವ ಪ್ರಯತ್ನದಲ್ಲಿ ವಿರಾಟ್ ಬ್ಯಾಕ್‌ವರ್ಡ್ ಪಾಯಿಂಟ್‌ನಲ್ಲಿದ್ದ ಡೇವಿಡ್ ಮಲಾನ್‌ಗೆ ಕ್ಯಾಚಿತ್ತ ವಿರಾಟ್ ನಿರಾಶೆ ಅನುಭವಿಸಿದರು. ನಂತರದ ಎಸೆತದಲ್ಲಿ ರಿಷಭ್ ಪಂತ್ ಸ್ವಿಂಗ್ ಎಸೆತವನ್ನು ಕೆಣಕಿ, ಕೀಪರ್ ಬಟ್ಲರ್‌ಗೆ ಕ್ಯಾಚಿತ್ತರು.

ಕಳೆದ ಪಂದ್ಯದಲ್ಲಿ ಗೆಲುವಿನ ರೂವಾರಿಯಾಗಿದ್ದ ಹಾರ್ದಿಕ್ ಪಾಂಡ್ಯ, ಸೂರ್ಯಕುಮಾರ್ ಯಾದವ್, ಕೊನೆಯ ಹಂತದಲ್ಲಿ ಹರ್ಷಲ್ ಪಟೇಲ್ ಹಾಗೂ ಭುವನೇಶ್ವರ್ ಅವರ ವಿಕೆಟ್‌ಗಳನ್ನು ಗಳಿಸಿದ ಜೋರ್ಡಾನ್ ಸಂಭ್ರಮಿಸಿದರು.

ಭುವನೇಶ್ವರ್ ಕುಮಾರ್

ಸ್ಕೋರ್ ಕಾರ್ಡ್

ಭಾರತ 8ಕ್ಕೆ 170 (20 ಓವರ್)

ರೋಹಿತ್ ಸಿ ಬಟ್ಲರ್ ಬಿ ಗ್ಲೀಸನ್ 31 (20ಎ, 4X3, 6X2), ರಿಷಭ್ ಸಿ ಬಟ್ಲರ್ ಬಿ ಗ್ಲೀಸನ್ 26 (15ಎ, 4X4, 6X1), ವಿರಾಟ್ ಸಿ ಮಲಾನ್ ಬಿ ಗ್ಲೀಸನ್ 1 (3ಎ), ಸೂರ್ಯಕುಮಾರ್ ಸಿ ಸ್ಯಾಮ್ ಬಿ ಜೋರ್ಡಾನ್ 15 (11ಎ, 4X2), ಹಾರ್ದಿಕ್ ಸಿ ಮಲಾನ್ ಬಿ ಜೋರ್ಡಾನ್ 12 (15ಎ, 4X1), ಜಡೇಜ ಔಟಾಗದೆ 46 (29ಎ,4X5), ದಿನೇಶ್ ರನ್‌ಔಟ್–ಹ್ಯಾರಿ/ಬಟ್ಲರ್ 12(17ಎ, 4X1), ಹರ್ಷಲ್ ಸಿ ರಿಚರ್ಡ್ ಬಿ ಜೋರ್ಡಾನ್ 13 (6ಎ, 4X1, 6X1), ಭುವನೇಶ್ವರ್ ಸಿ ವಿಲಿ ಬಿ ಜೋರ್ಡಾನ್ 2 (4ಎ), ಬೂಮ್ರಾ ಔಟಾಗದೆ 0 (0ಎಸೆತ)

ಇತರೆ 12 (ವೈಡ್ 12)

ವಿಕೆಟ್ ಪತನ: 1–49 (ರೋಹಿತ್ ಶರ್ಮಾ; 4.5), 2–61(ವಿರಾಟ್ ಕೊಹ್ಲಿ;6.1), 3–61(ರಿಷಭ್ ಪಂತ್; 6.2), 4–89 (ಸೂರ್ಯಕುಮಾರ್ ಯಾದವ್;10.3), 5–89 (ಹಾರ್ದಿಕ್ ಪಾಂಡ್ಯ;10.4), 6–122 (ದಿನೇಶ್ ಕಾರ್ತಿಕ್; 15.1), 7–145 (ಹರ್ಷಲ್ ಪಟೇಲ್; 16.6), 8–159 (ಭುವನೇಶ್ವರ್ ಕುಮಾರ್; 18.6)

ಬೌಲಿಂಗ್: ಡೇವಿಡ್ ವಿಲಿ 3–0–35–0, ಸ್ಯಾಮ್ ಕರನ್ 3–0–26–0, ಮೋಯಿನ್ ಅಲಿ 2–0–23–0, ರಿಚರ್ಡ್ ಗ್ಲೀಸನ್ 4–1–15–3, ಮ್ಯಾಥ್ಯೂ ಪಾರ್ಕಿನ್ಸನ್ 2–0–21–0, ಕ್ರಿಸ್ ಜೋರ್ಡಾನ್ 4–0–27–4, ಲಿಯಾಮ್ ಲಿವಿಂಗ್‌ಸ್ಟೋನ್ 2–0–23–0

ಇಂಗ್ಲೆಂಡ್ 121 (17 ಓವರ್)

ಜೇಸನ್ ಸಿ ರೋಹಿತ್ ಬಿ ಭುವನೇಶ್ವರ್ 0 (1ಎ), ಬಟ್ಲರ್ ಸಿ ಪಂತ್ ಬಿ ಭುವನೇಶ್ವರ್ 4 (5ಎ), ಮಲಾನ್ ಸಿ ಹರ್ಷಲ್ ಬಿ ಚಾಹಲ್ 19 (25ಎ, 4X2), ಲಿವಿಂಗ್‌ಸ್ಟೋನ್ ಬಿ ಬುಮ್ರಾ 15 (9ಎ, 4X3), ಬ್ರೂಕ್ ಸಿ ಸೂರ್ಯಕುಮಾರ್ ಬಿ ಚಾಹಲ್ 8 (9ಎ, 4X2), ಮೋಯಿನ್ ಸಿ ರೋಹಿತ್ ಬಿ ಹಾರ್ದಿಕ್ 35 (21ಎ, 4X3, 6X2), ಸ್ಯಾಮ್ ಸಿ ಹಾರ್ದಿಕ್ ಬಿ ಬೂಮ್ರಾ 2 (4ಎ), ವಿಲಿ ಔಟಾಗದೆ 33 (22ಎ, 4X3, 6X2), ಜೋರ್ಡಾನ್ ರನೌಟ್ (ಚಾಹಲ್/ರೋಹಿತ್) 1 (1ಎ), ಗ್ಲೀಸನ್ ಸಿ ಕೊಹ್ಲಿ ಬಿ ಭುವನೇಶ್ವರ್ 2 (3ಎ), ಪಾರ್ಕಿನ್ಸನ್ ಬಿ ಹರ್ಷಲ್ 0 (2ಎ)

ಇತರೆ (ಲೆಗ್‌ಬೈ 1, ವೈಡ್ 1) 2

ವಿಕೆಟ್ ಪತನ: 1-0 (ಜೇಸನ್ ರಾಯ್, 0.1), 2-11 (ಜೋಸ್ ಬಟ್ಲರ್, 2.3), 3-27 (ಲಿಯಾಮ್ ಲಿವಿಂಗ್‌ಸ್ಟೋನ್, 4.1), 4-41 (ಹ್ಯಾರಿ ಬ್ರೂಕ್, 6.4), 5-55 (ಡೇವಿಡ್ ಮಲಾನ್, 9.1), 6-60 (ಸ್ಯಾಮ್ ಕರನ್, 10.2), 7-94 (ಮೋಯಿನ್ ಅಲಿ, 14.2), 8-95 (ಕ್ರಿಸ್ ಜೋರ್ಡಾನ್, 14.3), 9-109 (ರಿಚರ್ಡ್ ಗ್ಲೀಸನ್, 15.4), 10-121 (ಮ್ಯಾಟ್ ಪಾರ್ಕಿನ್ಸನ್, 16.6)

ಬೌಲಿಂಗ್: ಭುವನೇಶ್ವರ್ ಕುಮಾರ್ 3–1–15–3, ಜಸ್‌ಪ್ರೀತ್ ಬೂಮ್ರಾ 3–1–10–2, ಹಾರ್ದಿಕ್ ಪಾಂಡ್ಯ 3–0–29–1, ಹರ್ಷಲ್ ಪಟೇಲ್ 4–0–34–1, ಯಜುವೇಂದ್ರ ಚಾಹಲ್ 2–0–10–2, ರವೀಂದ್ರ ಜಡೇಜ 2–0–22–0

ಫಲಿತಾಂಶ: ಭಾರತ ತಂಡಕ್ಕೆ 49 ರನ್‌ಗಳ ಜಯ

ವಿಶ್ವ ಅಥ್ಲೆಟಿಕ್ಸ್: ರಷ್ಯಾಕ್ಕಿಲ್ಲ ಅವಕಾಶ

ವಾಷಿಂಗ್ಟನ್ (ಪಿಟಿಐ): ಈ ತಿಂಗಳು ನಡೆಯಲಿರುವ ವಿಶ್ವ ಚಾಂಪಿಯನ್‌ಷಿಪ್‌ನ ಟ್ರ್ಯಾಕ್ ಮತ್ತು ಫೀಲ್ಡ್ ಅಥ್ಲೆಟಿಕ್ಸ್ ಸ್ಪರ್ಧೆಗಳಿಗೆ ರಷ್ಯಾದ ಕ್ರೀಡಾಪಟುಗಳಿಗೆ ಅವಕಾಶ ನೀಡಲಾಗಿಲ್ಲ. ಉಕ್ರೇನ್ ಮೇಲೆ ಯುದ್ಧ ನಡೆಸುತ್ತಿರುವ ಹಿನ್ನೆಲೆಯಲ್ಲಿ ರಷ್ಯಾ ಮೇಲೆ ಈ ನಿರ್ಬಂಧ ಹೇರಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ವರ್ಷದ ಫೆಬ್ರುವರಿಯಲ್ಲಿ ಉಕ್ರೇನ್ ಮೇಲೆ ರಷ್ಯಾ ಯುದ್ಧ ಘೋಷಿಸಿತ್ತು. ಆಗಿನಿಂದ ಹಲವು ಪ್ರಮುಖ ಸ್ಪರ್ಧೆಗಳಿಗೆ ರಷ್ಯಾ ಅಥ್ಲೀಟ್‌ಗಳಿಗೆ ಅವಕಾಶ ನಿರಾಕರಿಸಲಾಗಿದೆ. ವಿಶ್ವ ಚಾಂಪಿಯನ್‌ಷಿಪ್ ಇದೇ 15ರಿಂದ 24ರವರೆಗೆ ಅಮೆರಿಕದ ಯೂಜೀನ್‌ನಲ್ಲಿ ನಿಗದಿಯಾಗಿದೆ.

ಇದೇ ವೇಳೆ ರಷ್ಯಾದ 18 ಸ್ಪರ್ಧಿಗಳಿಗೆ ಅಂತರರಾಷ್ಟ್ರೀಯ ಸ್ಪರ್ಧೆ ಗಳಲ್ಲಿ ತಟಸ್ಥವಾಗಿ ಸ್ಪರ್ಧಿಸಲು ಅವಕಾಶ ನೀಡಲಾಗಿದೆ. ಆದರೆ ಇದು ವಿಶ್ವಚಾಂಪಿಯನ್‌ಷಿಪ್‌ಗೆ ಅನ್ವಯಿಸುವುದಿಲ್ಲ. 2015ರಲ್ಲಿ ರಷ್ಯಾದಲ್ಲಿ ನಡೆದಿದ್ದ ಉದ್ದೀಪನ ಮದ್ದು ಸೇವನೆ ಹಗರಣದಿಂದ ಮುಕ್ತರಾದ ಅಥ್ಲೀಟ್‌ಗಳು ಇವರು.

ಈಗ ರಷ್ಯಾದ ಒಟ್ಟು 73 ಅಥ್ಲೀಟ್‌ಗಳು ಅಂತರರಾಷ್ಟ್ರೀಯ ಸ್ಪರ್ಧೆಗಳಲ್ಲಿ ತಟಸ್ಥರಾಗಿ ಭಾಗವಹಿಸುತ್ತಿದ್ದಾರೆ. ಇವರಲ್ಲಿ ಹಾಲಿ ಒಲಿಂಪಿಕ್ ಮತ್ತು ವಿಶ್ವ ಚಾಂಪಿಯನ್ ಹೈಜಂಪ್ ಪಟು ಮರಿಯಾ ಲಸಿಟ್ಕೇನ್ ಒಬ್ಬರು. ಅಂತರರಾಷ್ಟ್ರೀಯ ಸ್ಪರ್ಧೆಗಳಲ್ಲಿ ಅವರು ಒಮ್ಮೆಯೂ ಸೋಲು ಕಂಡಿಲ್ಲ. ರಷ್ಯಾ ಅಥ್ಲೀಟ್‌ಗಳ ನಿಷೇಧದ ವಿರುದ್ಧ ಮರಿಯಾ ಕಿಡಿ ಕಾರಿದ್ದರು.

ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಸಂಖ್ಯೆ: ಗುವಿಸಕಂನಿ/ಅಅ(ವಿ)(ಖರೀದಿ)/ ಕಾನಿಇಂ/ಸಕಾನಿಇಂ/2022–23/18579–83 ದಿನಾಂಕ:08.07.2022

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರಮೆಂಟ ಮುಖಾಂತರ)

ಪಿ.ಸಿ–1194: ಟೈಪ್–II ಅನ್‌ಇನ್‌ಹೆಬಿಟೆಡ್ ವಿದ್ಯುತ್ ಪರಿವರ್ತಕದ ತೈಲವನ್ನು ಗು.ವಿ.ಸ.ಕಂ.ನಿ ತಾಂತ್ರಿಕ ನಿರ್ದಿಷ್ಟತೆಯಂತೆ ತಯಾರು ಮಾಡಿ ಸರಬರಾಜು ಮಾಡುವದು. ದಿನಾಂಕ:ಇ–ಪ್ರೊಕ್ಯೂರಮೆಂಟನಲ್ಲಿ ಬಿಡ್ ದಾಖಲೆಗಳು ಲಭ್ಯವಿರುವ ದಿನಾಂಕ: 11.07.2022 ರಂದು ಅಥವಾ ನಂತರ. ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 19.07.2022 ತಾಂತ್ರಿಕ/ಆರ್ಥಿಕ ಬಿಡ್ ತೆರೆಯುವ ದಿನಾಂಕ: 21.07.2022/22.07.2022. ಟೆಂಡರ್ ಮೊತ್ತ: ರೂ. 719.04 ಲಕ್ಷ. ಬಿಡ್ಡುದಾರರ ಅರ್ಹತೆ ವಿವರ: ಟೆಂಡರ್ ದಸ್ತಾವೇಜು (ಐ.ಎಫ್.ಬಿ) ಪ್ರಕಾರ, ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ.: ಕಾರ್ಯನಿರ್ವಾಹಕ ಅಭಿಯಂತರರು(ವಿ), ಖರೀದಿ, ನಿಗಮ ಕಾರ್ಯಾಲಯ, ಗು.ವಿ.ಸ.ಕಂ.ನಿ. ಕಲಬುರಗಿ–585 102. ಮೊ.ಸಂ: 9448359006: ಅಂತರ್ಜಾಲತಾಣದ ವಿಳಾಸ: www.eproc.karnataka.gov.in

ಸಹಿ/– ಅಧೀಕ್ಷಕ ಅಭಿಯಂತರರು (ವಿ).,
ವಾ.ಸಾ.ಸಂ.ಇ/ಕಲಬುರಗಿ/347/ಎಂ.ಸಿ&ಎ/2022–23 ಖರೀದಿ, ನಿಗಮ ಕಛೇರಿ, ಗು.ವಿ.ಸ.ಕಂ.ನಿ, ಕಲಬುರಗಿ.

ಕರ್ನಾಟಕ ಸರಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕಲಬುರಗಿ. www.midnglb@rediffmail.com. ದೂರವಾಣಿ : 08472 –220196

ಐಎಫ್‌ಟಿ. ನಂ: ಕಾನಿಅ/ಸನೀಅಅವಿ/ಕ/ಯೋಶಾ–1/ಕೆ.ಡಬ್ಲ್ಯೂ–4/2022–23/1410 ದಿನಾಂಕ: 07–07–2022

–: ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ–4) :–

1) ಕಾಮಗಾರಿ ವಿವರ: ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ ಕಾರ್ಯಾಲಯದಿಂದ ಅರ್ಹ ಗುತ್ತಿಗೆದಾರರಿಂದ 2021–22ನೇ ಸಾಲಿನ 4702 ಪ್ರಧಾನ ಕಾಮಗಾರಿಗಳು – ಕೆರೆಗಳ ಆಧುನೀಕರಣ ಯೋಜನೆ ಅಡಿಯಲ್ಲಿ ಕಾಮಗಾರಿಗಳಿಗಾಗಿ ಇ–ಟೆಂಡರ ಮುಖಾಂತರ ಕರೆಯಲಾಗಿದೆ. 2) ಕಾಮಗಾರಿ ಅಂದಾಜು ಮೊತ್ತ: ರೂ. 132,54,835.47, 3) ಗುತ್ತಿಗೆದಾರರ ಅರ್ಹತೆ ವಿವರ : 1ನೇ ದರ್ಜೆ, 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ: ಅರ್ಜಿಯ ಬೆಲೆ ಇ–ಪ್ರೊಕ್ಯೂರಮೆಂಟನಂತೆ, ಇ.ಎಂ.ಡಿ. ರೂ. 2,00,000.00, 5) ಟೆಂಡರ್ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ : 22–07–2022 ಬೆಳಿಗ್ಗೆ 11.00 ಗಂಟೆಯ ವರೆಗೆ, 6) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ: 25–07–2022 ಸಾಯಂಕಾಲ 17.30 ಗಂಟೆಯ ವರೆಗೆ, 7) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 26–07–2022 ಸಾಯಂಕಾಲ 17.30 ಗಂಟೆಯ ವರೆಗೆ, 8) ಆರ್ಥಿಕ ಬಿಡ್ ತೆರೆಯುವ ದಿನಾಂಕ : 28–07–2022 ಬೆಳಿಗ್ಗೆ 17.30 ಗಂಟೆಯ ವರೆಗೆ, 9) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕಲಬುರಗಿ. 10) ಅಂತರಜಾಲ ತಾಣದ ವಿಳಾಸ: www.e-proc.karnataka.gov.in

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/342/ಎಂ.ಸಿ.&ಎ/2022–23

ರಿಬಾಕಿನಾ ವಿಂಬಲ್ಡನ್ ರಾಣಿ

ಕಜಕಸ್ತಾನ ಆಟಗಾರ್ತಿಗೆ ಚೊಚ್ಚಲ ಪ್ರಶಸ್ತಿ: ಫೈನಲ್‌ನಲ್ಲಿ ಎಡವಿದ ಜಬೇರ್

ವಿಂಬಲ್ಡನ್, ಲಂಡನ್ (ರಾಯಿಟರ್ಸ್/ಎಪಿ): ಕಜಕಸ್ತಾನದ ಎಲೆನಾ ರಿಬಾಕಿನಾ ವಿಂಬಲ್ಡನ್ ಟೆನಿಸ್ ಟೂರ್ನಿಯ 'ರಾಣಿ'ಯಾಗಿ ಮೆರೆದರು. ಗ್ರ್ಯಾನ್‌ಸ್ಲಾಮ್ ಟ್ರೋಫಿ ಗೆದ್ದ ಆಫ್ರಿಕಾದ ಮೊದಲ ಮಹಿಳೆ ಎನಿಸಿಕೊಳ್ಳುವ ಆನ್ಸ್ ಜಬೇರ್ ಅವರ ಕನಸು ನುಚ್ಚುನೂರಾಯಿತು.

ಆಲ್ ಇಂಗ್ಲೆಂಡ್‌ನ ಕ್ಲಬ್‌ನ ಸೆಂಟರ್ ಕೋರ್ಟ್‌ನಲ್ಲಿ ಶನಿವಾರ ನಡೆದ ಮಹಿಳೆಯರ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ರಿಬಾಕಿನಾ 3-6, 6-2, 6-2 ರಲ್ಲಿ ಟ್ಯುನಿಷಿಯಾದ ಜಬೇರ್ ವಿರುದ್ಧ ಗೆದ್ದರು. ವೇಗದ ಸರ್ವ್ ಮತ್ತು ನಿಖರ ಫೋರ್‌ಹ್ಯಾಂಡ್ ಹೊಡೆತಗಳ ಮೂಲಕ ಎದುರಾಳಿಯನ್ನು ಕಂಗೆಡಿಸಿದ ರಿಬಾಕಿನಾ ಒಂದು ಗಂಟೆ 47 ನಿಮಿಷಗಳಲ್ಲಿ ಜಯಿಸಿದರು. ಗ್ರ್ಯಾನ್ ಸ್ಲಾಮ್ ಪ್ರಶಸ್ತಿ ಗೆದ್ದ ಕಜಕಸ್ತಾನದ ಮೊದಲ ಮಹಿಳೆ ಎಂಬ ಗೌರವ ಅವರಿಗೆ ಒಲಿಯಿತು.

ಮಾಸ್ಕೊ ಮೂಲದ ರಿಬಾಕಿನಾ 2018 ರವರೆಗೂ ರಷ್ಯಾವನ್ನು ಪ್ರತಿನಿಧಿಸುತ್ತಿದ್ದರು. ಆ ಬಳಿಕ ಕಜಕಸ್ತಾನ ಪರ ಆಡತೊಡಗಿದ್ದರು.

ಮೊದಲ ಸೆಟ್‌ನಲ್ಲಿ ಜಬೇರ್ ಪೂರ್ಣ ಪ್ರಭುತ್ವ ಮೆರೆದರು. ಎರಡು ಬಾರಿ ಎದುರಾಳಿಯ ಸರ್ವ್ ಬ್ರೇಕ್ ಮಾಡಿದರು. ತಮ್ಮ ಎಲ್ಲ ಸರ್ವ್‌ಗಳಲ್ಲಿ ಪಾಯಿಂಟ್ ಗಳಿಸಿ 1–0 ರಲ್ಲಿ ಮುನ್ನಡೆದರು.

2ನೇ ಸೆಟ್‌ನಲ್ಲಿ ಲಯ ಕಂಡುಕೊಂಡ ರಿಬಾಕಿನಾ ಮೊದಲ ಗೇಮ್‌ನಲ್ಲೇ ಎದುರಾಳಿಯ ಸರ್ವ್ ಬ್ರೇಕ್ ಮಾಡಿದರು. ಹಿನ್ನಡೆ ಅನುಭವಿಸಿದ ಜಬೇರ್ ಒತ್ತಡಕ್ಕೆ ಒಳಗಾದಂತೆ ಕಂಡುಬಂದರು. ಇದರಿಂದ ಮೇಲಿಂದ ಮೇಲೆ ಸ್ವಯಂಕೃತ ತಪ್ಪುಗಳು ಉಂಟಾದವು. ಕಜಕಿಸ್ತಾನದ ಆಟಗಾರ್ತಿ ಸುಲಭದಲ್ಲಿ ಸೆಟ್ ಗೆದ್ದು 2–2 ರಲ್ಲಿ ಸಮಬಲ ಸಾಧಿಸಿದರು. ನಿರ್ಣಾಯಕ ಸೆಟ್‌ನಲ್ಲೂ ರಿಬಾಕಿನಾ ಉತ್ತಮ ಆಟ ಮುಂದುವರಿಯಿತು. ಜಬೇರ್ ಅವರ ಬ್ಯಾಕ್‌ಹ್ಯಾಂಡ್ ರಿಟರ್ನ್‌ನಲ್ಲಿ ಚೆಂಡು ಅಂಕಣದ ಹೊರ ಬೀಳುತ್ತಿದ್ದಂತೆಯೇ, ಗೆಲುವಿನ ನಗು ಬೀರಿದರು.

ಎಲೆನಾ ರಿಬಾಕಿನಾ ಟ್ರೋಫಿಯೊಂದಿಗೆ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ನಿಕ್–ನೊವಾಕ್ ಫೈನಲ್ ಇಂದು

ಪುರುಷರ ಸಿಂಗಲ್ಸ್ ವಿಭಾಗದ ಫೈನಲ್ ಭಾನುವಾರ ನಡೆಯಲಿದ್ದು, ಸರ್ಬಿಯದ ನೊವಾಕ್ ಜೊಕೊವಿಚ್ ಮತ್ತು ಆಸ್ಟ್ರೇಲಿಯಾದ ನಿಕ್ ಕಿರ್ಗಿಯೊಸ್ ಪೈಪೋಟಿ ನಡೆಸುವರು.

35 ವರ್ಷದ ಜೊಕೊವಿಚ್, ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲಿ ಏಳನೇ ಹಾಗೂ ವೃತ್ತಿಜೀವನದ 21ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯ ನಿರೀಕ್ಷೆಯಲ್ಲಿದ್ದರೆ, ಕಿರ್ಗಿಯೊಸ್ ಚೊಚ್ಚಲ ಟ್ರೋಫಿಯ ಕನಸಿನೊಂದಿಗೆ ಕಣಕ್ಕಿಳಿಯಲಿದ್ದಾರೆ.

ಕಿರ್ಗಿಯೊಸ್ ಈ ಟೂರ್ನಿಯಲ್ಲಿ ಉತ್ತಮ ಪ್ರದರ್ಶನ ನೀಡುವ ಜತೆಯಲ್ಲಿ ವಿವಾದಗಳಿಂದಲೂ ಸುದ್ದಿಯಾಗಿದ್ದು, 'ಶೋಮ್ಯಾನ್' ಎಂಬ ಹೆಸರು ಪಡೆದುಕೊಂಡಿದ್ದಾರೆ. ಕ್ರೀಡಾಸ್ಫೂರ್ತಿಗೆ ವಿರುದ್ಧವಾಗಿ ವರ್ತಿಸಿ ಎರಡು ಸಲ ದಂಡವನ್ನೂ ತೆತ್ತಿದ್ದಾರೆ. ಇಲ್ಲಿ ಕಿರೀಟ ಮುಡಿಗೇರಿಸಿಕೊಂಡು ಟೀಕಾಕಾರರ ಬಾಯಿ ಮುಚ್ಚಿಸುವ ಲೆಕ್ಕಾಚಾರ ಅವರದ್ದು.

ಪಂದ್ಯ ಆರಂಭ: ಸಂಜೆ 6.30 (ಭಾರತೀಯ ಕಾಲಮಾನ).
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

₹ 19 ಕೋಟಿ ಬಹುಮಾನ

ವಿಂಬಲ್ಡನ್ ಚಾಂಪಿಯನ್ ರಿಬಾಕಿನಾ ಅವರು ಮಿರುಗುವ ಟ್ರೋಫಿಯ ಜತೆ ₹ 19 ಕೋಟಿ ನಗದು ಬಹುಮಾನ ಗೆದ್ದರು. 'ರನ್ನರ್ಸ್ ಅಪ್' ಜಬೇರ್ ₹ 10 ಕೋಟಿ ನಗದು ಬಹುಮಾನ ಗಳಿಸಿದರು. ಕಳೆದ ಬಾರಿಗೆ ಹೋಲಿಸಿದರೆ ಬಹುಮಾನ ಮೊತ್ತ ಶೇ 17 ರಷ್ಟು ಹೆಚ್ಚಳ ಆಗಿದೆ.

ಕರುಣರತ್ನೆ, ಮೆಂಡಿಸ್ ಅರ್ಧಶತಕ

ಗಾಲ್ (ಎಎಫ್‌ಪಿ): ನಾಯಕ ದಿಮುತ್ ಕರುಣರತ್ನೆ (86) ಮತ್ತು ಕುಶಾಲ್ ಮೆಂಡಿಸ್ (ಬ್ಯಾಟಿಂಗ್ 84) ಅವರ ಅರ್ಧಶತಕಗಳ ನೆರವಿನಿಂದ ಶ್ರೀಲಂಕಾ ತಂಡ, ಎರಡನೇ ಕ್ರಿಕೆಟ್ ಟೆಸ್ಟ್‌ನಲ್ಲಿ ಆಸ್ಟ್ರೇಲಿಯಾಕ್ಕೆ ದಿಟ್ಟ ಉತ್ತರ ನೀಡಿದೆ.

ಗಾಲ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದ ಎರಡನೇ ದಿನ ಶನಿವಾರದ ಆಟದ ಅಂತ್ಯಕ್ಕೆ ಶ್ರೀಲಂಕಾ, 2 ವಿಕೆಟ್‌ಗೆ 184 ರನ್ ಗಳಿಸಿದೆ. ಆಸ್ಟ್ರೇಲಿಯಾ ಮೊದಲ ಇನಿಂಗ್ಸ್‌ನಲ್ಲಿ 364 ರನ್ ಗಳಿಸಿತ್ತು.

ಆತಿಥೇಯ ತಂಡದ ಕರುಣರತ್ನೆ ಮತ್ತು ಮೆಂಡಿಸ್ ಎರಡನೇ ವಿಕೆಟ್‌ಗೆ 152 ರನ್ ಸೇರಿಸಿ ತಂಡಕ್ಕೆ ಆಸರೆಯಾದರು. ಕರುಣರತ್ನೆ ವಿಕೆಟ್ ಪಡೆದ ಮಿಚೆಲ್ ಸ್ವೆಪ್ಸನ್ ಈ ಜತೆಯಾಟ ಮುರಿದರು. 165 ಎಸೆತಗಳನ್ನು ಎದುರಿಸಿದ ಅವರು 10 ಬೌಂಡರಿ ಹೊಡೆದರು.

ಮೆಂಡಿಸ್ ಮತ್ತು ಏಂಜೆಲೊ ಮ್ಯಾಥ್ಯೂಸ್ (6) ಕ್ರೀಸ್‌ನಲ್ಲಿದ್ದರು. 152 ಎಸೆತಗಳನ್ನು ಎದುರಿಸಿರುವ ಮೆಂಡಿಸ್, 9 ಬೌಂಡರಿ ಹೊಡೆದಿದ್ದಾರೆ. ಇದಕ್ಕೂ ಮುನ್ನ 5 ವಿಕೆಟ್‌ಗೆ 298 ರನ್‌ಗಳಿಂದ ದಿನದಾಟ ಮುಂದುವರಿಸಿದ ಆಸ್ಟ್ರೇಲಿಯಾ 364 ರನ್‌ಗಳಿಗೆ ಆಲೌಟಾಯಿತು. ಪ್ರಭತ್ 118 ರನ್‌ಗೆ 6 ವಿಕೆಟ್ ಪಡೆದರು. ಸ್ಟೀವನ್ ಸ್ಮಿತ್ ಅವರು 145 ರನ್ ಗಳಿಸಿ (272 ಎ, 4X16) ಔಟಾಗದೆ ಉಳಿದರು. ಕೊನೆಯ ಕ್ರಮಾಂಕದ ಬ್ಯಾಟ್ಸ್‌ಮನ್‌ಗಳಿಂದ ಅವರಿಗೆ ತಕ್ಕ ಸಾಥ್ ಸಿಗಲಿಲ್ಲ.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್ ಆಸ್ಟ್ರೇಲಿಯಾ 364 (110 ಓವರ್) ಮಾರ್ನಸ್ ಲಾಬುಶೇನ್ 104, ಸ್ಟೀವನ್ ಸ್ಮಿತ್ ಔಟಾಗದೆ 145, ಅಲೆಕ್ಸ್ ಕೇರಿ 28, ಪ್ರಭತ್ ಜಯಸೂರ್ಯ 118ಕ್ಕೆ 6, ಕಸುನ್ ರಜಿತ 70ಕ್ಕೆ 2. ಶ್ರೀಲಂಕಾ 2ಕ್ಕೆ 184 (63 ಓವರ್) ದಿಮುತ್ ಕರುಣರತ್ನೆ 86, ಕುಶಾಲ್ ಮೆಂಡಿಸ್ ಬ್ಯಾಟಿಂಗ್ 84, ಏಂಜೆಲೊ ಮ್ಯಾಥ್ಯೂಸ್ ಬ್ಯಾಟಿಂಗ್ 6, ಮಿಚೆಲ್ ಸ್ಟಾರ್ಕ್ 28ಕ್ಕೆ 1, ಮಿಚೆಲ್ ಸ್ವೆಪ್ಸನ್ 31ಕ್ಕೆ 1)

ಹೀರೊ ಮೋಟೊಕಾರ್ಪ್ ಡರ್ಟ್ ಬೈಕ್ ಚಾಲೆಂಜ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೀರೊ ಮೋಟೊಕಾರ್ಪ್ ಕಂಪನಿಯು ಮೊದಲ ಬಾರಿಗೆ ಹೀರೊ ಡರ್ಟ್ ಬೈಕ್ ಚಾಲೆಂಜ್ (ಎಚ್‌ಡಿಬಿಸಿ) ನಡೆಸಲು ನಿರ್ಧರಿಸಿದೆ.

ದೇಶದ 45 ನಗರಗಳಿಂದ ಪ್ರಮುಖ 'ಆಫ್ ರೋಡ್' ಸವಾರರನ್ನು ಈ ರೇಸ್ ಒಳಗೊಳ್ಳಲಿದೆ. ರೇಸ್ ವಿಜೇತ ಮತ್ತು ರನ್ನರ್‌ಅಪ್ ಸ್ಥಾನ ಗಳಿಸಿದವರಿಗೆ ಹೀರೊ ಎಕ್ಸ್‌ಪಲ್ಸ್ 200 4ವಿ ಮೋಟರ್‌ಸೈಕಲ್ ಬಹುಮಾನ ಮತ್ತು ₹ 20 ಲಕ್ಷ ಮೌಲ್ಯದ ಹೀರೊ ಮೋಟೊಕಾರ್ಪ್ ಪ್ರಾಯೋಜಕತ್ವ ನೀಡಲಾಗುತ್ತದೆ.

ಎಚ್‌ಡಿಬಿಸಿ ನವೆಂಬರ್‌ನಲ್ಲಿ ಎಂಟಿವಿ ಮತ್ತು ವೂಟ್‌ನಲ್ಲಿ ಪ್ರಸಾರವಾಗಲಿದೆ. ನೋಂದಣಿ ಮತ್ತು ಹೆಚ್ಚಿನ ವಿವರಗಳಿಗಾಗಿ www.hdbc.in ವೆಬ್‌ಸೈಟ್ ಸಂಪರ್ಕಿಸಬೇಕು.

ಆನ್‌ಲೈನ್ ಅರ್ಜಿಗಳನ್ನು ಪರಿಶೀಲಿಸಿದ ಬಳಿಕ ಮೊದಲ ಸುತ್ತಿನ ರೇಸ್ ಆರಂಭಿಸಲಾಗುತ್ತದೆ.

ಸಂಕ್ಷಿಪ್ತ ಸುದ್ದಿ

ಚಿಕಿತ್ಸೆಗೆ ಸ್ಪಂದಿಸದೆ ಫುಟ್‌ಬಾಲ್ ಆಟಗಾರ ಸಾವು

ಮಂಡ್ಯ: ವಿದ್ಯುತ್ ಸ್ಪರ್ಶದಿಂದ ಗಾಯಗೊಂಡು ಚಿಕಿತ್ಸೆ ಪಡೆಯುತ್ತಿದ್ದ ರಾಜ್ಯಮಟ್ಟದ ಫುಟ್‌ಬಾಲ್ ಆಟಗಾರ ಎಂ.ಎನ್. ವಿಶ್ವಾಸ್ (21) ಶನಿವಾರ ಮೃತಪಟ್ಟರು.

ವಿಶ್ವಾಸ್

ನಗರದ ಸ್ವರ್ಣ ಫುಟ್‌ಬಾಲ್ ಕ್ಲಬ್ ಪರವಾಗಿ ಆಡುತ್ತಿದ್ದ ಅವರು ರಾಜ್ಯಮಟ್ಟದ ಹಲವು ಟೂರ್ನಿಗಳಲ್ಲಿ ಭಾಗವಹಿಸಿದ್ದರು. ಪಿಇಎಸ್ ಕಾಲೇಜಿನ ಬಿ.ಕಾಂ ವಿದ್ಯಾರ್ಥಿಯಾಗಿದ್ದ ಅವರು ಟೂರ್ನಿಗಳಲ್ಲಿ ಮೈಸೂರು ವಿಶ್ವವಿದ್ಯಾಲಯವನ್ನು ಪ್ರತಿನಿಧಿಸಿದ್ದರು.

ವಿಶ್ವಾಸ್ ನಗರದ ಗುತ್ತಲು ಬಡಾವಣೆಯ ಕಾರ್ಪೆಂಟರ್ ನರಸಿಂಹಮೂರ್ತಿ– ಶ್ಯಾಮಲ ದಂಪತಿಯ ಪುತ್ರ. ಜುಲೈ 1ರಂದು ಹೊಸ ಮನೆಯ ಗೋಡೆಗೆ ನೀರು ಹಾಕುವಾಗ ವಿದ್ಯುತ್ ಸ್ಪರ್ಶವಾಗಿ ದೇಹಕ್ಕೆ ಶೇ 80ರಷ್ಟು ಗಾಯವಾಗಿ ವಿಶ್ವಾಸ್ ಕೋಮಾ ಸ್ಥಿತಿಗೆ ತೆರಳಿದ್ದರು. ಮೈಸೂರಿನ ಮಣಿಪಾಲ್ ಆಸ್ಪತ್ರೆಗೆ ದಾಖಲಿಸಲಾಗಿತ್ತು.ಚಿಕಿತ್ಸೆಗಾಗಿ ನಗರದ ಕ್ರೀಡಾ ಪ್ರೇಮಿಗಳು, ಜನಪ್ರತಿನಿಧಿಗಳು, ಸಾರ್ವಜನಿಕರು ಹಣ ನೀಡಿದ್ದರು.

ಬಜರಂಗ್‌ಗೆ ಅಮೆರಿಕದಲ್ಲಿ ತರಬೇತಿ

ನವದೆಹಲಿ (ಪಿಟಿಐ): ಭಾರತದ ಕುಸ್ತಿಪಟು ಬಜರಂಗ್ ಪೂನಿಯಾ ಅವರು ಬರ್ಮಿಂಗ್‌ಹ್ಯಾಂನಲ್ಲಿ ನಡೆಯಲಿರುವ ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ಪೂರ್ವಭಾವಿಯಾಗಿ ಅಮೆರಿಕದಲ್ಲಿ ತರಬೇತಿ ಪಡೆಯಲಿದ್ದಾರೆ.

'ಬಜರಂಗ್ ಅವರಿಗೆ ಯುನೈಟೆಡ್ ಕಿಂಗ್‌ಡಂ(ಯುಕೆ) ವೀಸಾ ದೊರೆತಿದೆ. ಆದ್ದರಿಂದ ತರಬೇತಿಗಾಗಿ ಅಮೆರಿಕಕ್ಕೆ ತೆರಳಲಿದ್ದಾರೆ. ಅವರು ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳಲು ಅಮೆರಿಕದಿಂದ ನೇರವಾಗಿ ಇಂಗ್ಲೆಂಡ್‌ಗೆ ತೆರಳಬೇಕಿತ್ತು. ಅಮೆರಿಕದಲ್ಲಿದ್ದುಕೊಂಡು ಯುಕೆ ವೀಸಾದ ಪ್ರಕ್ರಿಯೆ ಪೂರ್ಣಗೊಳಿಸುವುದು ಕಷ್ಟವಾಗಿತ್ತು. ಇದೀಗ ಯುಕೆ ವೀಸಾ ದೊರೆತಿರುವುದರಿಂದ ಯಾವುದೇ ಆತಂಕವಿಲ್ಲದೆಯೇ ಅಮೆರಿಕಕ್ಕೆ ಪ್ರಯಾಣಿಸಲಿದ್ದಾರೆ' ಎಂದು ಭಾರತ ಕ್ರೀಡಾ ಪ್ರಾಧಿಕಾರದ ಪ್ರಕಟಣೆ ತಿಳಿಸಿದೆ.

ಧನಲಕ್ಷ್ಮಿಗೆ ದೊರೆಯದ ವೀಸಾ: ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳುವ ಭಾರತ ತಂಡದಲ್ಲಿ ಸ್ಥಾನ ಪಡೆದಿರುವ 200 ಮೀ. ಓಟದ ಸ್ಪರ್ಧಿ ಧನಲಕ್ಷ್ಮಿ ಶೇಖರ್ ಅವರಿಗೆ ಇನ್ನೂ ಅಮೆರಿಕದ ವೀಸಾ ಲಭಿಸಿಲ್ಲ. ಆದ್ದರಿಂದ ಐಎಎಫ್ ಬಿಡುಗಡೆ ಮಾಡಿರುವ ಭಾರತ ತಂಡದ ಪಟ್ಟಿಯಲ್ಲಿ ಧನಲಕ್ಷ್ಮಿ ಹೆಸರು ಇಲ್ಲ.

ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್ ಜುಲೈ 15 ರಿಂದ 24ರ ವರೆಗೆ ನಡೆಯಲಿದೆ. ನಿಗದಿತ ಸಮಯದ ಒಳಗಾಗಿ ವೀಸಾ ದೊರೆಯದಿದ್ದರೆ, ಅವರು ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳುವ ಅವಕಾಶ ಕಳೆದುಕೊಳ್ಳಲಿದ್ದಾರೆ.

ಪ್ರತ್ಯಾಂಶುಗೆ ಸ್ಥಾನ

ಬೆಂಗಳೂರು: ಇಂಡೊನೇಷ್ಯಾದ ಜಕಾರ್ತದಲ್ಲಿ ಇದೇ 12ರಿಂದ ನಿಗದಿಯಾಗಿರುವ ಏಷ್ಯಾಕಪ್ ಟೂರ್ನಿಗೆ ಭಾರತ ಬ್ಯಾಸ್ಕೆಟ್‌ಬಾಲ್ ತಂಡವನ್ನು ಪ್ರಕಟಿಸಲಾಗಿದ್ದು, ಕರ್ನಾಟಕದ ಪ್ರತ್ಯಾಂಶು ತೋಮರ್ ಸ್ಥಾನ ಪಡೆದಿದ್ದಾರೆ.

ತಂಡ: ವಿಶೇಷ್ ಭೃಗುವಂಶಿ (ನಾಯಕ), ಪ್ರತ್ಯಾಂಶು ತೋಮರ್, ಮುಯಿನ್ ಬೆಕ್ ಹಫೀಜ್, ಎಂ. ಅರವಿಂದ್ ಕುಮಾರ್, ಸಹೈಜ್ ಪ್ರತಾಪ್ ಸಿಂಗ್ ಶೆಖೋನ್, ಅಮರೇಂದ್ರ ನಾಯಕ್, ವಿವೇಕ್ ವಿನುಭಾಯ್ ಗೋಟಿ, ಕುಶಲ್ ಸಿಂಗ್, ಪ್ರಣವ್ ಪ್ರಿನ್ಸ್, ಪ್ರಶಾಂತ್ ಸಿಂಗ್ ರಾವತ್, ಆರ್ಯನ್, ಅಮೃತಪಾಲ್ ಸಿಂಗ್. ಕೋಚ್: ವೆಸಲಿನ್ ಮ್ಯಾಟಿಚ್, ಸಹಾಯಕ ಕೋಚ್: ಥಾಂಕಚನ್ ಎಂ.ಸಿ, ಸಂತೋಷ್. ವ್ಯವಸ್ಥಾಪಕ: ಅಜಿತ್ ಸಿಂಗ್ ರಾಥೋಡ್, ಫಿಸಿಯೊ: ಶಿವ ಷಣ್ಮುಗ ಸಿಂಗ್.

ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ
ಕಾರ್ಯಪಾಲಕ ಅಭಿಯಂತರರವರ ಕಛೇರಿ ವಿದ್ಯುತ್ ವಿಭಾಗ ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ
ಕ್ರಮಾಂಕ:ಶಿಮನಪಾಶಿ:ಕಾವಿ.ಅ:ವಿದ್ಯುತ್.ಡಿ:ಎಂ/ಸಿ.ಆರ್:10/2022-23 ದಿನಾಂಕ:06.07.2022

ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ಮುಖಾಂತರ)

ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಈ ಕೆಳಕಂಡ ಕಾಮಗಾರಿಗಳನ್ನು ಕ್ರಮವಾಗಿ KW-02 (ಕ್ರ.ಸಂ–01), KW-03 (ಕ್ರ.ಸಂ–02) KC-04 (ಕ್ರ.ಸಂ–03) ರಂತೆ ಪ್ರಸಕ್ತ ಬ್ಲಾಕ್ ಅವಧಿಗೆ ಟೆಂಡರ್ ಬಿಡ್ ಡಾಕ್ಯೂಮೆಂಟ್ ನಲ್ಲಿ ನಿಗಧಿಪಡಿಸಿರುವಂತೆ ನೊಂದಾಯಿತ ಅರ್ಹ ವಿದ್ಯುತ್ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಕ್ರ.ಸಂ–01&03 ಕಾಮಗಾರಿಗೆ ಏಕ–ಲಕೋಟೆ ಹಾಗೂ ಕ್ರ.ಸಂ–02 ಕಾಮಗಾರಿಗೆ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರು ವಿವರಗಳನ್ನು ವೆಬ್‌ಸೈಟ್ www.eprockarnataka.gov.inನಲ್ಲಿ ಪಡೆದುಕೊಳ್ಳಬಹುದು.

ದಿನಾಂಕ ಮತ್ತು ಸಮಯ ವಿವರ (1). ಇ–ಪ್ರೊಕ್ಯೂಮೆಂಟ್ ಪೋರ್ಟಲ್ ನಲ್ಲಿ ಇ–ಪೇಮೆಂಟ್ ಮೂಲಕ ಕ್ರಮ ಸಂಖ್ಯೆ: 01 ರಿಂದ 03 ಕಾಮಗಾರಿಗೆ ಟೆಂಡರ್ ಸಲ್ಲಿಸಲು ಪ್ರಾರಂಭಿಕ ದಿನಾಂಕ: : 07.07.2022. (2). ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಇ–ಪೇಮೆಂಟ್ ಮೂಲಕ ಕ್ರಮ ಸಂಖ್ಯೆ: 01&02 ರ ಕಾಮಗಾರಿಗೆ ಟೆಂಡರ್ ಬಿಡ್ ಸಲ್ಲಿಸಲು ಕಡೆಯ ದಿನಾಂಕ ಮತ್ತು ಸಮಯ: 22.07.2022. 16:00. (3). ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ನಲ್ಲಿ ಇ–ಪೇಮೆಂಟ್ ಮೂಲಕ ಕ್ರಮ ಸಂಖ್ಯೆ: 03ರ ಕಾಮಗಾರಿಗೆ ಟೆಂಡರ್ ಬಿಡ್ ಸಲ್ಲಿಸಲು ಕಡೆಯ ದಿನಾಂಕ ಮತ್ತು ಸಮಯ: 16.07.2022, 16:00. (4). ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಇ–ಪೇಮೆಂಟ್ ಮೂಲಕ ಕ್ರಮ ಸಂಖ್ಯೆ: 01ರ ಕಾಮಗಾರಿಗೆ ಆರ್ಥಿಕ ಬಿಡ್ ಮತ್ತು ಕ್ರಮ ಸಂಖ್ಯೆ: 2 ಕಾಮಗಾರಿಗೆ ಟೆಂಡರ್ ತಾಂತ್ರಿಕ ಬಿಡ್ ತರೆಯುವ ದಿನಾಂಕ ಮತ್ತು ಸಮಯ: 25.07.2022, 16:30. (5). ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ನಲ್ಲಿ ಇ–ಪೇಮೆಂಟ್ ಮೂಲಕ ಕ್ರಮ ಸಂಖ್ಯೆ: 03ರ ಕಾಮಗಾರಿಗೆ ಟೆಂಡರ್ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 18.07.2022, 16:30. (6). ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ನಲ್ಲಿ ಇ–ಪೇಮೆಂಟ್ ಮೂಲಕ ಕ್ರಮ ಸಂಖ್ಯೆ: 03 ರ ಕಾಮಗಾರಿಗೆ ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 29.07.2022, 16:30.

ಕ್ರ ಸಂ	ಕಾಮಗಾರಿಯ ವಿವರ	ಅಂದಾಜು ಮೊತ್ತ (ರೂ.ಲಕ್ಷ ಗಳಲ್ಲಿ)	ಅನುಧಾನ	ಇ.ಎಂ.ಡಿ (ರೂ.ಗಳಲ್ಲಿ)	ಕಾಮಗಾರಿ ಪೂರೈಸುವ ಅವಧಿ (ಮಳೆಗಾಲ ಒಳಗೊಂಡಂತೆ)	ಗುತ್ತಿಗೆದಾರರ ದರ್ಜೆ
1	ತ್ಯಾವರೆ ಚಟ್ನಳ್ಳಿಯಲ್ಲಿನ ಮಲಿನ ನೀರು ಶುದ್ಧೀಕರಣ ಘಟಕದ ವಿದ್ಯುತ್ ಮೋಟಾರ್‌ಗಳ ಉನ್ನತೀಕರಣ ಮತ್ತು ನವೀಕರಣ ಹಾಗೂ ಸುರಕ್ಷತಾ ಉಪಕರಣಗಳನ್ನು ಅಳವಡಿಸುವ ಕಾಮಗಾರಿ	35.00	2022–23 ನೇ ಸಾಲಿನ 15ನೇ ಹಣಕಾಸು ಅನುದಾನ ಆಯೋಗದ ಸಾಮಾನ್ಯ ಮೂಲ ಅನುದಾನ	70000.00	03 ತಿಂಗಳು	1ನೇ ದರ್ಜೆ ವಿದ್ಯುತ್ ಮತ್ತು ಮೇಲ್ಪಟ್ಟು
2	ತ್ಯಾವರೆ ಚಟ್ನಳ್ಳಿಯಲ್ಲಿನ ಮಲೀನ ನೀರು ಶುದ್ದೀಕರಣ ಘಟಕದ ವಿದ್ಯುತ್ ಅಭಿವೃದ್ಧಿ ಕಾಮಗಾರಿ.	60.00		120000.00	03 ತಿಂಗಳು	1ನೇ ದರ್ಜೆ ವಿದ್ಯುತ್ ಮತ್ತು ಮೇಲ್ಪಟ್ಟು
3	ಶಿವಮೊಗ್ಗ ನಗರದ ನೀರು ಸರಬರಾಜು ನಿರ್ವಹಣೆಗೆ ತಾತ್ಕಾಲಿಕವಾಗಿ ವಿತರಣಾ ವ್ಯವಸ್ಥೆಯಡಿ ತುರ್ತು ದುರಸ್ತಿ ಕಾರ್ಯನಿರ್ವಹಿಸಲು ಅವಶ್ಯವಿರುವ ಕಾರ್ಮಿಕರನ್ನು ಪಾಲಿಕೆ ವತಿಯಿಂದ ಒದಗಿಸುವ ಕುರಿತು	11.20	2022–23 ನೇ ಸಾಲಿನ ಮಹಾನಗರ ಪಾಲಿಕೆ ಸಾಮಾನ್ಯ ಅನುದಾನ	28000.00	06 ತಿಂಗಳು	ಬಿಡ್ ಡಾಕ್ಯುಮೆಂಟ್‌ನಲ್ಲಿ ನಿಗದಿಪಡಿಸಿರುವಂತೆ

ಸೂಚನೆ : ಟೆಂಡರ್‌ಗೆ ಸಂಬಂಧ ಪಟ್ಟ ಯಾವುದೇ ತಿದ್ದುಪಡಿಯನ್ನು ಇ–ಪ್ರಕ್ಯೂರ್‌ಮೆಂಟ್ ಮೂಲಕ ತಿಳಿಸಲಾಗುತ್ತದೆ

ಸಹಿ/–ಕಾರ್ಯಪಾಲಕ ಅಭಿಯಂತರರು (ಪ್ರ) ವಿದ್ಯುತ್ ವಿಭಾಗ
ಮಹಾನಗರ ಪಾಲಿಕೆ, ಶಿವಮೊಗ್ಗ.
ವಾ.ಸಾ.ಸಂ.ಇ./ಶಿ/ನಂ.40-07 ಝೀಂಕಾರ್/2022-23

ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣ

ಹಳ್ಳಿಯ ಹಾರುವ ಕನಸಿಗೆ ರೆಕ್ಕೆ ಕಟ್ಟಿ...

ರಾಜ್ಯದ ಪ್ರತಿಯೊಂದು ಜಿಲ್ಲೆಯೂ ಈಗ ವಿಮಾನಯಾನದ ಕನಸನ್ನು ಕಾಣುತ್ತಿದೆ. ಹಳ್ಳಿಗೂ ದಿಲ್ಲಿಯ ಸಂಪರ್ಕ ಸಾಧ್ಯವಾಗಿ ಆರ್ಥಿಕಾಭಿವೃದ್ಧಿಗೆ ದಾರಿಯಾಗಬಹುದೇ ಎಂಬ ಬಯಕೆ ಆ ಕನಸಿನಲ್ಲಿ ಮೊಟ್ಟೆಯಿಟ್ಟಿದೆ. ಅಂತೂ ರಾಜ್ಯದ ಆಕಾಶವನ್ನು ಬ್ಯುಸಿಯಾಗಿಡಲು ಹಲವೆಡೆ ಈಗ ವಿಮಾನ ನಿಲ್ದಾಣಗಳಂತೂ ನಿರ್ಮಾಣವಾಗುತ್ತಿವೆ. ಹಾಗೆಯೇ ಅಲ್ಲಿನ ಕನ್ನಡದ ಬಳಕೆಯು ಹಲವು ಕುತೂಹಲದ ಪ್ರಶ್ನೆಗಳನ್ನು ಎತ್ತಿದೆ. ಹೌದು, ಏನಿದೆಲ್ಲದರ ಮಜಕೂರು?

ಪ್ರತೀ ಜಿಲ್ಲೆಗೂ ವಿಮಾನಯಾನದ ಆಸೆ

ಅಭಿಲಾಷ್ ಪಿ.ಎಸ್.

‘ಸೂರಾರೈ ಪೋಟ್ರು’ – ಅದೊಂದು ಅದ್ಭುತ ದೃಶ್ಯಕಾವ್ಯ. ಡೆಕ್ಕನ್ ಏರ್‌ಲೈನ್ಸ್‌ನ ಕನಸನ್ನು ನನಸಾಗಿಸಿದ ಕ್ಯಾಪ್ಟನ್ ಗೋಪಿನಾಥ್ ಅವರ ಜೀವನಕಥೆಯನ್ನು ಆಧರಿಸಿದ ತಮಿಳು ಸಿನಿಮಾ ಇದು. ಈ ಬರಹ ಓದುತ್ತಿರುವ ಹಲವರು ಆ ಸಿನಿಮಾ ನೋಡಿರಬಹುದು. ಚಿತ್ರದ ಅಂತ್ಯದಲ್ಲಿ ಅಜ್ಜಿಯೊಬ್ಬಳು ವಿಮಾನದಿಂದ ಇಳಿಯುವಾಗ ಆಕಾಶವನ್ನೊಮ್ಮೆ ದಿಟ್ಟಿಸಿ ನೋಡುತ್ತಾಳೆ. ನೆರಿಗೆ ಕಟ್ಟಿದ ಆ ಮುಖದಲ್ಲಿ ಮುಗುಳ್ನಗು, ಕಣ್ಣಂಚಲ್ಲಿ ನೀರು... ಮೊದಲ ಬಾರಿ ಹಕ್ಕಿಯಂತೆ ಬಾನಲ್ಲಿ ಹಾರಾಡಿ ಆಕೆ ಅನುಭವಿಸಿದ ಆ ಅನುಭವದ ಸಾರ ಅವಳಿಗಷ್ಟೇ ಗೊತ್ತು. ಕೈಯಲ್ಲೇ ಆಕಾಶ ಹೊತ್ತು ತಂದ ಖುಷಿ ಅವಳದ್ದು.

ಆ ಅಜ್ಜಿ ಕಥೆ ಬಿಡಿ. ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ನಮ್ಮ ತುಳಸಿ ಗೌಡ ಅವರು ಸಂದರ್ಶನವೊಂದರಲ್ಲಿ ವಿಮಾನ ಪ್ರಯಾಣದ ಅನುಭವನ್ನು ಹೀಗೆ ಬಿಚ್ಚಿಟ್ಟಿದ್ರು...‘ನಂಗೆ ಹೆದ್ರಿಕಿ ಆಗ್ಲಿಲ್ಲ. ದಿಲ್ಲಿಗೆ ಹೋಗುವಾಗ ವಿಮಾನ ಹತ್ತಿದ್ದು. ಬಾಳ ಚೊಲೊ ಅನ್ನಿಸ್ತು. ಮತ್ತೆ ಬೊಂಬಾಯಿಗೂ ವಿಮಾನ್‌ದಲ್ಲಿ ಹೋಗ್ ಬಂದೆ’. ಅವರ ಮುಖದಲ್ಲೂ ಅಂಥ ನಗುವೊಂದಿತ್ತು. ಪ್ರಶಸ್ತಿ ಜೊತೆಗೆ ಆಕಾಶ ಹೊತ್ತು ತಂದ ಖುಷಿಯಿತ್ತು.

ಹೀಗೆ ಬಾನಲ್ಲಿ ಹಾರಾಡುವ ಕನಸು ಯಾರಿಗಿಲ್ಲ ಹೇಳಿ. ಆಗಷ್ಟೇ ಚಂದಿರನನ್ನು ನೋಡುತ್ತಾ ತುತ್ತು ಉಣ್ಣುವ ಪುಟಾಣಿಯೂ ಆಕಾಶದೆತ್ತರದಲ್ಲಿ ಹಾರಾಡುವ ಉಕ್ಕಿನಹಕ್ಕಿಯನ್ನು ನೋಡಿ ಕೈಚಾಚಿ ಹಿಡಿಯಲು ಪ್ರಯತ್ನಿಸುತ್ತದೆ. ಸ್ವಚ್ಛಂದವಾಗಿ ಹಾರಾಡುವ ಈ ಹಕ್ಕಿಗಳು, ಹಲವರಲ್ಲಿ ಕನಸಿನ ರೆಕ್ಕೆಪುಕ್ಕ ಕಟ್ಟುತ್ತವೆ. ಸಮಯ ಉರುಳಿದಂತೆ, ತಂತ್ರಜ್ಞಾನ ಹಿಗ್ಗಿದಂತೆ ಯಾವ ಪ್ರದೇಶವೂ ಯಾರಿಗೂ ದೂರವಿಲ್ಲ. ಹಳ್ಳಿಯ ಜನರೂ ದಿಲ್ಲಿ ತಲುಪುವ ಸಮಯ ಬಂದಾಗಿದೆ. ಜಿಲ್ಲೆಗೊಂದರಂತೆ ವಿಮಾನ ನಿಲ್ದಾಣ ನಿರ್ಮಾಣವಾಗುವ ಸಮಯ ದೂರವೇನಿಲ್ಲ! ಈ ಕನಸಿಗೆ ರಾಜ್ಯದಲ್ಲೀಗ ವೇದಿಕೆ ಸಿದ್ಧವಾಗುತ್ತದೆ. ಸದ್ಯ, ನೀಲಾಕಾಶದಲ್ಲಿ ತೇಲಾಡುವ ಕನಸು ಕಾಣುವ ಹಕ್ಕು ವೈಟ್‌ಕಾಲರ್‌ನವರಿಗಷ್ಟೇ ಸೀಮಿತವಾಗಿಲ್ಲ.

ರಾಜ್ಯದಲ್ಲಿ ಪ್ರಸ್ತುತ ಏಳು ವಿಮಾನ ನಿಲ್ದಾಣಗಳಿವೆ. ಇವುಗಳ ಜೊತೆಗೆ ಭವಿಷ್ಯದಲ್ಲಿ ಶಿವಮೊಗ್ಗ, ಹಾಸನ, ವಿಜಯಪುರ, ರಾಯಚೂರು, ದಾವಣಗೆರೆ, ಕೊಪ್ಪಳ, ಬಳ್ಳಾರಿ ಹಾಗೂ ಕಾರವಾರದ ನೆಲದಲ್ಲೂ ಲೋಹದ ಹಕ್ಕಿಗಳು ಕಾಣಿಸಿಕೊಳ್ಳಲಿವೆ. ಇವುಗಳ ಜೊತೆಗೆ ಕುಶಾಲನಗರ, ಚಿಕ್ಕಮಗಳೂರು ಹಾಗೂ ಹಂಪಿಯಲ್ಲಿ ಹೆಲಿಪೋರ್ಟ್‌ಗಳು ಕಾರ್ಯಾರಂಭಿಸಲಿವೆ. ಇವೆಲ್ಲ ಸೇರಿದರೆ ಭವಿಷ್ಯದಲ್ಲಿ ರಾಜ್ಯದ ಅರ್ಧದಷ್ಟು ಜಿಲ್ಲೆಗಳ ಸಂಪರ್ಕ ವ್ಯವಸ್ಥೆ ಮತ್ತಷ್ಟು ಸದೃಢಗೊಳ್ಳಲಿದೆ. ಸದ್ಯ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ದೇಶದ 76 ಪ್ರದೇಶಗಳಿಗೆ ನೇರ ವಿಮಾನ ಸಂಪರ್ಕವಿದೆ. 2021ರಲ್ಲಿ ಈ ಸಂಖ್ಯೆ 54 ಆಗಿತ್ತು. ಈ ನಿಲ್ದಾಣದಿಂದ ಇಲ್ಲಿಯವರೆಗೂ 25 ಕೋಟಿ ಜನರು ಲೋಹದ ಹಕ್ಕಿಯೇರಿದ್ದಾರೆ. ದೇಶದ ಎರಡನೇ ಮತ್ತು ಮೂರನೇ ಹಂತದ ನಗರಗಳಲ್ಲಿ ತ್ವರಿತವಾಗಿ ವಿಮಾನ ನಿಲ್ದಾಣಗಳು ನಿರ್ಮಾಣವಾಗುತ್ತಿರುವುದು, ವಾಯುಯಾನಕ್ಕೆ ಜನರು ಮತ್ತಷ್ಟು ಆಕರ್ಷಿತರಾಗಲು ಕಾರಣ. ವಿಮಾನ ನಿಲ್ದಾಣಗಳು ಜನರ ಓಡಾಟಕ್ಕಷ್ಟೇ ಸೀಮಿತವಾಗಿಲ್ಲ. ಅವುಗಳ ಅಸ್ತಿತ್ವದ ಪರಿಣಾಮ ಹಲವು. ಸಣ್ಣದೊಂದು ಉದಾಹರಣೆ ನೋಡಿ.

‘Love is in the air...’ ಅಂತಾರೆ. ಇದು ನಿಜ! ಯಾಕೆ ಅಂತೀರಾ? ಇಲ್ಲಿ ಕೇಳಿ. 5.15 ಲಕ್ಷ ಕೆ.ಜಿ.– ಇದು ಕಳೆದ ಫೆಬ್ರುವರಿಯಲ್ಲಿ ಪ್ರೇಮಿಗಳ ದಿನಕ್ಕಾಗಿ ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಬಾನೆತ್ತರಕ್ಕೆ ಹಾರಿ ಗರ್ಲ್‌ಫ್ರೆಂಡ್ಸ್, ಹಾಲಿ–ಭಾವಿ ಪತ್ನಿಯರ ಮುಡಿಗೇರಿದ ಗುಲಾಬಿಗಳ ತೂಕ. ‘ಹೆಂಡ್ತಿ’ ತಲೆ ಮೇಲೆ ತೂಕ ಹೆಚ್ಚಾಯ್ತೆ?! ಸಂಖ್ಯೆಯಲ್ಲಿ ಹೇಳ್ತೀನಿ ಕೇಳಿ. ಬೆಂಗಳೂರಿನ ನೆಲದಿಂದ ದೇಶದ ವಿವಿಧ ರಾಜ್ಯಗಳಿಗೆ ಹಾರಿದ್ದು 65 ಲಕ್ಷ ಗುಲಾಬಿಗಳು. ವೀಸಾ ಇಲ್ಲದೇ ವಿದೇಶಕ್ಕೆ ಟ್ರಿಪ್ ಮಾಡಿದ್ದು 73 ಲಕ್ಷ ಗುಲಾಬಿಗಳು. ಒಂದೊಂದು ಗುಲಾಬಿಯೂ ಮಾರಾಟವಾಗಿದ್ದು ₹35ರಿಂದ ₹40ಕ್ಕೆ! ವಿಶ್ವದೆಲ್ಲೆಡೆ ಹೃದಯದ ಬಂಧನಕ್ಕೆ ಬೆಂಗಳೂರು ಸುತ್ತಮುತ್ತಲಿನ ಮೂರ್ನಾಲ್ಕು ಜಿಲ್ಲೆಗಳ ರೈತರ ಗಟ್ಟಿಮೇಳ. ಆದರೆ ರೈತರ ಶ್ರಮಕ್ಕೆ ಸಿಕ್ಕ ಮೊತ್ತವೆಷ್ಟು ಎನ್ನುವುದು ಅಷ್ಟೇ ನಿಗೂಢ!

ದೇಶದಲ್ಲಿ ಅತಿ ಹೆಚ್ಚು ಗುಲಾಬಿ ರಫ್ತಾಗುತ್ತಿರುವ ನಗರ ಬೆಂಗಳೂರು.

9ನೇ ಪುಟಕ್ಕೆ...

‘ವಿಮಾನ ನಿಲಯ’ದಲ್ಲಿ ಕನ್ನಡದ ಜಿಜ್ಞಾಸೆ

ಕರ್ಕಿ ಕೃಷ್ಣಮೂರ್ತಿ

‘ವಿಮಾನ ನಿಲಯ’ ಹಾಗೂ ‘ವಿಮಾನ ನಿಲ್ದಾಣ’ ಇವೆರಡರ ನಡುವಿನ ವ್ಯತ್ಯಾಸವೇನು?

ಈ ಪ್ರಶ್ನೆ ಎದುರಾದದ್ದು, ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ನಿರ್ಮಾಣ ಕಾಮಗಾರಿಯ ಕೊನೆಯ ಹಂತದಲ್ಲಿ. ಮುಖ್ಯ ರಸ್ತೆಯಿಂದ ಶುರುಮಾಡಿ ಏರ್‌ಪೋರ್ಟಿನ ಮೂಲೆಯ ಶೌಚಾಲಯದವರೆಗೂ ಎಲ್ಲೆಡೆ ಸೂಚನಾ ಫಲಕಗಳನ್ನು ಅಳವಡಿಸುವ ತರಾತುರಿಯಲ್ಲಿದ್ದೆವು ನಾವು. ನಿಲ್ದಾಣದಲ್ಲಿ ಬಳಸಲ್ಪಡುವ ವಿಶಿಷ್ಟವಾದ ಇಂಗ್ಲಿಷ್ ಭಾಷೆಯ ಪದಗಳಿಗೆ ಪರ್ಯಾಯ ಹಾಗೂ ಯೋಗ್ಯವೆನಿಸುವ ಕನ್ನಡ ಶಬ್ದಗಳನ್ನು ಹೊಂದಿಸುವುದು ಭಾರೀ ಸವಾಲಾಗಿತ್ತು ನಮಗೆ. ಅದಕ್ಕೆಂದೇ ಪರಿಣಿತ ಕನ್ಸಲ್‌ಟಂಟುಗಳಿದ್ದರು. ಅವರು ಭಾಷಾಂತರಿಸಿ ನೀಡುವ ಕನ್ನಡ ಶಬ್ದಗಳು ಬಲು ವಿಲಕ್ಷಣವಾಗಿರುತ್ತಿದ್ದವು. ‘ಡೇ ಹೋಟೆಲ್’ಗೆ ‘ಹಗಲಿನ ಹೋಟೆಲ್’ ಎಂದೂ ‘ಬ್ಯಾಗೇಜ್ ಕ್ಲೇಮ್’ ಬದಲಿಗೆ ‘ಸಾಮಾನುಗಳ ವಾರಸು’ ಎಂದೆಲ್ಲಾ ಬರೆದು ಕೊಟ್ಟದ್ದನ್ನು ಒಪ್ಪಿಕೊಳ್ಳಲು ಮನಸ್ಸಾಗುತ್ತಿರಲಿಲ್ಲ. ‘ವಿಮೆನ್ ಸೆಕ್ಯೂರಿಟಿ ಚಕ್’ ಅನ್ನುವುದಕ್ಕೆ ‘ಮಹಿಳೆ ಭದ್ರತಾ ತಪಾಸಣೆ’ ಅನ್ನುವ ಬದಲು ‘ಮಹಿಳೆಯರ ಭದ್ರತಾ ತಪಾಸಣೆ’ ಎನ್ನುವುದು ಸಮಂಜಸವಲ್ಲವೇ? ‘ಡೊಮೆಸ್ಟಿಕ್’ ಅನುವುದಕ್ಕೆ ಒಂದೆಡೆ ‘ಸ್ವದೇಶೀ’ ಎಂಬುದಾಗಿಯೂ ಮತ್ತೊಂದೆಡೆ ‘ದೇಶೀಯ’ ಎಂದೂ ಬಳಸುವುದ್ಯಾಕೆ?

ಇವೆಲ್ಲವುಗಳಿಗಿಂತ ಹೆಚ್ಚು ಗೊಂದಲಮಯವೆಂದರೆ ‘ಟರ್ಮಿನಲ್’ನ ಕನ್ನಡ ರೂಪಾಂತರ. ಅದಕ್ಕೆ ಅವರಿಟ್ಟ ಕನ್ನಡದ ಹೆಸರು ‘ವಿಮಾನ ನಿಲಯ’! ಈ ಶಬ್ದಕ್ಕೆ ತಗಾದೆ ತೆಗೆಯದೇ ಇರಲಾಗಲಿಲ್ಲ ನನಗೆ. ಟರ್ಮಿನಲ್ ಎನ್ನುವ ಇಂಗ್ಲಿಷ್ ಪದಕ್ಕೆ ಒಂದು ನಿರ್ದಿಷ್ಟ ಅರ್ಥವಿದೆ. ಕೊನೆಯ, ಅಂತ್ಯದ, ಕಡೆಯ, ಸೀಮಾ... ಹೀಗೆ. ಈ ರೀತಿಯ ತಾತ್ಪರ್ಯದ ಟರ್ಮಿನಲ್ ಶಬ್ದವನ್ನು ಪ್ರಯಾಣಿಕರು ವಿಮಾನವನ್ನೇರುವ ಸ್ಥಳ ಅಥವಾ ಕಟ್ಟಡಕ್ಕೆ ಅನ್ವಯಿಸುವುದರಲ್ಲೂ ಒಂದು ಲಾಜಿಕ್ ಇದೆ. ಒಂದು ರೀತಿಯಲ್ಲಿ ನೋಡುವುದಾದರೆ ಪ್ರಯಾಣಿಕನೊಬ್ಬನಿಗೆ ಭೂಮಿಯ ಮೇಲಿನ ಕೊನೆಯ ತಾಣ ಅದು. ಭಾಷೆಯ ಲೆಕ್ಕಾಚಾರಕ್ಕೇ ಬಂದರೆ, ಟರ್ಮಿನಲ್ಲಿಗೂ ವಿಮಾನಕ್ಕೂ ಯಾವುದೇ ನೇರ ಸಂಬಂಧವಿಲ್ಲ. ‘ಬಸ್ ಟರ್ಮಿನಲ್’ ಅಂತಲೂ ಹೇಳುತ್ತಾರಲ್ಲ? ಸಾವು ಖಚಿತವಾದ ಕಾಯಿಲೆಯಿಂದ ಬಳಲುತ್ತಿರುವವರಿಗೆ ‘ಟರ್ಮಿನಲಿ ಇಲ್’ ಎನ್ನುತ್ತೇವಲ್ಲ? ಹೀಗಾಗಿ ತಾರ್ಕಿಕ ಅರ್ಥದಲ್ಲಿ ವ್ಯಕಿಯೊಬ್ಬ ತನ್ನ ನೆಲದ ನಂಟನ್ನು ಕಳೆದುಕೊಳ್ಳುವ ಜಾಗಕ್ಕೆ ಈ ಪದಬಳಕೆ ಯೋಗ್ಯವಿದೆ. ‘ವಿಮಾನ ನಿಲಯ’ ಎಂದರೆ ಅದಕ್ಕೆ ಏರ್‌ಪೋರ್ಟ್ ಅನ್ನುವ ಅರ್ಥವೇ ಬರುತ್ತೆ. ಹಾಗಾಗಿ ಈ ಶಬ್ದದ ಉಪಯೋಗ ದಿಕ್ಕು ತಪ್ಪಿಸುವುದಾಗಿದೆ ಎಂಬುದು ನನ್ನ ವಾದವಾಗಿತ್ತು. 'Stations and airports are rehearsals for separation by death' ಎನ್ನುವ ಯಾವುದೋ ಪಾಶ್ಚಾತ್ಯ ಲೇಖಕಿಯ ಹೇಳಿಕೆಯನ್ನೆಲ್ಲಾ ಅಸಂಗತವೆನ್ನಿಸಿದರೂ ಉಲ್ಲೇಖಿಸಿ ನನ್ನ ಮಾತನ್ನು ಪ್ರತಿಪಾದಿಸಲು ಪ್ರಯತ್ನಿಸಿದೆ.

ವಿಮಾನ ನಿಲ್ದಾಣದ ಟೆಕ್ನಿಕಲ್ ಮ್ಯಾನೇಜರ್ ಆಗಿದ್ದ ನನಗೆ ಅದನ್ನೆಲ್ಲ ಪ್ರಶ್ನಿಸುವ ಅಧಿಕಾರವೇನೋ ಇತ್ತು, ಆದರೆ ಕನ್ಸಲ್‌ಟಂಟುಗಳ ಒಪ್ಪಿಗೆಯಿಲ್ಲದೇ ತಿದ್ದುಪಡಿ ಮಾಡುವಂತಿರಲಿಲ್ಲ. ‘ಕೆಲವು ಪದಗಳಿಗೆ ಸಮಾನಾಂತರ ಕನ್ನಡ ಪದ ಇರುವುದಿಲ್ಲ’ ಎಂದು ಮನವರಿಕೆ ಮಾಡಲು ಪ್ರಯತ್ನಿಸಿದರು ಅವರು.

‘ಹಾಗಾದರೆ ‘Check-in’ ಅನ್ನುವುದಕ್ಕೆ ಏನು ಹೇಳುತ್ತೀರಿ?’ ನಾನು ಸುಲಭಕ್ಕೆ ಒಪ್ಪಲು ಸಿದ್ಧನಿರಲಿಲ್ಲ

‘ಅದನ್ನು ‘ಚಕ್-ಇನ್’ ಎಂದೇ ಹಾಕುತ್ತೇವೆ’

‘ಇಲ್ಲಿಯೂ ಟರ್ಮಿನಲ್ ಎಂದೇ ಬರೆಯಬಹುದಲ್ಲ. ಅಸಮಂಜಸ ಅನುವಾದಕ್ಕಿಂತ ಇಂಗ್ಲಿಷಿನಲ್ಲೇ ಇರುವುದು ಒಳ್ಳೆಯದು’ ನಾನಂದೆ.

‘Airports Authority of India ದವರು ಪ್ರತೀ ಇಂಗ್ಲಿಷ್ ಪದಕ್ಕೂ ಆಯಾ ಪ್ರಾದೇಶಿಕ ಭಾಷೆಯಲ್ಲಿ ಏನು ಬರೆಯಬೇಕೆಂಬ ಪಟ್ಟಿ ಮಾಡಿಟ್ಟಿದ್ದಾರೆ. ಅದಕ್ಕೆ ವಿರುದ್ಧ ಹೋದರೆ ನಿಮಗೆ ಅನುಮತಿ ಪಡೆಯಲು ಕಷ್ಟವಾಗುತ್ತದೆ. ಹೀಗಾಗಿ ಇದನ್ನೇ ಇಟ್ಟುಕೊಳ್ಳುವುದು ಅನಿವಾರ್ಯ’ ಎನ್ನುವ ಕೊನೆಯ ಅಸ್ತ್ರ ಪ್ರಯೋಗಿಸಿದರು ಅವರು.

10ನೇ ಪುಟಕ್ಕೆ...

ಶಕ್ತಿಪೇಯ ಸೆಕ್‌ಮಾಯ್

ಸೆಕ್‌ಮಾಯ್ ತಯಾರಿಕೆ (ಬಟ್ಟಿ ಇಳಿಸುವ) ನೋಟ

ಡಾ.ಕೆ.ಎಸ್.ಚೈತ್ರಾ

ನಸುಕಿನ ನಾಲ್ಕು ಗಂಟೆಗೆಲ್ಲ ಬೆಳ್ಳಂಬೆಳಗು! ಹಾಸಿಗೆಯಲ್ಲಿ ಮಲಗಿ ಮುಸುಕು ಎಷ್ಟೇ ಗಟ್ಟಿಯಾಗಿ ಹೊದ್ದರೂ ಹಟ ಬಿಡದ ಸೂರ್ಯ ಕಿಟಕಿಯಿಂದಲೇ ಚುಚ್ಚತೊಡಗಿದ್ದ. ಇದೆಂಥ ಮಣಿಪುರ ಎಂದು ಗೊಣಗುತ್ತಲೇ ನಮ್ಮ ಪ್ರವಾಸ, ರಾಜಧಾನಿ ಇಂಫಾಲದಿಂದಲೇ ಆರಂಭವಾಗಿತ್ತು. ಇದೇ ಸೂರ್ಯ, ಸಂಜೆ ನಾಲ್ಕಕ್ಕೆಲ್ಲಾ ಕರಾರುವಾಕ್ಕಾಗಿ ತನ್ನ ಪಾಳಿ ಮುಗಿಸುತ್ತಿದ್ದ. ಆನಂತರ ಬಹುಪಾಲು ಜನಜೀವನ ಸ್ತಬ್ಧ! ಹಾಗಾಗಿ ನಾವೂ ಬೇಗನೇ ಎದ್ದು ಆದಷ್ಟೂ ತಿರುಗುವ ಪ್ರಯತ್ನ ನಡೆಸಿದ್ದೆವು.

ಜತೆಯಲ್ಲಿದ್ದ ಗೆಳತಿ, ಬಹುಶಃ ಇಲ್ಲಿಯ ಜನ ಬೇಗ ಮನೆಗೆ ಹೋಗಿ ಎಣ್ಣೆ ಹಾಕಿ ಮಲಗುತ್ತಾರೇನೋ ಎಂದು ತಮಾಷೆ ಮಾಡಿದಳು. ನಮ್ಮ ಗೈಡ್ ‘ಮಣಿಪುರ ಡ್ರೈ ಸ್ಟೇಟ್; ಆದರೆ ಹತ್ತಿರದ ಕೆಲವು ಸಾಂಪ್ರದಾಯಿಕ ಪುಟ್ಟ ಹಳ್ಳಿಗಳಲ್ಲಿ ಲೋಕಲ್ ಶರಾಬು, ಅದೂ ಮಹಿಳೆಯರೇ ಮಾಡುವಂಥದ್ದು, ಸಿಗುತ್ತದೆ’ ಎಂಬ ವಿವರಣೆ ಕೊಟ್ಟ. ಕಾಫಿಕುಡುಕರಾದ ನಮಗೆ ಶರಾಬ್ ಕುಡಿಯಲು ಬೇಕಿರಲಿಲ್ಲ. ಆದರೆ, ಇಲ್ಲಿನ ಸಾಂಪ್ರದಾಯಿಕ ಹಳ್ಳಿ ಮತ್ತು ಮಹಿಳೆಯರೇ ಮಾಡುವ ಶರಾಬು ನೋಡುವ ಉಮೇದಿಗೆ ಬಿದ್ದು ಹೊರಟೇ ಬಿಟ್ಟೆವು.

ಇಂಫಾಲದಿಂದ ಪೂರ್ವಕ್ಕೆ ಕೇವಲ ಇಪ್ಪತ್ತೈದು ಕಿ.ಮೀ. ದೂರದಲ್ಲಿರುವ ಆಂಡ್ರೊ ಹೆಸರಿನ ಈ ಹಳ್ಳಿ ‘ಪರಿಶಿಷ್ಟ ಜಾತಿಗಳ ಜನರ ಸಾಂಪ್ರದಾಯಿಕ ಹಳ್ಳಿ’ ಎಂದು ಗುರುತಿಸಲ್ಪಟ್ಟಿದೆ. ಹೋಗುವ ದಾರಿ ಕಿರಿದು, ವಾಹನ ದಟ್ಟಣೆಯೂ ಹೆಚ್ಚು. ಹೀಗಾಗಿ ಮುಕ್ಕಾಲು ತಾಸಿನ ಪಯಣ. ನೊಂಗ್ ಮೈಚಿಂಗ್ ಪರ್ವತಶ್ರೇಣಿಯ ತಪ್ಪಲಲ್ಲಿರುವ ಈ ಹಳ್ಳಿಯ ಹೆಸರು ಹಾಂಡ್ರೊ ಎಂಬ ಪದದಿಂದ ಬಂದಿದೆ; ಅಂದರೆ ಹಿಂದಿರುಗಿದ ಹಳ್ಳಿಯ ಜನ ಎಂದರ್ಥ. ಇಲ್ಲಿರುವ ಜನ ಲೋಯಿಸ್ ಎಂಬ ಪರಿಶಿಷ್ಟ ಪಂಗಡಕ್ಕೆ ಸೇರಿದ್ದು ಮಣಿಪುರದ ಮೂಲನಿವಾಸಿಗಳು ಎನ್ನಲಾಗಿದೆ. ಲೋಯಿಸ್ ಎಂದರೆ ಅಧೀನರು ಎಂದರ್ಥ. ಬಹಳ ಹಿಂದೆ ಇಲ್ಲಿನ ಸ್ಥಳೀಯ ದೊರೆ ಇವರನ್ನು ಹೊರಗೆ ಹಾಕಿದ್ದ. ಅದೆಷ್ಟೋ ಶತಮಾನಗಳ ನಂತರ ಮರಳಿ ತಮ್ಮ ಮೂಲಸ್ಥಾನಕ್ಕೆ ಮರಳಿದ ಕಾರಣ ಈ ಹಳ್ಳಿಗೆ ಅದೇ ಹೆಸರು. ಆಂಡ್ರೊ ಭೇಟಿ, ನಿಜಕ್ಕೂ ಪ್ರಕೃತಿ –ಇತಿಹಾಸ-ಕರಕುಶಲ ಕಲೆಯ ಆಸಕ್ತರು ಮತ್ತು ಪಾನಪ್ರಿಯರಿಗೆ ಅವಿಸ್ಮರಣೀಯ ಅನುಭವವೇ ಸರಿ!

ಇಲ್ಲಿರುವ ಮುಟ್ವಾ ಮ್ಯೂಸಿಯಂ ವಿಶಿಷ್ಟವಾಗಿದೆ. ಮ್ಯೂಸಿಯಂ ಎಂದರೆ ಒಂದು ಕಟ್ಟಡವಲ್ಲ; ಬದಲಿಗೆ ಸಾಂಪ್ರದಾಯಿಕ ಹಲವು ಬಿದಿರು-ಕಟ್ಟಿಗೆಯ ಮನೆಗಳು! ಮಣಿಪುರಿಯ ವಿವಿಧ ಬುಡಕಟ್ಟು ಜನಾಂಗಗಳಾದ ಮೈತೈ, ಕುಕಿ, ಟಂಗಕೈ –ಜನ ಕಟ್ಟುವ ಸಾಂಪ್ರದಾಯಿಕ ಶೈಲಿಯ ಮನೆಗಳ ಪ್ರತಿಕೃತಿಗಳು ಇಲ್ಲಿವೆ. ಪ್ರತೀ ಮನೆಯ ಒಳಗೆ ಆ ಜನಾಂಗದ ಪರಂಪರೆ- ಜನಜೀವನ ಬಿಂಬಿಸುವ ವಸ್ತುಗಳಿವೆ. ಗೊಂಬೆಮನೆ ಇಲ್ಲಿನ ಮತ್ತೊಂದು ಆಕರ್ಷಣೆ. ಒಳಗೆ ಇಪ್ಪತ್ತೊಂಬತ್ತು ಗೊಂಬೆಗಳಿದ್ದು ಅವು ಮಣಿಪುರದ ಮುಖ್ಯ ಬುಡಕಟ್ಟು ಜನಾಂಗ ಮತ್ತು ಅವುಗಳ ಸಂಕರವನ್ನು ಪ್ರತಿನಿಧಿಸುತ್ತವೆ.

ಚಾರಾಯ್ ತಬಾ

ಹಳ್ಳಿಯನ್ನು ಪ್ರವೇಶಿಸುವಾಗಲೇ ಮನೆಗಳ ಮುಂದೆ ಮಣ್ಣಿನ ಪಾತ್ರೆಗಳನ್ನು ಬಿಸಿಲಲ್ಲಿ ಹರವಿರುವುದನ್ನು ಕಾಣಬಹುದು. ಈ ಹಳ್ಳಿಯ ಪ್ರಮುಖ ಉದ್ಯೋಗವಿದು. ಚಾರಾಯ್ ತಬಾ ಎಂದು ಕರೆಯಲಾಗುವ ಈ ಕರಕುಶಲ ಕಲೆಯನ್ನು ಮದುವೆಯಾದ ಮಹಿಳೆಯರು ಮಾತ್ರ ಮಾಡುವುದಕ್ಕೆ ಅರ್ಹರು. ‘ಥೌ ಚಂಬಾ’ ಎಂಬ ವಿಶೇಷ ಆಚರಣೆ ನಂತರ ವಿವಾಹಿತ ಮಹಿಳೆಯರು ಈ ಮಣ್ಣಿನ ಪಾತ್ರೆಗಳನ್ನು ತಯಾರಿಸಲು ಅನುಮತಿ ಸಿಗುತ್ತದೆ. ಆಶ್ಚರ್ಯವೆಂದರೆ ತಾಯಿಯಿಂದ ಮಗಳಿಗಲ್ಲ, ಅತ್ತೆಯಿಂದ ಸೊಸೆಗೆ ಈ ಕಲೆಯನ್ನು ಕಲಿಸಲಾಗುತ್ತದೆ!

ವಿಶಿಷ್ಟ ವಿನ್ಯಾಸದ ಮಣ್ಣಿನ ಪಾತ್ರೆಗಳ ತಯಾರಿಕೆಯಲ್ಲಿ ಇಲ್ಲಿನ ಜನ ಸಿದ್ಧಹಸ್ತರು. ಸಾಧಾರಣವಾಗಿ ಮಣ್ಣಿನಿಂದ ಮಡಕೆ ತಯಾರಿಸುವಾಗ ಮಣ್ಣಿಗೆ ರೂಪ ಕೊಡಲು ಚಕ್ರವನ್ನು ಬಳಸಲಾಗುತ್ತದೆ. ಇಲ್ಲಿ ಹಾಗಲ್ಲ, ಸಮತಟ್ಟಾದ ಮರದ ಕೋಲನ್ನು (ಬ್ಯಾಟ್) ಉಪಯೋಗಿಸುತ್ತಾರೆ. ಮೆದು ಮಣ್ಣಿನ ಮೇಲೆ ಪಟಪಟ ಬಡಿಯುತ್ತಾ ಸರಸರನೇ ಬೇಕಾದ ಆಕಾರಕ್ಕೆ ತರುವ ರೀತಿ ನಿಜಕ್ಕೂ ಅಚ್ಚರಿ ಮೂಡಿಸುತ್ತದೆ. ಹೀಗೆ ತಯಾರಿಸಿ ಬಿಸಿಲಲ್ಲಿ ನಾಲ್ಕು ದಿನ ಒಣಗಿಸಿದ ವಸ್ತುಗಳಿಗೆ ಹೆಚ್ಚಿನ ಹೊಳಪು ನೀಡಲು ಅಲ್ಲೇ ಸಿಗುವ ಮರದ ತೊಗಟೆಯ ನೈಸರ್ಗಿಕ ಬಣ್ಣ ಲೇಪಿಸುತ್ತಾರೆ. ಈ ಮಣ್ಣಿನ ಪಾತ್ರೆ-ಮಡಕೆಗಳನ್ನು ಗಿಡಗಳ ಬೀಜ ಸಂರಕ್ಷಿಸಿ ಇಡಲು, ಕುಡಿಯುವ ನೀರು-ಅಡುಗೆ ಮತ್ತು ಸ್ಥಳೀಯ ಅಕ್ಕಿಯ ವೈನ್ ಇವುಗಳನ್ನು ಸಂಗ್ರಹಿಸಲು ಉಪಯೋಗಿಸಲಾಗುತ್ತದೆ.

10ನೇ ಪುಟಕ್ಕೆ...

ಮನೆಗಳ ಮುಂದೆ ಬಿಸಿಲಿನಲ್ಲಿ ಹರಡಿರುವ ‘ಚಾರಾಯ್ ತಬಾ’ ಕರಕುಶಲ ಕಲೆಯ ಮಣ್ಣಿನ ಪಾತ್ರೆಗಳು

ಪ್ರಜಾವಾಣಿ
ಕನ್ನಡ ಕಥಾ ಜಗತ್ತಿನ ವಾರ್ಷಿಕ ಸಂಭ್ರಮ
ದೀಪಾವಳಿ ವಿಶೇಷಾಂಕ 2022
ದೀಪಾವಳಿ ಕಥಾ–ಕವನ ಸ್ಪರ್ಧೆಯ ಪ್ರವೇಶಗಳಿಗೆ ಇದೋ ಆಹ್ವಾನ
ಕಥೆ – ಕವನ ಕಳಿಸುವ ಮುನ್ನ...
• ಸ್ಪರ್ಧೆಗೆ ಕಳುಹಿಸುವ ಕಥೆ, ಕವನಗಳು ಸ್ವತಂತ್ರ ರಚನೆ ಆಗಿರಬೇಕು. ಈ ಮೊದಲು ಯಾವುದೇ ಪತ್ರಿಕೆ, ನಿಯತಕಾಲಿಕೆ, ಬ್ಲಾಗ್, ಸಾಮಾಜಿಕ ಜಾಲತಾಣ, ಅಂತರ್ಜಾಲ ಸೇರಿದಂತೆ ಎಲ್ಲಿಯೂ ಪ್ರಕಟ ಅಥವಾ ಪ್ರಸಾರ ಆಗಿರಬಾರದು
• ಕಥೆಗೆ ಗರಿಷ್ಠ ಮಿತಿ – ಎರಡು ಸಾವಿರ ಪದಗಳು
• ಕಥೆ– ಕವನಗಳು ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಇಲ್ಲವೆ ಯೂನಿಕೋಡ್‌ನಲ್ಲಿ ಇರಬೇಕು
• ಕಥೆ/ ಕವನ ಇರುವ ಪುಟದಲ್ಲಿ ಹೆಸರು, ವಿವರ ಬರೆಯುವಂತಿಲ್ಲ. ಪ್ರತ್ಯೇಕ ಪುಟದಲ್ಲಿ ಹೆಸರು, ಅಂಚೆ ವಿಳಾಸ, ಫೋನ್ ನಂಬರ್, ಇ–ಮೇಲ್ ವಿಳಾಸ ಒದಗಿಸಬೇಕು. ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ವರ್ಣಮಯ ಭಾವಚಿತ್ರದೊಂದಿಗೆ 80 ಪದ ಮೀರದಂತೆ ಕಿರು ಪರಿಚಯವನ್ನೂ ಜೊತೆಗೆ ಕಳುಹಿಸಬೇಕು
• ಪ್ರವೇಶಗಳ ಲಕೋಟೆಯ ಮೇಲೆ ಸ್ಪರ್ಧೆಯ ವಿಭಾಗವನ್ನು ಸ್ಪಷ್ಟವಾಗಿ ನಮೂದಿಸಬೇಕು
• ‘ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್’ನ ಸಿಬ್ಬಂದಿ ಹಾಗೂ ಅವರ ಕುಟುಂಬದವರು ಈ ಸ್ಪರ್ಧೆಗಳಲ್ಲಿ ಭಾಗವಹಿಸಲು ಅವಕಾಶವಿಲ್ಲ.
• ಸ್ಪರ್ಧೆಗೆ ಕಳುಹಿಸಿರುವ ರಚನೆಗಳನ್ನು ಹಿಂದಿರುಗಿಸುವುದಿಲ್ಲ
• ಬಹುಮಾನಿತ ಕಥೆ, ಕವನಗಳನ್ನು ಯಾವುದೇ ಸ್ವರೂಪದಲ್ಲಿ ಯಾವಾಗ ಬೇಕಾದರೂ ಬಳಸುವ ಹಕ್ಕುಗಳನ್ನು ‘ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್’ ಕಾಯ್ದಿರಿಸಿಕೊಂಡಿದೆ
• ಸಂಪಾದಕರ ತೀರ್ಮಾನವೇ ಅಂತಿಮ
• ಇ– ಮೇಲ್: deepavali@prajavani.co.in
ಕಥಾ ಸ್ಪರ್ಧೆ
ಮೊದಲ ಬಹುಮಾನ ₹ 20,000
ಎರಡನೇ ಬಹುಮಾನ ₹ 15,000
ಮೂರನೇ ಬಹುಮಾನ ₹ 10,000
ಕವನ ಸ್ಪರ್ಧೆ
ಮೊದಲ ಬಹುಮಾನ ₹ 5,000
ಎರಡನೇ ಬಹುಮಾನ ₹ 3,000
ಮೂರನೇ ಬಹುಮಾನ ₹ 2,500
ಪ್ರವೇಶಗಳು ನಮಗೆ ತಲುಪಲು ಕೊನೆಯ ದಿನಾಂಕ ಆಗಸ್ಟ್ 13, 2022
ವಿಳಾಸ: ಸಂಪಾದಕರು
ದೀಪಾವಳಿ ವಿಶೇಷಾಂಕ ವಿಭಾಗ
ಪ್ರಜಾವಾಣಿ
ನಂ. 75, ಮಹಾತ್ಮಗಾಂಧಿ ರಸ್ತೆ
ಬೆಂಗಳೂರು–560001

ಪ್ರಾಚೀನ ಪೆಟ್ರಾದ ಜೋರ್ಡನ್

ರಾಜೇಶ್ ಕಲ್ಲಾಜೆ

ಪ್ರವಾಸ

ಮುಂಬೈನಿಂದ ಬಹರೇನ್ ಮೂಲಕ ಜೋರ್ಡನ್‌ನ ರಾಜಧಾನಿ ಅಮ್ಮಾನ್‌ನ 'ರಾಣಿ ಆಲಿಯಾ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ'ಕ್ಕೆ ಬಂದಿಳಿದಾಗ ಬೆಳಗ್ಗೆ 11 ಗಂಟೆ. ಕೈಯಲ್ಲಿದ್ದ ಸ್ವಲ್ಪ ಡಾಲರುಗಳನ್ನು ಜೋರ್ಡನ್ ದಿನಾರುಗಳಿಗೆ (ಒಂದು ಜೋರ್ಡನ್ ದಿನಾರು= 110 ರೂಪಾಯಿ) ಪರಿವರ್ತಿಸಿ ಹೋಟೆಲ್ ಕಡೆ ಹೊರಟೆವು. ಚೊಕ್ಕ ರಸ್ತೆ, ವ್ಯವಸ್ಥಿತ ನಗರ, ರಸ್ತೆ ಬದಿಯಲ್ಲೆಲ್ಲೂ ಕಸ, ಗಲೀಜು ಕಾಣದು. ದ್ವಿಚಕ್ರ ವಾಹನಗಳ ಸುಳಿವಿಲ್ಲ. ಹೆಚ್ಚಾಗಿ ಕಾರುಗಳದ್ದೇ ಕಾರುಬಾರು. ಶುಷ್ಕ, ಮರಳುಗಾಡಿನ ಪ್ರದೇಶವಾದ ಕಾರಣ ಹೆಚ್ಚು ಮರಗಳಿಲ್ಲ. ವಿಮಾನದಿಂದ ಕೆಳಗೆ ನೋಡಿದಾಗ ಅಮ್ಮಾನ್ ನಗರದ ಸುತ್ತಮುತ್ತೆಲ್ಲ ಮರಳು ಬಣ್ಣದ ಒಣಭೂಮಿ ಕಾಣಿಸುತ್ತದೆ.

ಬೈಬಲ್ ಕಾಲದ ಇತಿಹಾಸವಿರುವ ಜೋರ್ಡನ್ ನದಿಯ (ಈ ನದಿಯಿಂದಲೇ ದೇಶಕ್ಕೆ ಆ ಹೆಸರು) ಪೂರ್ವ ಭಾಗದಲ್ಲಿಯ ಈ ದೇಶಕ್ಕೆ ಉತ್ತರದಲ್ಲಿ ಸಿರಿಯಾ, ಪೂರ್ವದಲ್ಲಿ ಇರಾಕ್ ಮತ್ತು ದಕ್ಷಿಣದಲ್ಲಿ ಸೌದಿ ಅರೇಬಿಯಾ ನೆರೆರಾಷ್ಟ್ರಗಳು. ಮಧ್ಯಪ್ರಾಚ್ಯದ ದೇಶವಾದರೂ ಇಲ್ಲಿ ತೈಲ ಉತ್ಪನ್ನಗಳಿಲ್ಲ. ರಸಗೊಬ್ಬರದ ತಯಾರಿಗೆ ಬೇಕಾಗುವ ಪೊಟಾಷ್, ಫಾಸ್ಫೇಟ್ ನಿಕ್ಷೇಪಗಳು ಮತ್ತು ಪ್ರವಾಸೋದ್ಯೋಮ ಇಲ್ಲಿನ ಆರ್ಥಿಕತೆಯ ಬೆನ್ನೆಲುಬು.

ಅಮ್ಮಾನ್ ಹೊರವಲಯದ 'ಆಯಿನ್ ಗಝುಲ್' ಎಂಬ ಸ್ಥಳದಲ್ಲಿ ಸುಮಾರು ಹತ್ತು ಸಾವಿರ ವರ್ಷಗಳಷ್ಟು ಹಳೆಯದಾದ ನಗರವೊಂದರ ಕುರುಹಗಳಿವೆ. ಜೋರ್ಡನ್ ಪ್ರದೇಶ ಅಸಿರಿಯನ್ನರು, ಬ್ಯಾಬಿಲೋನಿಯರು, ಈಜಿಪ್ಷಿಗರ ನಂತರ ಕ್ರಿಸ್ತಪೂರ್ವ ಒಂದನೇ ಶತಮಾನದಲ್ಲಿ ರೋಮನ್ನರ ಆಳ್ವಿಕೆಗೆ ಒಳಪಟ್ಟಿತು. ಅಮ್ಮಾನ್ ನಗರದಲ್ಲಿ 'ಜೆಬೆಲ್ ಅಲ್ ಕಲಾ' ಎಂಬ ಗುಡ್ಡದ ಮೇಲೆ ವಿಭಿನ್ನ ರಾಜ ಮನೆತನಗಳು ತಮ್ಮ ರಾಜ್ಯಭಾರದ ಸಮಯದಲ್ಲಿ ಕಟ್ಟಿದ ಕೋಟೆ, ಹರ್ಕುಲಿಸ್‌ನ ದೇವಾಲಯ, ಉಮ್ಮಯದ್ ಮಸೀದಿಯ ಅವಶೇಷಗಳಿವೆ. ಇವುಗಳಲ್ಲಿ ಇತ್ತೀಚಿನದಾದ ಮಸೀದಿ ಕೆಲವೊಮ್ಮೆ ದುರಸ್ತಿ ಮಾಡಲ್ಪಟ್ಟು ಈಗ ಸುಸ್ಥಿತಿಯಲ್ಲಿದೆ.

ಜೋರ್ಡನ್‌ನ ವಸ್ತು ಸಂಗ್ರಹಾಲಯದಲ್ಲಿ ದೇಶದ ಪ್ರಾಚೀನ ಇತಿಹಾಸದ ಪುಟಗಳನ್ನು ವಿಸ್ತೃತವಾಗಿ ಬಿಡಿಸಿ ದರ್ಶಕರಿಗೆ ವಿವರಿಸಲಾಗಿದೆ. ಪೆಟ್ರಾ, ಜೆರಾಶ್ ಉತ್ಖನನ, ಕ್ರೈಸ್ತ ಧರ್ಮದ ಇತಿಹಾಸ, ಬೆಡೊಯಿನ್ ಅಲೆಮಾರಿಗಳ ಜೀವನ ಶೈಲಿ- ಇವೆಲ್ಲವನ್ನೂ ಚಿತ್ರ, ಪ್ರತಿರೂಪ ಮತ್ತು ವಿಡಿಯೊಗಳ ಮೂಲಕ ಇಲ್ಲಿ ಕಾಣಬಹುದು.

ಅಮ್ಮಾನ್ ನಗರದ ರೋಮನ್ ಆ್ಯಂಫಿಥಿಯೇಟರ್

ವಸ್ತುಸಂಗ್ರಹಾಲಯ ನೋಡಿದ ನಂತರ ದೇಶದ ಉತ್ತರ ಭಾಗದಲ್ಲಿರುವ ರೋಮನ್ ನಗರದ ಭಗ್ನಾವಶೇಷಗಳನ್ನು ಕಾಣಲು ಜೆರಾಶ್‌ಗೆ ಪ್ರಯಾಣ ಬೆಳೆಸಿದೆವು. ಅಮ್ಮಾನ್ ದಾಟಿದ ಮೇಲೆ ಎಲ್ಲೆಲ್ಲೂ ಶುಷ್ಕ, ಮರಳುಭರಿತ ಭೂಮಿ. ರಸ್ತೆಯ ಎರಡೂ ಕಡೆ ಜೋರ್ಡನ್‌ನ ವಾಣಿಜ್ಯ ಬೆಳೆಯಾದ ಆಲಿವ್ ಮರಗಳ ತೋಟ. ಸಾಧಾರಣ ಎತ್ತರದ ಈ ಮರದ ಎಲೆಗಳು ಸ್ವಲ್ಪ ಬೆಳ್ಳಿ ಬಣ್ಣದಂತೆ ಹೊಳೆಯುವ ಕಾರಣ ಗುರುತಿಸಲು ಸುಲಭ.

ಕ್ರಿಸ್ತಪೂರ್ವ ನಾಲ್ಕನೇ ಶತಮಾನದಿಂದ ಕ್ರಿಸ್ತಶಕ ಏಳನೇ ಶತಮಾನದವರೆಗೆ ಗ್ರೀಕರು ಹಾಗೂ ರೋಮನ್ನರ ಆಳ್ವಿಕೆಯಲ್ಲಿ ಜೆರಾಶ್ ನಗರ ಬೆಳೆಯಿತು. ಇಡೀ ವಿಶ್ವದಲ್ಲಿ ಇಟಲಿಯ ನಂತರ ಚೆನ್ನಾಗಿ ಸಂರಕ್ಷಿತವಾಗಿರುವ ರೋಮನ್ನರ ಕಟ್ಟಡಗಳ ಅವಶೇಷದ ನಗರ ಇದು. ನಗರದ ಮಧ್ಯಭಾಗದಲ್ಲಿ ವ್ಯಾಪಾರಕ್ಕೆಂದು ನಿರ್ಮಾಣವಾದ ಬೃಹತ್ ಮಾರುಕಟ್ಟೆ, ಭೂಗತ ಚರಂಡಿ ವ್ಯವಸ್ಥೆ, ಮಾರುಕಟ್ಟೆಯ ಸುತ್ತ ಮತ್ತು ರಸ್ತೆಯ ಇಕ್ಕೆಲಗಳಲ್ಲಿ ಭವ್ಯ ಕಂಬಗಳು, ನಗರ ಅಧಿಕಾರಿಗಳ ಸಭೆ, ಗ್ಲಾಡಿಯೇಟರ್ ಕಾಳಗ ಮತ್ತು ಮನೋರಂಜನಾ ಕಾರ್ಯಕ್ರಮಗಳಿಗೆಂದು ನಿರ್ಮಿತ ಎರಡು ರಂಗಭೂಮಿಗಳು(ಆ್ಯಂಫಿಥಿಯೇಟರ್), ಕುದುರೆ ಓಟದ ಸ್ಪರ್ಧೆಯ ಮೈದಾನ- ಹೀಗೆ ಹಲವಾರು ನೋಟ-ಕಥೆಗಳ ನಗರ ಜೆರಾಶ್. ತೀವ್ರ ಪ್ರಮಾಣದ ಹಲವು ಭೂಕಂಪಗಳಿಗೆ ತುತ್ತಾದ ಈ ನಗರ ಕ್ರಮೇಣ ತನ್ನ ಮಹತ್ವ ಕಳೆದುಕೊಂಡು ಪಾಳುಬಿದ್ದಿತಂತೆ.

ಮರುದಿನ ಬೆಳಗ್ಗೆ ಸಂತ ಜಾನ್‌ಬ್ಯಾಪ್ಟಿಸ್ಟನು ಏಸುವಿಗೆ ಕ್ರೈಸ್ತ ಧರ್ಮದ ದೀಕ್ಷಾಸ್ನಾನ ಮಾಡಿಸಿದ ಸ್ಥಳವನ್ನು ನೋಡಿದೆವು. ಇತಿಹಾಸಕಾರರ ಪ್ರಕಾರ ಈ ಸ್ಥಳ ಹಾಗೂ ದೀಕ್ಷಾಸ್ನಾನದ ಬಗ್ಗೆ ಸಂದೇಹಗಳಿದ್ದರೂ, ಇಡೀ ವಿಶ್ವದಲ್ಲೇ ಇದು ಕ್ರೈಸ್ತರ ಪವಿತ್ರ ಸ್ಥಳಗಳಲ್ಲೊಂದು. ಇಲ್ಲಿಂದ ಕೇವಲ 20 ಕಿಲೊ ಮೀಟರ್ ದೂರದಲ್ಲಿ ಪ್ರಸಿದ್ಧ ಮೃತ ಸಮುದ್ರ. ಸಾಮಾನ್ಯ ಸಾಗರಕ್ಕಿಂತ ಇಲ್ಲಿನ ಉಪ್ಪಿನ ಪ್ರಮಾಣ ಹತ್ತು ಪಟ್ಟು ಹೆಚ್ಚು. ತಟದಿಂದ ಎಷ್ಟೇ ದೂರ ಹೋಗಿ ಮುಳುಗಲು ಪ್ರಯತ್ನಪಟ್ಟರೂ ಮುಳುಗಲು ಅಸಾಧ್ಯವಾದ ವಿಚಿತ್ರ ಅನುಭವ!

ಜೋರ್ಡನ್ ದೇಶದಲ್ಲಿ ಕಡೆಯ ದಿನದ ಪ್ರವಾಸ ವಿಶ್ವಪ್ರಸಿದ್ಧ ಪೆಟ್ರಾ ನಗರಿಗೆ. ಅಮ್ಮಾನ್‌ನಿಂದ ದಕ್ಷಿಣಕ್ಕೆ 230 ಕಿಲೊ ಮೀಟರ್ ದೂರದಲ್ಲಿರುವ ಈ ಪ್ರಾಚೀನ ನಗರ ಕ್ರಿಸ್ತ ಪೂರ್ವ 4ನೇ ಶತಮಾನದಲ್ಲಿ ಅಲೆಮಾರಿ ಅರಬ್ ಜನಾಂಗ- ನೆಬಿಷಿಯನ್ನರ ರಾಜಧಾನಿಯಾಗಿತ್ತು. ಆ ಕಾಲದಲ್ಲಿ ಧಾರ್ಮಿಕ ವಿಧಿಗಳಿಗೆ ಅತ್ಯಾವಶ್ಯಕವಾಗಿದ್ದ ಸುಗಂಧದ್ರವ್ಯಗಳ ವ್ಯಾಪಾರದ ಮೂಲಕ ಆರ್ಥಿಕ ಉನ್ನತಿಯನ್ನು ಕಂಡುಕೊಂಡ ನೆಬಿಷಿಯನ್ನರು ಮರುಭೂಮಿಯ ಯುದ್ಧಕಲೆ, ಮಳೆನೀರು ಸಂಗ್ರಹಣೆ ಮತ್ತು ಕಲ್ಲಿನ ಕೆತ್ತನೆಗೆ ಹೆಸರುವಾಸಿಯಾಗಿದ್ದರು.



ರಾಜ ಅರೆಟಸ್‌ನ ಸಮಾಧಿಯಿರುವ ಶಿಲಾಗುಹಾಲಯದ ಹೊರನೋಟ

ಪೆಟ್ರಾದ ಹೆಸರಾಂತ ಭವ್ಯ ಕಲ್ಲಿನ ಕೆತ್ತನೆ, ನೆಬಿಷಿಯನ್ನರ ರಾಜ ಆರೆಟಸ್ ಎಂಬಾತನ ಸಮಾಧಿ. ಎತ್ತರದ ಬೃಹತ್ ಬಂಡೆಗಳ ನಡುವೆ ಸುಮಾರು ಎರಡು ಕಿಲೊ ಮೀಟರುಗಳಷ್ಟು ನಡೆದ ಮೇಲೆ ದೂರದಲ್ಲಿ ಕಲ್ಲುಗಳಲ್ಲಿ ಸಂದಿಯಿಂದ ಇಣುಕುವ ಈ ಸುಂದರ ನಿರ್ಮಾಣ, ಎಲ್ಲೋರಾದ ಕೈಲಾಸ ಮಂದಿರದಂತೆ ಬಂಡೆಕಲ್ಲಿನೊಳಗೇ ಕೆತ್ತಲ್ಪಟ್ಟಿದೆ. ಕ್ರಿಸ್ತಶಕ ಎರಡನೇ ಶತಮಾನದಿಂದ ರೋಮನ್ನರ ಆಳ್ವಿಕೆಗೆ ಒಳಪಟ್ಟ ಪೆಟ್ರಾದಲ್ಲಿ ಆ್ಯಂಫಿಥಿಯೇಟರ್, ಭವ್ಯ ಕಂಬಗಳು, ರೋಮನ್ನರ ದೇವಾಲಯಗಳನ್ನು ಕಾಣಬಹುದು.

ಇಸ್ಲಾಮಿಕ್ ದೇಶವಾದರೂ ಬುರ್ಖಾ ಕಾಣಸಿಗದ, ವಿಭಿನ್ನ ಮಧ್ಯಪ್ರಾಚ್ಯದ ಊಟ-ತಿನಿಸುಗಳ, ಸ್ವಚ್ಛ, ಸುವ್ಯವಸ್ಥಿತ ಶಹರುಗಳ, ಸರಳ, ಸ್ನೇಹಮಯಿ ಜನರ ಆಕರ್ಷಕ ರಾಷ್ಟ್ರ ಜೋರ್ಡನ್.

(ಲೇಖಕ: ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಛತ್ತೀಸ್‌ಗಡ ಅರಣ್ಯ ಇಲಾಖೆ)

ಕಂಬಗಳ ನಗರ ಜೆರಾಶ್

ವಿಮಾನಯಾನದ ಆಸೆ

8ನೇ ಪುಟದಿಂದ...

ದೇವನಹಳ್ಳಿಯ ವಿಮಾನ ನಿಲ್ದಾಣ ಇದಕ್ಕೆ ವೇದಿಕೆ. ವರ್ಷದಿಂದ ವರ್ಷಕ್ಕೆ ಇಲ್ಲಿಂದ ರಫ್ತಾಗುತ್ತಿರುವ ಗುಲಾಬಿಗಳ ಪ್ರಮಾಣ ಹೆಚ್ಚಾಗುತ್ತಿದೆ. ಬೆಂಗಳೂರಿನಿಂದ ಲಂಡನ್‌ಗೂ ನೇರವಾಗಿ ಲಗ್ಗೆ ಇಡುವ ಸಾಮರ್ಥ್ಯ ಚಿಕ್ಕಬಳ್ಳಾಪುರದ ಗುಲಾಬಿಗಳಿಗಿದೆ! ಮುಂದೆ ಕೊಪ್ಪಳದ ಭಾಗ್ಯನಗರ ಸೀರೆ, ಪಿಂಕ್ ಗ್ರಾನೈಟ್, ದಾವಣಗೆರೆಯ ಜವಳಿ, ಶಿವಮೊಗ್ಗದ ಅಡಿಕೆ-ಕಾಳುಮೆಣಸು ವಿಮಾನವೇರಿ ವಿದೇಶ ಸೇರುವ ದಿನಗಳು ದೂರವಿಲ್ಲ.

'ಕೊಪ್ಪಳದಲ್ಲಿ ದೇಶದ ಮೊದಲ ಆಟಿಕೆಗಳ ಉತ್ಪಾದನಾ ಕ್ಲಸ್ಟರ್‌ನಿರ್ಮಾಣವಾಗಲಿದೆ. ಇದರ ರಫ್ತಿಗೆ ವಿಮಾನ ನಿಲ್ದಾಣ ಪೂರಕ. ಮಧ್ಯ ಕರ್ನಾಟಕದಲ್ಲಿ ಹಲವು ವರ್ಷಗಳ ಹಿಂದೆಯೇ ವಿಮಾನ ನಿಲ್ದಾಣ ಆರಂಭವಾಗಿದ್ದರೆ ಈ ಭಾಗದ ದಿಕ್ಕೇ ಬದಲಾಗುತ್ತಿತ್ತು. ರಾಜ್ಯದ ಎಲ್ಲೆಡೆ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಆದ್ಯತೆ ನೀಡಿದ್ದೇವೆ' ಎನ್ನುತ್ತಾರೆ ಮೂಲಸೌಕರ್ಯ ಅಭಿವೃದ್ದಿ ಸಚಿವ ವಿ.ಸೋಮಣ್ಣ.

ಕೃಷಿ ಉತ್ಪನ್ನಗಳ ರಫ್ತು, ಉದ್ಯೋಗ ಸೃಷ್ಟಿ, ಶಿಕ್ಷಣ ಹಾಗೂ ಪ್ರವಾಸೋದ್ಯಮ ಅಭಿವೃದ್ಧಿಗೆ ವಿಮಾನ ನಿಲ್ದಾಣಗಳು ಸಹಕಾರಿ. ಕಾರವಾರದಲ್ಲಿ ನಿರ್ಮಾಣವಾಗಲಿರುವ ವಿಮಾನ ನಿಲ್ದಾಣ, ದೇಶದ ರಕ್ಷಣೆಯ ಜೊತೆಗೆ ಜನರ ವಾಯುಯಾನಕ್ಕೂ ಪೂರಕ. ವಿದೇಶಿ ಪ್ರವಾಸಿಗರನ್ನು ಹೆಚ್ಚು ಆಕರ್ಷಿಸುವ ಪ್ರವಾಸಿ ತಾಣ ಹಂಪಿ. ಇಲ್ಲಿಗೆ ಪ್ರತಿವರ್ಷ ಭೇಟಿ ನೀಡುವ ವಿದೇಶಿ ಪ್ರವಾಸಿಗರ ಸಂಖ್ಯೆಯೇ 80 ಸಾವಿರದಷ್ಟಿದೆ. ಇಲ್ಲಿ, ಶೀಘ್ರದಲ್ಲೇ ಹೆಲಿಪೋರ್ಟ್‌ನಿಂದ ಇಳಿದ ವಿದೇಶಿ ಪ್ರವಾಸಿಗರು 'ಹೆಲೋ ಹಂಪಿ' ಎನ್ನಲಿದ್ದಾರೆ. ಬಾದಾಮಿ, ಪಟ್ಟದಕಲ್ಲು ತಲುಪಲು ಮೂರ್ನಾಲ್ಕು ವಿಮಾನ ನಿಲ್ದಾಣಗಳೂ ಆಯ್ಕೆಗೆ ಸಿಗಲಿವೆ! ಚಿಕ್ಕಮಗಳೂರಿನ ಕಾಫಿ ಘಮವನ್ನು ಮತ್ತಷ್ಟು ಜನರು ಆಘ್ರಾಣಿಸಲಿದ್ದಾರೆ.

'ಶ್ರೀಸಾಮಾನ್ಯನೂ ಹಾರಾಡಬೇಕೆನ್ನುವುದು ಪ್ರಧಾನಿ ಕನಸು. ದೇಶದ ಬೇರೆ ಯಾವ ರಾಜ್ಯಗಳಲ್ಲೂ ನಮ್ಮಷ್ಟು ವಾಯುಯಾನ ಸೌಲಭ್ಯವಿಲ್ಲ. ರಾಜ್ಯದ ಅರ್ಧದಷ್ಟು ಜಿಲ್ಲೆಗಳಿಗೆ ವಾಯುಯಾನದ ಸಂಪರ್ಕ ದೊರೆಯಲಿದೆ. 'ಎನ್ನುವುದು ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮದ(ಕೆಎಸ್‌ಐಐಡಿಸಿ) ಅಧ್ಯಕ್ಷ ಶೈಲೇಂದ್ರ ಕೆ.ಬೆಲ್ದಾಳೆ ಮಾತು. 'ಭವಿಷ್ಯದಲ್ಲಿ ಓಡಾಟಕ್ಕೆ ವಾಯುಯಾನವೇ ಮೊದಲ ಆದ್ಯತೆ ಪಡೆಯಲಿದೆ. ಇದಕ್ಕಾಗಿ ನಾವು ಮೂಲಸೌಕರ್ಯಗಳನ್ನು ಸಿದ್ಧಪಡಿಸಿಡಬೇಕಲ್ಲವೇ? ಆ ಪ್ರಯತ್ನಗಳು ಈಗ ನಡೆದಿವೆ. ಬೇಡಿಕೆ ಇದ್ದಲ್ಲಿ ಏರ್‌ಲೈನ್ ಕಂಪನಿಗಳು ಖಂಡಿತಾ ಬರಲಿವೆ. ಕೈಗಾರಿಕೆಗಳೂ ಇಂಥ ಪ್ರದೇಶಗಳಲ್ಲಿ ಅಭಿವೃದ್ಧಿಯಾಗಲಿವೆ' ಎನ್ನುತ್ತಾರೆ ಕೆಎಸ್‌ಐಐಡಿಸಿ ವ್ಯವಸ್ಥಾಪಕ ನಿರ್ದೇಶಕ ಎಂ.ಆರ್.ರವಿ.

ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದ (ಎಎಐ) ಪ್ರಕಾರ, ಕರ್ನಾಟಕದಲ್ಲಿ, ಲಘು ವಿಮಾನಗಳು ಇಳಿಯುವ ಸಾಮರ್ಥ್ಯ ಹೊಂದಿರುವ ಹತ್ತಕ್ಕೂ ಅಧಿಕ ಬಳಕೆಯಾಗದ ಏರ್‌ಸ್ಟ್ರಿಪ್‌ಗಳಿವೆ. ಹಲವು ನಿಷ್ಪ್ರಯೋಜಕ ಸ್ಥಿತಿ ತಲುಪಿವೆ. ಇವುಗಳಿಗೆಲ್ಲ ಕಾಯಕಲ್ಪ ಸಿಕ್ಕರೆ ಕರ್ನಾಟಕದ ವಾಯುಯಾನದಲ್ಲಿ ಹೊಸ ಅಧ್ಯಾಯವೇ ಸೃಷ್ಟಿಯಾಗಲಿದೆ. ಆದರೆ, ಸದ್ಯಕ್ಕೆ ಇದು 'ಗಗನಕುಸುಮ'. ಹೊಸದಾಗಿ ನಿರ್ಮಾಣವಾಗುತ್ತಿರುವ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸಲು ಏರ್‌ಲೈನ್ಸ್‌ಗಳು ಹಿಂದೇಟು ಹಾಕುತ್ತಿವೆ. ಉಡಾನ್ ಯೋಜನೆಯಡಿ ಸರ್ಕಾರ ಹಲವು ಹೊಸ ವಿಮಾನ ನಿಲ್ದಾಣಗಳಿಗೆ ಪ್ರಾದೇಶಿಕ ಸಂಪರ್ಕ ಯೋಜನೆಯಡಿ (ಆರ್‌ಸಿಎಸ್) ಬಿಡ್ಡಿಂಗ್ ಕರೆದಿದ್ದರೂ, ಯಾವುದೇ ಏರ್‌ಲೈನ್ಸ್‌ಗಳು ಈ ನಿಲ್ದಾಣಗಳನ್ನು ಆಯ್ದುಕೊಂಡಿಲ್ಲ. ಆರ್‌ಸಿಎಸ್‌ನಡಿ ಸರ್ಕಾರ ಎಷ್ಟೇ ಪ್ರೋತ್ಸಾಹ ನೀಡಿದರೂ ಏರ್‌ಲೈನ್ಸ್‌ಗಳು ಕೊನೆಯಲ್ಲಿ ಲಾಭ ನಷ್ಟದ ಲೆಕ್ಕಾಚಾರದಲ್ಲೇ ತೊಡಗಿರುವುದು ಇದಕ್ಕೆ ಕಾರಣ. ಮುಂದೆ ಈ ನಿಲ್ದಾಣಗಳಿಗೆ ಬೇಡಿಕೆ ಬರಬಹುದು, ಲೋಹದ ಹಕ್ಕಿಗಳೂ ಇಳಿಯಬಹುದು. ಕೆಲ ವರ್ಷದ ಹಿಂದಿನ ಸ್ಥಿತಿಗೆ ಹೋಲಿಸಿದರೆ ಸದ್ಯದ ಪರಿಸ್ಥಿತಿಯಲ್ಲಿ ಅಂಬರದಲ್ಲಿ ಹಾರುವ ಕನಸಿಗೆಸುಲಭವಾಗಿ ರೆಕ್ಕೆ ಮೂಡದು ಎಂಬಂತಾಗಿದೆ. ವೈಟ್‌ಪೆಟ್ರೋಲ್ ದರ 'ಗಗನ'ಕ್ಕೇರಿರುವುದು ಟಿಕೆಟ್ ದರವೂ ವೈಟ್‌ಕಾಲರ್‌ನವರಿಗಷ್ಟೇ ಭರಿಸಲು ಸಾಧ್ಯವೆಂಬಂತಾಗಿದೆ. ❖

ರಾಜ್ಯದ ಆಗಸ ಎಷ್ಟೊಂದು ಬ್ಯುಸಿ!

ಕಾರ್ಯಾಚರಣೆಯಲ್ಲಿರುವ ವಿಮಾನ ನಿಲ್ದಾಣಗಳು
1.ಬೆಂಗಳೂರು, 2.ಮೈಸೂರು, 3.ಮಂಗಳೂರು, 4. ಬೆಳಗಾವಿ, 5.ಹುಬ್ಬಳ್ಳಿ, 6.ಕಲಬುರಗಿ, 7.ಬೀದರ್

ಶೀಘ್ರದಲ್ಲೇ ಕಾರ್ಯಾರಂಭಿಸಲಿರುವ ವಿಮಾನ ನಿಲ್ದಾಣಗಳು
ಶಿವಮೊಗ್ಗ, ಹಾಸನ, ವಿಜಯಪುರ,

ಒಪ್ಪಿಗೆ ಪಡೆದ/ನಿರ್ಮಾಣ ಹಂತದಲ್ಲಿರುವ ವಿಮಾನ ನಿಲ್ದಾಣಗಳು
ರಾಯಚೂರು, ಕಾರವಾರ, ಬಳ್ಳಾರಿ

ಪ್ರಸ್ತಾವಿತ ವಿಮಾನ ನಿಲ್ದಾಣಗಳು
ದಾವಣಗೆರೆ, ಕೊಪ್ಪಳ

ವಿಜಯಪುರ
- 2023 ಮೇಯಿಂದ ಕಾರ್ಯಾರಂಭ ನಿರೀಕ್ಷೆ
- ATR 72 ನಿಂದ ಮೇಲ್ದರ್ಜೆಗೆ
- A320 ಹಾಗೂ ಅದಕ್ಕೆ ಸಮನಾದ ವಿಮಾನಗಳು ಇಳಿಯುವ ಸಾಮರ್ಥ್ಯವುಳ್ಳ ರನ್‌ವೇ

ರಾಯಚೂರು
- ರೈಟ್ಸ್‌ನಿಂದ ಕಾರ್ಯಸಾಧ್ಯತಾ ವರದಿ
- ₹186 ಕೋಟಿ ವೆಚ್ಚ
- 322 ಎಕರೆ ಪ್ರದೇಶದಲ್ಲಿ ATR 72 ಮಾದರಿ ವಿಮಾನಗಳ ಕಾರ್ಯಾಚರಣೆಗೆ ವಿನ್ಯಾಸ

ಬಳ್ಳಾರಿ
- ಖಾಸಗಿ ಸಹಭಾಗಿತ್ವದಲ್ಲಿ 892 ಎಕರೆ ಪ್ರದೇಶದಲ್ಲಿ ನಿಲ್ದಾಣ ನಿರ್ಮಾಣ ಆರಂಭಗೊಂಡರೂ ನಾನಾ ಕಾರಣಗಳಿಂದ ವಿಳಂಬ. ಮರುಟೆಂಡರ್ ಆಹ್ವಾನಿಸಲು ಕೆಎಸ್‌ಐಐಡಿಸಿ ಸಿದ್ಧತೆ.

ಕೊಪ್ಪಳ
- ನಗರದಿಂದ 15 ಕಿ.ಮೀ. ದೂರದಲ್ಲಿನ ಗದಗ ಹೆದ್ದಾರಿಯಲ್ಲಿರುವ ಲಕ್ಮಾಪುರದಲ್ಲಿ 351 ಎಕರೆ ಪ್ರದೇಶದಲ್ಲಿ ವಿಮಾನ ನಿಲ್ದಾಣಕ್ಕೆ ಭೂಮಿ
- ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದಿಂದ ಶೀಘ್ರದಲ್ಲೇ ಕಾರ್ಯಸಾಧ್ಯತಾ ವರದಿ

ದಾವಣಗೆರೆ
- ನಗರದಿಂದ 19 ಕಿ.ಮೀ. ದೂರದಲ್ಲಿರುವ ಆನಗೋಡು ಸಮೀಪ 361 ಎಕರೆ ಪ್ರದೇಶದಲ್ಲಿ ವಿಮಾನ ನಿಲ್ದಾಣಕ್ಕೆ ಭೂಮಿ
- ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದಿಂದ ಶೀಘ್ರದಲ್ಲೇ ಕಾರ್ಯಸಾಧ್ಯತಾ ವರದಿ

ಕಾರವಾರ
- ರಕ್ಷಣಾ ವಿಭಾಗದ ಯುದ್ಧ ವಿಮಾನಗಳು ಹಾಗೂ ನಾಗರಿಕ ವಿಮಾನಗಳ ಕಾರ್ಯಾಚರಣೆಗೆ ಜಂಟಿ ನಿಲ್ದಾಣ
- ಸೀಬರ್ಡ್ ಯೋಜನೆಯಡಿ ನೌಕಾಪಡೆಯಿಂದ ನಿಲ್ದಾಣ ಅಭಿವೃದ್ಧಿ
- A320 ಹಾಗೂ ಅದಕ್ಕೆ ಸಮನಾದ ವಿಮಾನಗಳು ಇಳಿಯುವ ಸಾಮರ್ಥ್ಯವುಳ್ಳ ರನ್‌ವೇ ನಿರ್ಮಾಣ
- 97.10 ಎಕರೆ ಭೂಮಿ ಸ್ವಾಧೀನ
- ಗೋಕರ್ಣ, ಮುರುಡೇಶ್ವರ, ಓಂ ಬೀಚ್, ಕೊಲ್ಲೂರು ಸೇರಿ ಕರಾವಳಿಯ ಪ್ರವಾಸೋದ್ಯಮ ಅಭಿವೃದ್ಧಿಗೆ ಸಹಕಾರಿ



ಬಾದಾಮಿ, ಅಥಣಿಯಲ್ಲೂ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಬೇಡಿಕೆ

ಶಿವಮೊಗ್ಗ
- 2022ರ ಡಿಸೆಂಬರ್‌ನಿಂದ ಕಾರ್ಯಾರಂಭ ನಿರೀಕ್ಷೆ
- A320 ಹಾಗೂ ಅದಕ್ಕೆ ಸಮನಾದ ವಿಮಾನಗಳು ಇಳಿಯುವ ಸಾಮರ್ಥ್ಯವುಳ್ಳ ರನ್‌ವೇ
- ವಿಶ್ವವಿಖ್ಯಾತ ಜೋಗ ಜಲಪಾತಕ್ಕೆ ಸಂಪರ್ಕ
- ಉದ್ಯಮ, ಶಿಕ್ಷಣ ಕೇಂದ್ರ
- ಅಕ್ಕಿ, ಅಡಿಕೆ ರಫ್ತಿಗೆ ಸಹಕಾರಿ

ಹಾಸನ
- 2023ರ ಸೆಪ್ಟೆಂಬರ್‌ನಿಂದ ಕಾರ್ಯಾರಂಭ ನಿರೀಕ್ಷೆ
- ATR 72 ಮಾದರಿ ವಿಮಾನ ಇಳಿಯಲು ವಿನ್ಯಾಸಗೊಳಿಸಲಾದ ನಿಲ್ದಾಣ
- ಕೃಷಿ, ಪ್ರವಾಸೋದ್ಯಮಕ್ಕೆ ಸಹಕಾರಿ
- ಪ್ರವಾಸಿ ತಾಣ ಚಿಕ್ಕಮಗಳೂರು, ಕೊಡಗು ಜಿಲ್ಲೆಗೂ ಅನುಕೂಲ

ಭವಿಷ್ಯದಲ್ಲಿ ಇಲ್ಲಿ ನೀರಿನಲ್ಲೇ ಇಳಿಯಲಿವೆ ವಿಮಾನಗಳು- ಪ್ರಸ್ತಾವಿತ ಸ್ಥಳಗಳು
- ತುಂಗಭದ್ರಾ ಅಣೆಕಟ್ಟು
- ಕೆಆರ್‌ಎಸ್ ಅಣೆಕಟ್ಟು
- ಲಿಂಗನಮಕ್ಕಿ ಜಲಾಶಯ
- ಆಲಮಟ್ಟಿ ಅಣೆಕಟ್ಟು
- ಹಿಡ್ಕಲ್ ಜಲಾಶಯ

ಮೂರು ಕಡೆ ಹೆಲಿಪೋರ್ಟ್
- **ಚಿಕ್ಕಮಗಳೂರು**- ಕಸಬಾ ಹೋಬಳಿ ಚಿಕ್ಕಮಗಳೂರು-ಹಿರೇಮಗಳೂರು ಗ್ರಾಮದಲ್ಲಿ ನಿರ್ಮಾಣವಾಗಬೇಕಿದ್ದ ಕಿರು ವಿಮಾನ ನಿಲ್ದಾಣದ ಬದಲಾಗಿ 119 ಎಕರೆ ಪ್ರದೇಶದಲ್ಲಿ ಹೆಲಿಪೋರ್ಟ್ ನಿರ್ಮಾಣ. ಕಾರ್ಯಸಾಧ್ಯತಾ ವರದಿ ಸಿದ್ಧಪಡಿಸುತ್ತಿರುವ ಕೆಎಸ್‌ಐಐಡಿಸಿ.
- **ಮಡಿಕೇರಿ**- ಮಡಿಕೇರಿಯಲ್ಲಿ ಹೆಲಿಪೋರ್ಟ್ ನಿರ್ಮಾಣಕ್ಕೆ ಸರ್ಕಾರ ಉದ್ದೇಶಿಸಿತ್ತು. ಭೂಸ್ವಾಧೀನ ಸಾಧ್ಯವಾಗದ ಕಾರಣ ಕುಶಾಲನಗರದಲ್ಲಿ ಈಗಾಗಲೇ ಇರುವ ಏರ್‌ಸ್ಟ್ರಿಪ್‌ನಲ್ಲಿ ಹೆಲಿಪೋರ್ಟ್. 4.60 ಎಕರೆ ಪ್ರದೇಶದಲ್ಲಿ ನಿರ್ಮಾಣ. ಕಾರ್ಯಸಾಧ್ಯತಾ ವರದಿ ಸಿದ್ಧಪಡಿಸುತ್ತಿರುವ ಕೆಎಸ್‌ಐಐಡಿಸಿ.
- **ಹಂಪಿ**- ಹೆಲಿಪೋರ್ಟ್ ಅಭಿವೃದ್ಧಿಗೆ ಅಗತ್ಯವಿರುವ ಭೂಮಿ ಹಸ್ತಾಂತರಿಸಲು ಪ್ರವಾಸೋದ್ಯಮ ಇಲಾಖೆಯಿಂದ ಒಪ್ಪಿಗೆ. ಕಾರ್ಯಸಾಧ್ಯತಾ ವರದಿ ಸಿದ್ಧಪಡಿಸುತ್ತಿರುವ ಕೆಎಸ್‌ಐಐಡಿಸಿ.

ಮಾಹಿತಿ: ಕೆಎಸ್‌ಐಐಡಿಸಿ

ಮುನ್ನೋಟ 10-07-2022 ರಿಂದ 16-07-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ವೃತ್ತಿ ಮತ್ತು ಪ್ರವೃತ್ತಿಗಳಲ್ಲಿ ವ್ಯತ್ಯಾಸಗಳನ್ನು ಅರಿತು ಸಮಾಧಾನಚಿತ್ತದಿಂದ ಇರುವುದು ಬಹಳ ಮುಖ್ಯ. ಪ್ರೇಮ ಪ್ರಕರಣದಲ್ಲಿ ದುಡುಕುತನ ಖಂಡಿತ ಬೇಡ. ಹಣದ ಒಳಹರಿವು ನಿರೀಕ್ಷೆಯ ಮಟ್ಟದ ಹತ್ತಿರ ಇರುತ್ತದೆ. ನೆರೆಹೊರೆಯವರೊಡನೆ ಕಲಹ ಏರ್ಪಡುವ ಸಂಭವವಿದೆ. ಮಕ್ಕಳಿಂದ ಅಗೌರವ ಆಗಬಹುದು. ಮಿತ್ರರಿಂದ ನಿಮ್ಮ ಕೆಲಸಗಳಿಗೆ ಧನಸಹಾಯ ಒದಗುತ್ತದೆ. ಕೃಷಿಕರಿಗೆ ಆತಂಕಗಳಿದ್ದರೂ ತೊಂದರೆಯಿಲ್ಲ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಗೃಹೋಪಯೋಗಿ ವಸ್ತುಗಳನ್ನು ತಯಾರಿಸಿ ಮಾರಾಟ ಮಾಡುವವರ ವ್ಯವಹಾರ ವಿಸ್ತರಿಸುತ್ತದೆ. ವೃತ್ತಿಯಲ್ಲಿ ನಿಮ್ಮ ನಿಷ್ಠೆ ಮತ್ತು ಪ್ರಾಮಾಣಿಕತೆಗೆ ಗೌರವ ದೊರೆಯುತ್ತದೆ. ವ್ಯಾಪಾರ-ವ್ಯವಹಾರಗಳಲ್ಲಿ ನಿಮ್ಮ ಪಾಲಿನ ಲಾಭ ದೊರೆಯುತ್ತದೆ. ನಿರುದ್ಯೋಗಿಗಳಿಗೆ ಉದ್ಯೋಗ ದೊರೆಯುವ ಸಂಭವವಿದೆ. ಹೊಸ ಯೋಜನೆಗಳನ್ನು ಕೈಗೊಳ್ಳುವಂತೆ ಗುತ್ತಿಗೆದಾರರಿಗೆ ಆಹ್ವಾನ ಬರಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಹೊಸ ವ್ಯಕ್ತಿಗಳಿಂದ ಹೆಚ್ಚಿನ ಸಹಕಾರ ದೊರೆಯುತ್ತದೆ. ಸಿನಿಮಾ ಕಲಾವಿದರುಗಳಿಗೆ ಹೆಚ್ಚಿನ ಅವಕಾಶ ದೊರೆತು ಸಂಪಾದನೆ ಹೆಚ್ಚುತ್ತದೆ. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ. ಆರ್ಥಿಕ ವಿಷಯಕ್ಕೆ ಸಂಬಂಧಿಸಿದಂತೆ ಹೊಸ ನಿರ್ಧಾರಗಳನ್ನು ತೆಗೆದುಕೊಳ್ಳಲು ಆಲೋಚನೆಯನ್ನು ಮಾಡುವಿರಿ. ವಿದ್ಯಾರ್ಥಿಗಳಿಗೆ ಯಶಸ್ಸು ಇರುತ್ತದೆ. ಭೂ ವ್ಯವಹಾರವನ್ನು ಮಾಡುವವರಿಗೆ ಲಾಭವಿರುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಮಕ್ಕಳ ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿ ಅಗತ್ಯ. ಹಣದ ಕೊಡುಕೊಳ್ಳುವ ವ್ಯವಹಾರದಲ್ಲಿ ಹೆಚ್ಚು ನೈಪುಣ್ಯತೆಯನ್ನು ಸಾಧಿಸಿತೋರುವಿರಿ. ಹಣದ ಹರಿವು ನಿರೀಕ್ಷೆಯಷ್ಟು ಇದ್ದರೂ ಖರ್ಚಿಗೆ ಕಡಿವಾಣ ಹಾಕಲೇ ಬೇಕಾದ ಅನಿವಾರ್ಯವಿದೆ. ಸಾರ್ವಜನಿಕ ಗೌರವ ಸ್ವೀಕರಿಸಲು ಹೋದಾಗ ಹೊಸ ಜವಾಬ್ದಾರಿ ಒಂದು ಹೆಗಲೇರುತ್ತದೆ. ಭೂಮಿಯ ಕೊಡುಕೊಳ್ಳುವ ವ್ಯವಹಾರಗಳು ಹೆಚ್ಚಾಗಿ, ಹೆಚ್ಚಿನ ಲಾಭ ಬರುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಗುರುತರವಾದ ಜವಾಬ್ದಾರಿಯನ್ನು ಸರಿಯಾಗಿ ನಿಭಾಯಿಸಿ ಬಂಧುಗಳ ನಡುವೆ ಭೇಷ್ ಎನಿಸಿಕೊಳ್ಳುವಿರಿ. ಆರ್ಥಿಕ ವಿಷಯದಲ್ಲಿ ಪ್ರಗತಿಯನ್ನು ಕಾಣುವಿರಿ. ಬಂಧುಗಳಲ್ಲಿ ನಿಮ್ಮ ಬಗ್ಗೆ ಭಿನ್ನಾಭಿಪ್ರಾಯಗಳು ಹೆಚ್ಚುತ್ತವೆ. ದೀರ್ಘಕಾಲೀನ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವವರಿಗೆ ಸ್ವಲ್ಪ ನಿರಾಳ ಆಗುತ್ತದೆ. ಹೆಂಗಸರ ಅಲಂಕಾರಿಕ ವಸ್ತುಗಳನ್ನು ತಯಾರಿಸಿ ಮಾರಾಟ ಮಾಡುವವರಿಗೆ ಲಾಭವಿದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಸರ್ಕಾರಿ ಮಟ್ಟದ ಕೆಲಸಕಾರ್ಯಗಳಲ್ಲಿ ಪ್ರಗತಿ ಕಾಣಬಹುದು. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ. ನಿಮ್ಮ ಕೆಲಸಗಳಿಗೆ ತಾಯಿಯ ಸಹಕಾರ ಸಂಪೂರ್ಣವಾಗಿ ದೊರೆಯುತ್ತದೆ. ಹೆಚ್ಚಿನ ಶ್ರಮವನ್ನು ಹಾಕಲೇಬೇಕಾದ ಪರಿಸ್ಥಿತಿ ವಿದ್ಯಾರ್ಥಿಗಳಿಗೆ ಇದೆ. ಸಾಲಗಾರರು ವಸೂಲಿಗೆ ಬಂದು ಪೀಡಿಸಬಹುದು. ಮಧುಮೇಹಿಗಳು ತಮ್ಮ ಆರೋಗ್ಯದ ಬಗ್ಗೆ ಹೆಚ್ಚಿನ ನಿಗಾವಹಿಸುವುದು ಅಗತ್ಯ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ವಿದ್ಯಾರ್ಥಿಗಳು ಅಧ್ಯಯನದಲ್ಲಿ ಹೆಚ್ಚು ಗಮನ ಹರಿಸುವುದು ಒಳ್ಳೆಯದು. ಹಣದ ಒಳಹರಿವಿನಲ್ಲಿ ಚೇತರಿಕೆಯನ್ನು ಕಾಣಬಹುದು. ಮಹಿಳಾ ಪ್ರತಿಭೆಗಳಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯುತ್ತದೆ. ಆದಾಯದ ಹೊಸಮೂಲಗಳ ಹುಡುಕಾಟ ನಡೆಸುವಿರಿ. ಸಂಗಾತಿಯ ಕೋಪಕ್ಕೆ ತಾಳ್ಮೆಯೇ ಉತ್ತರ. ಸ್ವಂತ ಆರೋಗ್ಯದಲ್ಲಿ ಸ್ವಲ್ಪಮಟ್ಟಿನ ವ್ಯತ್ಯಯ ಆಗಲಿದೆ. ಮಕ್ಕಳಿಂದ ನಿಮ್ಮ ನೆಮ್ಮದಿಗೆ ಕುತ್ತು ಬರಬಹುದು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಆರ್ಥಿಕ ಅಭಿವೃದ್ಧಿ ಬಗ್ಗೆ ಹೊಸಮಾರ್ಗವನ್ನು ಕಂಡುಕೊಳ್ಳುವಿರಿ. ಹಿರಿಯರಿಗೆ ಬಹಳ ದಿನಗಳಿಂದ ಕಿರಿಕಿರಿ ಉಂಟು ಮಾಡುತ್ತಿದ್ದ ಸಮಸ್ಯೆಗಳು ಪರಿಹಾರವಾಗುತ್ತವೆ. ಸಾಮಾಜಿಕ ಸೇವೆಗಳನ್ನು ಮಾಡಿ ಸಂತಸಪಡುವಿರಿ. ಕೆಲವೊಂದು ಕೆಲಸಗಳಿಗೆ ನಿಮ್ಮ ಮಿತ್ರರ ಸಂಪೂರ್ಣ ಸಹಕಾರ ದೊರೆತು ಕೆಲಸವಾಗುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ವ್ಯವಹಾರವನ್ನು ಚತುರತೆಯಿಂದ ಮಾಡದಿದ್ದಲ್ಲಿ ಲಾಭಾಂಶ ಕಡಿಮೆಯಾಗಬಹುದು. ವಿದೇಶದಲ್ಲಿ ಇರುವವರಿಗೆ ಸ್ಥಿರಾಸ್ತಿ ಖರೀದಿ ಮಾಡುವ ಯೋಗವಿದೆ. ನಿಮ್ಮ ಮಕ್ಕಳಿಂದ ಸಂತೋಷಪಡುವ ಕಾಲ ಬಂದೊದಗಿದೆ. ದೈನಂದಿನ ಚಟುವಟಿಕೆಗಳಲ್ಲಿ ಹೆಚ್ಚಿನ ಉತ್ಸಾಹ ಮೂಡಿ ಸರಾಗವಾಗಿ ಕೆಲಸಗಳು ಆಗುತ್ತವೆ. ಹೊಸ ಹೊಸ ವಸ್ತುಗಳನ್ನು ಮನೆಯ ಉಪಯೋಗಕ್ಕಾಗಿ ಖರೀದಿ ಮಾಡುವಿರಿ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಬಂಧು ಬಾಂಧವರೊಡನೆ ಕೂಡಿ ಸಂತೋಷವಾಗಿ ಕಾಲ ಕಳೆಯುವಿರಿ. ಮಹಿಳೆಯರ ಆರೋಗ್ಯ ವಿಚಾರದಲ್ಲಿ ಪ್ರಗತಿಯನ್ನು ಕಾಣಬಹುದು. ಧನದ ಒಳಹರಿವು ಸಾಮಾನ್ಯಗತಿಯಲ್ಲಿ ಇರುತ್ತದೆ. ಮಹಿಳೆಯರಿಗೆ ಆಭರಣಗಳನ್ನು ಖರೀದಿ ಮಾಡುವ ಅವಕಾಶಗಳಿವೆ. ಉದ್ಯೋಗಸ್ಥರಿಗೆ ತಮ್ಮ ಮೇಲಧಿಕಾರಿಗಳಿಂದ ಪ್ರಶಂಸೆಯ ಮಾತನ್ನು ಕೇಳುವ ಅವಕಾಶವಿದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಯುವಕರು ಆತುರತೆಯಿಂದ ಕೆಲಸಮಾಡಲು ಹೋಗಿ ತೊಂದರೆಯನ್ನು ತಂದುಕೊಳ್ಳುವರು. ಅನವಶ್ಯಕ ಮಾತುಗಳಿಗೆ ಅಥವಾ ವ್ಯವಹಾರಗಳಿಗೆ ತಲೆ ಹಾಕದಿರುವುದು ಉತ್ತಮ. ಹಿರಿಯ ಲೇಖಕರಿಗೆ ಗೌರವ ಸನ್ಮಾನಗಳು ದೊರೆಯುವ ಸಾಧ್ಯತೆಗಳಿವೆ. ತಾಯಿಯಿಂದ ಕೆಲಸಕಾರ್ಯಗಳಿಗೆ ಸಾಕಷ್ಟು ಸಹಾಯ ದೊರೆಯುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಅನೇಕ ದಿನಗಳಿಂದ ನನೆಗುದಿಗೆ ಬಿದ್ದಿದ್ದ ನಿಮ್ಮ ವಿರುದ್ಧದ ವಿಚಾರ ಗರಿಗೆದರುವ ಸಾಧ್ಯತೆ ಇದೆ. ಯಾವುದೇ ಕೆಲಸ ಕಾರ್ಯಗಳಲ್ಲಿ ಆತುರದ ನಿರ್ಧಾರ ಖಂಡಿತ ಬೇಡ. ವೈಯಕ್ತಿಕ ಜೀವನದಲ್ಲಿ ಅಭಿವೃದ್ಧಿ ಇರುತ್ತದೆ. ಲೇವಾದೇವಿ ವ್ಯವಹಾರಗಳು ಖಂಡಿತಬೇಡ. ನೀವು ಬಳಸುವ ಆಯುಧಗಳ ವಿಚಾರದಲ್ಲಿ ಎಚ್ಚರಿಕೆಯಿಂದ ಇರಿ. ಅಲಂಕಾರಿಕ ವಸ್ತುಗಳನ್ನು ಕೊಳ್ಳುವ ಸಾಧ್ಯತೆ ಇದೆ. ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ಅಗತ್ಯ.

ಪದಬಂಧ 2746



ಮೇಲಿನಿಂದ ಕೆಳಕ್ಕೆ
1. ರಾಮದಾಸರ ಕೃತಿಯಲ್ಲಿ ಚಿನ್ನದಂತಹ ಮಾತು 3
2. ತೆಳ್ಳಗೆ ಸೂಕ್ಷ್ಮವಾಗಿರುವ ವಸ್ತು ವಿಷಯ 3
3. ಒಂದು ರೀತಿಯಲ್ಲಿ ಗಾತ್ರ ಪ್ರಮಾಣದ ಅಳತೆ 4
4. ಮಾತಿನಲ್ಲಿರ ಬೇಕಾದ ಗಟ್ಟಿತನ, ವಸ್ತುವಿನ ಸಾರ 3
7. ಮೇಲಿನಿಂದ ಸುರಿದರೂ, ಕೆಳಗಿನಿಂದ ಬಂದರೂ ಇದು ಬಂಗಾರವೇ! 3
9. ಆಕಾಶವನ್ನು ಮುತ್ತಿಕ್ಕುವ ಕಟ್ಟಡಗಳು 5
10. ಗುಡಿಸಲಲ್ಲಿ ವಾಸವಾಗಿರುವ ಗ್ರಾಮ್ಯ ಹಣದೊಡತಿ 5
12. ಹತ್ತಿರವಲ್ಲದೆ ಬಹಳ ವ್ಯಾಪ್ತಿಯ ಪಯಣ 5
17. ಮಕ್ಕಳು ಆಟವಾಡಲು ಮನೆಯ ಮುಂದಿನ ಜಾಗ 3
18. ಕೈ ಹಿಡಿದಿರುವ ಲಲನೆ ಸಂತೋಷ ಚಿತ್ತಳಾಗಿದ್ದಾಳೆ 4
19. ಎಂದೆಂದಿಗೂ ಅಚಲವಾಗಿ ಬದುಕುವವ 3
20. ಕೂತೂಹಲದ ಜೊತೆಗೆ ಕಳವಳ 3
21. ಯಾವ ಉದ್ರೇಕವೂ ಇಲ್ಲದ ಸಮಚಿತ್ತ 3

ಎಡದಿಂದ ಬಲಕ್ಕೆ
1. ಗಾಳಿಯ ಪ್ರಮಾಣ, ಮುಖ್ಯ ಪ್ರಾಣ 4
3. ಪ್ರಾಣಿಗಳನ್ನು ಪಾಲಿಸುವ ಮಹೇಶ 4
5. ಪ್ರಪಂಚದ ಚೆಲುವೆ 5
6. ಕರುಣೆಯೇ ಇಲ್ಲದ ಕಟು ಹೃದಯದವರು 4
8. ವರ್ಷಂಗಳಂತೆಯೇ ತಿಂಗಳುಗಳು 4
10. ಅಪಹರಿಸಲು ಈಶ್ವರ ಹಣದಲ್ಲಿ ಸೇರುತ್ತಾನೆ 3
11. ಗುಂಡಿಕ್ಕಿ ಕೋಲ್ಲುವ ಕೋವಿ 3
13. ಇದು ತೆಳುವಾದದಲ್ಲ 2
14. ಮರಾಠಿಗರಿಗೆ ಹೊಸತು 2
15. ಸಂತೆಯಲ್ಲಿ ಉದ್ಭವಿಸುವ ದಾರ್ಶನಿಕ ಹಿಂದು ಮುಂದು 2
16. ಹಿಂದುಮುಂದಾದ ಹಿರಿಯ ಸೋದರಿ 2
17. ನಂಬಿಕೆಗೆ ಪಾತ್ರನಾದ ನಾವಿಕ 3
18. ಚಿಪ್ಪಿನಲ್ಲಿ ಸಿಗುವ ಮಣಿಯ ಹೆಸರಿನ ಅಮ್ಮ ಸಾಧಾರಣವಾಗಿ ಕೊಡಗಿನಲ್ಲಿ ಸಿಗುತ್ತಾಳೆ 3
19. ಅತ್ತಿತ್ತ ಚಲಿಸದೆ ಗಟ್ಟಿಯಾಗಿ ನಿಂತ ತರ್ಕ ಸಿದ್ಧಾಂತ 4
20. ಈಶ್ವರನೊಲುಮೆಗೆ ಉರಗ ಗಜಗಳ ಸೆಣಸಾಟ ಕ್ಷೇತ್ರ 4
22. ವರಕವಿ ಬೇಂದ್ರಯವರ ಕಾಸಿನ ಹಾಡು 5
23. ತರುಣ ಪೀಳಿಗೆಯ ಹಾಡು 4
24. ಕೊಲೆಗಳು ಹೆಚ್ಚಾಗಿ ಹರಿವ ನೆತ್ತರ ಪ್ರವಾಹ 4

ಪದಬಂಧ ಉತ್ತರ -2745

ಮೇಲಿಂದ ಕೆಳಕ್ಕೆ
1. ಗತ್ಯಂತರ 2.ಯಮಸುತ 3.ಕೊರವಂಜಿ 4.ನೆರೆಮನೆ 7. ಜಯಭಾರತಿ 8.ರುಪಾಯಿದರ 9.ಗಾನಸೌರಭ 10.ಮಣ್ಣಿನಮಗ 15.ಯಜುರ್ವೇದ 16.ಮಾಯಾಂಗನೆ 18.ವರಕವಿ 19.ರಮ್ಯಗಾನ

ಎಡದಿಂದ ಬಲಕ್ಕೆ
1. ಗವಿರಾಯ 3.ಕೊನೆಮನೆ 5.ಮಹದೇಶ್ವರ 6.ರಜಪೂತರು 9.ಗಾಜಿನಮನೆ 11.ಪಾವನ 12.ಭಾಗ್ಯದಾಯಿ 13.ಸೌರಮಾನ 14.ದಡಾರ 15.ಯತಿಕುಮಾರ 17.ಭವಸಾಗರ 20. ಗಣನಾಯಕ 21.ದವಾಖಾನೆ 22.ವಿಮೋಚನ

ರಾಗಿಭಗೀರಥನ ಯಶೋಗಾಥೆ

ವಿ. ಗಾಯತ್ರಿ



ಹರಿವಾಣ ತುಂಬಿದ ತೆನೆ
(ರಾಗಿ ತಳಿ ವಿಜ್ಞಾನಿ ಡಾ.ಸಿ.ಎಚ್ ಲಕ್ಷ್ಮಣಯ್ಯ ಅವರ ಜೀವನ ಸಾಧನೆ ಕೊಡುಗೆಗಳ ಸಂಸ್ಮರಣ ಗ್ರಂಥ)
ಪ್ರಕಟಣೆ: ರಾಗಿ ಲಕ್ಷ್ಮಣಯ್ಯ ಸ್ಮಾರಕ ಸಮಿತಿ, ಮಂಡ್ಯ
ಪು: 392 ₹350

ಒಳನೋಟ

ಮಳೆಯಾಶ್ರಿತ ಸಣ್ಣ ರೈತರು ಮತ್ತು ದುಡಿಯುವ ಜನರ ಬದುಕಿನಲ್ಲಿ ಹಾಸುಹೊಕ್ಕಾಗಿ ಬೆಸೆದು ಬಂದ ವಿನೀತ ರಾಗಿಗಿಂದು ಜಾಗತಿಕ ಮನ್ನಣೆ ಸಂದಿದೆ. ತೀರಾ ನಿರ್ಲಕ್ಷ್ಯಕ್ಕೊಳಗಾಗಿದ್ದ ರಾಗಿಯ ಉದ್ಧಾರಕ್ಕೆ ಪಣತೊಟ್ಟು ಲಕ್ಷ್ಮಣಯ್ಯನವರಂತಹ ಒಬ್ಬ ಮೇಧಾವಿ ತಮ್ಮ ಜೀವನವನ್ನೇ ಮುಡುಪಾಗಿಟ್ಟ ಧೀರಗಾಥೆ ಇದರ ಹಿಂದಿದೆ. ಸರ್ವಗುಣ ಸಂಪನ್ನ ರಾಗಿ ತಳಿಗಳನ್ನು ಸೃಷ್ಟಿಸಿಕೊಟ್ಟು, 'ರಾಗಿ ಲಕ್ಷ್ಮಣಯ್ಯ'ನವರೆಂದೇ ಜನಾನುರಾಗಿಯಾಗಿದ್ದ ಅವರೀಗ ನಮ್ಮೊಡನೆ ಇದ್ದಿದ್ದರೆ ಜನ್ಮಶತಾಬ್ದಿ ಸಂಭ್ರಮದಲ್ಲಿರುತ್ತಿದ್ದರು. ಜನ್ಮಶತಮಾನೋತ್ಸವದ ನೆಪದಲ್ಲಿ ಮಂಡ್ಯದ 'ರಾಗಿ ಲಕ್ಷ್ಮಣಯ್ಯ ಸ್ಮಾರಕ ಸಮಿತಿ'ಯು 'ಹರಿವಾಣ ತುಂಬಿದ ತೆನೆ' ಎನ್ನುವ 400 ಪುಟಗಳ ಸಂಸ್ಮರಣಾ ಗ್ರಂಥವನ್ನು ಹೊರತಂದಿದೆ.

ಲಕ್ಷ್ಮಣಯ್ಯನವರ ಒಡನಾಡಿಗಳು, ಸಹೋದ್ಯೋಗಿಗಳು, ಅಭಿಮಾನಿಗಳು ಬರೆದ ಇಲ್ಲಿನ ಸುಮಾರು 70 ಲೇಖನಗಳಲ್ಲಿ, ಈ ರಾಗಿಬ್ರಹ್ಮನ ತಾಂತ್ರಿಕ ನೈಪುಣ್ಯ ಮತ್ತು ವ್ಯಕ್ತಿ ವೈಶಿಷ್ಟ್ಯ ಪ್ರಕಾಶಿಸುತ್ತಿವೆ. ಜೊತೆಗೆ, ರಾಗಿಯ ಗುಣಬಾಹುಳ್ಯದ ವಿಪುಲ ಮಾಹಿತಿಯುಳ್ಳ ಅನೇಕ ಲೇಖನಗಳಿವೆ. ಸಸ್ಯತಳಿ ವಿಜ್ಞಾನಿ ಡಾ.ಶರಣಬಸವೇಶ್ವರ ಅಂಗಡಿಯವರ ಸುದೀರ್ಘ ಲೇಖನವಂತೂ ಲಕ್ಷ್ಮಣಯ್ಯನವರ ರಾಗಿ ಬದುಕಿನ ದಿನಚರಿಯ ಯಥಾವತ್ತಾದ ದಾಖಲಾತಿಯಾಗಿದೆ.

ವಿಜ್ಞಾನದಲ್ಲಿ ಪದವಿ ಪಡೆದು ಸಸ್ಯತಳಿ ಮ್ಯೂಸಿಯಂ ನಿರ್ವಹಣೆಯ ಕೆಲಸಕ್ಕೆ ನೇಮಕಗೊಂಡ ಲಕ್ಷ್ಮಣಯ್ಯನವರು ಮುಂದೆ ಬರೊಬ್ಬರಿ ಹದಿನೇಳು ಅಸಾಧಾರಣ ರಾಗಿ ತಳಿಗಳನ್ನು ಅಭಿವೃದ್ಧಿಪಡಿಸಿ ಇಡೀ ಜಗತ್ತಿನ ಸಸ್ಯತಳಿ ವಿಜ್ಞಾನಿಗಳನ್ನು ನಿಬ್ಬೆರಗಾಗಿಸಿದ್ದು ಚರಿತ್ರಾರ್ಹವೇ ಸರಿ. 1951ರಿಂದ ಸುಮಾರು 40 ವರ್ಷಗಳ ಅವಧಿಯಲ್ಲಿ ಇವರು ಸೃಷ್ಟಿಸಿದ ರಾಗಿತಳಿಗಳಿಗೆ ಸರಿಸಾಟಿಯಾಗಬಲ್ಲ ಮತ್ತೊಂದು ತಳಿ ಇವತ್ತಿನತನಕ ಬಿಡುಗಡೆ ಆಗಿಲ್ಲವೆಂಬುದು ಸೋಜಿಗ ಮಾತ್ರವಲ್ಲ, ಅವರ ಸಂಶೋಧನೆಗಿರುವ ಮಹತ್ವಕ್ಕೂ ಸಾಕ್ಷಿ.

ಲಕ್ಷ್ಮಣಯ್ಯನವರಿಗೆ ರಾಗಿ ಈ ಪರಿಯಾಗಿ ಒಲಿದದ್ದು ಹೇಗೆ ಎನ್ನುವುದು ಕಾಡುವ ಪ್ರಶ್ನೆ. ರಾತ್ರಿಯೆಲ್ಲ ರಾಗಿ ಹೊಲದಲ್ಲಿ ಹೊಕ್ಕು, 'ಪರಾಗರೇಣು ಅಂಡಾಶಯದ ಮೇಲೆ ಉದುರುವಾಗ ಸರಿಯಾಗಿ ಮೂರು ಗಂಟೆಯಾಗಿತ್ತಾ ಅಥವಾ ಮೂರೂವರೆಯಾಗಿತ್ತಾ', 'ಯಾವ ಸರಿರಾತ್ರಿಯ ಇಬ್ಬನಿಯಲ್ಲಿ ರಾಗಿ ಕೊರೆಯಲು ಕೀಟ ಬಂತು', 'ಇಬ್ಬನಿ ಬಿದ್ದಾಗ, ಗರಿ ರೋಮಾಂಚನಗೊಂಡ ಪರಿ ಹೇಗಿತ್ತು' ಎಂದೆಲ್ಲಾ ಕಣ್ಣಿಗೆ ಎಣ್ಣೆ, ತಲೆಗೆ ಹುಳು ಬಿಟ್ಟುಕೊಂಡು ತಲ್ಲೀನರಾಗಿಬಿಡುತ್ತಿದ್ದ ಅವರಿಗೆ ದಕ್ಕಿದ ಕಾಣ್ಕೆಗಳೇನೋ ಬಲ್ಲವರಾರು? ಆಫ್ರಿಕಾದಲ್ಲೆಲ್ಲೋ ಸಂಗ್ರಹಿಸಿದ 900 ರಾಗಿ ತಳಿಗಳು ಅಮೆರಿಕದ ಮೂಲಕ ಪ್ರಯಾಣಿಸಿ, ಮಂಡ್ಯದ ವಿ.ಸಿ.ಫಾರಂ ಬಿಟ್ಟಗಲದ ಲಕ್ಷ್ಮಣಯ್ಯನವರ ಮಡಿಲು ತಲುಪಿದ್ದೇನು ಅಕಸ್ಮಿಕವೇ ಮತ್ತೆ?

ಲಕ್ಷ್ಮಣಯ್ಯನವರಿಗೆ ರಾಗಿಯ ಗೀಳು ಹತ್ತಿದ್ದು ಹೇಗೆ? ರಾಗಿಯನ್ನೇ ನೆಮ್ಮಿಕೊಂಡ ಸಣ್ಣ ರೈತರಿಗೆ ಎಕರೆಗೆ ಮೂರ್ನಾಲ್ಕು ಚೀಲ ಬರುವಲ್ಲಿ 20-25 ಚೀಲ ಬರುವಂತಾದರೆ? ಎರಡು ಹೊತ್ತಿನ ಊಟಕ್ಕೆ ಪರದಾಟವಿರುವ ಮನೆಗಳಲ್ಲಿ ವರ್ಷವಿಡೀ ರಾಗಿ ತುಂಬಿ ತುಳುಕುವಂತಾದರೆ? ಹಸಿವಿನ ಸಂಕಟವನ್ನು ಬಲ್ಲ ಲಕ್ಷ್ಮಣಯ್ಯನವರ ಅಂತರಂಗದ ಈ ಕರೆಯೇ ಅವರನ್ನು ರಾಗಿ ತಳಿ ವಿಜ್ಞಾನಿಯಾಗಿಸಿದ್ದು ಎನ್ನುವುದನ್ನು ಇಲ್ಲಿನ ಎಲ್ಲಾ ಲೇಖಕರು ಒಂದಲ್ಲ ಒಂದು ರೀತಿಯಲ್ಲಿ ದಾಖಲಿಸಿದ್ದಾರೆ. ಪ್ರಸಿದ್ಧಿ, ಹಣ, ವಿದೇಶೀ ಪ್ರವಾಸಗಳ ಆಕರ್ಷಣೆ ಸೂಜಿಗಲ್ಲಿನಂತೆ ಸೆಳೆಯುವ ಈ ಕ್ಷೇತ್ರದಲ್ಲಿ ಅದರಿಂದ ತಪ್ಪಿಸಿಕೊಂಡು ತಮ್ಮ ರಾಗಿ ಕಾಯಕದಲ್ಲಿ ತಲ್ಲೀನರಾಗಲು ಲಕ್ಷ್ಮಣಯ್ಯ ಹರಸಾಹಸ ಮಾಡಿದ್ದನ್ನು ಅನೇಕರು ಮಾರ್ಮಿಕವಾಗಿ ಕಟ್ಟಿಕೊಟ್ಟಿದ್ದಾರೆ.

ಸಂಕರಣ (ಹೈಬ್ರಿಡ್) ಬೀಜಗಳ ತಂದೆ- ತಾಯಿ (parent line) ಬ್ರೀಡರ್‌ಗಳ ಬಳಿ ಗೌಪ್ಯವಾಗಿರುವುದರಿಂದ ಪ್ರತೀ ಸಲ ರೈತರು ದುಬಾರಿ ಬೆಲೆತೆತ್ತು ಬೀಜ ಕೊಳ್ಳಬೇಕು. ಲಕ್ಷ್ಮಣಯ್ಯನವರು ಕೂಡ ಹೊಸ ತಳಿ ಅಭಿವೃದ್ಧಿಪಡಿಸಲು ಎರಡು ನಿರ್ದಿಷ್ಟ ಗುಣದ ರಾಗಿ ತಳಿಗಳನ್ನು ಸಂಕರಣಗೊಳಿಸುತ್ತಿದ್ದರು. ಆದರೆ, ಆ ಸಂಕರಣ ಬೀಜವನ್ನು ಅನೇಕ ಹಂಗಾಮುಗಳಲ್ಲಿ ಮತ್ತೆ, ಮತ್ತೆ ಬಿತ್ತಿ, ಆಯ್ಕೆಮಾಡಿ ಬೆಳೆಸುತ್ತಾ ಅಂತಿಮವಾಗಿ ಅದನ್ನು ರೈತರ ಕೈಗೇ ಕೊಟ್ಟುಬಿಡುತ್ತಿದ್ದರು. ಮುಂದೆ ರೈತರು ತಾವೇ ಬೀಜ ಆಯ್ಕೆ ಮಾಡಿ ಬಿತ್ತನೆಗೆ ಎತ್ತಿರಿಸಿಕೊಳ್ಳಲು ಸಾಧ್ಯವಾಗುವಂತೆ ಲಕ್ಷ್ಮಣಯ್ಯ ಅದನ್ನು ಒ.ಪಿ. (ಮುಕ್ತ ಪರಾಗಸ್ಪರ್ಶಿ) ಬೀಜವಾಗಿ ಅಭಿವೃದ್ಧಿಪಡಿಸಿರುತ್ತಿದ್ದರು. ಇದರಲ್ಲಿ ಅಡಗಿದ್ದ ತಂತ್ರಜ್ಞಾನವೇನೂ ಸಾಮಾನ್ಯವಾದುದಲ್ಲ. ಸ್ವಕೀಯ ಪರಾಗಸ್ಪರ್ಶಿಯಾದ ರಾಗಿಯ ಎರಡು ತಳಿಗಳನ್ನು ಪರಕೀಯ ಪರಾಗಸ್ಪರ್ಶಕ್ಕೆ ಒಳಪಡಿಸುವುದು ಬಲು ಕಷ್ಟ. ಸಣ್ಣ ಸಣ್ಣ ಅಸಂಖ್ಯಾತ ಸಂಯೋಜಿತ ಹೂವುಗಳನ್ನು ಹೊಂದಿರುವ ರಾಗಿಯಲ್ಲಿ, ಭತ್ತದಲ್ಲಿ ಮಾಡುವಂತೆ ಗಂಡು ಭಾಗವನ್ನು ತೆಗೆದು ಕ್ರಾಸ್ ಮಾಡುವುದು (Emasculation) ಅಸಾಧ್ಯವಾಗಿತ್ತು. 1951ರವರೆಗೂ ಯಾವ ವಿಜ್ಞಾನಿಯೂ ಅದಕ್ಕೆ ಪ್ರಯತ್ನಿಸಿರಲಿಲ್ಲ.

ರಾಗಿಯ ಹೊಸತಳಿ ಸಂಶೋಧನೆಗೆ ಪಣತೊಟ್ಟಿದ್ದ ಲಕ್ಷ್ಮಣಯ್ಯನವರು ಅವಿರತ ಹುಡುಕಾಟ ನಡೆಸಿದ್ದಾಗ, ಹಿಂದೆ ಕೆಲ ವಿಜ್ಞಾನಿಗಳು ಹತ್ತಿಯಂತಹ ಬೆಳೆಗಳಿಗೆ ಸೂಚಿಸಿದ್ದ 'ಕಾಂಟ್ಯಾಕ್ಟ್ ಮೆಥೆಡ್' ಗಮನಕ್ಕೆ ಬಂತು. ವಿಭಿನ್ನ ಗುಣಗಳ ಎರಡು ತಳಿಗಳನ್ನು ಒಟ್ಟಿಗೆ ಬೆಳೆದು ಹೂಬಿಡುವ ಕಾಲಕ್ಕೆ ಅವುಗಳ ತೆನೆಗಳನ್ನು ಒಟ್ಟಿಗೆ ಸೇರಿಸಿ ದಾರ ಕಟ್ಟಿ ಕಾಗದದ ಕವರಿನಿಂದ ಮುಚ್ಚಿ ಪರಕೀಯ ಪರಾಗಸ್ಪರ್ಶಕ್ಕೆ ಒಳಪಡಿಸುವುದು ಈ ವಿಧಾನ. ಲಕ್ಷ್ಮಣಯ್ಯ 'ಕರಿಕಡ್ಡಿ' ಮತ್ತು 'ಹುಲ್ಲುಬೆಳೆ' ಎಂಬ ರಾಗಿಯ ಎರಡು ಸ್ಥಳೀಯ ನಿರ್ದಿಷ್ಟ ಗುಣಗಳ ತಳಿಗಳನ್ನು ಈ ಪ್ರಯೋಗಕ್ಕೆ ಒಳಪಡಿಸಿ ಶೇ ನೂರರಷ್ಟು ಯಶಸ್ವಿಯಾದರು. 'ಈ ವಿಧಾನ ಲಕ್ಷ್ಮಣಯ್ಯನವರ ಅನ್ವೇಷಣೆಯ 'ಸ್ಪೆಷಲ್ ಕಾಂಟ್ಯಾಕ್ಟ್ ಮೆಥೆಡ್' ಎಂಬ ಹೆಸರು ಪಡೆದು ಇಂದಿಗೂ ರಾಗಿ ತಳಿ ಅಭಿವೃದ್ಧಿಯಲ್ಲಿ ಬಳಕೆಯಾಗುತ್ತಿರುವ ಏಕೈಕ ವಿಧಾನವಾಗಿದೆ. ಡಾ.ಚನ್ನೇಶ್ ಒಳಗೊಂಡಂತೆ ಅನೇಕ ವಿಜ್ಞಾನಿಗಳು ಇಲ್ಲಿ ಅದರ ಹೊಳಹುಗಳನ್ನು ನೀಡಿದ್ದಾರೆ.

1964ರವೇಳೆಗೆ ತಮ್ಮ ಕೈಸೇರಿದ ಆಫ್ರಿಕಾ ತಳಿಗಳ ದಷ್ಟಪುಷ್ಟವಾದ ಕಾಂಡವನ್ನು ಕಂಡ ಲಕ್ಷ್ಮಣಯ್ಯ, ಜಾನುವಾರಿನ ಮೇವಿಗೆ ಭರ್ಜರಿ ಹುಲ್ಲು ಸಿಕ್ಕಿತೆಂದು ಸಂಭ್ರಮಿಸಿದ್ದರು. ಅವುಗಳ ನಿರ್ದಿಷ್ಟ ಗುಣಗಳನ್ನು ಸ್ಥಳೀಯ ತಳಿಗಳ ನಿರ್ದಿಷ್ಟ ಗುಣಗಳೊಂದಿಗೆ ಸಂಕರಣಗೊಳಿಸಿ 8-10 ಅಸಾಧಾರಣ ತಳಿಗಳನ್ನು ಸೃಷ್ಟಿಸಿದ್ದರು. ಆಫ್ರಿಕಾದ ಹೆಸರೂ ಉಳಿಯುವಂತೆ 'ಇಂಡಾಫ್' ಎಂದು ಹೆಸರಿಟ್ಟು, ರೈತರನ್ನು ಕರೆದು ಅವುಗಳ ಬಗ್ಗೆ ವಿವರಿಸಿ, ಅವರು ಒಪ್ಪಿದ ತಳಿಗಳನ್ನೇ ಬಿಡುಗಡೆ ಮಾಡಿದ್ದರು.

ಮಳೆಯಾಶ್ರಿತ ಮತ್ತು ನೀರಾವರಿ ಬೇಸಾಯವೆರಡಕ್ಕೂ ಹೊಂದಿಕೊಳ್ಳುವ, ಅತ್ಯಧಿಕ ಇಳುವರಿಯ ಜೊತೆಗೆ ಉತ್ತಮ ಮೇವನ್ನೂ ಕೊಡುವ, ಒಂದು ಹಂಗಾಮು ತಪ್ಪಿದರೆ ಮಗದೊಂದು ಹಂಗಾಮಿಗೂ ಬೆಳೆಯಬಹುದಾದ ಈ ರೈತಸ್ನೇಹಿ ತಳಿಗಳು ಮುಂದೆ ರೈತರ ನಸೀಬನ್ನೇ ಬದಲಾಯಿಸಿದವು. ರೈತ-ಸಹಭಾಗಿತ್ವದ ಈ ತಳಿ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಸ್ವತಃ ಭಾಗಿಯಾಗಿದ್ದ ಕೆ.ಬೋರಯ್ಯನವರು ಇದನ್ನು ಕಣ್ಣಿಗೆ ಕಟ್ಟಿದಂತೆ ವಿವರಿಸಿದ್ದಾರೆ. ಕೃತಿಯನ್ನು ಓದಿ ಮುಗಿಸಿದಾಗ ರೈತರೆಡೆಗಿನ ಈ ಮಟ್ಟದ ಕಾಳಜಿ, ಬದ್ಧತೆಗಳುಳ್ಳ ಮತ್ತೊಬ್ಬ ಲಕ್ಷ್ಮಣಯ್ಯ ಮತ್ತೆ ಎಂದಾದರೂ ಸಿಕ್ಕಾರೆಯೇ ಎಂಬ ಭಾವ ಹರಳುಗಟ್ಟುತ್ತದೆ.

ಮನುಷ್ಯ ಸಂಬಂಧಗಳ 'ಮೌಲ್ಯ'ಮಾಪನ

ಪದ್ಮನಾಭ ಭಟ್



ಆಟಗಾಯಿ
ಲೇ: ಆನಂದ್ ಗೋಪಾಲ್
ಪ್ರ: ಸಂಕಥನ
ಸಂ: 9019529494
ಪು: 164 ₹165

ವಿಮರ್ಶೆ

'ಆಟಗಾಯಿ' ಆನಂದ್ ಗೋಪಾಲ್ ಅವರ ಮೊದಲ ಸಂಕಲನ. ಮೊದಲ ಸಂಕಲನವೆಂಬ ಯಾವ ಮೀಸಲಾತಿಯನ್ನೂ ಬೇಡದೆ ಇಂದಿನ ಗಮನಾರ್ಹ ಕಥೆಗಳ ಸಾಲಿನಲ್ಲಿ ನಿಲ್ಲಬಲ್ಲ ಹಲವು ಕಥೆಗಳು ಇಲ್ಲಿವೆ. ಇಲ್ಲಿನ ಕಥೆಗಳು ಮೆಲ್ಲಗೆ ತುಂಬಿಕೊಳ್ಳುವ ಗುಣ ಹೊಂದಿರುವಂಥವು. ಹಾಗೆ ತುಂಬಿಕೊಳ್ಳುತ್ತಲೇ, ನಮ್ಮ ಮನಸ್ಸಿನಾಳದಲ್ಲಿ ಕಚ್ಚಿ ಕೂತಿರುವ ಜೊಳ್ಳುಗಳನ್ನು ಕಿತ್ತು ತೇಲುವ ಹಾಗೆ ಮಾಡುವಂಥವು. ಕಥೆಗಳನ್ನು ಓದಿ ಮುಗಿಸಿದ ಮೇಲೆ ಒಂದು ರೀತಿಯ ವಿಷಣ್ಣ ಭಾವ ಆವರಿಸುತ್ತದೆ.

ಈ ಕಥೆಗಳ ವಸ್ತು, ವಿಷಯ, ಕಟ್ಟುವ ರೀತಿಗಳಲ್ಲಿ ತುಂಬ ಹೊಸತನವೇನೂ ಇಲ್ಲ. ಕೆಲವು ವಸ್ತುಗಳ ಸುತ್ತಲೇ ಸುರಳಿ ಹಾಕುವ ಅವರ ಕಥೆಗಳು, ಮಹತ್ವಾಕಾಂಕ್ಷೆ ಇಲ್ಲದೆ ಸೊರಗಿದ ಹಾಗೆಯೂ ಭಾಸವಾಗುತ್ತವೆ. ಆದರೆ ಈ ಕಥನಪ್ರಪಂಚವನ್ನು ಪ್ರವೇಶಿಸಬೇಕಾದ ದಾರಿ ಕೊಂಚ ಬೇರೆಯೇ ಇರುವಂತಿದೆ.

ಇಲ್ಲಿನ ಬಹುತೇಕ ಕಥೆಗಳಲ್ಲಿ ಮೂರು ಮುಖ್ಯ ಅಂಶಗಳು ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತವೆ. ಆ ಮೂರೂ ಅಂಶಗಳೂ 'ನಾಗರಿಕ ಸಮಾಜ'ವು ಒಕ್ಕೊರಲಿನಿಂದ 'ಅನೈತಿಕ' ಎಂದು ಒಪ್ಪಿಕೊಂಡಿರುವಂಥವು. ಮೊದಲನೆಯದ್ದು, ಕೌಟುಂಬಿಕ ಜೀವನದಲ್ಲಿನ ವಿವಾಹಬಾಹಿರವಾದ ಪ್ರೇಮ-ಕಾಮದ ಸಂಬಂಧಗಳು. ಎರಡನೆಯದ್ದು, ಸಾಮಾಜಿಕ ಜೀವನದಲ್ಲಿನ, ಕಾನೂನುಬಾಹಿರವಾದ ಸ್ವಾರ್ಥ-ಸಮಯಸಾಧಕತೆಗಾಗಿ ಹುಟ್ಟಿಕೊಂಡ ಸಂಬಂಧಗಳು. ಮೂರನೆಯದ್ದು, ಅನುಭವದ ಸತ್ವ ಇಲ್ಲದ ಆದರ್ಶ, ಅಂಥ ಪೊಳ್ಳುತನವನ್ನು ಪ್ರತಿಪಾದಿಸುವ ಸಾಹಿತ್ಯ ಮತ್ತು ಬದುಕಿನ ಕಟುವಾಸ್ತವದ ನಡುವಿನ ಸಂಬಂಧಗಳು.

ಹಲವು ಖಂಡಿಕೆಗಳನ್ನು ಪಕ್ಕ ಪಕ್ಕ ಜೋಡಿಸಿಟ್ಟು, 'ಕೂಡಿಸಿಕೊಂಡು ಏನು ಕಾಣುತ್ತದೆಯೋ ನೋಡಿ' ಎಂದು ಓದುಗರಿಗೇ ಬಿಡುವ ಕತೆಗಾರರು, ಯಾವುದರ ಬಗ್ಗೆಯೂ ಜಡ್ಜ್‌ಮೆಂಟ್ ನೀಡಲು ಹೋಗುವುದಿಲ್ಲ. ಇದು ದ್ವಂದ್ವ ಅಲ್ಲ; ಬಿಡಿಸಿ ಹೇಳಹೊರಟರೆ ಹಗುರಗೊಳ್ಳಬಹುದಾದದ್ದನ್ನು ಅದರೆಲ್ಲ ಸಂಕೀರ್ಣತೆಯೊಟ್ಟಿಗೆ ಅವರೇ ಅರಿತುಕೊಳ್ಳುತ್ತಾರೆ ಎಂಬ ನಂಬಿಕೆ.

ಈ ಇಡೀ ಸಂಕಲನವನ್ನು ಹಲವು ಭಾಗಗಳ ಒಂದೇ ಕಥೆಯಾಗಿಯೂ ಓದಿಕೊಳ್ಳಬಹುದು; ಇಲ್ಲಿನ ಒಂದು ಕಥೆಯೊಳಗೆ ಹಲವು ಕಥೆಗಳನ್ನೂ ಕಾಣಬಹುದು! 'ರೂಪ ರೂಪಗಳನು ದಾಟಿ'ಯಲ್ಲಿ ಬರುವ ನಾಯಕ ಮತ್ತು ಅವನ ಸ್ನೇಹಿತ ಸುರೇಶ ಬೇರೆ ಬೇರೆಯಲ್ಲ. ಒಬ್ಬ ತನ್ನ ಬರಹದಿಂದ, ಮಾತಿನಿಂದ, ವರ್ತನೆಗಳಿಂದ ಪ್ರಗತಿಪರ, ಕ್ರಾಂತಿಕಾರಿ ಅನಿಸಿಕೊಂಡರೂ ಸ್ವಂತ ಅಕ್ಕ ಬೇರೆ ಜಾತಿಯ ಹುಡುಗನ ಮದುವೆಯಾಗಹೊರಟಾಗ 'ಅದು ಬೇರೆ, ಇದು ಬೇರೆ' ಎಂದು ಸ್ಪಷ್ಟವಾಗಿ ಹೇಳಬಲ್ಲವ. ಇನ್ನೊಬ್ಬ, ಓಡಿಹೋದ ತನ್ನ ತಾಯಿ ಮರಳಿ ಬಂದಾಗ, ಅವಳನ್ನು ಕೊಲ್ಲುವ ಮಟ್ಟಕ್ಕೆ ಮುಟ್ಟಿದರೂ, ಅವಳ ಜೊತೆಗೇ ಅಪಾರ ಸಂಪತ್ತೂ ಬರುತ್ತದೆ ಎಂದು ತಿಳಿದಾಗ ತೆಪ್ಪಗೆ ಅವಳನ್ನು ಒಳಬಿಟ್ಟುಕೊಳ್ಳಬಲ್ಲವ.

ಜಾತಿ ಸಮಸ್ಯೆ, ಶೋಷಣೆ, ಗಂಡು ಹೆಣ್ಣಿನ ಸಂಬಂಧಗಳನ್ನು ಒಂದು ಕುಟುಂಬದ ಆವರಣದಲ್ಲಿಟ್ಟು ಪರೀಕ್ಷಿಸುವುದು ಈ ಕಥೆಗಳಿಗೊಂದು ಅನನ್ಯತೆಯನ್ನು ಕೊಟ್ಟಿದೆ. ಈ ಸಂಕಲನದ ಯಶಸ್ವಿ ಕಥೆಗಳಲ್ಲೊಂದಾದ 'ರಂಕುರಾಟ್ನ'ದಲ್ಲಿ ಈ ಪ್ರಯತ್ನ ಇನ್ನಷ್ಟು ಸ್ಪಷ್ಟವಾಗಿ ಮತ್ತು ಸಮರ್ಥವಾಗಿ ಹರಳುಗಟ್ಟಿದೆ. ಪ್ಯಾಂಟ್‌ರಾಮನ ಇಡೀ ಕುಟುಂಬ ನಿರಂತರವಾಗಿ ದೌರ್ಜನ್ಯವನ್ನು ಅನುಭವಿಸುತ್ತ ಬಂದಿರುವುದು. ಪ್ಯಾಂಟ್‌ರಾಮನ ಮೊದಲ ಹೆಂಡತಿ ಸುನಂದಾ, ಸಣ್ಣಪಾಪಯ್ಯನ ಜೊತೆಗಿನ ಸಂಬಂಧ ಬಯಲಿಗೆ ಬಂದು ಆತ್ಮಹತ್ಯೆ ಮಾಡಿಕೊಂಡವಳು. ಎರಡನೇ ಹೆಂಡತಿ, ಸುನಂದಾಳ ತಂಗಿಯೇ ಆಗಿರುವ ಸರೋಜಾ, ದೊಡ್ಡಪಾಪಯ್ಯನ ಜೊತೆ ಚೆನ್ನಾಗಿದ್ದುಕೊಂಡು ಬದುಕುವ ದಾರಿ ಹುಡುಕಿಕೊಳ್ಳಲು ಯತ್ನಿಸುತ್ತಾಳೆ. ಪ್ಯಾಂಟ್‌ರಾಮ, ಅವನ ಮಗ ಸೀನ ಎಲ್ಲರಿಗೂ ಈ ವಿಷಯ ಗೊತ್ತಿರುವುದೇ. ಅವರೂ ತಮ್ಮ ಕಾರ್ಯಸಾಧನೆಗಾಗಿ ಸರೋಜಾಳನ್ನು ಬಳಸಿಕೊಳ್ಳುತ್ತಿರುತ್ತಾರೆ. ಕೊನೆಗೆ ಮಗ ಸೀನ ಕೋರ್ಟಿಗೆ ಅರ್ಜಿ ಹಾಕಿ ಜಮೀನು ಪಡೆದುಕೊಳ್ಳುವ ಸೂಚನೆಯೊಂದಿಗೆ ಕಥೆ ಕೊನೆಗೊಳ್ಳುತ್ತದೆ. ಇಲ್ಲಿಯೂ ಯಾವುದು ತಪ್ಪು, ಯಾವುದು ಸರಿ ಎಂದು ನಿರ್ಣಯ ಕೊಡುವ ಹಂಬಲ ಕಥೆಗಾರರಿಗೆ ಇಲ್ಲ. ಅದರ ಬದಲಿಗೆ ನಮ್ಮ ಸಮಾಜವೆಂಬ ವ್ಯವಸ್ಥೆ ಹೇಗೆ ಒಂದು ವರ್ಗದ ಜನರನ್ನು ಮೂಕರನ್ನಾಗಿಸಿದೆ ಮತ್ತು ಆತ್ಮಗೌರವದ ಅರಿವನ್ನೇ ನೀಡದೆ ಮೇಲುವರ್ಗ ತಮ್ಮ ಐಷಾರಾಮಕ್ಕೆ, ಭೋಗ್ಯಕ್ಕೆ ಬಳಸಿಕೊಳ್ಳುತ್ತಿದೆ ಎಂಬುದನ್ನು ಈ ಕಥೆ ಬಹುಸೂಕ್ಷ್ಮವಾಗಿ ತೆರೆದಿಡುತ್ತದೆ.

'ಬೇಬಿ' ಕೂಡ ಒಂದು ಗಮನಾರ್ಹ ಕಥೆ. ಮಾದಿಗರ ಕೇರಿಗೆ ಪ್ರವೇಶ ನಿಷಿದ್ಧವಾಗಿದ್ದ ಕರಗ, ಸಣ್ಣವೀರಪ್ಪನ ಮನೆಗೆ ಹಾಕಿದ್ದ ಬಣ್ಣದ ಲೈಟು ನೋಡಿ, ದಿಕ್ಕುತಪ್ಪಿ ಮಾದಿಗರ ಕೇರಿ ಹೊಕ್ಕು ಅವನ ಮನೆಗೇ ಬಂದುಬಿಡುತ್ತದೆ. ಅದು ಸಣ್ಣವೀರಪ್ಪನಿಗೆ ಆ ಕ್ಷಣದ ಸಂಭ್ರಮ. ಆದರೆ ಆ ಸಂಭ್ರಮ ಅವನ ಇಡೀ ಬದುಕನ್ನೇ ಇನ್ನಷ್ಟು ಹಿಂದಕ್ಕೆ ನೂಕಿಬಿಡುತ್ತದೆ. ಶೋಷಣೆಯ ಮತ್ತೊಂದು ಚಕ್ರಕ್ಕೆ ಅವನನ್ನು ಸಿಗಿಸುತ್ತದೆ. ಶೋಷಿತರು ವ್ಯಕ್ತಪಡಿಸುವ ಪ್ರತಿಭಟನೆಯೂ ಅವರನ್ನು ಇನ್ನಷ್ಟು ಆಳಕ್ಕೆ ತಳ್ಳುತ್ತದೆ ಎಂಬ ಮಾತಿನಂತೆ, ಸಣ್ಣವೀರಪ್ಪನ ಮಗನೂ ಕೊನೆಗೆ ಪೊಲೀಸರ ಪಾಲಾಗುತ್ತಾನೆ. ಒಂದರ ಮೇಲೆ ಇನ್ನೊಂದರಂತೆ ಸಂಕಷ್ಟಗಳು ಎಗರಿದರೂ 'ಬೇಬಿ'ಯನ್ನು ಒಳಬಿಟ್ಟುಕೊಂಡು 'ತಟ್ಟೆ ಹಾಕು' ಎಂದು ಹೇಳಿ ತೂರಾಡುತ್ತ ಹಿತ್ತಿಲಕಡೆಗೆ ನಡೆಯುವ ಸಣ್ಣವೀರಪ್ಪ, ಕಡುಗತ್ತಲಲ್ಲಿ ಕಣ್ಣಬೆಳಕನ್ನೇ ನೆಚ್ಚಿಕೊಂಡು ದಾರಿ ಸವೆಸುವವನಂತೆ ಕಾಣಿಸುತ್ತಾನೆ.

ಆನಂದ್ ಅವರು ತಮ್ಮ ಕಥೆಗಳಲ್ಲಿ ಪತ್ರಗಳನ್ನು ಬಳಸಿಕೊಂಡಿರುವ ರೀತಿ ಕುತೂಹಲಕಾರಿಯಾಗಿದೆ. ಇದುವರೆಗೆ ಮುಚ್ಚಿಟ್ಟಿದ್ದ ಆಯಾಮವನ್ನು ಸ್ಫೋಟಗೊಳಿಸುವ ಮದ್ದಿನ ಹಾಗೆ, ವೈರುಧ್ಯದ ಮುಖಾಮುಖಿಯನ್ನು ಕಾಣಿಸಿ ಅಂತಃಸಾಕ್ಷಿಯನ್ನು ಚುಚ್ಚುವ ಸೂಜಿಮೊನೆಯ ಹಾಗೆ ಇಲ್ಲಿ ಪತ್ರಗಳು ಬರುತ್ತವೆ. 'ರೂಪ ರೂಪಗಳನು ದಾಟಿ' ಕಥೆಯ ಕೊನೆಯಲ್ಲಿ ಬರುವ ಎರಡು ಪತ್ರಗಳು, 'ಧರೆಗಿಳಿದ ನಕ್ಷತ್ರಗಳು' ಕಥೆಯಲ್ಲಿ ಅನಕ್ಷರಸ್ಥ ತಾಯಿಗೆ ಸೌಭಾಗ್ಯ ಟೀಚರ್ ಬರೆದಿಟ್ಟಿರುವ ಪತ್ರ, 'ಅಕಾಲ ಹಣ್ಣು' ಕಥೆಯುದ್ದಕ್ಕೂ ಬರುವ ಪತ್ರಗಳು, 'ನಾಲ್ವರು' ಕಥೆಯಲ್ಲಿ ಮಾಧವಿ ಮೇಡಂ ಬರೆದ ಪತ್ರ ಎಲ್ಲವೂ ಅದುವರೆಗೆ ಗೊತ್ತಿದ್ದಿದ್ದರ ಆಚೆಗಿನ ಇನ್ನೊಂದು ಆಯಾಮವನ್ನು ಕಾಣಿಸಲು, ಸ್ಫೋಟಿಸಲು ಒದಗಿಬರುತ್ತವೆ.

ಹೀಗೆ ಮೇಲೆ ಕಾಣಿಸುವುದರ ಆಚೆಗೆ ಇರುವ 'ಇನ್ನೊಂದು ಆಯಾಮ'ವನ್ನು ಕಾಣಿಸುವುದು, ಅದರ ಮೂಲಕವೇ ಮನುಷ್ಯ ಸಂಬಂಧಗಳನ್ನು ಅರ್ಥಮಾಡಿಕೊಳ್ಳುವ ತಾತ್ವಿಕತೆ ಆನಂದ್ ಅವರ ಎಲ್ಲ ಕಥೆಗಳ ಹಿನ್ನೆಲೆಯಲ್ಲಿಯೂ ಕಾಣಿಸುತ್ತದೆ. ಆದರೆ ಈ ತಾತ್ವಿಕತೆಗೆ ಎಲ್ಲ ಕಥೆಗಳಲ್ಲಿಯೂ ಗಾಢವಾದ ಒಳನೋಟ ಸಿಕ್ಕಿಲ್ಲ. ಆನಂದ್ ಅವರ ಕಥೆಗಳು ಹೊರಗಿನ ಸಮಾಜದಲ್ಲಿ ನಡೆದಷ್ಟೇ ತೀವ್ರವಾಗಿ ಪಾತ್ರಗಳ ಮನಸ್ಸಿನೊಳಗಿನ ಪ್ರಪಂಚದಲ್ಲಿ ಘಟಿಸುವುದಿಲ್ಲ. ಹಾಗಾಗಿಯೇ ಇಲ್ಲಿನ ಹಲವು ಕಥೆಗಳು (ರಂಕುರಾಟ್ನ, ಬೇಬಿಯಂಥ ಕೆಲವು ಕಥೆಗಳ ಹೊರತುಪಡಿಸಿ) ಹೊರಗಿನ ವಿದ್ಯಮಾನಗಳಾಗಿ, ನಮ್ಮೊಳಗೆ ಈ ಸಮಾಜದ ಕುರಿತು, ವ್ಯವಸ್ಥೆಯ ಕುರಿತು ಪ್ರಶ್ನೆಗಳನ್ನು ಹುಟ್ಟಿಸುತ್ತವೆ; ಆದರೆ ಆಳವಾಗಿ ನಮ್ಮೊಳಗನ್ನು ಕಲಕುವುದಿಲ್ಲ. ಆದರೆ ಸಶಕ್ತ ಭಾಷೆ, ಕಥನಶಿಲ್ಪದ ಕುರಿತು ಅರಿವು ಮತ್ತು ಆಸಕ್ತಿ ಇರುವ ಆನಂದ್ ಅವರಿಗೆ ಇದು ಅಸಾಧ್ಯವಾದದ್ದೇನೂ ಅಲ್ಲ. ಹಾಗಾಗಿಯೇ ಅವರ ಮುಂದಿನ ರಚನೆಯ ಕುರಿತು ನಂಬಿಕೆಯನ್ನಿಟ್ಟು ಕಾಯಬಹುದು.

ಮೊದಲ ಓದು

ಚುಚ್ಚುವ ವಾಸ್ತವದ ಕಾದಂಬರಿಗಳು



ಹೊಳೆವನು ಚಂದಿರ ಹಗಲಲ್ಲಿ ಮತ್ತು ಚಿಟ್ಟೆಗಳ ಪಾಡು
ಲೇ: ನಯನತಾರ ಸೆಹಗಲ್
ಕನ್ನಡಕ್ಕೆ: ಸುಕನ್ಯಾ ಕನಾರಳ್ಳಿ
ಪ್ರ: ಅಹರ್ನಿಶಿ ಪ್ರಕಾಶನ
ಸಂ: 9449174662
ಪು: 192 ₹200

ಕಾದಂಬರಿಕಾರ್ತಿ, ನೆಹರೂ ಮನೆತನದ ನಯನತಾರ ಸೆಹಗಲ್ ಅವರ 'When the Moon shines by Day' ಹಾಗೂ 'The fate of Butterflies' ಕೃತಿಗಳ ಅನುವಾದವೇ ಈ ಕೃತಿ.

ನೆಹರೂ ಅವರ ತಂಗಿ ವಿಜಯಲಕ್ಷ್ಮೀ ಪಂಡಿತ್ ಅವರ ಪುತ್ರಿ ನಯನತಾರ. ಭಾರತೀಯ ಇಂಗ್ಲಿಷ್ ಸಾಹಿತ್ಯದ ಪ್ರಥಮ ಕಾದಂಬರಿಕಾರ್ತಿ ನಯನತಾರ ಅವರ ಕಾದಂಬರಿಗಳಲ್ಲಿ ಸ್ತ್ರೀ ಪ್ರಜ್ಞೆ, ರಾಜಕೀಯ ಪ್ರಜ್ಞೆ ಸೇರಿದಂತೆ ಹತ್ತುಹಲವು ವಿಷಯಗಳಿವೆ. ಕೃತಿಯ ಮೊದಲ ಕಾದಂಬರಿ 'ಹೊಳೆವನು ಚಂದಿರ ಹಗಲಲ್ಲಿ'ಯಲ್ಲಿ ತಮ್ಮ ಅಮ್ಮ ವಿಜಯಲಕ್ಷ್ಮಿ ಪಂಡಿತ್ ಅವರ ಜೈಲು ದಿನಚರಿಯನ್ನು ನಯನತಾರ ವಿವರವಾಗಿ ಉಲ್ಲೇಖಿಸುತ್ತಾರೆ. 'ನಯನತಾರರನ್ನು ಹತ್ತಿರದಿಂದ ಬಲ್ಲವರು ಅವರ ಕಾದಂಬರಿಗಳ ಹಲವಾರು ಪಾತ್ರಗಳು ಇದು ಆತ್ಮಕಥಾನಕವೋ ಅಂತನ್ನಿಸುವಷ್ಟು ಸಾಮ್ಯವನ್ನು ಹೊಂದಿವೆ ಅಂತಲೂ ಅಚ್ಚರಿಪಡುತ್ತಾರೆ' ಎಂದು ಅನುವಾದಕಿ ಸುಕನ್ಯಾ ಅವರು ಉಲ್ಲೇಖಿಸುವುದು ಇದಕ್ಕೆ ಪೂರಕ. ರೆಹಾನಾ ತಿರುವು ಹಾಕುವ ಪ್ರತಿ ಪುಟದಲ್ಲೂ ನಯನತಾರ ಕಾಣಿಸುತ್ತಾರೆ.

ಭಾರತ ಪ್ರಧಾನ ಪಾತ್ರವಾಗಿ ಕಾಣಿಸಿಕೊಳ್ಳುವ ಇವರ ಸಾಹಿತ್ಯದಲ್ಲಿ ನೆಹರೂ ಅವರ ಪ್ರಭಾವವೂ ಅಕ್ಷರ ರೂಪದಲ್ಲೇ ಕಾಣಸಿಗುತ್ತದೆ. 'ಹೊಳೆವನು ಚಂದಿರ ಹಗಲಲ್ಲಿ' ಎನ್ನುವ ಕಾದಂಬರಿಯಲ್ಲೂ ಕಪ್ಪು ಶೇರ್ವಾನಿಯ ಜೊತೆಗೆ ಕಪ್ಪು ಗಾಂಧಿ ಟೊಪ್ಪಿ ಧರಿಸಿದ ನೆಹರೂ ಅವರ ನೆರಳುಗೆರೆ ಕಾಣಸಿಗುತ್ತದೆ. 144 ಪುಟಗಳ 'ಚಿಟ್ಟೆಗಳ ಪಾಡು' ಪ್ರಸ್ತುತ ಕಾಡುತ್ತಿರುವ ಅಸಹಿಷ್ಣುತೆಯ ಒಳನೋಟವನ್ನು ತೆರೆದಿಡುತ್ತದೆ. ಅನುವಾದದ ಆಕರ್ಷಣೆಯನ್ನು ಶೀರ್ಷಿಕೆಯಿಂದಲೇ ತೋರ್ಪಡಿಸಿರುವ ಸುಕನ್ಯಾ ಅವರ ಭಾಷಾಂತರದಲ್ಲಿನ ಆಸಕ್ತಿ ಗಮನಾರ್ಹವಾದುದು. ಸಮರ್ಥವಾದ ಅನುವಾದ ಓದಿಗೆ ಪೂರಕವಾಗಿದೆ.

ಭೂ ವಿಜ್ಞಾನದ ಹಲವು ಆಯಾಮ



ಕರ್ನಾಟಕ ಭೂವಿಜ್ಞಾನ
ಲೇ: ಡಾ.ಎಂ.ವೆಂಕಟಸ್ವಾಮಿ
ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ
ಸಂ: 080-22372388
ಪು: 194 ₹160

ನಾಡಿನ ಭೂಸ್ತರಗಳು ರಚನೆಯಾದ ಬಗೆ, ವಿವಿಧ ಪ್ರದೇಶಗಳಲ್ಲಿರುವ ಭೂಮಿ ಹಾಗೂ ಖನಿಜ ವೈವಿಧ್ಯ, ನಿಸರ್ಗ ಸಂಪತ್ತು, ಜನ ಜೀವನದ ಕುರಿತ ದಾಖಲೆಯನ್ನು ಎತ್ತಿಕೊಟ್ಟಿದೆ ಈ ಕೃತಿ.

ಹತ್ತು ವಿಭಾಗಗಳ ಪೈಕಿ ಮೊದಲ ಅಧ್ಯಾಯವು ಶಿಲಾ ಕಲ್ಪಗಳ ಬಗ್ಗೆ ವೈಜ್ಞಾನಿಕ ಬೆಳವಣಿಗೆ ಹಾಗೂ ದಾಖಲೆಗಳ ಆಧಾರದಲ್ಲಿ ವಿವರಿಸಲಾಗಿದೆ. ಮುಂದೆ ಭೌಗೋಳಿಕ ಲಕ್ಷಣಗಳು, ಮಳೆ ನೀರು ಮತ್ತು ಅಂತರ್ಜಲ, ಶಿಥಿಲವಾಗುತ್ತಿರುವ ಅರಣ್ಯ ಪ್ರದೇಶ ಬದಲಾಗುತ್ತಿರುವ ಹವಾಮಾನ, ಜೀವಸಂಕುಲದ ಮೇಲೆ ಬೀರಿರುವ ದುಷ್ಪರಿಣಾಮದ ಮೇಲೆ ಮಾರ್ಮಿಕವಾಗಿ ಚರ್ಚಿಸಲಾಗಿದೆ. ಇದೇ ಚರ್ಚೆ ಅಧ್ಯಾಯ 5 ಮತ್ತು 8ರಲ್ಲೂ ಮುಂದುವರಿದಿದೆ.

ನಿಸರ್ಗ ಸಂಪತ್ತಿಗೆ ತಾಗಿಕೊಂಡೇ ಬೆಳೆದ ಸಾಂಸ್ಕೃತಿಕ ಹಿರಿಮೆಗಳು, ಸ್ಮಾರಕಗಳು, ಉದ್ಯಮ ಕ್ಷೇತ್ರಗಳು, ಕೈಗಾರಿಕೆಗಳು, ಪ್ರಮುಖ ಸಂಸ್ಥೆಗಳ ಮೇಲೂ ಕೃತಿ ಬೆಳಕು ಚೆಲ್ಲಿದೆ. ಭೂಶಾಸ್ತ್ರದ ಅಧ್ಯಯನ ಮಾಡಿದ ಬ್ರಿಟಿಷ್ ಹಾಗೂ ಮೈಸೂರು ಸಂಸ್ಥಾನದ ಭೂ ವಿಜ್ಞಾನಿಗಳನ್ನು ವಿವರವಾಗಿ ಪರಿಚಯಿಸಲಾಗಿದೆ. ಮಾತ್ರವಲ್ಲ, ಇದೇ ವಿಷಯವನ್ನು ಸರಳ ಭಾಷೆಯಲ್ಲಿ ಕನ್ನಡಿಗರಿಗೆ ತಲುಪಿಸಿದ ಕನ್ನಡ ಲೇಖಕರ ಬಗೆಗೂ ವಿವರಗಳಿವೆ.

ಭೂಶಾಸ್ತ್ರದ ವೈಜ್ಞಾನಿಕ ವಿಷಯಗಳಷ್ಟೇ ಅಲ್ಲ, ಎಲ್ಲ ಆಯಾಮಗಳನ್ನೂ ಸಂಗ್ರಹಿಸಿ ನಿರೂಪಿಸಿದ ಕೃತಿ ಇದು. ಅಲ್ಲಲ್ಲಿ ಕಾಗುಣಿತ ದೋಷಗಳನ್ನು ತಿದ್ದುವ ಅಗತ್ಯವನ್ನು ಹೊರತುಪಡಿಸಿದರೆ ಹೂರಣದ ದೃಷ್ಟಿಯಿಂದ ಗಮನಾರ್ಹವಾದ ಕೃತಿ.

ಕೆಳದಿ ಇತಿಹಾಸಕ್ಕೆ ಕಲ್ಪನೆಯ ಲೇಪ



ಸಿಸ್ತಿನ ಶಿವಪ್ಪ ನಾಯಕ
ಲೇ:ನಾ. ಡಿಸೋಜ
ಪ್ರ: ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ
ಸಂ:9449886390
ಪು: 248 ₹250

ಐತಿಹಾಸಿಕ ಘಟನೆಗಳ ಆಧಾರದಲ್ಲಿ ಕಥೆ-ಕಾದಂಬರಿ ರಚನೆಯ ಪ್ರಯೋಗ ಕನ್ನಡ ಸಾಹಿತ್ಯದ ಮಟ್ಟಿಗೆ ಅಪರೂಪವೇನೂ ಅಲ್ಲ. ಇತಿಹಾಸ ಮತ್ತು ಸಾಹಿತ್ಯದ ಸಮ್ಮಿಲನದ ಇತ್ತೀಚಿನ ಕೃತಿ, 'ಸಿಸ್ತಿನ ಶಿವಪ್ಪ ನಾಯಕ' ಕಾದಂಬರಿ. ಮಲೆನಾಡಿನಲ್ಲಿ ಜನಾನುರಾಗಿಯಾಗಿದ್ದ ಅರಸ, ಕೆಳದಿಯ ಶಿವಪ್ಪ ನಾಯಕನ ಸುತ್ತ ಹೆಣೆದಿರುವ ಕಥಾಹಂದರದ ಈ ಕೃತಿಯಲ್ಲಿ ಇತಿಹಾಸದ ಪುಟಗಳಲ್ಲಿ ಸಿಗುವ ವಿವರಗಳಿಗೆ ಕಲ್ಪನೆಯ ಮೆರುಗು ತುಂಬಿದ್ದಾರೆ ಲೇಖಕರು.

'ವಾಸ್ತವವಾಗಿ ಶಿವಪ್ಪ ಹೀಗೆ ಇದ್ದನೋ ಇಲ್ಲವೋ ನಾನರಿಯೆ. ಆದರೆ ನನ್ನ ಕಾದಂಬರಿಯ ನಾಯಕ ಹೀಗಿರಬೇಕು ಎನ್ನುವುದು ನನ್ನ ಆಶಯ. ಅದರಂತೆ ಶಿವಪ್ಪ ನಾಯಕನನ್ನು ಸೃಷ್ಟಿಸಿದ್ದೇನೆ' ಎಂದು ಲೇಖಕರೇ ಮುನ್ನುಡಿಯಲ್ಲಿ ಹೇಳಿದ್ದಾರೆ. ಕೃತಿಯಲ್ಲಿ ಶಿವಪ್ಪ ನಾಯಕನ ಶಿಸ್ತಿನ ಆಡಳಿತವನ್ನು ಬಿಂಬಿಸಲು ಒತ್ತು ನೀಡಲಾಗಿದೆ. ಕಾದಂಬರಿಯನ್ನು ಓದುತ್ತ ಸಾಗಿದಂತೆ ಅರ್ಧ ಕರ್ನಾಟಕವನ್ನು ಸುತ್ತಿದ ಅನುಭವವಾಗುತ್ತದೆ. ಅರಮನೆ, ಕೋಟೆ ಕೊತ್ತಲ ಮತ್ತು ಸಮೃದ್ಧ ಹಸಿರಿನ ಮೂಲಕ ಕರೆದುಕೊಂಡು ಹೋಗುವ ಲೇಖಕರು ಯುದ್ಧದ ರೋಮಾಂಚನವನ್ನೂ ಮೋಸ, ವಂಚನೆ ಮುಂತಾದವುಗಳ ಕುತಂತ್ರಗಳ ಮೂಲಕ ಒಳ್ಳೆಯತನವನ್ನು ದಮನಿಸಲು ಪ್ರಯತ್ನಿಸುವವರನ್ನೂ ಪರಿಚಯಿಸಿದ್ದಾರೆ. ಪ್ರೀತಿ, ಸ್ನೇಹ, ವಿಶ್ವಾಸ, ವಾತ್ಸಲ್ಯದ ಅಗಾಧ ಲೋಕವನ್ನೂ ತೆರೆದಿಟ್ಟಿದ್ದಾರೆ.

ಕನ್ನಡದ ಜಿಜ್ಞಾಸೆ

8ನೇ ಪುಟದಿಂದ...

BIAL(Bangalore International Airports Limited) ಎನ್ನುವ ಸಂಸ್ಥೆ ಸ್ಥಾಪಿತವಾದ ಆರಂಭದ ದಿನಗಳಲ್ಲಿ ಆ ಕಂಪನಿಯಲ್ಲಿದ್ದ ಕೆಲವೇ ಕೆಲವು ಕನ್ನಡಿಗರಲ್ಲಿ ನಾನು ಒಬ್ಬ. ಹೀಗಾಗಿ ಕನ್ನಡದ ವಿಷಯ ಬಂದಾಗಲೆಲ್ಲ ನನ್ನ ಕಿವಿ ಹಾಗೂ ಕಣ್ಣುಗಳು ಒಮ್ಮೆಲೇ ಜಾಗೃತವಾಗುವುದೂ ಹಾಗೂ ಕನ್ನಡಕ್ಕೆ ಸಂಬಂಧಿಸಿದ ಯಾವುದೇ ಸಂಗತಿಯಾದರೂ ಅದು ನನ್ನ ಟೇಬಲ್ಲಿಗೇ ಎಡತಾಕುವುದೂ ಸಹಜವಾಗಿತ್ತು. ಸರೋಜಿನಿ ಮಹಿಷಿ ವರದಿಯನ್ನು ಕಾರ್ಯರೂಪಕ್ಕೆ ತರುವ ಸಾಧ್ಯಾಸಾಧ್ಯತೆಗಳ ಚರ್ಚೆ, ರಾಜ್ಯ ಸರ್ಕಾರದ ಉನ್ನತ ಅಧಿಕಾರಿಗಳೊಡನೆಯ ಸಂವಹನ ಇತ್ಯಾದಿ ಒಂದು ಕಡೆಯಾದರೆ; ನಿರ್ಮಾಣ ಕಾಮಗಾರಿಯಲ್ಲಿ ಸ್ಥಳೀಯರನ್ನು ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿ ಕಚೇರಿಗೆ ಮುತ್ತಿಗೆ ಹಾಕಿದ ಗುಂಪಿನೊಡನೆ ಮಾತುಕತೆಗೂ ನನ್ನನ್ನೇ ಮುಂದೂಡುತ್ತಿದ್ದರು. ಶ್ರೀಯುತ ವಾಟಾಳ್ ನಾಗರಾಜ್ ತಮ್ಮ ಸಂಗಡಿಗರೊಂದಿಗೆ ಬಂದು, 'ಏರ್‌ಪೋರ್ಟಿಗೆ ಇದೇ ವ್ಯಕ್ತಿಯ ಹೆಸರನ್ನಿಡಬೇಕು', 'ವಿಮಾನದಲ್ಲಿ ಆಹಾರ ನೀಡುವಾಗ ಮುದ್ದೆಯನ್ನೂ ಕೊಡಬೇಕು' ಇತ್ಯಾದಿ ಬೇಡಿಕೆಗಳನ್ನಿಟ್ಟು ಧರಣಿ ಕುಳಿತಾಗ, ಅವರನ್ನು ಸಂಭಾಳಿಸುವ ಜವಾಬ್ದಾರಿ ನನ್ನದಾಗಿತ್ತು. ಇಲ್ಲಿಯ ಜನ ಮಾತನಾಡುವುದು ಕೆನಡಾ ದೇಶದ ಭಾಷೆ ಎಂದು ಬಹುದಿನದ ವರೆಗೆ ಅಂದುಕೊಂಡಿದ್ದ ನನ್ನ ವಿದೇಶೀ ಬಾಸ್‌ನ ಜೊತೆಗೂಡಿ (ಕನಡಾ ಎನ್ನುವ ಪದ ಕೆನಡಾ ಎಂಬುದಾಗಿ ಸ್ವಿಸ್ ದೇಶದ ಪ್ರಜೆಯೊಬ್ಬನಿಗೆ ಕೇಳಿಸಿದರೆ ಅಂಥಾ ಆಶ್ಚರ್ಯವೇನೂ ಇಲ್ಲ ಬಿಡಿ) ವಾಟಾಳ್ ಹಾಗೂ ಅವರ ಸಂಗಡಿಗರೊಡನೆ ಮಾತನಾಡುವಾಗ, ನಾನೂ ಅವರ ಬಣದಲ್ಲೇ ಇದ್ದಿದ್ದರೆ ಚೆನ್ನಾಗಿತ್ತು ಎಂದೆನಿಸಿದ್ದು ಸುಳ್ಳಲ್ಲ.

ಇಂಥವುಗಳನ್ನೆಲ್ಲ ಬಹಳ ಖುಷಿಯಿಂದಲೇ ನಿರ್ವಹಿಸುತ್ತಿದ್ದ ನನಗೆ ನಿಜಕ್ಕೂ ಕಷ್ಟದ ಪ್ರಸಂಗವೊಂದು ಎದುರಾಯ್ತು. ವಿಮಾನ ನಿಲ್ದಾಣಕ್ಕಾಗಿ ಸರ್ಕಾರ ನಾಲ್ಕು ಸಾವಿರ ಎಕರೆಗಳನ್ನು ಸ್ವಾಧೀನ ಪಡಿಸಿಕೊಂಡಿತ್ತಷ್ಟೆ. ಅಲ್ಲಿ ಉಳುವಳಿ ಮಾಡುತ್ತಿರುವ ರೈತರನ್ನೆಲ್ಲ ಮಾಮೂಲಿನಂತೆ ಒಕ್ಕಲೆಬ್ಬಿಸಿಯೂ ಆಗಿತ್ತು. ಆದರೆ ಒಬ್ಬ ವೃದ್ಧೆ ಮಾತ್ರ ಹೊರಹೋಗದೇ ತನ್ನ ದ್ರಾಕ್ಷಿ ತೋಟವನ್ನು ಅಲ್ಲಿಯೇ ಕಾಪಿಟ್ಟುಕೊಂಡು ಬಂದಿದ್ದಳು. ಕನ್ನಡ ಮಾತ್ರ ಬಲ್ಲ ಅವಳಿಗೆ ತಿಳಿ ಹೇಳುವ ಕೆಲಸ ನನಗೇ ಬಂತು. ಆರಂಭದ ಹಂತದಲ್ಲಿ ಕಾಮಗಾರಿ ಕೆಲವು ಸೀಮಿತ ಪ್ರದೇಶದಲ್ಲಿ ಮಾತ್ರ ನಡೆಯುತ್ತಿದ್ದು, ಒಂದು ಮೂಲೆಯಲ್ಲಿರುವ ಆಕೆಯ ದ್ರಾಕ್ಷಿ ತೋಟದಿಂದ ನಿರ್ಮಾಣ ಕಾರ್ಯಕ್ಕೆ ತೊಂದರೆಯೇನೂ ಇರಲಿಲ್ಲ. ಹೀಗಾಗಿ ಆಕೆಯನ್ನು ಅಲ್ಲಿಂದ ಹೊರದೂಡುವುದನ್ನು ನಾನೂ ಮುಂದೂಡುತ್ತಲೇ ಇದ್ದೆ. ನಡುನಡುವೆ ತೋಟದತ್ತ ಹೋಗಿ ಆ ಅಜ್ಜಿಯನ್ನು ಸೌಮ್ಯವಾಗಿ ಎಚ್ಚರಿಸಿ ಬರುತ್ತಿದ್ದೆ. ಆಕೆ- 'ಇದೊಂದು ಬೆಳೆ ತೆಗೆದು ಹೋಗುತ್ತೇನೆ ಮಗಾ,, 'ಇದನ್ನ ಬಿಟ್ಟರೆ ನನಗೆ ಮತ್ಯಾವುದೂ ದಿಕ್ಕಿಲ್ಲ' ಎಂದೆಲ್ಲಾ ಗೋಗರೆಯುವಾಗ ನನಗೆ ಮರು ಮಾತನಾಡುವುದು ಸಾಧ್ಯವಾಗುತ್ತಿರಲಿಲ್ಲ.

ಮೀಟಿಂಗುಗಳಲ್ಲಿ ಕುಳಿತಾಗ ಈ ದ್ರಾಕ್ಷಿ ತೋಟವಿನ್ನೂ ಖಾಲಿಯಾಗದ ವಿಷಯ ಬಂದಾಗಲೆಲ್ಲ ಎಲ್ಲರೂ ನನ್ನತ್ತ ನೋಡುತ್ತಿದ್ದರು. ಪೊಲೀಸರನ್ನು ಕರೆಸಿ, ಜೇಸಿಬಿ ಓಡಿಸಿ ತೋಟವನ್ನು ನೆಲಸಮ ಮಾಡುವುದು ಕೆಲವೇ ಗಂಟೆಗಳ ಕೆಲಸವೆಂಬುದು ಎಲ್ಲರಿಗೂ ಗೊತ್ತಿದ್ದುದೇ. ಆದರೆ ಸದ್ಯದಲ್ಲೇ ಖಾಲಿ ಮಾಡಿಸುವ ಆಶ್ವಾಸನೆಯನ್ನು ನಾನು ಪ್ರತಿ ಬಾರಿಯೂ ನೀಡುತ್ತಿದ್ದೆನಾದ್ದರಿಂದ ಮ್ಯಾನೇಜ್‌ಮೆಂಟೂ ಸುಮ್ಮನಿತ್ತು. ನಾಲ್ಕು ಕಿಲೋಮೀಟರು ಉದ್ದದ ರನ್-ವೇ ತಯಾರಾಗುತ್ತ ಆಗುತ್ತ ದ್ರಾಕ್ಷಿ ಚಪ್ಪರದ ಹತ್ತಿರವೇ ಬಂದು ನಿಂತಿತು. ಆದರೂ ಮುದುಕಿ ಕದಲಲಿಲ್ಲ. ಆ ಬಾರಿಯ ಬೋರ್ಡ್ ಮೀಟಿಂಗಿನಲ್ಲಿ ಗಂಭೀರವಾಗಿಯೇ ವಿಷಯದ ಕುರಿತು ಚರ್ಚೆಯಾಯಿತು. 'ಅವರಿಗೆಲ್ಲ ಕೈತುಂಬ ಪರಿಹಾರ ಧನ ನೀಡಲಾಗಿದೆ. ಯಾವುದೇ ಕರುಣೆ ತೋರುವ ಅಗತ್ಯವಿಲ್ಲ. ಹೋಗಿ ಕೊನೆಯ ಬಾರಿ ಮಾತಾಡಿ ನೋಡಿ' ಎಂಬ ತಾಕೀತಾಯಿತು ನನಗೆ.

ನಾನು ಅಜ್ಜಿಯೊಡನೆ ಈ ವಿಷಯ ಪ್ರಸ್ತಾಪಿಸಿದೆ. ಪರಿಹಾರ ಸಿಕ್ಕಿದ್ದೇನೋ ನಿಜ. 'ಆದ್ರೆ ಅದ್ರಾಗೆ ನನ್ಮಗಾ ಹ್ಯಾಮ್ಮರ್ ಒಡೀತವ್ನೆ...ನನ್ ಒಟ್ಟೆಗೆ ಚಪ್ಡೀನೇಯಾ' ಎಂದಳು ಆಕೆ. ನನಗಂತೂ ಆಕೆಯ ಮಾತು ಅರ್ಥವಾಗಲಿಲ್ಲ. ಮತ್ತೂ ವಿವರಿಸಿ ಹೇಳಿದಾಗ, ಪರಿಹಾರದಿಂದ ಈಕೆಗೆ ದಕ್ಕಿದ್ದೇನೂ ಇಲ್ಲ. ಅದನ್ನೆಲ್ಲ ಆಕೆಯ ಮಗನೇ ಕಬಳಿಸಿದ್ದಾನೆ, ಇವಳಿಗೆ ಈ ವ್ಯವಸಾಯವಿಲ್ಲದಿದ್ದರೆ ಹೊಟ್ಟೆಗೂ ಗತಿ ಇಲ್ಲ ಎಂಬ ಅರಿವಾಗಿತ್ತು. 'ಮಗ ಸುತ್ತಿಗೆ ತೆಗೆದುಕೊಂಡು ಹೊಡೆಯುತ್ತಿದ್ದಾನೆ' ಎನ್ನುವ ಉಪಮೆ ಬಳಸಿ ತನ್ನ ಗೋಳು ಹೇಳಿಕೊಳ್ಳುತ್ತಿದ್ದಾಳೆ ಅಂದುಕೊಂಡೆ. ನಂತರ ಇನ್ನಷ್ಟು ವಿಚಾರಿಸಲಾಗಿ, ಸರ್ಕಾರದಿಂದ ಸಿಕ್ಕ ಹಣದಲ್ಲಿ ಆಕೆಯ ಮಗ ಅತಿಐಷಾರಾಮಿ 'ಹಮ್ಮರ್' ವಾಹನ ಖರೀದಿಸಿ ಮೋಜು ಮಾಡುತ್ತಿರುವುದಾಗಿ ತಿಳಿದು ಬಂತು.

* *

ಹೀಗೊಂದು ಮುಂಜಾನೆ ನಾನು ಪರಿಶೀಲನೆಗೆಂದು ಹೋದಾಗ, ದ್ರಾಕ್ಷಿ ತೋಟದ ಜಾಗದಲ್ಲಿ ದೊಡ್ಡ ದೊಡ್ಡ ಏರ್‌ಫೀಲ್ಡ್ ಲೈಟ್ಸ್‌ಗಳನ್ನು ನೆಲದಮೇಲೆ ಅಳವಡಿಸಿ ಅವುಗಳ ಪ್ರಯೋಗಾತ್ಮಕ ಪರೀಕ್ಷೆ ನಡೆಸಲಾಗುತ್ತಿತ್ತು. ಪಾತಿಯಂತೆ ಸಾಲಿನಲ್ಲಿ ಜೋಡಿಸಿಟ್ಟಿದ್ದ ಅವುಗಳ ಬೆಳಕು ಹಗಲಿನಲ್ಲೂ ಕಣ್ಣು ಕುಕ್ಕುತ್ತಿತ್ತು. ಸುಮಾರು ದಿನದಿಂದ ಕಟ್ಟದೇ ಹಾಗೇ ಬಿಟ್ಟಿದ್ದ ಭಾಗದ ಕಾಂಪೌಂಡ್ ಪೂರ್ಣಗೊಂಡು ಅದರ ಮೇಲೆ ಮುಳ್ಳು ತಂತಿಯ ಸುರುಳಿ ಕುಳಿತಿತ್ತು. ಅಲ್ಲೇ ತುಸು ದೂರದಲ್ಲಿ ತಯಾರಾಗಿ ನಿಂತಿದ್ದ ಟರ್ಮಿನಲ್ ಕಟ್ಟಡಕ್ಕೆ ಕೊನೆಯ ಹಂತದ ಗಾಜು ಅಳವಡಿಕೆ ಕೆಲಸ ನಡೆಯುತ್ತಿತ್ತು.

ಕಾಂಪೌಂಡಿನ ಆಚೆ ನಿಂತು, ಹಿಮ್ಮಡೆಯೆತ್ತಿ ಕತ್ತು ಚಾಚಿ ಆ ವೃದ್ಧ ಹೆಂಗಸು ಇತ್ತಲೇ ನೋಡುತ್ತಿರಬಹುದೇ ಅನ್ನಿಸಿತು ನನಗೆ. ಹಾಗೆ ನೋಡಿದರೆ ಆಕೆಗೆ ಕಾಣುವುದು ಬಣ್ಣ ಬಳಿದುಕೊಂಡು ವಿರಾಜಿಸುತ್ತಿರುವ ನಿಲ್ದಾಣದ ಟರ್ಮಿನಲ್ ಮಾತ್ರ. ಅನುವಾದಕ ಕನ್ಸಲ್‌ಟಂಟನೊಂದಿಗೆ ಇದೇ ಶಬ್ದದ ಕುರಿತು ವಾದ ಮಾಡಿದ್ದೆಲ್ಲಾ ಬೇಡಬೇಡವೆಂದರೂ ನೆನಪಿಗೆ ಬರತೊಡಗಿತು.

(ಲೇಖಕ: ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಾಣದ ಟೆಕ್ನಿಕಲ್ ಲೀಡ್ ಆಗಿದ್ದವರು)

ಶಕ್ತಿಪೇಯ ಸೆಕ್‌ಮಾಯ್

8ನೇ ಪುಟದಿಂದ...

ಮಣಿಪುರದಲ್ಲಿ ಅಧಿಕೃತವಾಗಿ ಪರಿಶಿಷ್ಟ ಜಾತಿಗಳ ಹಳ್ಳಿಗಳು ಎಂದು ಎಂಟು ಗ್ರಾಮಗಳನ್ನು ಗುರುತಿಸಲಾಗಿದ್ದು, ಅದರಲ್ಲಿ ಈ ಆಂಡ್ರೊ ಮುಖ್ಯವಾದದ್ದು. ಅಕ್ಕಿ ಇಲ್ಲಿನ ಪ್ರಮುಖ ಕೃಷಿ ಉತ್ಪನ್ನ. ಹೀಗಾಗಿ ಅಕ್ಕಿಯನ್ನೇ ಬಳಸಿ ತಯಾರಿಸಲಾಗುವ ಮದ್ಯ (ಮಣಿಪುರಿ ಭಾಷೆಯಲ್ಲಿ ಯು) ಸಾಮಾಜಿಕ- ಧಾರ್ಮಿಕ-ಸಾಂಸ್ಕೃತಿಕ ಆಚರಣೆಗಳಲ್ಲಿ ಪ್ರಮುಖ ಸ್ಥಾನ ಪಡೆದಿದೆ. ಮದ್ಯಗಳಲ್ಲಿ ಮೂರು ವಿಧ. ಪುಕ್ಕು ಮತ್ತು ವೈಯು ಎಂಬ ಪೇಯಗಳನ್ನು ಧಾರ್ಮಿಕ ಆಚರಣೆಗಳಲ್ಲಿ ಉಪಯೋಗಿಸಲು, ಅಂದರೆ ಸ್ವಂತ ಬಳಕೆಗಾಗಿ ಮಾತ್ರ, ತಯಾರಿಸಲಾಗುತ್ತದೆ. ಮೂರನೆಯದ್ದು ಮದ್ಯಸಾರದ ಅಂಶ ಹೆಚ್ಚಿರುವ ಲೆಯು. ಮಣಿಪುರದ ಸೆಕ್‌ಮಾಯ್ ಪ್ರಾಂತ್ಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತಯಾರಾಗುವುದರಿಂದ ಸೆಕ್‌ಮಾಯ್ ಎಂದೇ ಜನಪ್ರಿಯವಾಗಿದೆ. ಇದು ಜನರು ತಮ್ಮ ದೈನಂದಿನ ಜೀವನದಲ್ಲಿ ಮತ್ತು ಮಾರಾಟಕ್ಕೆ ಬಳಸುವ ಮದ್ಯ.

ಸೆಕ್‌ಮಾಯ್ ತಯಾರಿಸಲು ಸ್ಥಳೀಯವಾಗಿ ಬೆಳೆದ ಅಂಟು ಅಕ್ಕಿಯೇ ಅತ್ಯುತ್ತಮ. ಯಾವುದೇ ರೀತಿಯ ಪಾಲಿಶ್ ಮಾಡದ ಅಕ್ಕಿಯಲ್ಲಿ ವಿಟಮಿನ್, ಪ್ರೋಟಿನ್ ಅಂಶಗಳಿದ್ದು, ಅದರಿಂದ ತಯಾರಾದ ಸೆಕ್‌ಮಾಯ್ ಆರೋಗ್ಯಕ್ಕೂ ಒಳ್ಳೆಯದು ಎಂಬ ನಂಬಿಕೆ ಜನರದ್ದು. ಅಕ್ಕಿಯೊಂದಿಗೆ ಔಷಧೀಯ ಗುಣಗಳಿರುವ ಬಳ್ಳಿ ಯಾಂಗ್ಲಿಯನ್ನು ಸೇರಿಸಲಾಗುತ್ತದೆ.

ಮೊದಲು ಯಾಂಗ್ಲಿಯ ದಂಟುಗಳನ್ನು ಕೆಲದಿನಗಳ ಕಾಲ ನೀರಿನಲ್ಲಿ ಮುಳುಗಿಸಿ ಇಡಲಾಗುತ್ತದೆ. ಈ ನೀರನ್ನು ಅಂಟು ಅಕ್ಕಿಯೊಂದಿಗೆ ಅರೆದು ಹಮ್ಮೈ ಎಂಬ ಮಿಶ್ರಣ (ಯೀಸ್ಟ್) ತಯಾರು ಮಾಡಿ ಅದನ್ನು ರೊಟ್ಟಿಯಂತೆ ತಟ್ಟುತ್ತಾರೆ. ಈ ಹಮ್ಮೈ ಉತ್ತಮ ಗುಣಮಟ್ಟದಾಗಿದ್ದರೆ ಮದ್ಯದ ತೀಕ್ಷ್ಣತೆ ಹೆಚ್ಚುತ್ತದೆ. ನಂತರ ಬೇಯಿಸಿದ ಅಕ್ಕಿ ಮತ್ತು ಈ ರೊಟ್ಟಿ ಸೇರಿಸಿ ಅದನ್ನು ಐದಾರು ದಿನಗಳ ಕಾಲ ಹುದುಗು ಬರಿಸಲಾಗುತ್ತದೆ. ಇದರಿಂದ ಬಟ್ಟಿ ಇಳಿಸಿದ ದ್ರವವೇ ಸೆಕ್‌ಮಾಯ್! ಇದರಲ್ಲಿ ಮದ್ಯಸಾರದ ಅಂಶ ಶೇಕಡಾ 5-15 ರಷ್ಟಿದ್ದು ವೊಡ್ಕಾ ಮತ್ತು ಜಪಾನಿನ ಜನಪ್ರಿಯ ಮದ್ಯ ಸಾಕೆಗೆ ತುಲನೆ ಮಾಡಲಾಗುತ್ತದೆ.

ಸೆಕ್‌ಮಾಯ್ ತಯಾರಿಸುವ ವ್ಯಕ್ತಿ, ಮೊದಲು ಸ್ನಾನವನ್ನು ಮಾಡಿ ಶುದ್ಧವಾಗಬೇಕು ಮತ್ತು ಹಣ್ಣನ್ನು ಮುಟ್ಟುವಂತಿಲ್ಲ. ಹುದುಗು ಬರಿಸಲು, ನೆನೆಸಲು, ಬಟ್ಟಿ ಇಳಿಸಲು ನಿರ್ದಿಷ್ಟವಾದ ಬಿದಿರಿನ ಬುಟ್ಟಿ, ಮಣ್ಣಿನ ಗಡಿಗೆ, ಯುಕಾಕ್ ಮತ್ತು ಯುಮಾಯ್ ಎಂಬ ಲೋಹದ ಪಾತ್ರೆಗಳನ್ನೇ ಬಳಸುತ್ತಾರೆ. ಅನುಭವಿಗಳ ಪ್ರಕಾರ ಸೆಕ್‌ಮಾಯ್ ರುಚಿ ಮತ್ತು ಪರಿಶುದ್ಧ ಅಕ್ಕಿಯ ತಳಿ, ಹಮ್ಮೈ, ಬಳಸುವ ಪಾತ್ರೆಗಳು ಮತ್ತು ಮಾಡುವ ವ್ಯಕ್ತಿ ಇವೆಲ್ಲದರ ಮೇಲೆ ನಿರ್ಣಯವಾಗುತ್ತದೆ. ಮದ್ಯದ ರುಚಿ ಹಾಳಾಗದಿರಲು ಈ ಎಲ್ಲಾ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾರೆ! ಸೆಕ್‌ಮಾಯ್‌ನ ಬೆಲೆ ಲೀಟರ್‌ಗೆ ಅರವತ್ತರಿಂದ ಆರಂಭವಾಗಿ ಗುಣಮಟ್ಟದ ಮೇಲೆ ಹೆಚ್ಚುತ್ತಾ ಹೋಗುತ್ತದೆ.

ಆಶ್ಚರ್ಯವೆಂದರೆ ಈ ಕುಂಬಾರಿಕೆ ಮತ್ತು ಮದ್ಯ ತಯಾರಿಕೆಯಲ್ಲಿ ಹೆಚ್ಚಿನವರು ವಿವಾಹಿತ ಮಹಿಳೆಯರು. ಪುರುಷರು ಕೃಷಿಯಲ್ಲಿ ನಿರತರಾಗಿದ್ದರೆ ಮಣ್ಣಿನ ಪಾತ್ರೆ, ಕರಕುಶಲ ವಸ್ತುಗಳು ಮತ್ತು ಶರಾಬು ತಯಾರಿಕೆ ಮಹಿಳೆಯರ ಪ್ರಮುಖ ಉದ್ಯೋಗ. ಮಣಿಪುರದಲ್ಲಿ ಮಹಿಳೆಯರದ್ದೇ ಮೇಲುಗೈ ಎಂದು ಅಚ್ಚರಿಯಿಂದ ನುಡಿದಾಗ ಅಲ್ಲಿದ್ದ ಮಹಿಳೆ ಹೊಟ್ಟೆ ತೋರಿಸಿ 'ಮೇಲುಗೈ ಅಂತಲ್ಲ; ಈ ಮಡಕೆ ತುಂಬಬೇಕಲ್ಲಾ' ಎಂದಳು!

ಕುತೂಹಲಕ್ಕೆ ಮಹಿಳೆಯರೂ ಕುಡಿಯುತ್ತಾರೆಯೇ ಎಂದು ಪ್ರಶ್ನಿಸಿದ್ದಕ್ಕೆ 'ಎಲ್ಲರ ಎದುರಿಗೆ ಅಲ್ಲ, ಮನೆಗಳಲ್ಲಿ ಮಾತ್ರ. ಅದೂ ಅಲ್ಲದೇ ಮುಟ್ಟಿನ ನೋವು, ಜ್ವರ, ಬಾಣಂತಿ ಜಡ್ಡು, ನೆಗಡಿ-ಕೆಮ್ಮು, ಮೈಕೈ ನೋವು, ಹಸಿವು ಇವುಗಳಿಗೆ ಸೆಕ್‌ಮಾಯ್ ಔಷಧಿ ಇದ್ದಂತೆ. ಹಾಗಾಗಿ ಕುಡಿಯುತ್ತೇವೆ' ಎಂಬ ಉತ್ತರ ಸಿಕ್ಕಿತು. ತಮ್ಮದೇ ಆದ ಔಷಧ ಪದ್ಧತಿಯನ್ನು ಹೊಂದಿರುವ ಲೋಯಿಸ್ ಪಂಗಡದವರಲ್ಲಿ ಸೆಕ್‌ಮಾಯ್ ಶಕ್ತಿಪೇಯವಾಗಿ ಬಳಕೆಯಾಗುತ್ತದೆ. ಆದರೆ ಪೌಷ್ಟಿಕ ಆಹಾರ-ಸರಿಯಾದ ಚಿಕಿತ್ಸೆ ಸಿಗದೇ ರಕ್ತ ಹೀನತೆಯಿಂದ ನರಳುವ ಹೆಣ್ಣುಮಕ್ಕಳ ಸಂಖ್ಯೆ ಹೆಚ್ಚು.

ಮದ್ಯದ ಅಮಲಿಗೆ ಸಿಕ್ಕ ಯುವಜನರೂ ಹೆಚ್ಚುತ್ತಿದ್ದಾರೆ. ಮದ್ಯ ಸೇವನೆಗೆ ಸಾಮಾಜಿಕವಾಗಿಯೇ ಸಿಕ್ಕ ಅನುಮತಿ, ಮನ್ನಣೆಯಿಂದಾಗಿ ಮದ್ಯ ಸೇವಿಸುವ ಯುವಕರು ಕ್ರಮೇಣ ನಿಯಂತ್ರಣ ಮೀರಿ ದಾಸಾನುದಾಸರಾಗಿದ್ದಾರೆ. ತಮ್ಮ ಪರಂಪರೆ-ಪದ್ಧತಿ ಮುಂದುವರಿಯಬೇಕು ಎನ್ನುವ ಗ್ರಾಮದ ಹಿರಿಯರಿಗೆ ಇದು ಕಳವಳವನ್ನುಂಟು ಮಾಡುತ್ತಿದೆ. ಸೆಕ್‌ಮಾಯ್‌ಗೆ ದೊಡ್ಡ ಮಟ್ಟದಲ್ಲಿ ಪ್ರಚಾರ ಸಿಗಬೇಕು. ತಾವು ಆರ್ಥಿಕ-ಸಾಮಾಜಿಕ ಮನ್ನಣೆ ಪಡೆಯಬೇಕು. ಆದರೆ ಸೆಕ್‌ಮಾಯ್ ಬಳಕೆ ನಿಯಂತ್ರಣದಲ್ಲಿರಬೇಕು ಎಂಬುದು ಅವರ ಆಶಯ.

ಬೆಟ್ಟಗುಡ್ಡಗಳ ತಪ್ಪಲಲ್ಲಿ ಅಡಗಿರುವ ಈ ಹಳ್ಳಿಯಿಂದ ಮರಳಿ ಬರುವಾಗ ಮಣಿಪುರದ ಮೂಲನಿವಾಸಿಗಳಾಗಿ ತಮ್ಮ ಸ್ಥಾನಮಾನಕ್ಕಾಗಿ ಹೆಣಗಾಡುತ್ತಿರುವ ಇಲ್ಲಿಯ ಜನರಿಗೆ ಸೆಕ್‌ಮಾಯ್ ನಿಜಕ್ಕೂ ಶಕ್ತಿಪೇಯವಾದೀತೇ ಎಂಬ ಪ್ರಶ್ನೆ ಥಟ್ಟನೆ ಮೂಡಿತು.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಡಣ್ಣ ಚಕ್ಕು ಶ್ರೇಷ್ಠ ಕಥೆಯ — ಬೆಕ್ಕು ಕಲಿಸಿದ ಪಾಠ

• ಕಲೆ-ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ

ಬೆಕ್ಕೊಂದು ಮನೆ ಕಟ್ಟಿಕೊಳ್ಳಲು ಬಯಸಿತು. ತನ್ನ ಚೆಂದದ ಮನೆ ಹೇಗಿರಬೇಕು ಎಂದೆಲ್ಲಾ ಯೋಚಿಸಿತು. ಮನೆ ಕಟ್ಟಲು ಬೇಕಾದ ಸಾಮಗ್ರಿಗಳನ್ನು ಪಡೆಯಲು ದಾರಿ ಹೋಕರ ಬಳಿ ಉಪಾಯವಾಗಿ ಮಾತನಾಡತೊಡಗಿತು

ಒಮ್ಮೆ ಕಬ್ಬಿನ ಹೊರೆ ಹೊತ್ತು ಬರುತ್ತಿದ್ದ ಬಾಲಕ ಸಿಕ್ಕಿದ. ಎಲ್ಲಿಗೆ ಹೊರಟಿದ್ದೀಯಾ ಎಂದು ಬೆಕ್ಕು ಕೇಳಿತು. ಅಜ್ಜಿಯ ಮನೆಗೆ ಎಂದ ಬಾಲಕ. 'ನಿನ್ನ ಅಜ್ಜಿ ಸತ್ತು ಹೋದಳು' ಎಂದಿತು ಬೆಕ್ಕು. ಬಾಲಕ ಕಬ್ಬಿನ ಹೊರೆಯನ್ನು ಅಲ್ಲೇ ಎಸೆದು ಅಳುತ್ತಾ ಓಡಿದ

ತಲೆಯ ಮೇಲೆ ಬೆಲ್ಲದ ಅಚ್ಚು ಹೊತ್ತು ಅಜ್ಜನ ಮನೆಗೆ ಹೊರಟ ಬಾಲಕಿಯೂ ಅದೇ ದಾರಿಯಲ್ಲಿ ಬಂದಳು. ಆಗ ಬೆಕ್ಕು, 'ನಿನ್ನ ಅಜ್ಜ ಸತ್ತು ಹೋದ' ಎಂದು ಹೇಳಿತು. ಬಾಲಕಿಯು ಬೆಲ್ಲವನ್ನು ಎಸೆದು ಅಳುತ್ತಾ ಹೋದಳು



ಕೈಯಲ್ಲಿ ದೋಸೆ, ಶಾವಿಗೆಯ ತಟ್ಟೆ ಹಿಡಿದುಕೊಂಡು ಅತ್ತೆ ಮನೆಯತ್ತ ಹೊರಟ ಅಕ್ಕ, ತಮ್ಮ ಬಂದರು. ಅವರಿಗೆದುರಾದ ಬೆಕ್ಕು, 'ನಿಮ್ಮ ಅತ್ತೆ ಸತ್ತು ಬಹಳ ದಿನಗಳಾದವು' ಎಂದು ಹೇಳಿತು

ಮಕ್ಕಳು ಎಸೆದ ವಸ್ತುಗಳನ್ನು ಬಳಸಿ ಬೆಕ್ಕು ಮನೆ ಕಟ್ಟಿತು. ಬೆಲ್ಲದ ಅಚ್ಚಿನ ಗೋಡೆ, ಕಬ್ಬಿನ ಜಲ್ಲೆಯನ್ನು ಶಾವಿಗೆಯ ಹಗ್ಗದಿಂದ ಬಿಗಿದು ಮಾಡು ಕಟ್ಟಿತು. ಅದರ ಮೇಲೆ ದೋಸೆಯನ್ನು ಹಾಸಿ ಮುಚ್ಚಿ ಬಿಟ್ಟಿತು

ತಾನೇ ಕಟ್ಟಿದ ಮನೆಯೊಳಗೆ ಜಿಗಿದು ಬೆಚ್ಚಗೆ ಕುಳಿತು ಮರಿಗಳನ್ನಿಟ್ಟು ಹಾಲೂಡಿಸತೊಡಗಿತು. ಆದರೆ ಬೆಕ್ಕಿನ ಮಾತನ್ನು ಕುರುಡಾಗಿ ನಂಬಿದ ಎಲ್ಲರೂ ಮೋಸ ಹೋದರು. ಬದುಕಿನಲ್ಲಿ ಹೊಸ ಪಾಠ ಕಲಿತರು

ಗಣಿತದಲ್ಲಿ ಗರ್ದಿ ಗಮ್ಮತ್ತು

ಹಳ್ಳಿಗರ ಹರಳಿನ ಆಟ



ಮೇಲೆ ಕೊಟ್ಟ 17 ಚೌಕಗಳಿರುವ ಚಿತ್ರವನ್ನು ದೊಡ್ಡ ಆಕಾರದಲ್ಲಿ ಕಾರ್ಡ್‌ಬೋರ್ಡ್‌ನಲ್ಲಿ ರಚಿಸಿಕೊಳ್ಳಿ. 9ನೇ ಸಂಖ್ಯೆಯ ಚೌಕವೊಂದನ್ನು ಬಿಟ್ಟು ಎಲ್ಲ ಚೌಕಗಳಲ್ಲಿ ಹರಳುಗಳನ್ನು ಹಂಚಿಕೊಳ್ಳಿ. ಇದೊಂದು ಹರಳು ಕಡಿಯುವ ಆಟ. ಹರಳು ಕಡಿಯುವುದೆಂದರೆ ಉದಾ: 7ನೇ ಸಂಖ್ಯೆಯ ಹರಳನ್ನು 8ನೇ ಸಂಖ್ಯೆಯ ಹರಳಿನ ಮೇಲೆ ಹಾಯ್ದು 9ನೇ ಸಂಖ್ಯೆಗೆ ಇಟ್ಟು 8ನೇ ಹರಳನ್ನು ಹೊರಗೆ ಇಡುವುದು.



ಮೊದಲ ಸ್ಥಿತಿ



ಕಡಿದಾಗಿನ ಸ್ಥಿತಿ

ಹೀಗೆ ಒಂದೊಂದನ್ನೇ ಕಡಿಯುತ್ತಾ ಸಾಗುವುದು.
ಕೊನೆಗೆ
ಒಂದು ಹರಳು ಉಳಿದರೆ – ವಿನ್ನರ್
ಎರಡು ಹರಳು ಉಳಿದರೆ – ಬೆಸ್ಟ್
ಮೂರು ಹರಳು ಉಳಿದರೆ – ಬೆಟರ್
ನಾಲ್ಕು ಹರಳು ಉಳಿದರೆ – ಗುಡ್

ಆಡಿ – ಆನಂದಿಸಿ

ಅಕ್ಷರ ಆಟ

ಗಳು ಎಂಬ ಅಕ್ಷರಗಳಿಂದ ಕೊನೆಗೊಳ್ಳುವ ಮೂರಕ್ಷರಗಳ ಎಷ್ಟು ಪದ ಗೊತ್ತಿವೆ? ಪಟ್ಟಿ ಮಾಡಿ

1.......................ಗಳು
2.......................ಗಳು
3.......................ಗಳು
4.......................ಗಳು
5.......................ಗಳು
6.......................ಗಳು
7.......................ಗಳು

ಟ್ವೆಂಟಿ – 20 ಮ್ಯಾಚ್

ಇಲ್ಲಿ ಕೊಟ್ಟಿರುವ ಹೋಲಿಕೆ ಪದಗಳಿಗೆ ಹೊಂದಿಸಿರಿ

1.	ಬೆಟ್ಟದಂತೆ	A	ಪ್ರಖರ
2.	ನೀರಿನಂತೆ	B	ನಾಜೂಕು
3.	ಹೂವಿನಂತೆ	C	ಬಲಿಷ್ಠ
4.	ನಾಯಿಯಂತೆ	D	ಆಳ
5.	ಗೂಳಿಯಂತೆ.	E	ಖರ್ಚು
6.	ಆನೆಯಂತೆ	F	ಮುಸುಕು
7.	ಚಿಗರೆಯಂತೆ	G	ಕೂದಲು
8.	ಮೋಡದಂತೆ	H	ಕಾದಾಟ
9.	ಅರಳೆಯಂತೆ	I	ಅಚಲ
10.	ನೂಲಿನಂತೆ	J	ಕಠಿಣ
11.	ವಜ್ರದಂತೆ	K	ವೇಗ
12.	ಬಿಲ್ಲಿನಂತೆ	L	ಕಚ್ಚಾಟ
13.	ಮಿಂಚಿನಂತೆ	M	ಮಧುರ
14.	ಕಾಡಿಗೆಯಂತೆ	N	ಹಗುರ
15.	ಹಿಟ್ಟಿನಂತೆ	O	ಹೊಳೆಯುವುದು
16.	ಹಾವಿನಂತೆ	P	ಸೀರೆ
17.	ಜೇನಿನಂತೆ	Q	ಕಪ್ಪು
18.	ಸಮುದ್ರದಂತೆ	R	ಬಾಗುವಿಕೆ
19.	ಕರಡಿಯಂತೆ	S	ರೊಟ್ಟಿ
20.	ಸೂರ್ಯನಂತೆ	T	ಅಂಕು ಡೊಂಕು

ಅದಲು ಬದಲು ಕಂಚಿ ಕದಲು

1 ರಮಾಕುಮಾರಿ = ...
2 ಗದಗಜಲ = ...
3 ನಾಯಿತಿವಿ = ...
4 ಸಾಗರದಡಿ = ...

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಮೂಲಾಕ್ಷರಗಳಿಗೆ ಸುಳಿವು ಆಧರಿಸಿ ಹೊಸ ಪದ ರಚಿಸಿ

	ಹ	ವ	ಸುಳಿವು
1			ಗಾಳಿ
2			ಭಾವದೊಂದಿಗಿನ ಜೋಡಿಪದ
3			ಸರ್ಪ
4			ಯಜ್ಞದಲ್ಲಿ ಹಾಕುವ ಹಾಲು, ತುಪ್ಪ ಇತ್ಯಾದಿ
5			ಪುಷ್ಪ

ಪೇಚಿನ ಪ್ರಶ್ನೆ

1,3,5,7,9 ಈ ಎಲ್ಲ ಬೆಸ ಸಂಖ್ಯೆಗಳು ಯಾವ ಮಗ್ಗಿಯಲ್ಲಿ ಬರುತ್ತವೆ?

ಉತ್ತರ: 19X3 = 57

ಕಳೆದ ಸಂಚಿಕೆಯ ಸರಿ ಉತ್ತರಗಳು

ಟ್ವೆಂಟಿ – 20 ಮ್ಯಾಚ್
1-M 2-L 3-B 4-D 5-G 6-H 7-E 8-K 9-F 10-A 11-C 12-Q 13-R 14-J 15-T 16-P 17-S 18- N 19-I 20-C

ಜಾಣಪದ ಆಟ: 1 ಕೋಟೆ 2 ಕಾಟ 3 ಕೀಟ 4 ಕೋಟೆ 5 ಕಟು

ಅದಲು ಬದಲು ಕಂಚಿ ಕದಲು
1 MARCH 2 MONDAY 3 THE CARE 4 INDICATORY

ಪದವಿನೋದ: 1 ಕಿಟಕಿ 2 ಟೊಮೆಟೊ 3 ಚಮಚ 4 ಕಳಂಕ 5 ಸರಸ 6 ಸಮಾಸ 7 ಸಮೋಸ 8 ಕುಟುಕು 9 ನರ್ತನ 10 ಗುಡುಗು 11 ಗುಣುಗು 12 ನಯನ 13 ನವೀನ 14 ನಮನ 15 ಗದಗ 16 ಕನಕ 17 ಸುರಿಸು 18 ಗಜ್ಜುಗ 19 ಕರಕ 20 ಗಟ್ಟಿಗ

ಮಜ ಮಜ ಮಜಕೂರದ ಕಳೆದ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು

ದಿಯಾ ಹುಡೇದಗಡ್ಡಿ, ಮೈಸೂರು

ಮೇಘನಾ ಎಸ್.ಕೆ.
ತಾವರಗೇರಾ (ಕೊಪ್ಪಳ)

ಸಾಗರ ಕೆ.ಎನ್., ದಾವಣಗೆರೆ

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಭಜನೆಯ ಬಚ್ಚೆ ಸಾಹೇಬರು

ಸಯ್ಯದ್ ಯೇಜಸ್ ಪಾಷ

ನಮ್ಮೂರಿನ ವೀರಾಂಜನೇಯಸ್ವಾಮಿ ದೇವಸ್ಥಾನದ ಕಟ್ಟೆಯ ಮಧ್ಯದಲ್ಲಿದ್ದ ಅರಳಿ ಮರದಲ್ಲಿ ಅಳವಡಿಸಿದ್ದ ಧ್ವನಿವರ್ಧಕದಲ್ಲಿ ವಾರದ ಕೊನೆಯ ದಿನವಾದ ಶನಿವಾರ ಹೊಂಬಿಸಿಲು ಆವರಿಸಿ ಸಂಜೆ ಸೂರ್ಯ ಮುಳುಗುವ ಹೊತ್ತು. 'ಆಕಾಶ ಭೂಮಿಗಳ ಒಂದು ಮಾಡಿ ನಿಂತ ನಿನ್ನ ಈ ಆಕಾರವೇನು' ಎಂಬ ಹಾಡು ಇಂಪಾದ ದನಿಯಲ್ಲಿ ಬರುತ್ತಿದ್ದಂತೆ ಬಚ್ಚೆ ಸಾಹೇಬರ ಭಜನೆ ಪ್ರಾರಂಭವಾಯಿತೆಂದು ಮಕ್ಕಳಿಗಲ್ಲದೆ ಹಿರಿಯರಿಗೂ ಕೂಡ ಅರಿವಾಗುತ್ತಿತ್ತು.

ಬೃಹದಾಕಾರವಾಗಿ ಬೆಳೆದಿರುವ ಇಂದಿನ ಬೆಂಗಳೂರಿನ ಹೃದಯ ಭಾಗದಲ್ಲಿರುವ ಮೂವತ್ತು ವರ್ಷಗಳ ಹಿಂದಿನ ಬಸವೇಶ್ವರನಗರದಲ್ಲಿ ಬಚ್ಚೆ ಸಾಹೇಬರು ಎಂದರೆ ಭಜನೆ ಬಚ್ಚೆ ಸಾಹೇಬರು ಎಂದೇ ಬಹಳ ಪ್ರಸಿದ್ಧಿಯಾಗಿದ್ದವರು. ಫಳ ಫಳ ಹೊಳೆಯುವ ಬಿಳಿಯದೊಂದು ಜುಬ್ಬಾ, ಷರಾಯಿ ತೊಟ್ಟು (ಊರಲ್ಲಿ ಬೇರೆ ಯಾರಿಗೂ ಇಲ್ಲದೆ ಬಚ್ಚೆ ಸಾಹೇಬರಿಗೆ ಮಾತ್ರ ಈ ಸ್ಟೈಲ್ ಬಟ್ಟೆ ಹೊಲಿದು ಕೊಡುತ್ತಿದ್ದ ನಮ್ಮೂರಿನ ದರ್ಜಿಗೆ ಒಂದು ಸಲಾಂ ಹೊಡೆಯಲೇಬೇಕು), ಕುತ್ತಿಗೆಗೊಂದು ಹಸಿರು ಬಣ್ಣದ ಮಫ್ಲರ್ ಸುತ್ತಿಕೊಂಡು, ತಲೆಗೊಂದು ಬೂದು ಬಣ್ಣದ ಟೋಪಿ ಹಾಕಿಕೊಂಡು ಸದಾ ಹಸನ್ಮುಖಿಯಾಗಿ ಓಡಾಡುತ್ತಿದ್ದವರು ಬಚ್ಚೆ ಸಾಹೇಬರು. ಬೆಳಗಿನ ಜಾವ ಊರೆಲ್ಲ ಒಂದು ಸುತ್ತು ಹಾಕಿ ಎದುರಿಗೆ ಸಿಗುವ ಜನರ ಕುಶಲೋಪರಿ ವಿಚಾರಿಸಿ ಬರುವುದು ಅವರ ದಿನನಿತ್ಯದ ಕೆಲಸಗಳಲ್ಲಿ ಒಂದಾಗಿತ್ತು.

ದೇವಳದ ಭಜನೆಯಲ್ಲಿ ಇವರ ಬಾಯಲ್ಲಿ ಲೀಲಾಜಾಲವಾಗಿ ಹರಿದಾಡುತ್ತಿದ್ದ ಭಜನೆಯ ಪದಗಳು, ದೇವರನಾಮ, ಭಕ್ತಿಗೀತೆಗಳು ಇವರನ್ನು ಕಂಡನೊಡನೆಯೇ ಊರಿನ ಜನರ ಬಾಯಲ್ಲಿ ಮೆಲುದನಿಯಲ್ಲಿ ಮೆಲ್ಲನೆ ಗುನುಗುತ್ತಿದ್ದವು. ಭಜನೆಯ ಸಮಯದಲ್ಲಿ ಚಕ್ಕಬಕ್ಕಳ ಹಾಕಿ ಕುಳಿತ ಬಚ್ಚೆಸಾಹೇಬರು, ಹಾರ್ಮೋನಿಯಂ ಪೆಟ್ಟಿಗೆ ಹಿಡಿದು ತೊಡೆಯ ಮೇಲೆ ಇಟ್ಟುಕೊಂಡು, ಕುಳಿತುಕೊಳ್ಳುವ ಭಂಗಿಯೇ, ಅವರು ಹಾಡಲು ಸಿದ್ಧವಾಗಿದ್ದಾರೆ ಎಂದು ಸಂಜ್ಞೆ ಕೊಡುವಂತಿತ್ತು. ಹಾರ್ಮೋನಿಯಂ ಮಣೆಯ ಮೇಲೆ ಸರಾಗವಾಗಿ ಹರಿದಾಡುವ ಕೈಬೆರಳುಗಳು, ಮೋಡಿ ಮಾಡುತ್ತ ನುಡಿಸುವ ಶ್ರುತಿಗೆ ಕಂಠ ಸರಿಯಾಗಿ ರಾಗವನ್ನು ಹೊಂದಿಸುತ್ತಿತ್ತು. ಇನ್ನು ಶನಿವಾರ ಬಂತೆಂದರೆ ಭಜನೆಗೆ ನಾನೇ ತಾಳ ಹಾಕುತ್ತಿದ್ದೆ. ಕೊನೆಯವರೆಗೂ ಇದ್ದರೆ ಬೊಗಸೆ ತುಂಬಾ ಪ್ರಸಾದ. ಬಚ್ಚೆ ಸಾಹೇಬರ ಬೊಗಸೆಯಲ್ಲಿಯ ಪ್ರಸಾದದಲ್ಲೂ ಪಾಲು ಸಿಗುತ್ತಿತ್ತು. ಇದರ ಜೊತೆಗೆ ಪೂಜಾರಪ್ಪ ಎಲೆ, ಅಡಿಕೆ, ಕಲ್ಲುಸಕ್ಕರೆ ಬಳುವಳಿಯಾಗಿ ನೀಡುತ್ತಿದ್ದರು.

ನಮ್ಮ ಗ್ರಾಮೀಣ ಸಂಸ್ಕೃತಿಗಳೊಂದಿಗೆ ಭಾವನಾತ್ಮಕ ಸಂಬಂಧವನ್ನು ತಳುಕು ಹಾಕಿಕೊಂಡಿರುವ ಸಂಗೀತ ವಾದ್ಯಗಳೆಂದರೆ ತಮಟೆ, ತಬಲ, ಕೊಳಲು, ನಗಾರಿ, ತಾಳ, ತಂಬೂರಿ, ಏಕತಾರಿ ಮತ್ತು ಹಾರ್ಮೋನಿಯಂ. ಭಜನೆ, ಕೀರ್ತನೆ, ನಾಟಕ ಏನೇ ಇರಲಿ, ಅಲ್ಲಿ ಹಾರ್ಮೋನಿಯಂ ಇಲ್ಲದೆ ಇದ್ದರೆ ಹೇಗೆ? ಜೊತೆಯಲ್ಲಿ ಬಚ್ಚೆ ಸಾಹೇಬರು ಕೂಡ. 'ಎಲ್ಲಿ ಭಜನೆಯೋ ಅಲ್ಲಿ ಬಚ್ಚೆ ಸಾಹೇಬರು, ಎಲ್ಲಿ ಬಚ್ಚೆ ಸಾಹೇಬರೋ ಅಲ್ಲಿ ಭಜನೆ' ಎನ್ನುವ ಮಾತು ಊರಿನವರ ಬಾಯಲ್ಲಿ ಸಾಮಾನ್ಯವಾಗಿತ್ತು. ರಾಮನವಮಿ ಹಬ್ಬದ ಸಮಯದಲ್ಲಿ ಒಂದು ವಾರದವರೆಗೂ ಬಚ್ಚೆ ಸಾಹೇಬರ ಹಾರ್ಮೋನಿಯಂ ತಪ್ಪದೆ ಪ್ರತಿದಿನ ಭಕ್ತರು ಭಜನೆಯಲ್ಲಿ ಪಾಲ್ಗೊಂಡು ಭಕ್ತಿಯ ಪರಾಕಾಷ್ಠೆಯಲ್ಲಿ ಮುಳುಗುವಂತೆ ಮಾಡುತ್ತಿತ್ತು. ಇದಕ್ಕೆ ತಿಮ್ಮರಾಯಪ್ಪನ ತಬಲ, ಅಲಮೇಲಮ್ಮನ ಪಿಟೀಲು, ವೆಂಕಟೇಶನ ಕೊಳಲು ಸಾಥ್ ನೀಡುತ್ತಿದ್ದವು. ಸಂಭ್ರಮದ ದೃಶ್ಯ ನೋಡಲು ನಮಗೆ ಎರಡು ಕಣ್ಣು ಸಾಲದಾಗಿದ್ದವು.

ಜಾತ್ರೆ ಸಮಯ ಹತ್ತಿರವಾಗುತ್ತಿದ್ದಂತೆ, ಪೌರಣಿಕ ನಾಟಕ ಆಡುವುದು ಇಂದಿಗೂ ಜೀವಂತವಾಗಿ ಉಳಿಸಿಕೊಂಡು ಬಂದಿರುವ ಕಲೆ. ಪಾತ್ರಗಳನ್ನು ಹಾಕುವ ಪಾತ್ರಧಾರಿಗಳಿಗೆ ನಾಟಕದ ಅಭ್ಯಾಸ ಮಾಡಿಸುವುದು, ನಾಟಕದ ಮೇಷ್ಟರಿಗೆ ದೊಡ್ಡ ಸವಾಲಿನ ಕೆಲಸ. ಆದರೆ ನಮ್ಮ ಬಚ್ಚೆ ಸಾಹೇಬರಿಗೆ ಈ ಕೆಲಸ ಕರಗತವಾಗಿತ್ತು. ದುರ್ಯೋಧನನ ಪಾತ್ರಕ್ಕಾಗಿ ದೊಡ್ಡ ಜಟಾಪಟಿಯೇ ನಡೆದು ಹೋಗುತ್ತಿತ್ತು. ಎಲ್ಲರನ್ನೂ ಸಮಾಧಾನಗೊಳಿಸಿ ಅಭ್ಯಾಸದಲ್ಲಿ ನಿರತರಾಗಿಸುವ ಕಲೆಯನ್ನು ಬಚ್ಚೆ ಸಾಹೇಬರು ಬಹಳ ಚೆನ್ನಾಗಿ ಕಲಿತಿದ್ದರು. 'ಈ ಬಾರಿ ನೀನು, ಮುಂದಿನ ಬಾರಿ ಅವನು' ಎನ್ನುತ್ತ ಅವರವರ ದೇಹ, ಶಕ್ತಿಗೆ ಅನುಸಾರವಾಗಿ ತಕ್ಕಂತಹ ಪಾರ್ಟುಗಳನ್ನು ಅಭ್ಯಾಸ ಮಾಡಿಸುತ್ತಿದ್ದರು.

ನಾಟಕದ ತಾಲೀಮು ನಡೆಯುವಾಗ ಕುತೂಹಲದಿಂದ ಸಂಘದ ಮನೆಯ ಕಿಟಕಿಯ ಸಂದಿಯಲ್ಲಿ ಇಣುಕಿ ನೋಡುತ್ತಿದ್ದ ನಮಗೆ, 'ಯಾವನೋ ಅವನೋ ಬಗ್ಗಿ ಬಗ್ಗಿ ನೋಡುತ್ತಿರವುದು' ಎಂದು ದುರ್ಯೋಧನ ಪಾರ್ಟು ಮಾಡುವ ಬೈಲಪ್ಪ ಗದರಿದರೆ, 'ಮುಂದಿನ ಶುಕ್ರವಾರ ಜಾತ್ರೆದಿನ ಬಂದು ನೋಡ್ರೋ ಹುಡುಗರ' ಎಂಬ ಪ್ರೀತಿ ತುಂಬಿದ ದನಿ ನಮ್ಮ ಬಚ್ಚೆ ಸಾಹೇಬರದಾಗಿತ್ತು. ಪೌರಾಣಿಕ ನಾಟಕದಲ್ಲಿ ಕೃಷ್ಣ, ಅರ್ಜುನ, ದುರ್ಯೋಧನ, ಭೀಮ, ಧರ್ಮರಾಯ, ನಕುಲ, ಸಹದೇವರಾಗಿ ಊರಿನ ಪ್ರಮುಖರು ಪಾತ್ರಧಾರಿಗಳಾಗುತ್ತಿದ್ದರು. ದ್ರೌಪದಿ ಪಾತ್ರದಲ್ಲಿ ನಮ್ಮೂರಿನ ರಂಗ ಸೀರೆ ಉಟ್ಟು, ಬಳೆ ತೊಟ್ಟು ವೇದಿಕೆಗೆ ಬಂದರೆ ಸಿಳ್ಳೆ, ಚಪ್ಪಾಳೆ ಮುಗಿಲು ಮುಟ್ಟುತ್ತಿದ್ದವು.

ಹಳ್ಳಿಯ ಮಸೀದಿಯಲ್ಲಿ, ಬೀದಿಯ ನಾಟಕದಲ್ಲಿ, ಊರೊಳಗಿನ ದೇವಸ್ಥಾನದಲ್ಲಿ, ಮನೆ ಮನೆಯಲ್ಲಿ ಓದಿಸುವ ಕಥೆಯಲ್ಲಿ, ಭಜನೆಯಲ್ಲಿ ಸದಾ ಬಚ್ಚೆ ಸಾಹೇಬರ ಜೊತೆಯಲ್ಲಿರುತ್ತಿತ್ತು ಹಾರ್ಮೋನಿಯಂ. ಬಚ್ಚೆ ಸಾಹೇಬರು ದೇಹವಾಗಿದ್ದರೆ ಹಾರ್ಮೋನಿಯಂ ಅವರ ಕೊನೆಯ ಕಾಲದವರೆಗೂ ಅವರ ಉಸಿರಾಗಿತ್ತು. ಭಜನೆ, ಕೀರ್ತನೆ, ನಾಟಕ ಅಷ್ಟೇ ಅಲ್ಲದೆ ಮೊಹರಂ ಹಬ್ಬದ ಸಂದರ್ಭದಲ್ಲಿ ಬಚ್ಚೆ ಸಾಹೇಬರು ಹಾರ್ಮೋನಿಯಂ ತೆಗೆದುಕೊಂಡು, ಪಂಜವನ್ನು ಕೂರಿಸುತ್ತಿದ್ದ ಮಂಟಪದಲ್ಲಿ ಕವ್ವಾಲಿ ಹಾಡಲು ಹೊರಡುತ್ತಿದ್ದರು. 'ಸಾಧು ಮನುಷ್ಯ' ಎಂಬ ಬಿರುದನ್ನು ನಮ್ಮ ಹಳ್ಳಿಯ ಜನರಿಂದ ಅವರು ಪಡೆದಿದ್ದರು.

ನಮ್ಮ ಶಾಲೆಯ ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯದಿನದ ಸಂದರ್ಭಗಳಲ್ಲಿ ಕೂಡ ಬಚ್ಚೆ ಸಾಹೇಬರ ಹಾರ್ಮೋನಿಯಂ ರಾಷ್ಟ್ರಗೀತೆ ಮತ್ತು ದೇಶಭಕ್ತಿ ಗೀತೆಗಳಿಗೆ ಜೊತೆಯಾಗುತ್ತಿತ್ತು. ಸಂಕ್ರಾತಿ ಹಬ್ಬ ಬಂತೆಂದರೆ ತಾವು ಸಾಕಿದ ಹಸುಗಳನ್ನು ಸಿಂಗರಿಸಿ, ನಮ್ಮೂರಿನ ಹನುಮ, ಕೃಷ್ಣ, ಗಣೇಶ ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ಪೂಜೆ ಮಾಡಿಸಿ ಅನಂತರ ಕಿಚ್ಚು ಹಾಯಿಸಿದಾಗ ಬಹಳ ಖುಷಿ ಪಡುತ್ತಿದ್ದರು ನಮ್ಮ ಬಚ್ಚೆ ಸಾಹೇಬರು.

ಭಜನೆ ಮಾತ್ರವಲ್ಲ, ಯಂತ್ರ, ತಂತ್ರ, ಮಂತ್ರಕ್ಕೂ ಪ್ರಸಿದ್ಧಿಯಾಗಿದ್ದರು ನಮ್ಮ ಬಚ್ಚೆ ಸಾಹೇಬರು. ನಾಲ್ಕು ಪೊರಕೆ ಕಡ್ಡಿ ಹಿಡಿದುಕೊಂಡು, 'ಘೋಂ ಘೋಂ ತಡಿಕ ಬದನೆ' ಎಂದು ಹೇಳುತ್ತ, ಕಾಲಿನಿಂದ ತಲೆಯವರಿಗೆ ಒಂದೆರಡು ಸಲ ನಿಧಾನವಾಗಿ ಪೆಟ್ಟು ಕೊಟ್ಟು, ಮಂತ್ರದ ಗಾಳಿಯನ್ನು ನಿಧಾನವಾಗಿ ಮುಖದ ಮೇಲೆ ಊರುಬಿದರೆ, ಮಕ್ಕಳು ಅನುಭವಿಸುವ ತೊಂದರೆ ಎಲ್ಲ ಮಾಯ ಎಂಬ ನಂಬಿಕೆ ಸುತ್ತಮುತ್ತಲ ಜನರಲ್ಲಿತ್ತು. ಎಲೆ, ಅಡಿಕೆ ಅಷ್ಟೇ ಶುಲ್ಕ. ಹೆಚ್ಚೆಂದರೆ ಒಂದು ಕೊಡೆ ಮಾರ್ಕ್ ನಶ್ಯದ ಡಬ್ಬಿ.

ಬಚ್ಚೆ ಸಾಹೇಬರದು ಯಾವುದೇ ಜಾತಿ ಧರ್ಮಕ್ಕೆ ಅಂಟಿಕೊಳ್ಳದ ಮನಸ್ಸು. ವಾರಕ್ಕೊಮ್ಮೆ ಶುಕ್ರವಾರದ ನಮಾಜ್ ತಪ್ಪಿದರೂ ಶನಿವಾರದ ಭಜನೆ ತಪ್ಪುತ್ತಿರಲಿಲ್ಲ. ತಂದೆಯ ಕಾಲದಿಂದಲೂ ಇದು ನಡೆದುಕೊಂಡು ಬಂದ ರೀತಿ ಎಂದು ಹೇಳುತ್ತಿದ್ದರು. ಹಿಂದೂ ಮುಸ್ಲಿಮರ ಹಬ್ಬಗಳನ್ನು ಸಮಾನವಾಗಿ ಸಂಭ್ರಮಿಸುತ್ತಿದ್ದ ಬಚ್ಚೆಸಾಹೇಬರು ಇಂದು ಬರೀ ನೆನಪು. ದೇವಸ್ಥಾನದ ಭಜನೆಯು ಕೂಡ ಅವರ ಕಾಲಕ್ಕೆ ಮುಗಿಯಿತು. ಅವರ ಹಾರ್ಮೋನಿಯಂ ಯಾವ ಮೂಲೆಯಲ್ಲಿ ಬಿದ್ದಿದೆಯೋ ಅವರ ಮನೆಯ ಮಕ್ಕಳಿಗೂ ತಿಳಿದಿಲ್ಲ. ಯಾರಾದರೂ ಇಮಾಮ್ ಸಾಬಿಗೂ ಗೋಕುಲಾಷ್ಟಮಿಗೂ ಏನು ಸಂಬಂಧ ಎಂದು ನನ್ನನ್ನು ಕೇಳಿದರೆ ಮೈಸೂರು ರಸ್ತೆಯ ಮುಸ್ಲಿಮರ ಸ್ಮಶಾನದಲ್ಲಿ ಬಚ್ಚೆ ಸಾಹೇಬರ ಸಾಮರಸ್ಯದ ಸಮಾಧಿಯನ್ನು ಒಮ್ಮೆ ನೋಡಿ ಬನ್ನಿ ಎಂದು ಹೇಳುತ್ತೇನೆ.

ಕಥೆ

ಜ್ಯೋತಿ
ಅವರ
ಸಾವಿತ್ರಿ ಬರೆಯಿಸಿದ ಆತ್ಮಕಥೆ

ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/short-story

ಕವನ

ಡಾ. ಸದಾಶಿವ ದೊಡಮನಿ
ಅವರ
ನಕ್ಷತ್ರ ಮೋಹದಲ್ಲಿ

ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/poetry



ಫಿಫಾ: ಸೆಪ್ ಬ್ಲಾಟರ್, ಪ್ಲಾಟಿನಿ ಆರೋಪಮುಕ್ತ


ಮೈಕೆಲ್ ಪ್ಲಾಟಿನಿ

ಸೆಪ್ ಬ್ಲಾಟರ್

ಬೆಲಿಂಝೋನಾ, ಸ್ವಿಟ್ಜರ್‌ಲೆಂಡ್ (ಎಎಫ್‌ಪಿ): ಫಿಫಾದ ಮಾಜಿ ಮುಖ್ಯಸ್ಥರಾದ ಸೆಪ್ ಬ್ಲಾಟರ್ ಮತ್ತು ಮೈಕೆಲ್ ಪ್ಲಾಟಿನಿ ಅವರನ್ನು ಹಣದ ವಂಚನೆ ಆರೋಪದಿಂದ ಮುಕ್ತಗೊಳಿಸಲಾಗಿದೆ.

ಶುಕ್ರವಾರ ಸ್ವಿಟ್ಜರ್‌ಲೆಂಡ್‌ನ ಬೆಲಿಂಜೊನಾ ಫೆಡರಲ್ ಕ್ರಿಮಿನಲ್ ಕೋರ್ಟ್‌ನಲ್ಲಿ ನಡೆದ ವಿಚಾರಣೆಯಲ್ಲಿ ಇವರಿಬ್ಬರನ್ನೂ ಆರೋಪಮುಕ್ತಗೊಳಿಸಲಾಯಿತು. 2015ರಲ್ಲಿ ಇಬ್ಬರೂ ಈ ಆರೋಪಕ್ಕೆ ಸಿಲುಕಿದರು. ಆಗಿನಿಂದಲೂ ಅವರನ್ನು ವಿಚಾರಣೆಗೊಳಪಡಿಸಲಾಗಿತ್ತು. ಸರ್ಕಾರದ ಪರ ವಕೀಲರು ಅವರಿಬ್ಬರನ್ನು 20 ತಿಂಗಳ ಸೆರೆವಾಸಕ್ಕೆ ಕಳುಹಿಸಬೇಕು ಎಂದು ಸಲ್ಲಿಸಿದ್ದ ಮನವಿಯನ್ನೂ ಈ ಸಂದರ್ಭದಲ್ಲಿ ತಳ್ಳಿಹಾಕಲಾಯಿತು. 86 ವರ್ಷದ ಬ್ಲಾಟರ್ ಮತ್ತು 67 ವರ್ಷದ ಪ್ಲಾಟಿನಿ ಅವರು ಕೋರ್ಟ್‌ನಲ್ಲಿ ಹಾಜರಿದ್ದರು.

'ನಾನು ಏಳು ವರ್ಷಗಳಿಂದ ಹೇಳುತ್ತಿದ್ದ ಮಾತುಗಳನ್ನೇ ಇವತ್ತು ನ್ಯಾಯಾಲಯವು ಹೇಳಿದೆ. ಅಂತಿಮವಾಗಿ ಸತ್ಯಕ್ಕೆ ಜಯ ಲಭಿಸಿದೆ. ಅಪಾರ ಸಂತಸವಾಗುತ್ತಿದೆ' ಎಂದು ಪ್ಲಾಟಿನಿ ಹೇಳಿದರು.

1998ರಲ್ಲಿ ಅಧ್ಯಕ್ಷರಾಗಿದ್ದ ಬ್ಲಾಟರ್ ಅವರಿಗೆ ಸಲಹೆಗಾರರಾಗಿದ್ದ, ಫ್ರಾನ್ಸ್‌ನ ಪ್ಲಾಟಿನಿ ಮಾಡಿದ ಹಣ ಪಾವತಿಯಲ್ಲಿ ವಂಚನೆ ಆಗಿದ್ದ ಪ್ರಕರಣ ದಾಖಲಾಗಿತ್ತು. 2011ರಲ್ಲಿ ಪ್ಲಾಟಿನಿ ನಕಲಿ ರಸೀತಿ ನೀಡಿದ್ದರೆಂಬ ಆರೋಪಕ್ಕೊಳಗಾಗಿದ್ದರು.

ವಿಶ್ವದ ಫುಟ್‌ಬಾಲ್ ಕ್ಷೇತ್ರದಲ್ಲಿ ಖ್ಯಾತನಾಮರಾಗಿದ್ದ ಇಬ್ಬರು ಭಾಗಿಯಾಗಿದ್ದರೆನ್ನಲಾದ ವಂಚನೆ ಪ್ರಕರಣವು ಅಂತರರಾಷ್ಟ್ರೀಯ ಮಟ್ಟದಲ್ಲಿ ದೊಡ್ಡ ಸುದ್ದಿಯಾಗಿತ್ತು.



ಜಪಾನ್‌ನ ಮಾಜಿ ಪ್ರಧಾನಮಂತ್ರಿ ಹಾಗೂ ಭಾರತದ ಸ್ನೇಹಿತರಿಗೆ ಗೌರವ ನಮನಗಳು!!

ಬ್ಯಾಸ್ಕೆಟ್‌ಬಾಲ್: ಸುಪ್ರದೀಪ್ ಮಿಂಚು

ಬೆಂಗಳೂರು: ಸುಪ್ರದೀಪ್ ಗಳಿಸಿದ 38 ಪಾಯಿಂಟ್ಸ್ ಬಲದಿಂದ ರೈಸಿಂಗ್ ಸ್ಟಾರ್ ಬ್ಯಾಸ್ಕೆಟ್‌ಬಾಲ್ ಮೈಸೂರು ತಂಡವು ಜಯ ಗಳಿಸಿತು.

ಎಂ.ಸಿ. ಶ್ರೀನಿವಾಸ್ ಸ್ಮಾರಕ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ ಬಿ ಡಿವಿಷನ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ರೈಸಿಂಗ್ ಸ್ಟಾರ್ 72–69ರಿಂದ ದೇವಾಂಗ ಯೂನಿಯನ್ ಎದುರು ಗೆದ್ದಿತು. ದೇವಾಂಗ ಯೂನಿಯನ್ ಪರ ರೋಹನ್ (24 ಪಾಯಿಂಟ್ಸ್) ಮಿಂಚಿದರು.

ಇನ್ನುಳಿದ ಪಂದ್ಯಗಳಲ್ಲಿ ಭರತ್ ಎಸ್‌ಯು 100–94ರಿಂದ ಜೆಎಸ್‌ಸಿ ಎದುರು, ಕೆಎಸ್‌ಪಿ 85–67ರಿಂದ ಪ್ರೊಟೆಕ್ ಅಸೋಸಿಯೇಷನ್ ಮೈಸೂರು ಎದುರು, ಬಾಷ್ 63–41ರಿಂದ ಕೋರಮಂಗಲ ಬಿ.ಸಿ. ಎದುರು ಜಯ ಸಾಧಿಸಿದವು. ಭಾನುವಾರ ನಡೆಯುವ ಪಂದ್ಯ ಗಳಲ್ಲಿ ಕೆಎಸ್‌ಪಿ–ರಾಜಮಹಲ್ ಬಿ.ಸಿ, ರೈಸಿಂಗ್ ಸ್ಟಾರ್ಸ್–ಕೋರಮಂಗಲ, ಜೆಎಸ್‌ಸಿ–ಪ್ರೊಟೆಕ್ ಅಸೋಸಿಯೇಷನ್ ಮೈಸೂರು, ಬಿಎಸ್‌ಎನ್‌ಎಲ್–ಬಾಷ್ ಸೆಣಸಲಿವೆ.

ವಿಶಾಲ್ ದ್ವಿಶತಕ

ಬೆಂಗಳೂರು: ವಿಶಾಲ್ ಓನತ್ ಗಳಿಸಿದ ಅಮೋಘ ದ್ವಿಶತಕದ (ಔಟಾಗದೆ 200, 169ಎ, 4X26, 6X1) ಬಲದಿಂದ ಸ್ವಸ್ತಿಕ್ ಯೂನಿಯನ್ ಕ್ರಿಕೆಟ್ ಕ್ಲಬ್ (1) ತಂಡವು ಕೆಎಸ್‌ಸಿಎ ಗುಂಪು 1ರಿಂದ ನಾಲ್ಕನೇ ಡಿವಿಷನ್ 19 ವರ್ಷದೊಳಗಿನವರ ಅಂತರಕ್ಲಬ್ ಕ್ರಿಕೆಟ್ ಟೂರ್ನಿಯಲ್ಲಿ ಜಯ ಗಳಿಸಿತು. ಶನಿವಾರ ನಡೆದ ಪಂದ್ಯದಲ್ಲಿ 239 ರನ್‌ಗಳಿಂದ ಹನುಮಂತನಗರ ಕ್ರಿಕೆಟ್ ಕ್ಲಬ್‌ಗೆ ಸೋಲುಣಿಸಿತು.

ಸಂಕ್ಷಿಪ್ತ ಸ್ಕೋರು: ಸ್ವಸ್ತಿಕ್ ಯೂನಿಯನ್ ಸಿಸಿ: 50 ಓವರ್‌ಗಳಲ್ಲಿ 3ಕ್ಕೆ 389 (ವಿಶಾಲ್ ಓನತ್ ಔಟಾಗದೆ 200, ಅನಿರುದ್ಧ ಶ್ರೀನಿವಾಸ್ 63, ಆಶಿಶ್ ಮಹೇಶ್ 81). ಹನುಮಂತನಗರ ಸಿಸಿ: 50 ಓವರ್‌ಗಳಲ್ಲಿ 6ಕ್ಕೆ 150 (ಅಮೋಘ್ ಆರ್. ಶೆಟ್ಟಿ 50, ಸಿದ್ವಿನ್ ಗೌಡ 22, ಗುರು ಶ್ರೇಯಸ್ ಪ್ರಕಾಶ್ ಔಟಾಗದೆ 27; ವಿಕ್ರಂ ಕುಮಾರ್ 13ಕ್ಕೆ 2).

ಫಲಿತಾಂಶ: ಸ್ವಸ್ತಿಕ್ ಯೂನಿಯನ್ ಸಿಸಿ (1) ತಂಡಕ್ಕೆ 239 ರನ್‌ಗಳ ಜಯ.

ಬೆಂಗಳೂರು ರೇಸ್

ಝುಕರೆಲಿ ಗೆಲ್ಲುವ ನಿರೀಕ್ಷೆ

ಮಹಾರಾಜಾಸ್ ಗೋಲ್ಡ್ ಕಪ್ ಭಾನುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಝುಕರೆಲಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಜೈ ವಿಕ್ರಂ 8, ಡಾನ್ ರೈಸಿಂಗ್ 2, ಫಿಯರ್ಸ್ ಫೈಟರ್ 7
2ನೇ ರೇಸ್: ಕಾಪರ್ ಸನ್‌ರೈಸ್ 6, ಹಾಬನೆರೊ (9), ಲಾಗೊಪಸ್ (2)
3ನೇ ರೇಸ್: ಫಾರೆವರ್ ಟುಗೆದರ್ 1, ಮಲ್ಟಿಸ್ಟಾರರ್ 3, ಕ್ಯಾರಕಸ್ 2
4ನೇ ರೇಸ್: ಝುಕರೆಲಿ 2, ಫಾರೆಸ್ಟ್ ಫ್ಲೇಮ್ 4, ಎ ಸ್ಟಾರ್ ಈಸ್ ಬಾರ್ನ್ 5
5ನೇ ರೇಸ್: ವಿಕ್ಟೋರಿಯಾ ಪಂಚ್ 9, ಗಿಮ್ಮೆ 4, ಡೊಮಿಂಗೊ 2
6ನೇ ರೇಸ್: ಫ್ಲೈಯಿಂಗ್ ಕ್ವೆಸ್ 5, ಅಲ್ಟಿಮೇಟ್ ಸ್ಟ್ರೈಕರ್ 7, ಪರ್ಫೆಕ್ಟ್ ರೆನಿಡಿಷನ್ 4
7ನೇ ರೇಸ್: ಅನದರ್ ರೈನ್‌ಬೋ 2, ರೆಡ್ ಲೂಸಿಫರ್ 6, ಚಾರ್ಮೆನ್ 7

ಉತ್ತಮ ಬೆಟ್: ಫಾರೆವರ್ ಟುಗೆದರ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಸೆಮಿಯಲ್ಲಿ ಎಡವಿದ ಪ್ರಣಯ್

ಕ್ವಾಲಾಲಂಪುರ (ಪಿಟಿಐ): ಎಚ್.ಎಸ್.ಪ್ರಣಯ್ ಅವರು ಮಲೇಷ್ಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಸೋತರು. ಇದರೊಂದಿಗೆ ಭಾರತದ ಸವಾಲಿಗೆ ತೆರೆಬಿತ್ತು.

ಶನಿವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಪಂದ್ಯದಲ್ಲಿ ಪ್ರಣಯ್ 21-17 9-21 17-21 ರಲ್ಲಿ ಹಾಂಗ್‌ಕಾಂಗ್‌ನ ಆ್ಯಂಗಸ್ ಎಂಗ್ ಕಾ ಲಾಂಗ್ ಕೈಯಲ್ಲಿ ಪರಾಭವಗೊಂಡರು. ಈ ಹೋರಾಟ ಒಂದು ಗಂಟೆ ನಾಲ್ಕು ನಿಮಿಷ ನಡೆಯಿತು.

ಇವರಿಬ್ಬರು ಈ ಹಿಂದೆ ಎಂಟು ಸಲ ಎದುರಾಗಿದ್ದು, ಗೆಲುವು ಹಾಗೂ ಸೋಲಿನಲ್ಲಿ 4–4 ರಲ್ಲಿ ಸಮಬಲ ಹೊಂದಿದ್ದರು. ಮಾತ್ರವಲ್ಲ, ಕೊನೆಯ ಮೂರು ಹೋರಾಟಗಳಲ್ಲಿ ಪ್ರಣಯ್ ಜಯಿಸಿದ್ದರು.

ಕಠಿನ ಸಮಸ್ಯೆಗಳಿಂದ ಮುಕ್ತರಾಗಿರಿ
ಉತ್ತಮ ಆರೋಗ್ಯಕ್ಕಾಗಿ ಸಚ್ಚಿ ಸಹೇಲಿಯು ಅತ್ಯಂತ ಭರವಸೆದಾಯಕ ಔಷಧಿ ಮತ್ತು ಟಾನಿಕ್ ಆಗಿದೆ
INDIA'S MOST TRUSTED BRAND
WORLD'S GREATEST BRANDS 2015-16 IUA
ಸಂಪೂರ್ಣ ದೇಸಿ ಉತ್ಪನ್ನ
ಸಂಪೂರ್ಣ ಆಯುರ್ವೇದಿಕ
ಟಾನಿಕ್ ಜೊತೆಗೆ ಪಡೆಯಿರಿ 20 ಟ್ಯಾಬ್ಲೆಟ್ಸ್ Free
ಅಪರೂಪದ 67 ನೈಸರ್ಗಿಕ ಮೂಲಿಕೆಗಳಿಂದ ತಯಾರಿಸಲಾದ 'ಸಚ್ಚಿ ಸಹೇಲಿ' ಆಯುರ್ವೇದಿಕ ಟಾನಿಕ್ ಈ ಕೆಳಗಿನ ಸಮಸ್ಯೆಗಳ ನಿವಾರಣೆಗೆ ಸಹಕಾರಿಯಾಗಿದೆ

Helps in:
- ಕಠಿಣ ನೋವು
- ಸಿಡುಕುತನ
- ಆಯಾಸ
- ಅಶಕ್ತತೆ
- ಬೆನ್ನು ನೋವು
- ಇಮ್ಯುನಿಟಿ

ಸಚ್ಚಿ ಸಹೇಲಿ ®

24x7 Helpline : 77106 44444 | www.facebook.com/sachisaheli | Available at all medical & general stores

Karnataka S.S.: Rakesh Enterprises (Banglore) : 23579251, Shree Rama sales (Yellapur) : 9449138897, 9845149088, Bagalkot : 9448227557, 9743831913, 9449624037, Bangalore : 9845474878, 26617033, 9449723416, 9448081790, 22257385, 26677013, 22874575, 9449647135, 22235533, 9036021900, 9845350230, 9448219410, 8147573584, 8022870983, 8050741006, 22876452, Belgaum : 4206784, 4203187, 2462656, 9243219520, 4205691, 9902713070, 9916313433, Bellary : 272810, 274640, 9844059284, 227195, Bidar : 230200, 9902237421, Bijapur : 9343234482, 9036542764, 9035107399, Chikkaballapura : 9845616394, 9980420024, 9845366649, 9845623253, Chikmagalur : 9242899048, Chitradurga : 9880031266, Dakshina Kannada : 9480842900, 2496963, 9844077991, 9480842900, 9448452134, 9739641159, 9448123933, Davanagere : 295021, 9880708064, 235741, 9845035121, Dharwad : 2221201, 2221331, 4258371, 2221344, 9900430413, Gadag : 9343938893, Gulbarga : 9845808570, 9343834519, 9242239281, 8088175001, 9449618981, Hassan : 9448957465, 9448885697, Haveri : 9844323973, 8147498820, 9448232120, 9739144449, Hubli : 9449068491, Kolar : 224583, Koppal : 220713, Mandya : 223951, Mysore : 8214000156, 9980615431, 8050655443, Raichur : 9900932939, 9880336111, 9983661742, Ramanagara : 9686815278, Shimoga : 222642, 270738, 271692, 228944, 9480473867, Tumkur : 4014475, 9632446447, Udupi : 9483153633, 9483153633, 9880143804, Uttara Kannada : 9916250217, 9980872214, Vijayapura : 8352258886

ಬೈದ್ಯನಾಥ್
ಅಸಲಿ ಆಯುರ್ವೇದ
ಇಮ್ಯುನಿಟಿ ಇಂದ ಆಯುರಾರೋಗ್ಯ ಸ್ವಾಸ್ಥ್ಯ ನಿರ್ವಹಣೆಗೆ



ದೇಹದ ಶಕ್ತಿಯನ್ನು ಹೆಚ್ಚಿಸಲು ಮತ್ತು ದೌರ್ಬಲ್ಯ, ಆಯಾಸ, ಬೆನ್ನುನೋವು, ಮೈಕೈ ನೋವು, ಆಲಸ್ಯವನ್ನು ನಿವಾರಿಸಲು ಸಹಾಯ ಮಾಡುತ್ತದೆ
ಅಶ್ವಗಂಧಾಮೃತ
(ಅಶ್ವಗಂಧಾರಿಷ್ಟ ಸ್ಪೆಷಲ್)

ಶಕ್ತಿ ಮತ್ತು ಸಾಮರ್ಥ್ಯವನ್ನು ಕಾಪಾಡಿಕೊಳ್ಳಲು ಮತ್ತು ಒತ್ತಡವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.
Doctor's consultation: 8448444935
www.baidyanath.co

24x7 Helpline: 85568 09999

Dr. Juneja's ACCUMASS ®
ತೂಕ ಹೆಚ್ಚಿಸಿಕೊಳ್ಳಿ #
ಆತ್ಮವಿಶ್ವಾಸ ಪಡೆದುಕೊಳ್ಳಿ
*Gain weight according to your body capability to absorb extra calories from Accumass. Results may vary.
ಅಕ್ಯೂಮಾಸ್ ಆಯುರ್ವೇದಿಕ್ ಸಣ್ಣಕಾಳುಗಳು

ಅಲೋಪಥಿಯಿಂದ ಹರಡಿದ ತಪ್ಪು ಕಲ್ಪನೆಗಳು

ಔಷಧಿ ಮತ್ತು ವೈದ್ಯಕೀಯ ಕ್ಷೇತ್ರದಿಂದ ಹರಡಿಕೊಂಡಿರುವ ತಪ್ಪು ತಿಳುವಳಿಕೆಗಳಿಂದ ನಿಮ್ಮನ್ನು ನೀವು ಸಂರಕ್ಷಿಸಿಕೊಳ್ಳಿ ಮತ್ತು ದೇಶವನ್ನು ರಕ್ಷಿಸಿ. ಭಾರತವನ್ನು ಕಾಯಿಲೆ ಮುಕ್ತಗೊಳಿಸೋಣ.



PATANJALI® wellness
Yoga, Ayurveda & Naturopathy

Divya®
SCIENTIFIC AYURVED

ಉತ್ತಮ ಹಾಗೂ ಕಾಯಿಲೆಮುಕ್ತ ಜೀವನದ ನಿರೀಕ್ಷೆಯಲ್ಲಿ, ಬಹುಕಾಲದಿಂದ ಜನರು ತಮ್ಮ ಬಿಪಿ, ಶುಗರ್, ಥೈರಾಯ್ಡ್, ಅಸ್ತಮಾ, ಕೊಲೆಸ್ಟರಾಲ್ ಮುಂತಾದ ಸಮಸ್ಯೆಗಳಿಗೆ ಅಲೋಪಥಿ ಔಷಧಿಗಳನ್ನು ಅವಲಂಬಿಸಿದ್ದಾರೆ. ಸದರಿ ಅಲೋಪಥಿಕ್ ಔಷಧಿಗಳು, ಜೀವನಶೈಲಿ ಅಸ್ವಸ್ಥತೆಗಳಿಂದ ಗಂಭೀರವಾಗಿ ಬಳಲುತ್ತಿರುವ ರೋಗಿಗಳ ಜೀವನದಲ್ಲಿ ಅವಿಭಾಜ್ಯ ಅಂಗವಾಗಿ ಪರಿಣಮಿಸಿವೆ. ದುರದೃಷ್ಟವಶಾತ್, ಈ ಔಷಧಿಗಳು ನೀಡಬೇಕಾದ ಆರೋಗ್ಯ ಸುಧಾರಣೆಯು ಎಲ್ಲಿಯೂ ಗೋಚರಿಸುವುದಿಲ್ಲ. ವರ್ಷಾಂತರಗಳಿಂದ ಇಂತಹ ಔಷಧೋಪಚಾರದ ಅಡಿಯಲ್ಲಿ ಜೀವಿಸಿದ ರೋಗಿಗಳಿಗೆ ಸುಧಾರಣೆಯ ಬದಲಾಗಿ, ಅಡ್ಡಪರಿಣಾಮಗಳು ಲಭಿಸಿದ್ದೆ ಹೆಚ್ಚು. ಪ್ರಸ್ತುತ ಆರೋಗ್ಯಕರ ಜೀವನದ ಕುರಿತಾಗಿ ನೋಡುವ ದೃಷ್ಟಿಕೋನವೇ ಸಂಪೂರ್ಣ ಬದಲಾಗಬೇಕಿರುವುದು ಸ್ಪಷ್ಟವಾಗಿದೆ. ಸಂಪೂರ್ಣ ಆರೋಗ್ಯಯುತ ಬದುಕಿಗಾಗಿ ಮತ್ತು ಕೋಟ್ಯಾಂತರ ಜನರ ರೋಗಮುಕ್ತ ಜೀವನಕ್ಕಾಗಿ ಪರಿಹಾರ ಕಂಡುಕೊಳ್ಳಲು ನಾವೀಗ ಮಹರ್ಷಿ ಚರಕ, ಮಹರ್ಷಿ ಸುಶ್ರುತ, ಮಹರ್ಷಿ ಧನ್ವಂತರಿ ಮತ್ತು ಮಹರ್ಷಿ ಪತಂಜಲಿಯವರಂತಹ ಮಹಾನ್ ಋಷಿ ಮುನಿಗಳ ಪುರಾತನ ಔಷಧೀಯ ಭಂಡಾರಗಳಿಗೆ ಮರಳಿದ್ದೇವೆ. ನಾವು ಬಳಸುವ ಚಿಕಿತ್ಸೆ ನಿಯಮವಾಳಿಗಳೆಲ್ಲ ಯೋಗ ಮತ್ತು ಆಯುರ್ವೇದ ಸಿದ್ಧಾಂತಗಳನ್ನು ಆಧರಿಸಿವೆ ಹಾಗೂ ಅವುಗಳ ಪರಿಣಾಮಕಾರತ್ವಗಳು ಕೂಡ ಆಧುನಿಕ ವೈಜ್ಞಾನಿಕ ತಂತ್ರಗಳಿಂದ ಸಾಬೀತುಗೊಂಡಿವೆ.

ಬಿ.ಪಿ ಹಲವಾರು ವರ್ಷಗಳಿಂದ ಅಲೊಪಥಿಕ್ ಔಷಧಿಗಳನ್ನು ಸೇವಿಸುತ್ತಿದ್ದರೂ, ಜನರು ಇನ್ನೂವರೆಗೆ ಹೃದಯ, ಮೆದುಳು ಆಘಾತ, ಕಿಡ್ನಿ ವೈಫಲ್ಯತೆ, ಸಿಡುಕುತನ ಹಾಗೂ ನಿದ್ರಾಹೀನತೆಯಿಂದ ಬಳಲುತ್ತಲೇ ಇದ್ದಾರೆ.
ನಿಯಮಿತವಾಗಿ ಪ್ರಾಣಾಯಮ ಮತ್ತು ಯೋಗಾಭ್ಯಾಸ ಮಾಡುವುದರ ಜೊತೆಗೆ, ಸೋರೆಕಾಯಿ ರಸ, ಬಿಪಿಗ್ರಿಟ್ ಮತ್ತು ಮುಕ್ತಾವಟಿ ಸೇವನೆಯಿಂದ ಕೋಟ್ಯಾಂತರ ಜನರು ಬಿ.ಪಿ ಮತ್ತು ಬಿ.ಪಿ ಸಂಬಂಧಿತ ಸಮಸ್ಯೆಗಳಿಂದ ಸಂಪೂರ್ಣ ಮುಕ್ತರಾಗಿದ್ದಾರೆ.

ಶುಗರ್ ಹಲವಾರು ವರ್ಷಗಳಿಂದ ಅಲೋಪಥಿಕ್ ಔಷಧಿಗಳಿನ್ನು ಸೇವಿಸಿದಾಗ್ಯೂ, ಜನರು ದೃಷ್ಟಿ ದೌರ್ಬಲ್ಯದ ಜೊತೆಗೆ ಕ್ರಿಯಾಟಿನೈನ್ ಹೆಚ್ಚಳ ಮತ್ತು ನರಗಳ ದೌರ್ಬಲ್ಯ (ನ್ಯೂರೊಪತಿ) ಸಮಸ್ಯೆಗಳನ್ನು ಅನುಭವಿಸಿದ್ದಾರೆ. ರೋಗಿಗಳಲ್ಲಿ ಇಮ್ಯುನಿಟಿ ಕಡಿಮೆ ಆಗಿರುವುದು ಕೂಡ ಕಂಡುಬಂದಿದೆ.
ಯೋಗ, ಪ್ರಾಣಾಯಾಮ, ಮಧುನಾಶಿನಿ, ಮಧುಗ್ರಿಟ್ ಮತ್ತು ಸೌತೆಕಾಯಿ, ಕಹಿ ಸೋರೆಕಾಯಿ, ಟೊಮೆಟೊ ಮತ್ತು ಗಿಲಾಯ ರಸಗಳ ನಿರ್ವಹಣೆ ಜೊತೆಗೆ ಸಮತೋಲಿತ ಆಹಾರ ಪದ್ಧತಿಯ ಮುಖಾಂತರ ನಾವು, ಜನರಲ್ಲಿನ ಮಧುಮೇಶ ಮತ್ತು ಅದಕ್ಕೆ ಸಂಬಂಧಿತ ಸಮಸ್ಯೆಗಳನ್ನು ತೊಡೆದು ಹಾಕಿದ್ದೇವೆ. ಟೈಪ್ ಒನ್ ಡಯಾಬೆಟಿಕ್ ರೋಗಿಯನ್ನು ಸಂಪೂರ್ಣ ನಾನ್ ಡಯಾಬೆಟಿಕ್ ಆಗಿ ಪರಿವರ್ತಿಸುವಲ್ಲಿ ಯಶಸ್ವಿಯಾಗಿದ್ದೇವೆ.

ಥೈರಾಯ್ಡ್ ಈಗಿರುವ ಥೈರಾಯ್ಡ್ ಚಿಕಿತ್ಸೆಗಳಿಮದ ರೋಗಿಗಳಲ್ಲಿ ತೂಕ ಹೆಚ್ಚಳವಾಗುತ್ತಿದೆ ಮತ್ತು ತೂಕದ ಜೊತೆಗೆ ಇನ್ನಿತರ ಸಮಸ್ಯೆಗಳು ಪ್ರಾರಂಭವಾಗುತ್ತಿವೆ.
ಕಪಾಲಭಾತಿ, ಉಜ್ಜಾಯಿ ಇತ್ಯಾದಿಗಳಂತಹ ವಿವಿಧ ಯೋಗಗಳ ಅಭ್ಯಾಸದ ಜೊತೆಗೆ ಕೊತ್ತಂಬರಿ ನೀರು ಮತ್ತು ಥೈರೊಗ್ರಿಟ್ ಸೇವನೆಯು ಜನರಿಗೆ ಥೈರಾಯ್ಡ್ ಸಮಸ್ಯೆ ಮತ್ತು ಸಂಬಂಧಿತ ಸಮಸ್ಯೆಗಳಿಂದ ಹೊರಬರಲು ನೆರವಾಗಿದೆ.

ಯೋಗ, ಆಯುರ್ವೇದ, ನ್ಯಾಚುರೋಪತಿ ಮತ್ತು ಪಂಚಕರ್ಮ ಒಳಗೊಂಡ ಚಿಕಿತ್ಸೆಯ ಕಿರುನೋಟ

ಕಣ್ಣು ಮತ್ತು ಕಿವಿ ರೋಗಗಳು ಗ್ಲಾಕೋಮಾ, ಇರುಳು ಕುರುಡು ಮತ್ತು ಟಿನ್ನಿಟಸ್ ನಂತಹ ಶ್ರವಣ ಸಮಸ್ಯೆಗಳಿಗೆ ಅಲೋಪಥಿಯಲ್ಲಿ ನಿವಾರಣೆ ಲಭ್ಯವಿಲ್ಲ. ಆದರೆ ಯೋಗಾಭ್ಯಾಸ ಜೊತೆಗೆ, ಕಣ್ಣುಗಳಿಗೆ ಆಯ್‌ಗ್ರಿಟ್ ಮತ್ತು ಕಿವಿಗಳಿಗೆ ಇಯರ್‌ಗ್ರಿಟ್ ಬಳಕೆಯಿಂದಾಗಿ ಸಾಕಷ್ಟು ಜನರಿಗೆ ತಮ್ಮ ದೃಷ್ಟಿ ಮತ್ತು ಶ್ರವಣ ಸಮಸ್ಯೆಗಳಿಂದ ಮುಕ್ತರಾಗಲು ಸಾಧ್ಯವಾಗಿದೆ.

ಕೊಲೆಸ್ಟರಾಲ್ ರಕ್ತ ತಿಳಿಗೊಳಿಸುವಂತಹ ಮತ್ತು ಕೊಲೆಸ್ಟರಾಲ್ ನಿಯಂತ್ರಿಸುವಂತಹ ಅಲೊಪಥಿಕ್ ಔಷಧಿಗಳಿಂದ ಬ್ಲಡ್ ಪ್ರೊಫೈಲ್‌ಗಳು ಅಸಹಗೊಳ್ಳುತ್ತಿವೆ ಮತ್ತು ಲಿವರ್‌ನ ಮೇಲೆ ಅಡ್ಡಪರಿಣಾಮ ಉಂಟಾಗುತ್ತಿದೆ.
ಯೋಗ್ಯಾಭ್ಯಾಸದ ಜೊತೆಗೆ ಲಿಪಿಡೊಮ್ ನಿರ್ವಹಣೆ, ಸೋರೆಕಾಯಿ ರಸ ಮತ್ತು ಅರ್ಜುನ ಮರದ ತೊಗಟೆಯಿಂದ ನಾವು ಕೊಲೆಸ್ಟರಾಲ್‌ನ್ನು ನೈಸರ್ಗಿಕವಾಗಿ ನಿಯಂತ್ರಿಸಿದ್ದೇವೆ.

ಲಿವರ್ ಲಿವರ್ ಕಾಯಿಲೆಗಳಾದ ಫ್ಯಾಟಿ ಲಿವರ್, ಲಿವರ್ ಸಿರೋಸಿಸ್ ಮತ್ತು ಹೆಪಾಟೈಟಿಸ್ ರೋಗಗಳಿಗೆ ಅಲೊಪತಿಯಲ್ಲಿ ಯಾವುದೇ ಶಾಶ್ವತ ನಿವಾರಣೆ ಲಭ್ಯವಿಲ್ಲ.
ನಿಯಮಿತ ಯೋಗಾಭ್ಯಾಸ ಮತ್ತು ಭೂಮಿ ಆಮ್ಲಾ, ಪುನರ್ನವ ರಸದ ಜೊತೆಗೆ ಲಿವೊಗ್ರಿಟ್ ಹಾಗೂ ಲಿವಾಮೃತ್ ಮೂಲಕ ನಾವು ಫ್ಯಾಟಿ ಲಿವರ್, ಲಿವರ್ ಸಿರೋಸಿಸ್, ಹೆಪಾಟೈಟಿಸ್ ಸಮಸ್ಯೆಗಳನ್ನು ನಿವಾರಿಸಿದ್ದೇವೆ ಮತ್ತು ಜೀರ್ಣಕ್ರಿಯೆ ವ್ಯವಸ್ಥೆಯನ್ನೂ ಬಲಪಡಿಸಿದ್ದೇವೆ

ತ್ವಚೆ ರೋಗಗಳು ತ್ವಚೆಯ ಕಾಯಿಲೆಗಳಾದ ಲ್ಯೂಕೊಡರ್ಮಾ, ಎಕ್ಜೆಮಾ, ಸೋರಿಯಾಸಿಸ್ ನಂತಹ ತ್ವಚೆಯ ಕಾಯಿಲೆಗಳಿಗೆ ಡರ್ಮಾಟಲಾಜಿಸ್ಟ್ ಬಳಿ ಯಾವುದೇ ಶಾಶ್ವತ ನಿವಾರಣೆ ಲಭ್ಯವಿರುವುದಿಲ್ಲ. ಈ ಕಾಯಿಲೆಗಳಿಂದ ಬಳಲುತ್ತಿರುವ ರೋಗಿಗಳಿಗೆ ಯಾವುದೇ ಆಯ್ಕೆಗಳಿಲ್ಲ, ಆದರೂ ಇವರು ಸ್ಟೆರಾಯಿಡ್‌ಗಳು ಮತ್ತು ವಿವಿಧ ರಸಾಯನಿಕಗಳನ್ನು ಅನಿವಾರ್ಯವಾಗಿ ಸಹಿಸಬೇಕಾಗಿದೆ.
ಯೋಗ, ಆಯುರ್ವೇದ, ನ್ಯಾಚುರೋಪತಿ ಮತ್ತು ಪಂಚಕರ್ಮಗಳ ಮುಖಾಂತರ ದೇಹವನ್ನು ಶುಚಿಗೊಳಿಸುವುದರ ಜೊತೆಗೆ ಕಾಯಕಲ್ಪ ವಾಟಿ, ಡೆರ್ಮಾಗ್ರಿಟ್ ಮತ್ತು ಸೋರೊಗ್ರಿಟ್ ಬಳಸುವುದರ ಮೂಲಕ, ನಾವು ಜನರ ಚರ್ಮ ಕಾಯಿಲೆಗಳನ್ನು ಶಾಶ್ವತವಾಗಿ ನಿವಾರಿಸಿದ್ದೇವೆ.

ಆರ್ಥ್ರೈಟಿಸ್ ಆರ್ಥ್ರೈಟಿಸ್‌ಗೆ ನೀಡಲಾಗುವ ನೋವು ನಿವಾರಕಗಳು, ಸ್ಟೆರಾಯ್ಡ್‌ಗಳು ಮತ್ತು ಜೈವಿಕ ಔಷಧಿಗಳಂತಹವು ರೋಗಿಗಳ ಜೀವನದ ಗುಣಮಟ್ಟದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತವೆ. ಈ ಔಷಧಿಗಳು ಮೂಳೆಗಳನ್ನು ದುರ್ಬಲಗೊಳಿಸುತ್ತವೆ, ಚಯಾಪಚಯಕ್ರಿಯೆ ಕುಂಠಿತಗೊಳಿಸುತ್ತವೆ ಮತ್ತು ಡಯಾಬೆಟಿಸ್‌ಗೆ ಕಾರಣವಾಗುತ್ತವೆ.
ನಿಯಮಿತ ಪ್ರಾಣಾಯಾಮ, ಅಲೋವೆರಾ, ಗಿಲಾಯ್, ಅಶ್ವಶಿಲಾ, ಆರ್ಥೋಗ್ರಿಟ್ ಮತ್ತು ಪೀಡಾನಿಲ್ ಗೋಲ್ಡ್ ಹಾಗೂ ಪೀಡಾಂತಕ ತೈಲದಿಂದ ಮಸಾಜ್ ಮಾಡುವ ಮೂಲಕ ನಾವು, ಆರ್ಥ್ರೈಟಿಸ್, ಸರ್ವಿಕಲ್ ಮತ್ತು ಅಂಕಿಲೊಸಿಂಗ್ ಸ್ಪಾಂಡಿಲೈಟಿಸ್ ಕಾಯಿಲೆಗಳಿಂದ ಜನರನ್ನು, ಗುಣಮುಖರನ್ನಾಗಿಸಿದ್ದೇವೆ.

ಅಸ್ತಮಾ ಅಸ್ತಮಾ ಸಮಸ್ಯೆಯಿಂದ ಬಳಲುತ್ತಿರುವ ಜನರು, ಕ್ಷಣಮಾತ್ರಕ್ಕೆ ತಮ್ಮ ಅಸ್ತಮಾ ಆಘಾತವನ್ನು ನಿಯಂತ್ರಿಸಲು ಇನ್ಹೇಲರ್ಸ್ ಮತ್ತು ಸ್ಟೆರಾಯಿಡ್‌ಗಳನ್ನು ಬಳಸುತ್ತಾರೆ, ಆದರೆ ಅವರು ಮುಂದಿನ ದಿನಗಳಿಗೆ ತಮ್ಮ ಶ್ವಾಸಕೋಶಗಳನ್ನು ಹಾಳು ಮಾಡುತ್ತಿದ್ದಾರೆ ಎಂಬುದು ಅವರಿಗೆ ತಿಳಿದಿಲ್ಲ. ಇಂತಹ ಚಿಕಿತ್ಸೆಗಳು ಅಸ್ತಮಾ ಕಾಯಿಲೆಗೆ ಪೂರ್ಣ ಚಿಕಿತ್ಸೆ ನೀಡುವುದಿಲ್ಲ.
ಭಸ್ತ್ರಿಕಾ, ಕಪಾಲಭಾತಿ, ಅನುಲೋಮ ವಿಲೋಮ, ಪ್ರಾಣಾಯಾಮ, ಭುಜಂಗಾಸನ ಮತ್ತು ಯೋಗ ನಾಭಬಸ್ತಿ ಜೊತೆಗೆ ಸ್ವಾಸರಿ ಪ್ರವಾಹಿ, ಸ್ವಾಸರಿ ವಾಟಿ, ಸ್ವಾಸರಿ ಗೋಲ್ಡ್ ಮತ್ತು ಕುಕುರ್ಮಿನ್ ಗೋಲ್ಡ್ ಮುಖಾಂತರ ನಾವು ಅಸ್ತಮಾವನ್ನು, ಲಂಗ್ ಫೈಬ್ರೊಸಿಸ್ ಹಿಮ್ಮೆಟ್ಟಿದ್ದೇವೆ ಮತ್ತು ರೋಗಿಗಳ ಶ್ವಾಸೋಚ್ಛಾಸ ಆರೋಗ್ಯವನ್ನು ಪುನಶ್ಚೇತನಗೊಳಿಸಿದ್ದೇವೆ.

ನಿವಾರಿಸಲಾಗದ ಕಾಯಿಲೆಗಳು ಹೃದಯ ಸ್ತಂಭನ, ಬಂಜೆತನ, ಮೂತ್ರದ್ವಾರ ಸೋಂಕು, ಒತ್ತಡ ಮತ್ತು ಆಟೊಇಮ್ಯೂನ್ ಕಾಯಿಗಳಾದ ಎಸ್‌ಎಲ್‌ಇ, ಎಂಎಸ್, ಎಎನ್‌ಎ, ಎವಿಎನ್, ಹೆಚ್‌ಎಲ್‌ಎಬಿ27 ಮಾದರಿ ಸಮಸ್ಯೆಗಳನ್ನು ನಿವಾರಿಸಲು ಅಲೊಪತಿಯಲ್ಲಿ ಯಾವುದೇ ಶಾಶ್ವತ ಮತ್ತು ಸಾಬೀತಾದ ನಿವಾರಣೆಯಿಲ್ಲ.
ಆದರೆ ನಾವು, ಇಂತಹ ನಿವಾರಿಸಲಾಗದ ಮತ್ತು ಜೀವಕ್ಕೆ ಆತಂಕ ಒಡ್ಡುವ ಕಾಯಿಲೆಗಳಿಂದ ಸಾವಿರಾರು ಜನರನ್ನು ಗುಣಪಡಿಸಿದ್ದೇವೆ ಹಾಗೂ ನಮ್ಮ ಚಿಕಿತ್ಸೆಗಳ ದಕ್ಷತೆಗಳನ್ನು ವೈಜ್ಞಾನಿಕ ಪುರಾವೆಗಳ ಸಮೇತ ರುಜುವಾತುಪಡಿಸಿದ್ದೇವೆ. ಹೆಚ್ಚಿನ ಮಾಹಿತಿಗಾಗಿ, ದಯವಿಟ್ಟು ನಮ್ಮ www.patanjaliwellness.com ವೆಬ್‌ಸೈಟ್‌ಗೆ ಭೇಟಿ ಕೊಡಿ.

ಜೀವನಶೈಲಿಗೆ ಸಂಬಂಧಿತ ಅಸ್ವಸ್ಥತೆಗಳಿಗೆ, ನಿವಾರಿಸಲಾಗದ, ದೀರ್ಘಕಾಲಿನ ಮತ್ತು ಅನುವಂಶಿಕ ಕಾಯಿಲೆಗಳ ಶಾಶ್ವತ ನಿವಾರಣೆಗಾಗಿ, ಪತಂಜಲಿ ವೆಲ್‌ನೆಸ್‌ನ ಒಂದು ವಾರದ ವಸತಿ ಸೌಲಭ್ಯವುಳ್ಳ ನಿವಾರಣಾ ಶಿಬಿರದಲ್ಲಿ ಹೆಸರು ನೋಂದಾಯಿಸಿಕೊಳ್ಳಿ ಮತ್ತು ಶಾಶ್ವತ ಆರೋಗ್ಯವಂತರಾಗಿ ಜೀವಿಸಿ.

ಚಿಕಿತ್ಸೆಗಾಗಿ ಸಂಪರ್ಕಿಸಿ ಪತಂಜಲಿ ವೆಲ್‌ನೆಸ್
8954666111, 8954666222, 8954666333, 8954666444
Email: booking@patanjaliwellness.com | Website: www.patanjaliwellness.com

ಬುಕ್ಕಿಂಗ್‌ಗಾಗಿ ಸ್ಕ್ಯಾನ್ ಮಾಡಿ

ಯೋಗ, ಆಯುರ್ವೇದ ಮತ್ತು ನೈಸರ್ಗಿಕ ಚಿಕಿತ್ಸೆ ಮುಖಾಂತರ ನಿಮ್ಮ ಎಲ್ಲಾ ಕಾಯಿಲೆಗಳಿಗೆ ಶಾಶ್ವತ ನಿವಾರಣೆ ಪಡೆಯಲು, ಯೋಗ ಋಷಿ ಸ್ವಾಮಿ ರಾಮದೇವ್ ಜೊತೆಗೆ ಯೋಗಾಭ್ಯಾಸ ಮಾಡಿರಿ ಮತ್ತು ಸಮಗ್ರ ಚಿಕಿತ್ಸೆಯ ಬಗ್ಗೆ ಅಧಿಕೃತ ಮಾಹಿತಿ ತಿಳಿಯಿರಿ. ನಿವಾರಿಸಲಾಗದ ಕಾಯಿಲೆಗಳಿಂದ ಮುಕ್ತಿ ಪಡೆದಿರುವ ಪುರಾವೆಗಳನ್ನು ಮನಗಾಣಲು ಆಸ್ಥಾ ಲೈವ್ ವೀಕ್ಷಿಸುತ್ತಿರಿ.

आस्था LIVE
ಪ್ರತಿದಿನ ಬೆಳಗ್ಗೆ 5:00 ರಿಂದ 7:30 ಮತ್ತು ರಾತ್ರಿ 8:00 ಗಂಟೆ

INDIA TV
ಪ್ರತಿನಿತ್ಯ ಬೆಳಗ್ಗೆ 7:56

ನಮ್ಮ ಎಲ್ಲಾ ಔಷಧಿಗಳು ಭಾರತದಾದ್ಯಂತ ಪತಂಜಲಿ ಸ್ಟೋರ್ಸ್ ಮತ್ತು ಪ್ರಮುಖ ಮಳಿಗೆಗಳಲ್ಲಿ ದೊರೆಯುತ್ತವೆ.
Shop Online- www.patanjaliayurved.net | Customer Care Number - 18001804108 | Email ID - feedback@patanjaliayurved.org | Website - www.patanjaliayurved.org